ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಶನಿವಾರ, 14 ಮಾರ್ಚ್ 2026
ಸಂಪುಟ 15, ಸಂಚಿಕೆ 355, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital



ಹೊಸ ಆರ್ಥಿಕ ಸ್ಥಿರೀಕರಣ ನಿಧಿ | ೦೭ | ಸಿಇಸಿ ಪದಚ್ಯುತಿಗೆ ಪ್ರತಿಪಕ್ಷಗಳ ನೋಟಿಸ್ | ೦೭ | ಈಶಾನ್ಯದಲ್ಲಿ ಬಿಜೆಪಿಯಿಂದ ಶಾಂತಿ ಖಾತ್ರಿ | ೦೭

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಕೃಷ್ಣ ಪಕ್ಷ, ತಿಥಿ:ದಶಮಿ, ನಕ್ಷತ್ರ: ಉತ್ತರಾಷಾಢ

ದಿನದ ಮಾತು

ಸದ್ಗುಣವು ಜ್ಞಾನದಿಂದ ಮೆರೆಯುತ್ತದೆ. ಅಜ್ಞಾನವು ಸಹನೆಯಿಂದ ಮೆರೆಯುತ್ತದೆ.

▲ನೀತಿ ಕುಸುಮ

ವಿಶುದ್ಧ ಚಕ್ರ ಜಾಗೃತ ಆಗುವುದು ನಿಜವೇ?

ಪೂರ್ಣ ಪರಿಪೂರ್ಣ

•ಪೂರ್ಣಪ್ರಜ್ಞ ಬೇಳೂರು

•ಪುಟ ೬

ಆರ್‌ಎಸ್‌ಎಸ್ ವಾರ್ಷಿಕ ವರದಿ ಅಂಕಿ ಅಂಶ

ಶತಾಬ್ದಿ ವರ್ಷದ ಸಂಭ್ರಮ

ಗೃಹ ಸಂಪರ್ಕ ಅಭಿಯಾನ
3,89,465
ಹಳ್ಳಿಗಳ 10.02 ಕೋಟಿ ಮನೆಗಳಿಗೆ ಭೇಟಿ

37,048
ಸ್ಥಳಗಳಲ್ಲಿ ಹಿಂದು ಸಮ್ಮೇಳನ

1,34,766
ಒಟ್ಟು ಶಾಖೆ, ಮಿಲನ್ ಮತ್ತು ಮಂಡಳಿಗಳು

3.49 ಕೋಟಿ ಜನರು ಭಾಗಿ

•ವಿಶೇಷ ಪುಟ ೦೨

ಕಿರುಸುದ್ದಿ

ಪಾಕ್ ಮೇಲೆ ಅಫ್ಘಾನಿಸ್ತಾನ ಪ್ರತೀಕಾರದ ಡ್ರೋನ್ ದಾಳಿ
•ಪುಟ ೭

ರಾಜ್ಯಗಳಿಗೆ ಹೆಚ್ಚುವರಿ ಸೀಮೆಎಣ್ಣೆ ಪೂರೈಕೆ
•ಪುಟ ೭

ತೃತೀಯಲಿಂಗಿ ಸ್ಪಷ್ಟ ವ್ಯಾಖ್ಯಾನಕ್ಕೆ ಮಸೂದೆ
•ಪುಟ ೭

ವಿಮಾನ ನಿಲ್ದಾಣ ನಿರ್ಮಾಣ: ಪಾಟೀಲ್
•ಪುಟ ೫

ಸುಮ್ಮನಿದ್ದೇನೆ ಎಂದರೆ ಬಲಹೀನನೆಂದು ಭಾವಿಸಬೇಡಿ: ಖಾದರ್
•ಪುಟ ೫

ತೋಟಗಾರಿಕಾ ಮಹಾವಿದ್ಯಾಲಯ ಸ್ಥಾಪನೆ
•ಪುಟ ೫

ಎದ್ದೇಳದ ಸ್ಥಿತಿಯಲ್ಲಿ ಖಮೇನಿ ಉತ್ತರಾಧಿಕಾರಿ ಮೊಜ್ತಬಾ

ಇರಾನ್ ಸ್ಥಿತಿ ಗಂಭೀರ



ಮೊಜ್ತಬಾ



ಇರಾಕ್‌ನಲ್ಲಿ ಅಮೆರಿಕ ಇಂಧನ ಮರುಪೂರಣ ವಿಮಾನ ಪತನ
•ಪುಟ ೭

•**ಹೊಸದಿಲ್ಲಿ:** ಇರಾನ್‌ನಲ್ಲಿ ರಾಜಕೀಯ ಗೊಂದಲ ಹೆಚ್ಚಾಗಿದ್ದು, ಸರ್ವೋಚ್ಚ ನಾಯಕತ್ವದ ವಿಚಾರದಲ್ಲಿ ಅನಿಶ್ಚಿತತೆ ಉಂಟಾಗಿದೆ. ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ನಡೆಸಿದ ಸೇನಾ ದಾಳಿಗಳ ಬಳಿಕ ದೇಶದ ಪರಿಸ್ಥಿತಿ ಇನ್ನಷ್ಟು ತೀವ್ರಗೊಂಡಿದೆ.

ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಯಾದ ನಂತರ ಅವರ ಪುತ್ರ ಮೊಜ್ತಬಾ ಖಮೇನಿ ಅಧಿಕಾರ ವಹಿಸಿಕೊಂಡಿದ್ದರು. ಆದರೆ ಇತ್ತೀಚಿನ ವೈಮಾನಿಕ ದಾಳಿಯಲ್ಲಿ ಮೊಜ್ತಬಾ ಖಮೇನಿ ಗಂಭೀರವಾಗಿ ಗಾಯಗೊಂಡಿದ್ದು, ಅವರ ಒಂದು ಕಾಲು ಕತ್ತರಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ ಎಂಬ ಮಾಹಿತಿ ಅಮೆರಿಕ ಮೂಲಗಳಿಂದ ಬಂದಿದೆ. ಅವರು ರಹಸ್ಯ ಸ್ಥಳದಲ್ಲಿ ಚಿಕಿತ್ಸೆ ಪಡೆಯುತ್ತಿರುವುದಾಗಿ ವರದಿಯಾಗಿದೆ.



ಈ ಕುರಿತು ಪ್ರತಿಕ್ರಿಯಿಸಿರುವ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್, ಇರಾನ್‌ನಲ್ಲಿ ಈಗ ಯಾರು ಅಧಿಕಾರದಲ್ಲಿದ್ದಾರೆ ಎಂಬುದೇ ಸ್ಪಷ್ಟವಾಗಿಲ್ಲ ಎಂದು ವ್ಯಂಗ್ಯವಾಡಿದ್ದಾರೆ. ಪೆಂಟಗನ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊಜ್ತಬಾ ಖಮೇನಿ ಬಿಡುಗಡೆ ಮಾಡಿದ ಮೊದಲ ಹೇಳಿಕೆಯಲ್ಲಿ ಧ್ವನಿ ಅಥವಾ ವಿಡಿಯೋ ಇರಲಿಲ್ಲ ಎಂದು ಹೇಳಿದ್ದಾರೆ. ಇರಾನ್‌ನಲ್ಲಿ ಸಾಕಷ್ಟು ಕ್ಯಾಮೆರಾಗಳು ಇದ್ದರೂ ಲಿಖಿತ ಹೇಳಿಕೆ ಮಾತ್ರ ನೀಡಿರುವುದು ಅವರ ಸ್ಥಿತಿಗತಿ ಬಗ್ಗೆ ಅನುಮಾನ ಹುಟ್ಟಿಸುತ್ತಿದೆ ಎಂದು ಹೇಳಿದ್ದಾರೆ. ➡ಪುಟ ೪

ಮೊಜ್ತಬಾಗೆ ಜೀವ ವಿಮೆ ಇಲ್ಲ: ನೆತನ್ಯಾಹು

ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧವು ನಿರೀಕ್ಷೆಗಿಂತ ಉತ್ತಮವಾಗಿ ನಡೆಯುತ್ತಿದೆ. ಇಸ್ರೇಲ್ ಎಂದಿಗಿಂತ ಬಲಶಾಲಿಯಾಗಿದೆ ಎಂದು ಹೇಳಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇರಾನ್‌ನ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿಗೆ ಯಾವುದೇ ಜೀವ ವಿಮೆ ಇಲ್ಲ ಎಂದು ವ್ಯಂಗ್ಯವಾಡಿದ್ದಾರೆ. ಇಸ್ರೇಲ್ ಖಮೇನಿ ಮತ್ತು ಹೆಜ್ಬುಲ್ಲಾ ನಾಯಕ ನಯೀಮ್ ಖಾಸಿಮ್ ಅವರನ್ನು ಗುರಿಯಾಗಿಸಿದೆಯೇ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ನೆತನ್ಯಾಹು, ನಾನು ಭಯೋತ್ಪಾದಕ ಸಂಘಟನೆಗಳ ಯಾವುದೇ ನಾಯಕರ ಮೇಲೆ ಜೀವ ವಿಮಾ ಪಾಲಿಸಿಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

ಬುರ್ಜ್ ಖಲೀಫಾ ಬಳಿ ಭಾರೀ ಸ್ಫೋಟ

ವಿಶ್ವದ ಅತ್ಯಂತ ಎತ್ತರದ ಕಟ್ಟಡವಿರುವ ದುಬೈನ ಬುರ್ಜ್ ಖಲೀಫಾ ಬಳಿ ಶುಕ್ರವಾರವೂ ಭಾರಿ ಸ್ಫೋಟದ ಸದ್ದು ಕೇಳಿಬಂದಿದೆ. ಭೀಕರ ಬಾಂಬ್ ಸದ್ದಿಗೆ ದುಬೈನಲ್ಲಿ ಕಟ್ಟಡಗಳೂ ಅಲುಗಾಡಿದ್ದು, ಆಕಾಶಕ್ಕೆ ಕಪ್ಪು ಹೊಗೆ ಆವರಿಸಿದೆ. ವರದಿಗಳ ಪ್ರಕಾರ, ಘಟನೆಯ ನಂತರ ದುಬೈ ಪೊಲೀಸರು ಆ ಪ್ರದೇಶವನ್ನು ಸುತ್ತುವರಿದಿದ್ದಾರೆ. ಕಟ್ಟಡಕ್ಕೆ ಭಾರೀ ಹಾನಿಯಾಗಿದೆ. ➡ಪುಟ ೪

ಯುದ್ಧದ ತೀವ್ರತೆ ಮತ್ತಷ್ಟು ಹೆಚ್ಚಳ •ಪುಟ ೭

ಅಮೆರಿಕಗೆ ಇರಾನ್ ಎಚ್ಚರಿಕೆ

ತಮ್ಮ ಇಸ್ಲಾಮಿಕ್ ಗಣರಾಜ್ಯದ ಮೇಲೆ ದಾಳಿ ಮಾಡಿದ್ದಕ್ಕಾಗಿ ಅಮೆರಿಕ ವಿಷಾದಿಸುವಂತೆ ಮಾಡುವ ಪಣವನ್ನು ಇರಾನ್ ತೊಟ್ಟಿದೆ. ಇದೇ ವೇಳೆ, ಹಾರ್ಮುಜ್ ಜಲಮಾರ್ಗದ ಮೇಲೆ ಹಿಡಿತ ಸಾಧಿಸುವ ಮೂಲಕ ತೈಲ ಬೆಲೆಗಳನ್ನು ಗಗನಕ್ಕೇರಿಸುವ ಪ್ರತಿಜ್ಞೆ ಮಾಡಿದೆ. ಯುದ್ಧ ಈಗಾಗಲೇ ಜಾಗತಿಕವಾಗಿ ತೈಲ ಪೂರೈಕೆಗೆ ಅಡ್ಡಿಪಡಿಸಿದ್ದು, ಇತಿಹಾಸದಲ್ಲೇ ಮೊದಲ ಬಾರಿಗೆ ಅತಿ ದೊಡ್ಡ ಸರಕು ಸಾಗಣೆ ಪೂರೈಕೆಗೆ ಅಡಚಣೆಯಾಗಿದೆ ಎಂದು ಅಂತಾರಾಷ್ಟ್ರೀಯ ಇಂಧನ ಸಂಸ್ಥೆ ಎಚ್ಚರಿಸಿದೆ. ಇದಕ್ಕೆ ಪ್ರತಿಯಾಗಿ ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶ ವ್ಯಕ್ತಪಡಿಸಿರುವ ಡೊನಾಲ್ಡ್ ಟ್ರಂಪ್, ಇರಾನ್ ಸೋಲಿಸುವುದು ಕಚ್ಚಾ ತೈಲ ಬೆಲೆಗಳಿಗಿಂತ ಮುಖ್ಯ ಎಂದು ತಿಳಿಸಿದ್ದಾರೆ. ➡ಪುಟ ೪

ಹಾರ್ಮುಜ್ ಜಲಸಂಧಿಯಲ್ಲಿ ಭಾರತೀಯರಿಗೆ ಪ್ರಾಮುಖ್ಯತೆ

ಇರಾನ್ ಭಾರತೀಯ ಧ್ವಜ ಹೊಂದಿರುವ ಹಡಗುಗಳಿಗೆ ಹಾರ್ಮುಜ್ ಜಲಸಂಧಿ ಮೂಲಕ ಸುರಕ್ಷಿತ ಸಂಚಾರಕ್ಕೆ ಅವಕಾಶ ನೀಡಿದೆ ಎಂದು ವರದಿಗಳು ತಿಳಿಸಿವೆ. ಈ ಹಿನ್ನೆಲೆಯಲ್ಲಿ ಕೆಲವು ಹಡಗುಗಳು ತಮ್ಮ ಗುರುತು ಸಂದೇಶಗಳಲ್ಲಿ ಸಂಪೂರ್ಣ ಭಾರತೀಯ ಸಿಬ್ಬಂದಿ (ಆಲ್ ಇಂಡಿಯಾ ಕ್ರೂ), ಭಾರತೀಯ ಸಿಬ್ಬಂದಿ ಹಡಗಿನಲ್ಲಿದ್ದಾರೆ (ಇಂಡಿಯನ್ ಕ್ರೂ ಆನ್ ಬೋರ್ಡ್) ಎಂಬ ಫಲಕಗಳನ್ನು ಪ್ರದರ್ಶಿಸುತ್ತಿರುವುದು ಗಮನಸೆಳೆದಿದೆ.

ರಾಜಕೀಯವಾಗಿ ಬೆನ್ನಿಗೆ ನಿಂತು ಡಾ.ಯತೀಂದ್ರ ಬೆಳೆಸಿ: ವರುಣ ಕ್ಷೇತ್ರದ ಜನರಿಗೆ ಸಿಎಂ ಮನವಿ

ಉಸಿರಿರುವವರೆಗೂ ರಾಜಕೀಯ ಮಾಡುವೆ



•**ಮೈಸೂರು:** ನನ್ನ 48 ವರ್ಷಗಳ ರಾಜಕೀಯ ಜೀವನದಲ್ಲಿ ಸೋಲು-ಗೆಲುವು ಎರಡನ್ನೂ ಕಂಡಿದ್ದೇನೆ. ಸೋತಾಗಲೂ ಜನರ ಸೇವೆಯನ್ನು ಪ್ರಾಮಾಣಿಕವಾಗಿ ಕೈಲಾದಷ್ಟು ಮಾಡಿಕೊಂಡು ಬಂದಿದ್ದೇನೆ. ಮುಂದೆಯೂ ಉಸಿರಿರುವವರೆಗೆ ರಾಜಕೀಯ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರು ತಾಲೂಕಿನ ವರಕೋಡು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಬೀರೇಶ್ವರಸ್ವಾಮಿ ದೇವಾಲಯವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದ ಅವರು, ನನ್ನ ರಾಜಕೀಯ ಜೀವನದಲ್ಲಿ ಸೋಲು ಗೆಲುವು ಕಂಡಿದ್ದೇನೆ. ನಾಲ್ಕು ಸೋಲು, ಏಳು ಗೆಲುವು ಕಂಡಿದ್ದೇನೆ. ಆದರೆ, ಜನಸೇವೆಯನ್ನು ಮಾತ್ರ ಮರೆತಿಲ್ಲ. ಕೊನೆಯ ಉಸಿರು ಇರುವವರೆಗೂ ರಾಜಕೀಯ ಮಾಡುತ್ತೇನೆ. ಕೈಲಾದಷ್ಟು ಸೇವೆ ಮಾಡುವೆ ಎಂದು ಅಭಯ ನೀಡಿದರು.

ಚಾಮುಂಡೇಶ್ವರಿ ಮತ್ತು ವರುಣ ಕ್ಷೇತ್ರದ ಜನರು ನಿರಂತರವಾಗಿ ಬೆಂಬಲ ನೀಡುತ್ತಾ ಬಂದಿರುವ ಕಾರಣ ಎಂದಿಗೂ ಕ್ಷೇತ್ರದ ಜನರನ್ನು ಮರೆಯಲಾಗದು. ಎರಡು ಬಾರಿ ಮುಖ್ಯಮಂತ್ರಿ, ಎರಡು ಬಾರಿ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡುವ ಜತೆಗೆ, 17 ಬಾರಿ ಬಜೆಟ್ ಮಂಡಿಸಿದ್ದೇನೆ. ಇಂತಹ ಅವಕಾಶ ನನ್ನ ಪಾಲಿಗೆ ದೊರೆಯಲು ಮೈಸೂರು ತಾಲೂಕು ವರುಣ ಹೋಬಳಿ ಜನರೇ ಕಾರಣರಾಗಿದ್ದಾರೆ ಎಂದರು. ➡ಪುಟ ೪

ಡಾ.ಯತೀಂದ್ರ ಬೆಳೆಸಿ

ವರುಣ ಕ್ಷೇತ್ರಕ್ಕೆ ಹೆಚ್ಚು ಬಾರಿ ಬರಲು ಸಾಧ್ಯವಾಗುತ್ತಿಲ್ಲ. ಆದರೆ, ವರುಣ ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಯತೀಂದ್ರ ಹೇಳಿದ ಎಲ್ಲಾ ಅಭಿವೃದ್ಧಿ ಕೆಲಸ ಮಾಡುತ್ತಿದ್ದಾರೆ. ರಾಜಕೀಯವಾಗಿ ಡಾ.ಯತೀಂದ್ರರನ್ನು ಬೆಳೆಸುವ ಕೆಲಸ ಮಾಡಬೇಕು. ಮುಂದೆಯೂ ಅವರನ್ನು ಕೈಹಿಡಿದು ಬೆಳೆಸುತ್ತೀರಿ ಎನ್ನುವ ನಂಬಿಕೆ, ವಿಶ್ವಾಸವಿದೆ ಎಂದಾಗ ಅಲ್ಲಿದ್ದವರು ಮಂತ್ರಿ ಮಾಡಬೇಕು. ಡಿಸಿಎಂ ಮಾಡಬೇಕೆಂದು ಜೋರಾಗಿ ಕೂಗಿದಾಗ ನಗುತ್ತಲೇ ಮಾತು ಮುಂದುವರಿಸಿದರು. ಈಗಿನ ಹುಂಡಿಗಳಿಗೂ (ಗ್ರಾಮಗಳು) ಅಂದಿನ ಹುಂಡಿಗಳಿಗೂ ವ್ಯತ್ಯಾಸ ಇದೆ. 1977ರಿಂದಲೂ ಪರಿಚಯವಿದೆ. ಮಲ್ಲಹಳ್ಳಿ ಗ್ರಾಮದ ಸಾಕಣ್ಣ 1977ರಿಂದಲೂ ಪರಿಚಯ. ನಮ್ಮ ಸರ್ಕಾರದಲ್ಲಿ ಎಲ್ಲಾ ಜಾತಿ, ಧರ್ಮದವರಿಗೆ ಯೋಜನೆಗಳನ್ನು ನೀಡಿದ್ದೇನೆ. ➡ಪುಟ ೪

ಆರೆಸ್ಸೆಸ್ ಸಹಸರಕಾರ್ಯವಾಹ ಮುಕುಂದ ಅಭಿಪ್ರಾಯ

ಯುದ್ಧ ಪರಿಸ್ಥಿತಿ ದೂರವಾಗಲಿ



•**ಸಮಲ್ಖಾ(ಹರಿಯಾಣ):** ಪಶ್ಚಿಮ ಏಷ್ಯದಲ್ಲಿ ಉಂಟಾಗಿರುವ ಯುದ್ಧದ ಸಂದರ್ಭದಲ್ಲಿ ಭಾರತ ಸರ್ಕಾರದ ನಿಲುವೇ ನಮ್ಮ ನಿಲುವು. ಆದಷ್ಟು ಬೇಗ ಈ ಪರಿಸ್ಥಿತಿ ಸರಿಯಾಗಬೇಕು ಎನ್ನುವುದು ನಮ್ಮ ಅಪೇಕ್ಷೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸಹಸರಕಾರ್ಯವಾಹ ಸಿ.ಆರ್. ಮುಕುಂದ ತಿಳಿಸಿದ್ದಾರೆ.

ಶುಕ್ರವಾರ ಆರ್‌ಎಸ್‌ಎಸ್ (ಸಂಘ) ಅಖಿಲ ಭಾರತೀಯ ಪ್ರತಿನಿಧಿ ಸಭಾದ ಉದ್ಘಾಟನೆಯ ನಂತರ ಸುದ್ದಿಗೋಷ್ಠಿ ನಡೆಸಿದ ಅವರು, ಈ ಸಂದರ್ಭದಲ್ಲಿ ಭಾರತ ಸರ್ಕಾರ ಏನು ಮಾಡಬೇಕೋ ಅದನ್ನು ಮಾಡುತ್ತಿದೆ. ಅದನ್ನು ಮಾಧ್ಯಮಗಳಲ್ಲಿ ನಾವು ಕೇಳಿದ್ದೇವೆ, ಓದಿದ್ದೇವೆ. ನಮ್ಮ ದೇಶದ ಪ್ರಧಾನಮಂತ್ರಿ, ವಿದೇಶಾಂಗ ವ್ಯವಹಾರಗಳ ಸಚಿವರು ವಿವಿಧ ದೇಶಗಳ ಪ್ರಮುಖರೊಂದಿಗೆ ಸಂವಾದದಲ್ಲಿ ನಿರತರಾಗಿದ್ದಾರೆ. ಭಾರತದ ನಿಲುವು ಏನಾಗಿರಬೇಕು ಎನ್ನುವುದನ್ನು ಕೇಂದ್ರ ಸರ್ಕಾರ ಹೇಳಿದೆ. ಸರ್ಕಾರದ ನಿಲುವೇ ನಮ್ಮ ನಿಲುವು ಎಂದರು.

ಆರ್‌ಎಸ್‌ಎಸ್ ಎಲ್ಲಾ ಅಂತಾರಾಷ್ಟ್ರೀಯ ವಿಷಯಗಳಿಗೂ ತನ್ನ ಅಭಿಪ್ರಾಯ ಹೇಳುವುದಿಲ್ಲ. ಆದರೆ, ಆಯಾ ದೇಶಗಳ ಸ್ಥಾನೀಯ ಸಮಾಜ ಮತ್ತು ನಮ್ಮ ಭಾರತೀಯ ಸಮಾಜದ ಎಲ್ಲರ ಹಿತರಕ್ಷಣೆಯಿಂದ ಒಳ್ಳೆಯದೇ ಆಗಬೇಕು ಎನ್ನುವುದು ನಮ್ಮ ಆದ್ಯತೆ. ವಿವಿಧ ದೇಶಗಳಲ್ಲಿನ ಹಿಂದು ಸಂಘಟನೆಗಳ ಜತೆ ಸಂಘದ ಸಂಪರ್ಕವಿದೆ. ಇಲ್ಲಿಯವರೆಗೆ ಭಾರತೀಯ ಸಮಾಜದ ಜನರಿಗೆ ಬಹುದೊಡ್ಡ ಆತಂಕ ಅಲ್ಲಿ ಎದುರಾಗಿಲ್ಲ. ಎಲ್ಲರೊಂದಿಗೆ ಎಲ್ಲಾ ರೀತಿಯಲ್ಲೂ ಸಂಪರ್ಕ, ಸಂಬಂಧ ಹೊಂದುವ ಎಲ್ಲಾ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು. ➡ಪುಟ ೪

ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಜಾಗೊಳಿಸಿದ ನ್ಯಾಯಾಲಯ

ಮುಟ್ಟಿನ ರಜೆ ಕಡ್ಡಾಯಗೊಳಿಸಿದರೆ ಮಹಿಳೆಯರ ವೃತ್ತಿಗೆ ದಕ್ಕೆ: ಸುಪ್ರೀಂ

•**ಹೊಸದಿಲ್ಲಿ:** ವಿದ್ಯಾರ್ಥಿನಿಯರು ಹಾಗೂ ಮಹಿಳಾ ಉದ್ಯೋಗಿಗಳಿಗೆ ಋತುಸ್ರಾವ ರಜೆ ಕಡ್ಡಾಯಗೊಳಿಸುವ ರಾಷ್ಟ್ರೀಯ ನೀತಿಯೊಂದನ್ನು ಅಂಗೀಕರಿಸಬೇಕೆಂಬ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಪುರಸ್ಕರಿಸಲು ಸರ್ವೋಚ್ಚ ನ್ಯಾಯಾಲಯ ನಿರಾಕರಿಸಿದೆ.

ಇಂತಹ ನೀತಿ ನಿಯಮಗಳು ಉದ್ದೇಶ ಪೂರ್ವಕವಲ್ಲದೆಯೇ ಲಿಂಗ ತಾರತಮ್ಯ ಧೋರಣೆಗಳನ್ನು ಬಲವರ್ಧಿಸಬಲ್ಲುದು. ಮಹಿಳೆಯರ ಔದ್ಯೋಗಿಕ ಭವಿಷ್ಯಕ್ಕೂ ಹೊಡೆತ ನೀಡುವ ಸಾಧ್ಯತೆಯಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಆದಾಗ್ಯೂ ಸಂಬಂಧಪಟ್ಟ ಅಧಿಕಾರಿಗಳು ಅಥವಾ ಪ್ರಾಧಿಕಾರ ಅರ್ಜಿದಾರರ ಅಹವಾಲನ್ನು ಪರಾಮರ್ಶಿಸಬಹುದು. ➡ಪುಟ ೪



ಸಾಮಾಜಿಕ ಪರಿಣಾಮ ಬಗ್ಗೆ ಸಿಜೆಐ ಕಳವಳ

ಕಡ್ಡಾಯ ಮುಟ್ಟಿನ ರಜೆಗಳು ಸಾಮಾಜಿಕವಾಗಿ ಬೀರಲಿರುವ ಪರಿಣಾಮಗಳ ಕುರಿತು ಮುಖ್ಯ ನ್ಯಾಯಮೂರ್ತಿ ಕಳವಳ ವ್ಯಕ್ತಪಡಿಸಿದ್ದಾರೆ. ಇಂತಹ ಕ್ರಮಗಳು ಅನುದ್ದೇಶಪೂರ್ವಕ. ಮಹಿಳೆಯರ ಕುರಿತ ಕೀಳರಿಮೆ ಭಾವದ ಬಲವರ್ಧಿಸುವ ಅಪಾಯವಿದೆ ಎಂದವರು ಎಚ್ಚರಿಸಿದ್ದಾರೆ.

70 ಪಲ್ಲಕ್ಕಿ ಸೇರಿ 115 ಹೊಸ ಬಸ್

•**ಬೆಂಗಳೂರು:** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಹೊಸದಾಗಿ 45 ಕರ್ನಾಟಕ ಸಾರಿಗೆ ಹಾಗೂ 70 ಹವಾನಿಯಂತ್ರಣರಹಿತ ಸ್ಲೀಪರ್ ಪಲ್ಲಕ್ಕಿ ಬಸ್ ಸೇರಿದಂತೆ ಒಟ್ಟು 115 ಬಸ್‌ಗಳು ಸೇರ್ಪಡೆಗೊಂಡಿದ್ದು, ಶುಕ್ರವಾರದಿಂದಲೇ ಸಾರ್ವಜನಿಕ ಸೇವೆಗೆ ಮುಕ್ತವಾಗಿವೆ.

ನೂತನ ಬಸ್‌ಗಳ ಸಂಚಾರಕ್ಕೆ ಚಾಲನೆ ನೀಡಿದ ಸಚಿವ ರಾಮಲಿಂಗಾರೆಡ್ಡಿ

ಕೆಎಸ್‌ಆರ್‌ಟಿಸಿ ವತಿಯಿಂದ ನಿಗಮದ ಕೇಂದ್ರ ಕಚೇರಿಯಲ್ಲಿ ನೂತನ 45 ಕರ್ನಾಟಕ ಸಾರಿಗೆ ಹಾಗೂ 70 ಪಲ್ಲಕ್ಕಿ ಬಸ್ಸುಗಳಿಗೆ ಸಾರಿಗೆಸಚಿವ ರಾಮಲಿಂಗಾ ರೆಡ್ಡಿ ಶುಕ್ರವಾರ ಚಾಲನೆನೀಡಿದರು. ಬಳಿಕ ಮಾತನಾಡಿದ ಅವರು, ಹವಾನಿಯಂತ್ರಣರಹಿತ ಸ್ಲೀಪರ್ ಪಲ್ಲಕ್ಕಿಗಳಿಗೆ ಭಾರೀ ಬೇಡಿಕೆಯಿದ್ದು ಮುಂದಿನ ದಿನಗಳಲ್ಲಿ ಹಂತಹಂತವಾಗಿ ಇನ್ನಷ್ಟು ಪಲ್ಲಕ್ಕಿ ಬಸ್‌ಗಳನ್ನು ಕೆಎಸ್‌ಆರ್‌ಟಿಸಿಗೆ ಸೇರಿಸಲಾಗುವುದು ಎಂದರು. ➡ಪುಟ ೪

ಬೆಂಗಳೂರಿನ 3500 ಕಿಮೀ ರಸ್ತೆಗೆ ಶೀಘ್ರ ಇನ್ನಷ್ಟು ಸೇರ್ಪಡೆ

ಮತ್ತೆ ಪ್ಲಾಸ್ಟಿಕ್ ರಸ್ತೆ ಚಿಂತನೆ

▶ಮಹೇಶ್ ಹೆಗಡೆ

•**ಬೆಂಗಳೂರು:** ಪರಿಸರ ಸಂರಕ್ಷಣೆ ದೃಷ್ಟಿಕೋನದಿಂದ ಅತ್ಯಂತ ಮಹತ್ವವಾಗಿರುವ ಪ್ಲಾಸ್ಟಿಕ್ ಬಳಸಿ ರಸ್ತೆ ಮಾಡುವಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಮುಂಚೂಣಿಯಲ್ಲಿದ್ದ ನಗರಗಳಲ್ಲಿ ಬೆಂಗಳೂರು ಸಹ ಒಂದು. 2002ರ ಆಸುಪಾಸಿನಲ್ಲಿ ಆರಂಭವಾದ ಈ ಚಿಂತನೆಯಲ್ಲಿ ಬೆಂಗಳೂರು ನಗರದಲ್ಲಿ ಸುಮಾರು 3,500 ಕಿ.ಮೀ.ಗೂ ಹೆಚ್ಚಿನ ಉದ್ದದ ರಸ್ತೆಯನ್ನು ಕಡಿಮೆ ಗುಣಮಟ್ಟದ ಪ್ಲಾಸ್ಟಿಕ್(ಸಿಂಗಲ್‌ಯೂಸ್) ಬಳಸಿ ರಸ್ತೆ ನಿರ್ಮಿಸಲಾಗಿದೆ.

ಪದ್ಮಶ್ರೀ ಪ್ರೊ. ಆರ್. ವಾಸುದೇವನ್ ಅವರ ಪರಿಕಲ್ಪನೆಯ ಪ್ಲಾಸ್ಟಿಕ್ ಬಳಸಿ ರಸ್ತೆ ನಿರ್ಮಾಣ ಬೆಂಗಳೂರಿನಲ್ಲಿ 2002 ರಿಂದ 2016ರ ಅವಧಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಆಗಿತ್ತು. ನಂತರದಲ್ಲಿ ನಿಧಾನಗತಿಯಾಗಿದೆ. ಇದೀಗ ಮತ್ತೆ ನಗರದಲ್ಲಿ ಪ್ಲಾಸ್ಟಿಕ್ ಬಳಸಿ ರಸ್ತೆ ನಿರ್ಮಿಸುವುದಕ್ಕೆ ವೇಗ ನೀಡುವ ಚಿಂತನೆ ನಡೆಸಲಾಗುತ್ತಿದ್ದು, ಈ ಸಂಬಂಧ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಕಡಿಮೆ ಮೌಲ್ಯಯುತ ಪ್ಲಾಸ್ಟಿಕ್‌ನ್ನು ಡಾಂಬರೀಕರಣಕ್ಕೆ ಬಳಸಿಕೊಳ್ಳಲು ಸೂಚನೆ ನೀಡಿದ್ದಾರೆ. ➡ಪುಟ ೪




ನಿರ್ವಹಣಾ ವೆಚ್ಚದಲ್ಲಿ ಉಳಿತಾಯ

ರಸ್ತೆ ನಿರ್ಮಾಣದ ನಂತರ ನಿರ್ವಹಣೆ ಸವಾಲಿನ ಕೆಲಸ. ಆದರೆ ಪ್ಲಾಸ್ಟಿಕ್ ಬಳಸಿ ಮಾಡಿದ ರಸ್ತೆ ನಿರ್ವಹಣೆ ಸುಲಭ. ಸಮಾನ್ಯ ರಸ್ತೆಗಳಿಗಿಂತ ಸುಮಾರು 5 ವರ್ಷ ಹೆಚ್ಚು ಕಾಲ ಬಾಳಿಕೆ ಬರಲಿದೆ. ಇದರಿಂದ ರಸ್ತೆ ನಿರ್ವಹಣೆಗೆ ಬೇಕಾಗುವ ಹಣ ಉಳಿತಾಯವಾಗಲಿದೆ. ➡ಪುಟ ೪

ಕೆಂಪು ಕಲ್ಲಿನಂತೆ ಮರಳು ಸಮಸ್ಯೆಗೂ ಪರಿಹಾರ ಹುಡುಕಿ

•**ವಿಧಾನಸಭೆ:** ಕರಾವಳಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕೆಂಪು ಕಲ್ಲು (ಲ್ಯಾಟರೈಟ್ ಕಲ್ಲು) ಸಮಸ್ಯೆಗೆ ಪರಿಹಾರ ಕಂಡುಕೊಂಡಂತೆ ಅಲ್ಲಿನ ಎಲ್ಲ ಜನಪ್ರತಿನಿಧಿಗಳು, ಅಧಿಕಾರಿಗಳ ಸಭೆ ಕರೆದು ಮರಳು ಸಮಸ್ಯೆಯನ್ನೂ ಬಗೆಹರಿಸುವಂತೆ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಹರೀಶ್ ಪೂಂಜ ವಿಷಯ ಪ್ರಸ್ತಾಪಿಸಿ, ನಮ್ಮೂರಿನಲ್ಲಿ ಒಂದು ಲೋಡ್ ಮರಳಿಗೆ 20-21 ಸಾವಿರ ರೂ. ಆಗಿದೆ. ನಾನ್ ಸಿಆರ್‌ಝಡ್ ವ್ಯಾಪ್ತಿಯಲ್ಲಿ 18 ಮರಳು ನಿಕ್ಷೇಪಗಳನ್ನು ಗುರುತಿಸಲಾಗಿದ್ದರೂ ಈವರೆಗೆ ಮರಳುಗಾರಿಕೆ ಆರಂಭವಾಗಿಲ್ಲ. ಜನರ ಕನಸಾಗಿರುವ ಮನೆ ನಿರ್ಮಾಣಕ್ಕೆ ಮರಳು ಸಿಗದೆ ಸಮಸ್ಯೆಯಾಗುತ್ತಿದೆ ಎಂದರು. ➡ಪುಟ ೪



ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,80,000(2,80,000) ಅಪರಂಜಿ ಚಿನ್ನ: 1,60,690(1,62,220) ಆಭರಣ ಚಿನ್ನ: 1,47,300(1,48,700) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)
ಷೇರು ಸೂಚ್ಯಂಕ	ಬಿಎಸ್‌ಇ 74,533(1470↓) ಎನ್‌ಎಸ್‌ಇ 23,151(488↓)
$1 = ₹92.30	



ಹುಬ್ಬಳ್ಳಿ: ಬಿಜೆಪಿ ಧಾರವಾಡ ವಿಭಾಗ ಪ್ರಭಾರಿಯಾಗಿ ಆಯ್ಕೆಯಾದ ಜಯತೀರ್ಥ ಕಟ್ಟಿ ಅವರಿಗೆ ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠದ ವತಿಯಿಂದ ಮಠದ ವ್ಯವಸ್ಥಾಪಕ ವೇಣುಗೋಪಾಲಾಚಾರ್ಯ ರಾಯರ ಆಶೀರ್ವಾದ ಪೂರ್ವಕವಾಗಿ ಸನ್ಮಾನಿಸಿದರು. ಗುರುರಾಜಾಚಾರ್ಯ ಸಾಮಗ, ಗುರುರಾಜ ಕೌಜಲಗಿ, ಹರ್ಷ ಶಿರಗುಪ್ಪಿ, ವೈಭವ ಕಟ್ಟಿ, ಪವನ ದೇಸಾಯಿ ಮುಂತಾದವರಿದ್ದರು.

ಸಿಲಿಂಡರ್ ಅಭಾವ ಹೆಚ್ಚಳ: ಅಸಮಾಧಾನ

ಹುಬ್ಬಳ್ಳಿ: ಅಮೇರಿಕಾ, ಇಸ್ರೇಲ್ ಹಾಗೂ ಇರಾನ್ ಯುದ್ಧದ ಹಿನ್ನೆಲೆ ಎಲ್‌ಪಿಜಿ ಸಿಲಿಂಡರ್ ಅಭಾವ ಹೆಚ್ಚಾಗಿದ್ದು, ಶುಕ್ರವಾರ ಇಲ್ಲಿಯ ಕಾರವಾರ ರಸ್ತೆಯ ಇಂಡಿಯನ್ ಗ್ಯಾಸ್ ಏಜೆನ್ಸಿ ಎದುರು ಗ್ರಾಹಕರು ಗ್ಯಾಸ್ ಬುಕಿಂಗ್ ಮಾಡಿದರೂ ಸಹ ಸಿಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈಗಾಗಲೇ ವಾಣಿಜ್ಯ ಬಳಕೆ ಸಿಲಿಂಡರ್‌ಗಳ ವಿತರಿಸುವುದು ಸ್ಥಗಿತ ಮಾಡಿದ ಹಿನ್ನೆಲೆ ನಗರದ ಕೆಲವು ಹೋಟೆಲ್‌ಗಳು ಬಂದ್ ಮಾಡಿದರೇ ಇನ್ನೂ ಕೆಲವು ಕಟ್ಟಿಗೆ ಒಲೆಯಲ್ಲಿ ಅಡುಗೆ ಮಾಡಿ ನಡೆಸುತ್ತಿದ್ದಾರೆ. ಈಗ ಗೃಹ ಬಳಕೆ ಗ್ಯಾಸ್ ಸಿಲಿಂಡರ್ ಸಹ ಸರಿಯಾಗಿ ಬುಕ್ ಆಗುತ್ತಿಲ್ಲ. ಬುಕ್ ಆದರೂ ಗ್ಯಾಸ್ ಸಿಲಿಂಡರ್ ನೀಡುತ್ತಿಲ್ಲ ಎಂದು ಗ್ರಾಹಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಗ್ಯಾಸ್ ಏಜೆನ್ಸಿ ಮಳಿಗೆ ಮುಂದೆ ಬೆಳಗ್ಗೆ 7 ಗಂಟೆಯಿಂದ ನಿಂತಿದ್ದೇವೆ. ಬುಕ್ ಆಗುತ್ತಿಲ್ಲ. ಇಲ್ಲಿಯ ಸಿಬ್ಬಂದಿ ರಾತ್ರಿ 10 ಗಂಟೆಗೆ ಬುಕ್ ಮಾಡಿ ಎಂದು ಹೇಳುತ್ತಿದ್ದಾರೆ. ಗ್ಯಾಸ್ ಸಿಲಿಂಡರ್ ಬುಕ್ ಆಗುವರೆಗೂ ನೀಡುವುದಿಲ್ಲ ಎಂದು ಹಾರೈಕೆ ಉತ್ತರ ನೀಡುತ್ತಿದ್ದಾರೆ ಎಂದು ಗ್ರಾಹಕರೊಬ್ಬರು ಬೇಸರ ವ್ಯಕ್ತಪಡಿಸಿದರು. ಗ್ಯಾಸ್ ಸಿಲಿಂಡರ್ ಬುಕ್ ಆಗುತ್ತಿಲ್ಲ, ಕೆಲವು ಏಜೆನ್ಸಿ ಸಿಬ್ಬಂದಿ ಬ್ಲಾಕ್ ನಲ್ಲಿ ನೀಡುತ್ತಿದ್ದಾರೆ. ನಾವು ಬುಕ್ ಮಾಡಿ ಮೂರುನಾಲ್ಕು ದಿನವಾದರೂ ಸಹ ಗ್ಯಾಸ್ ಸಿಲಿಂಡರ್ ನೀಡುತ್ತಿಲ್ಲ. ಗ್ಯಾಸ್‌ಬೇಕಾಗಿ ಕರೆ ಮಾಡಿದರೆ ಫೋನ್ ಸ್ವಿಚ್ ಆಫ್ ಮಾಡಿದ್ದಾರೆ ಎಂದು ಮಹಿಳಾ ಗ್ರಾಹಕರೊಬ್ಬರು ಆರೋಪಿಸಿದರು. ನಗರದ ಇನ್ನೂ ಕೆಲವು ಏಜೆನ್ಸಿ ಎದುರು ಜನ ಸೇರುತ್ತಿದ್ದಾರೆ. ಗ್ಯಾಸ್ ಸಿಲಿಂಡರ್ ನೀಡದ ಕಾರಣ ಅಸಮಾಧಾನ ವ್ಯಕ್ತಪಡಿಸಿದರು.



ಹುಬ್ಬಳ್ಳಿ: ಪೆಟ್ರೋಲ್ ಹಾಗೂ ಗ್ಯಾಸ್ ಸಿಲಿಂಡರ್ ಕಾಳಸಂತೆಯಲ್ಲಿ ಮಾರಾಟವಾಗದಂತೆ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿ ಉತ್ತರ ಕರ್ನಾಟಕ ಆಟೋ ರಿಕ್ಷಾ ಚಾಲಕರ ಸಂಘದಿಂದ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಕಿರುಸುದ್ದಿ

ಇಂದು ಲೋಕ್ ಅದಾಲತ್

ಕಲಘಟಗಿ: ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಇವರ ನಿರ್ದೇಶನದಂತೆ ಮಾ.14 ರಂದು ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದ್ದು, ಅದರ ಪ್ರಯುಕ್ತ ಕಲಘಟಗಿ ನ್ಯಾಯಾಲಯದಲ್ಲಿ ಲೋಕ ಅದಾಲತ್ ಪೀಠಗಳನ್ನು ರಚಿಸಲಾಗಿದೆ. ನ್ಯಾಯಾಲಯಗಳಲ್ಲಿ ಬಾಕಿ ಇರುವ ವಾಟ್ನೆ ದಾವೆಗಳು, ಬ್ಯಾಂಕ್ ದಾವೆಗಳು, ಹಣ ವಸೂಲಾತಿ ದಾವೆಗಳು, ಮೋಟಾರು ವಾಹನ ಅಪಘಾತ ಪರಿಹಾರ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ಜೀವನಾಂಶ ಪ್ರಕರಣಗಳು, ವಿಚ್ಛೇದನ ಹೊರತುಪಡಿಸಿ ಕೌಟಂಬಿಕ ವ್ಯಾಜ್ಯಗಳು, ದರಖಾಸ್ತ ಪ್ರಕರಣಗಳು, ರಾಜೀ ಆಗಬಹುದಾದ ಕ್ರಿಮಿನಲ್ ಪ್ರಕರಣಗಳು, ವ್ಯಾಜ್ಯ ಪೂರ್ವ ಪ್ರಕರಣಗಳು ಹಾಗೂ ಇತರ ಸಿವಿಲ್ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಬಗೆಹರಿಸಲಾಗುವುದು. ಮಾ.14 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 2 ಗಂಟೆಯ ವರೆಗೆ ಕಲಘಟಗಿ ನ್ಯಾಯಾಲಯದಲ್ಲಿ ನಡೆಯಲಿರುವ ಲೋಕ್ ಅದಾಲತ್‌ನಲ್ಲಿ ತಮ್ಮ ಪ್ರಕರಣ ಹಾಗೂ ವ್ಯಾಜ್ಯಗಳನ್ನು ಪರಿಹರಿಸಿಕೊಂಡು ಲೋಕ ಅದಾಲತ್‌ನ್ನು ಯಶಸ್ವಿಗೊಳಿಸಲು, ತಾಲೂಕು ಕಾನೂನು ಸೇವಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಕಣ್ಣಿನ ಉಚಿತ ತಪಾಸಣೆ ನಾಳೆ

ಕುಂದಗೋಳ: ಕ್ಷೇತ್ರದ ಶಾಸಕ ಎಂ.ಆರ್. ಪಾಟೀಲ ಅವರ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿ ಬಳಗದ ವತಿಯಿಂದ ಹುಬ್ಬಳ್ಳಿಯ ಜಯಪ್ರಿಯಾ ಆಸ್ಪತ್ರೆಯ ಸಹಯೋಗದಲ್ಲಿ ಮಾ.15ರಂದು ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.



ಅಂದು ಪಟ್ಟಣದ ಮಾರ್ಕೆಟ್ ಪ್ರದೇಶದಲ್ಲಿರುವ ಭೂತೇಶ್ವರ ದೇವಸ್ಥಾನ ಆವರಣದಲ್ಲಿ ಬೆಳಗ್ಗೆ 9 ಗಂಟೆಗೆ ಶಿಬಿರ ಆರಂಭವಾಗಲಿದೆ. ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಈ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಂಧಿಸದಿದ್ದರೆ ಹೋರಾಟ

ಹುಬ್ಬಳ್ಳಿ: ತಾಲೂಕಿನ ನೂಲ್ವಿ ಗ್ರಾಮದಲ್ಲಿ ಆಸ್ತಿ ವಿಚಾರಕ್ಕೆ ಸಂಬಂಧಿಸಿ ದಲಿತ ಮಹಿಳೆ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿ, ಕೊಲೆಗೆ ಯತ್ನಿಸಿದರೂ ಪೊಲೀಸರು ಆರೋಪಿಗಳನ್ನು ಬಂಧಿಸದಿರುವುದು ಖಂಡನೀಯ. ಎರಡು ದಿನದಲ್ಲಿ (ಮಾ.15) ಆರೋಪಿಗಳನ್ನು ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸದಿದ್ದರೆ ಹೋರಾಟ ಮಾಡುವುದಾಗಿ ವಿವಿಧ ದಲಿತ ಪರ ಸಂಘಟನೆಗಳ ಮುಖಂಡರು ಆಗ್ರಹಿಸಿದ್ದಾರೆ.

ಶುಕ್ರವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ದಲಿತ ಮುಖಂಡ ಎಂ. ಅರವಿಂದ ಮಾತನಾಡಿ, ಮಹಿಳೆಯ ಮೇಲೆ ಹಲ್ಲೆ ಮಾಡಿದ ಪ್ರಮುಖ ಆರೋಪಿಯೂ ಪ್ರತಿಷ್ಠಿತ ವ್ಯಕ್ತಿ ಎಂಬ ಕಾರಣಕ್ಕೆ ಪೊಲೀಸರು ಘಟನೆ ನಡೆದು 48 ಗಂಟೆಯಾದರು ಪ್ರಕರಣ ದಾಖಲಿಸಿಕೊಂಡಿರಲಿಲ್ಲ. ಪ್ರಕರಣ ದಾಖಲಿಸಿಕೊಂಡು ಸರಿಯಾದ ಕಾಯ್ದೆಗಳನ್ನು ಅದರಲ್ಲಿ ಸೇರಿಸಿಲ್ಲ. ಇಲ್ಲಿಯ ವರೆಗೂ ಆರೋಪಿಗಳ ಬಂಧಿಸದಿರುವುದು ದುರಾದೃಷ್ಟ ಸಂಗತಿ ಎಂದು ಆರೋಪಿಸಿದರು. ದಲಿತ ಸಂಘಟನೆ ಮುಖಂಡ ಗುರುನಾಥ ಉಳ್ಳಿಕಾಶಿ, ಮಾರುತಿ ಬಾರಕೇರ, ಮಂಜು ಹುಡೇದ ಸೇರಿದಂತೆ ಅನೇಕರಿದ್ದರು.

ಟೆಂಗಿನಕಾಯಿ ಸಂತಾಪ

ಹುಬ್ಬಳ್ಳಿ: ಇತ್ತೀಚಿಗೆ ರಸ್ತೆ ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆ ಸೇರಿದ್ದ ಪತ್ರಿಕಾ ಛಾಯಾಗ್ರಹಕ ವಾಮನ ಭಾಂಡಗೆ ನಿಧನಕ್ಕೆ ಶಾಸಕ ಮಹೇಶ ಟೆಂಗಿನಕಾಯಿ ಸಂತಾಪ ವ್ಯಕ್ತಪಡಿಸಿದ್ದಾರೆ. ಅವರು ಮೃತಪಟ್ಟಿರುವ ಸುದ್ದಿ ತಿಳಿದು ದುಃಖವಾಗಿದ್ದು, ಇವರು ಪ್ರತಿಭಾವಂತ ಛಾಯಾಗ್ರಾಹಕರಾಗಿದ್ದರು. ಪತ್ರಿಕಾ ರಂಗದಲ್ಲಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದ ಇವರು ಚಿಕ್ಕ ವಯಸ್ಸಿನಲ್ಲಿ ನಮ್ಮನ್ನು ಅಗಲಿದ್ದು ಇವರ ಸೇವೆ ಅನ್ಯೋನ್ಯ ಆಗಿದ್ದು ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನು ನೀಡಲಿ ಸಂತಾಪದಲ್ಲಿ ತಿಳಿಸಿದ್ದಾರೆ. ಮಾಜಿ ಪಕ್ಷದ ವಕ್ತಾರ ರವಿ ನಾಯಕ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ.

ಕರ್ತವ್ಯಲೋಪ: ದೂರು ದಾಖಲು

ನವಲಗುಂದ: ಪಟ್ಟಣದ ಗಾಂಧಿ ಮಾರುಕಟ್ಟೆಯಲ್ಲಿರುವ ಬೀದಿ ಬದಿ ವ್ಯಾಪಾರಿಗಳ ಅಂಗಡಿಯ ಮುಂದೆ ಕಸ ಸುರಿದ ಪುರಸಭೆಯ ಇಬ್ಬರು ಕಿರಿಯ ಆರೋಗ್ಯ ನಿರೀಕ್ಷಕರ ವಿರುದ್ಧ ಕರ್ನಾಟಕ ಲೋಕಾಯುಕ್ತ ಹಾಗೂ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ದೂರು ದಾಖಲು ಮಾಡಿರುವುದಾಗಿ ಸಾಮಾಜಿಕ ಕಾರ್ಯಕರ್ತ ಮಾಬುಸಾಬ ಯರಗುಪ್ಪಿ ತಿಳಿಸಿದರು.



ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ ಅವರು, ಬೀದಿ ಬದಿ ವ್ಯಾಪಾರಿಗಳ ರಕ್ಷಣೆ ನೀಡಬೇಕಾದ ಅಧಿಕಾರಿಗಳೇ ಅಂಗಡಿಗಳ ಮುಂದೆ ಕಸ ಹಾಕಿರುವುದು ಕಾನೂನು ಬಾಹಿರವಾಗಿದ್ದು ಕರ್ನಾಟಕ ಲೋಕಾಯುಕ್ತ ಸಂಸ್ಥೆ ಹಾಗೂ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಈ ಕುರಿತು ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಬೇಕೆಂದು ದೂರಿನಲ್ಲಿ ಆಗ್ರಹ ಮಾಡಿರುವುದಾಗಿ ತಿಳಿಸಿದರು.

ಜಿಲ್ಲಾ ವಿಪತ್ತು ನಿರ್ವಹಣಾ ಸಭೆ | ಜಿಲ್ಲಾಧಿಕಾರಿ ಸ್ನೇಹಲ್ ಸೂಚನೆ

ನೀರು, ಮೇವು ಕೊರತೆ ನೀಗಿಸಿ

ಧಾರವಾಡ: ಬಿಸಿಲಿನ ತಾಪ ಹೆಚ್ಚಿದ ಹಿನ್ನೆಲೆ ಜಿಲ್ಲೆಯ ಜನ-ಜಾನುವಾರುಗಳಿಗೆ ಕುಡಿಯಲು ನೀರು ಹಾಗೂ ಮೇವಿನ ಕೊರತೆ ಆಗದಂತೆ ಎಚ್ಚರಿಕೆ ವಹಿಸಲು ನೀರು ಸರಬರಾಜು, ಪಶು ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ನೂತನ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ನಡೆಸಿದ ಅವರು, 2026ನೇ ಸಾಲಿನ ಬೇಸಿಗೆಯ ಅವಧಿಯ ಕುಡಿಯುವ ನೀರಿನ ಬಗ್ಗೆ ಕೈಗೊಂಡ ಕ್ರಿಯಾಯೋಜನೆ ಪರಿಶೀಲನೆ ನಡೆಸಿದರು.

ಜಿಲ್ಲೆಯಲ್ಲಿ 395 ಗ್ರಾಮಗಳಿದ್ದು, 90 ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವವಿದೆ. ಮುನ್ನೆಚ್ಚರಿಕಾ ಕ್ರಮವಾಗಿ 186 ಖಾಸಗಿ ಕೊಳವೆಬಾವಿ ಮಾಲೀಕರ ಜೊತೆಗೆ ನೀರು ಪೂರೈಕೆಗಾಗಿ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಬೇಸಿಗೆಯಲ್ಲಿ ಅಂಕಿಅಂಶ ಪ್ರಕಾರ ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ 90 ಗ್ರಾಮಗಳಿಗೆ ಕುಡಿಯುವ ನೀರಿನ ಕೊರತೆ ಆಗುವುದು ಅಂದಾಜು ಮಾಡಿತ್ತು. ಈ ಪೈಕಿ ಎಂದು ಗ್ರಾಮಗಳಿಗೆ ಬಾಡಿಗೆ ಬೋರ್‌ವೆಲ್ ನೀರು ಪೂರೈಸುವುದಾಗಿ ಹೇಳಿದರು.

ತಹಶೀಲ್ದಾರ್ ಹಾಗೂ ಪಿಡಿಓಗಳು ಕುಡಿಯುವ ನೀರಿನ ಅಭಾವ ಉಂಟಾಗದಂತೆ ಮುಂಜಾಗ್ರತೆ ವಹಿಸಬೇಕು. ಸದ್ಯ ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿಲ್ಲ, ಜಾನುವಾರುಗಳಿಗೆ ಮೇವು ಕೂಡ ದಾಸ್ತಾನಿದೆ ಎಂದರು.

ಈವರೆಗೂ ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಗೋಚರಿಸಿಲ್ಲ, ಕುಂದಗೋಳ, ಅಣ್ಣಿಗೇರಿ, ನವಲಗುಂದ, ಹುಬ್ಬಳ್ಳಿ ತಾಲೂಕಿನ ಕುಡಿಯುವ ನೀರಿನ ಕೆರೆಗಳು ತುಂಬಿಸಿದ್ದಾಗಿ ಜಿಪಂ ಸಿಇಒ ಭುವನೇಶ ಪಾಟೀಲ ಹೇಳಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಮಹಾನಗರ ಪಾಲಿಕೆ ಆಯುಕ್ತ ಡಾ.ರುದ್ರೇಶ ಘಾಳಿ, ಪ್ರೊಬೇಷನರಿ ಐಎಎಸ್ ಅಧಿಕಾರಿ ರೀತಿಕಾ ವರ್ಮಾ ಇತರರಿದ್ದರು.



ಕುಡಿಯುವ ನೀರಿಗೆ ಸಂಪರ್ಕಿಸಿ

- ಅಣ್ಣಿಗೇರಿ ಪುರಸಭೆ-9731603308,
- ನವಲಗುಂದ ಪುರಸಭೆ-9964401234,
- ಅಳ್ನಾವರ ಪಪಂ-9964323270,
- ಕಲಘಟಗಿ ಪಪಂ-9742138913,
- ಕುಂದಗೊಳ ಪಪಂ-9945667625,
- ಹು-ಧಾ ಪಾಲಿಕೆ-7996666247
- ಧಾರವಾಡ ತಾಲೂಕು-7353104356,
- ನವಲಗುಂದ ತಾಲೂಕು-9449629709,
- ಕಲಘಟಗಿ ತಾಲೂಕು-9901199345,
- ಹುಬ್ಬಳ್ಳಿ ತಾಲೂಕು-9164802969,
- ಕುಂದಗೋಳ ತಾಲೂಕು-9187458864,
- ಧಾರವಾಡ ಜಿಪಂ ಸಹಾಯವಾಣಿ 0836-2742221

> ಜಿಲ್ಲೆಯ ಗ್ರಾಮ-ನಗರಕ್ಕೆ ಪೂರೈಸುವ ನೀರಿನ ಮಾದರಿ ಸಂಗ್ರಹಿಸಿ, ಕುಡಿಯಲು ಯೋಗ್ಯವಾಗಿರುವ ಕುರಿತು ಖಚಿತಪಡಿಸಿಕೊಳ್ಳಬೇಕು. ಕಲುಷಿತ ನೀರು ಪೂರೈಕೆ ಆಗದಂತೆ ಹಾಗೂ ನೀರಿನ ಹರಡುವ ಸಾಂಕ್ರಾಮಿಕ ರೋಗಗಳ ಕುರಿತು ಎಚ್ಚರಿಕೆ ವಹಿಸಬೇಕು. ಪ್ರಾಣಿ-ಪಕ್ಷಿಗಳಿಗೂ ನೀರಿನ ಕೊರತೆ ಆಗದಂತೆ ಅರಣ್ಯದಲ್ಲಿ ತಟ್ಟೆ ಅಥವಾ ಸಣ್ಣ ಟ್ಯಾಂಕ್ ವ್ಯವಸ್ಥೆಯೂ ಮಾಡಬೇಕು.
> ■ ಸ್ನೇಹಲ್ ಆರ್., ಡಿಸಿ

ಸಮಸ್ಯೆಗಳಿಗೆ ಭಗವದ್ಗೀತೆಯಲ್ಲಿ ಪರಿಹಾರ



ಧಾರವಾಡ: ಭಾರತದ ಮಹಾನ್ ಕಾವ್ಯಗಳು ದೇಶದ ಸಂಸ್ಕೃತಿ ಮತ್ತು ಪರಂಪರೆ ಬಿಂಬಿಸುತ್ತವೆ. ಯುದ್ಧ ಕಾಲದಲ್ಲಿ ಭಗವದ್ಗೀತೆ ತತ್ವಬೋಧನೆ ಪ್ರಸ್ತುತ. ಸಮಸ್ಯೆಗೆ ಭಗವದ್ಗೀತೆಯಲ್ಲಿ ಪರಿಹಾರವಿದೆ ಎಂದು ಐಐಟಿ ನಿರ್ದೇಶಕ ವಿ.ಆರ್.ದೇಸಾಯಿ ಹೇಳಿದರು.

ಧಾರವಾಡ ಕಟ್ಟಿ ನಗರದ ಜನತಾ ಶಿಕ್ಷಣ ಸಮಿತಿಯಲ್ಲಿ ಹಮ್ಮಿಕೊಂಡ ಭಾರತದ ನಾಗರಿಕತೆಯ ಸಾಹಿತ್ಯ; ಪಠ್ಯ, ಸಂಪ್ರದಾಯಗಳು, ನಾಗರಿಕತೆ ಸಂಸ್ಕೃತಿ ಮತ್ತು ಸಂಭಾಷಣೆಯ ಎರಡು ದಿನದ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಐಐಟಿ ಡೀನ್ ಪ್ರೊ.ಎಸ್.ಎಂ.ಶಿವಪ್ರಸಾದ, ಸಾಹಿತ್ಯ ಮತ್ತು ವಿಜ್ಞಾನದಲ್ಲಿ ಅಂತರ್ ಸಂಸ್ಕೃತಿ ಕುರಿತು ನಾವು ಕೃತಕ ಬುದ್ಧಿಮತ್ತೆ ಮೀರಿ ಯೋಚಿಸಬೇಕಿದೆ. ಸಾಹಿತ್ಯ ಸಮಾಜದ ಸಂಸ್ಕೃತಿ, ಪರಂಪರೆ ಮತ್ತು ಜೀವನ ಮೌಲ್ಯಗಳು ಪ್ರತಿಬಿಂಬಿಸುತ್ತದೆ ಎಂದರು.

ಪ್ರಾಚೀನ ನಾಗರಿಕತೆ ಶ್ರೀಮಂತಿಕೆಯಿಂದ ಕೂಡಿತ್ತು. ನಾಗರಿಕತೆ ಬೆಳೆದಂತೆಲ್ಲ ತಂತ್ರಜ್ಞಾನದ ಬೆಳವಣಿಗೆಯೂ ಬೆಳವಣಿಗೆ ಹೊಂದಿದೆ. ಪ್ರತಿ ನಾಗರಿಕತೆಯೂ ಕೃಷಿ, ತಂತ್ರಜ್ಞಾನ, ಖಗೋಳ, ಗಣಿತ ಕ್ಷೇತ್ರಕ್ಕೂ ಅದ್ಭುತ ಕೊಡುಗೆ ನೀಡಿದ್ದಾಗಿ ಹೇಳಿದರು.

ರಾಯಚೂರು ಮಹರ್ಷಿ ವಾಲ್ಮೀಕಿ ವಿವಿ ಕುಲಪತಿ ಪ್ರೊ. ಶಿವಾನಂದ ಕೆಳಗಿನಮನಿ, ಕನ್ನಡ ಸಾಹಿತ್ಯದಲ್ಲಿ ಹಲವು ಸ್ಥಿತ್ಯಂತರ ಪ್ರಯೋಗ ನಡೆದಿವೆ. ಜೈನ ಸಾಹಿತ್ಯ, ಬೌದ್ಧ, ವಚನ, ವೈದಿಕ, ವೀರಶೈವ ಸಾಹಿತ್ಯಗಳಲ್ಲೂ ಹೊಸ ಪ್ರಯೋಗ ನಡೆದಿವ. ಎಂದರು.

ಪ್ರೊ. ವಿ.ಎಸ್.ಕಟಗಿಹಳ್ಳಿಮಠ ಮಾತನಾಡಿ, ಬೇಂದ್ರೆ ಕಾವ್ಯಗಳಲ್ಲಿ ವಿಜ್ಞಾನ, ಕಲೆ, ಪರಿಸರ, ಜೀವನ ವಿಧಾನ ಹೊಂದಿದೆ. ಭವಿಷ್ಯದ ತಲೆಮಾರಿನ ಯುವಜನರಿಗೆ ಸಂಸ್ಕೃತಿ, ಪರಂಪರೆ, ಜಾನಪದ ತಿಳಿಸಲು ವಿಚಾರ ಸಂಕಿರಣ ಸಹಕಾರಿ ಎಂದು ತಿಳಿಸಿದರು.

ಇದೇ ವೇಳೆ ಸಂಶೋಧನಾ ಪ್ರಬಂಧಗಳ ಸಂಗ್ರಹ ಹೊತ್ತಿಗೆ ಮತ್ತು ಗ್ಲೋಬಲ್ ಸೌತ್ ಇಂಟರ್ನ್ಯಾಷನಲ್ ನಿಯತಕಾಲಿಕೆ ಬಿಡುಗಡೆಗೊಂಡಿತು. ಕಲಬುರ್ಗಿ ಕೇಂದ್ರೀಯ ವಿವಿಯ ಪ್ರಾಧ್ಯಾಪಕ ಪ್ರೊ. ಬಸವರಾಜ ಡೋಣೂರ ಅಧ್ಯಕ್ಷತೆ ವಹಿಸಿದ್ದರು. ವಿಚಾರ ಸಂಕಿರಣದಲ್ಲಿ ಡಾ.ಪ್ರಶಾಂತ ಮಾಂಡ್ರೆ, ಡಾ. ವೀಣಾ ಶಾಂತೇಶ್ವರ, ಡಾ. ಜೆ.ಸಿ.ತಲ್ಲೂರ್, ಡಾ.ವಿಜಯಲಕ್ಷ್ಮೀ ದಾನರೆಡ್ಡಿ, ಶ್ರೀನಿವಾಸ ವಾಡಪ್ಪಿ, ಡಾ. ಡಿ.ಎಂ. ಹಿರೇಮಠ, ಡಾ. ಪಿ.ಎ.ಪೊಲೀಸ್ ಪಾಟೀಲ, ಡಾ.ನಿರ್ಮಲ್ ಜೋಸೆಫ್ ಇತರರಿದ್ದರು.

ಪ್ಯೂಪಾ-2026 ವಿದ್ಯಾರ್ಥಿಗಳ ಪ್ರದರ್ಶನ ಇಂದು

ಹುಬ್ಬಳ್ಳಿ: ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ವತಿಯಿಂದ ವಿದ್ಯಾನಗರದ ಬಿವಿಬಿ ಕ್ಯಾಂಪಸ್ ಆವರಣದಲ್ಲಿರುವ ಡಾ. ಪ್ರಭಾಕರ್ ಕೋರೆ ಸ್ಪೋರ್ಟ್ಸ್ ಅರೆನಾದಲ್ಲಿ ಮಾ.14ರಂದು ಬೆಳಗ್ಗೆ 9.30ರಂದು ಹೊಸ ಕಲ್ಪನೆಯ ಪ್ಯೂಪಾ-2026 ವಿದ್ಯಾರ್ಥಿಗಳ ಪ್ರದರ್ಶನ ನೀಡಲಿದ್ದಾರೆ.

ಚಿಟ್ಟೆಯ ರೂಪಾಂತರದ ಪ್ಯೂಪಾ ಹಂತದಿಂದ ಪ್ರೇರಿತವಾದ ಪ್ಯೂಪಾ-2026 1,000ಕ್ಕೂ ಹೆಚ್ಚು ಆಸಕ್ತರು ಭಾಗವಹಿಸುವವರ ಸಮಕ್ಷಮ ಅನುಭವಿ ವಿದ್ಯಾರ್ಥಿಗಳ ಕಲ್ಪನೆಗಳು ಇಲ್ಲಿ ಮೂಡಿ ಬರಲಿವೆ. ನೈಜ ಹಾಗೂ ವಾಣಿಜ್ಯ ಮೌಲ್ಯಕ್ಕೆ ಸಮರ್ಪಿತ ಮಾರ್ಗದರ್ಶನ ಹಾಗೂ 700 ರ ಸೀಡ್ ಫಂಡಿಂಗ್ ಹಾಗೂ ಹೆಚ್ಚಿನ ಪರಿಣಾಮದೊಂದಿಗೆ ರೂಪಾಂತರಗೊಳ್ಳಲಿದೆ. ಸ್ಮಾರ್ಟ್ ಹೋಮ್ ಸೆನ್ಸರ್‌ಗಳು, ಆಟೊಮೇಷನ್ ಕಿಟ್‌ಗಳು, ರೊಬೊಟಿಕ್ಸ್ ಮತ್ತು ಯಾಂತ್ರಿಕ ನಾವೀನ್ಯತೆಗಳು, ಮಿನಿ ರೋಬೋಟ್‌ಗಳು, ಸ್ವಯಂಚಾಲಿತ ಯಂತ್ರಗಳು, ಯಾಂತ್ರಿಕ ಸಾಧನಗಳು.- ನವೀಕರಿಸಬಹುದಾದ ಇಂಧನ ಗ್ಯಾಜೆಟ್‌ಗಳು, ಸೌರ ಚಾರ್ಜರ್‌ಗಳು, ಕಸ್ಟಮ್ ಎಂಬೆಡೆಡ್ ಸಿಸ್ಟಮ್‌ಗಳು ಮತ್ತು ಹಾರ್ಡ್‌ವೇರ್ ಹ್ಯಾಕ್‌ಗಳು, ತಂತ್ರಜ್ಞಾನೇತರ ಉತ್ಪನ್ನಗಳು, ಮರುಬಳಕೆಯ ಸರಕುಗಳು, ಜೈವಿಕ ವಿಘಟನೀಯ ಪ್ಯಾಕೇಜಿಂಗ್, ಅಪ್‌ಸೈಕಲ್ಡ್ ಫ್ಯಾಷನ್ ಸೇರದಂತೆ ಅನೇಕ ವಸ್ತುಗಳ ಪ್ರದರ್ಶನ ನಡೆಯಲಿದೆ ಎಂದು ಕೆಎಲ್‌ಇ ತಾಂತ್ರಿಕ ವಿವಿ ನಿರ್ದೇಶಕ ಎಂ. ಎಸ್. ಕೊಲ್ಹಾರ್ ತಿಳಿಸಿದರು.

ಅಕ್ರಮ ಚಟುವಟಿಕೆ ಆರೋಪ

ಧಾರವಾಡ: ಕೇಂದ್ರ ಕಾರಾಗೃಹದಲ್ಲಿ ನಡೆಯುವ ಅಕ್ರಮ ಚಟುವಟಿಕೆ ಖಂಡಿಸಿ ಶ್ರೀರಾಮ ಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ ಮುತಾಲಿಕ್ ನೇತೃತ್ವದಲ್ಲಿ ಹಿಂದೂ ಸಂಘಟನೆಗಳ ಕಾರ್ಯಕರ್ತರು ಕೇಂದ್ರ ಕಾರಾಗೃಹದ ಮುಂದೆ ಶುಕ್ರವಾರ ಪ್ರತಿಭಟಿಸಿದರು.

ಪೋಕ್ಸೋ ಕಾಯ್ದೆಯಡಿ ಬಂಧಿತನಾದ ಹುಬ್ಬಳ್ಳಿಯ ಫರವೇಜ್ ಎಂಬ ಆರೋಪಿ ಧಾರವಾಡ ಕೇಂದ್ರ ಕಾರಾಗೃಹದಲ್ಲಿ ಇದ್ದುಕೊಂಡೇ, ತನ್ನ ಸಂಬಂಧಿಕರ ಜೊತೆಗೆ ಮೊಬೈಲ್‌ನಲ್ಲಿ ಮಾತನಾಡಿರುವ ಆಡಿಯೋ ಪ್ರಮೋದ ಮುತಾಲಿಕ್ ಬಿಡುಗಡೆ ಮಾಡಿದರು. ಕಾರಾಗೃಹದ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದ ಪ್ರಮೋದ್ ಮುತಾಲಿಕ್ ಹಾಗೂ ಕಾರಾಗೃಹದ ಅಧೀಕ್ಷಕರೊಂದಿಗೆ ತೀವ್ರವಾದ ವಾಗ್ವಾದವೂ ನಡೆಯಿತು. ಕೊನೆಗೆ ಜೈಲು ಅಧೀಕ್ಷಕರು ಮುತಾಲಿಕ್ ಅವರನ್ನು ಜೈಲಿನೊಳಗೆ ಕರೆದೊಯ್ದು ಆರೋಪಿ ಫರವೇಜ್‌ನನ್ನು ಭೇಟಿ ಮಾಡಿಸಿದರು. ಆರೋಪಿ ಸತ್ಯ ಒಪ್ಪಿಕೊಳ್ಳಲಿಲ್ಲ, ಹೊರಬಂದ ಮುತಾಲಿಕ್, ಆರೋಪಿ ಹತ್ತಿರ ಸಣ್ಣ-ಸಣ್ಣ ಮೊಬೈಲ್ ಇರುವುದಾಗಿ ದೂರಿದರು. ಜೈಲಿನಲ್ಲಿ ನಡೆಯುವ ಅಕ್ರಮ ಕುರಿತು ಸಮಗ್ರವಾಗಿ ಸಿಬಿಐ ತನಿಖೆಯಾಗಬೇಕು. ಎಂದು ಒತ್ತಾಯಿಸಿದರು. ಪ್ರಮೋದ್ ಮುತಾಲಿಕ್ ಅವರ ಒತ್ತಡಕ್ಕೆ ಮಣಿದ ಜೈಲು ಅಧೀಕ್ಷಕರು ತನಿಖೆ ನಡೆಸುವ ಭರವಸೆ ನೀಡಿದ ನಂತರವೇ ಪ್ರತಿಭಟನೆ ಕೈಬಿಟ್ಟರು.



ಮಾ.16ರಂದು ಸಾರ್ವಜನಿಕ ಜನತಾ ದರ್ಶನ ಕಾರ್ಯಕ್ರಮ: ಕೊಬ್ಬಯ್ಯನವರ

ಕುಂದಗೋಳ: ರಾಜ್ಯ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳ ತಾಲೂಕು ಮಟ್ಟದ ಫಲಾನುಭವಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸುವ ಉದ್ದೇಶದಿಂದ ಮಾ.16ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಪಟ್ಟಣದ ಸರ್ಕಾರಿ ವಿವಿಧ ಇಲಾಖೆಗಳ ಸಂಕೀರ್ಣದಲ್ಲಿ ಸಾರ್ವಜನಿಕ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಸತೀಶ ಕೊಬ್ಬಯ್ಯನವರ ತಿಳಿಸಿದರು.

ಅವರು ಪಟ್ಟಣದ ತಾಲೂಕು ಪಂಚಾಯಿತಿ ಸಭಾಭವನದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಕುರಿತು ಫಲಾನುಭವಿಗಳಿಂದ ವಿವಿಧ ರೀತಿಯ ಅಹವಾಲುಗಳು ಹಾಗೂ ದೂರುಗಳು ಬರುತ್ತಿದ್ದು, ಅವುಗಳನ್ನು ತ್ವರಿತವಾಗಿ ಪರಿಹರಿಸಲು ಈ ಜನತಾ ದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು.

ಅಂದು ಸಂಬಂಧಪಟ್ಟ ಐದು ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದು, ಫಲಾನುಭವಿಗಳ ಸಮಸ್ಯೆಗಳನ್ನು ಪರಿಶೀಲಿಸಿ ಸಾಧ್ಯವಾದಷ್ಟು ಸ್ಥಳದಲ್ಲಿಯೇ ಪರಿಹಾರ ನೀಡಲು ಪ್ರಯತ್ನಿಸಲಾಗುವುದು. ಕೆಲವೊಂದು ತಾಂತ್ರಿಕ ಸಮಸ್ಯೆಗಳು, ದಾಖಲೆಗಳ ಕೊರತೆ ಅಥವಾ ಅರ್ಜಿ ಪ್ರಕ್ರಿಯೆಯ ವಿಳಂಬದಂತಹ ವಿಷಯಗಳನ್ನು ಕೂಡ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾದ ಯಲ್ಲಪ್ಪಗೌಡ ಪಾಟೀಲ, ಅಡಿವೆಪ್ಪ ಹೆಬಸೂರ, ಯಲ್ಲಪ್ಪ ಶಿಂಗಣ್ಣವರ, ಶಂಕ್ರಪ್ಪ ಹಡಪದ ಹಾಗೂ ಗೀತಾ ಕೋಟಿಗೌಡ್ರ ಉಪಸ್ಥಿತರಿದ್ದರು.



ಪರಿಹಾರ ಪಡೆಯಿರಿ

ಪಂಚ ಗ್ಯಾರಂಟಿ ಯೋಜನೆಗಳ ಪ್ರಯೋಜನ ಪಡೆಯುವಲ್ಲಿ ಯಾವುದೇ ರೀತಿಯ ಅಡಚಣೆ ಎದುರಿಸುತ್ತಿರುವ ಫಲಾನುಭವಿಗಳು ತಮ್ಮ ಸಮಸ್ಯೆಗಳಿಗೆ ಸಂಬಂಧಿಸಿದ ದಾಖಲೆಗಳು ಹಾಗೂ ಲಿಖಿತ ಅರ್ಜಿಯೊಂದಿಗೆ ಸಭೆಗೆ ಆಗಮಿಸಿ ಸಮಸ್ಯೆ ಪರಿಹಾರ ಪಡೆಯಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಸತೀಶ ಕೊಬ್ಬಯ್ಯನವರ ತಿಳಿಸಿದರು.

ಹುಬ್ಬಳ್ಳಿಯಲ್ಲಿ ಪೂರ್ಣ ಪ್ರಮಾಣದ ತಾರಾಲಯ ಅವಶ್ಯ: ಡಾ. ವಿ.ಎಸ್.ವಿ ಪ್ರಸಾದ

ಹುಬ್ಬಳ್ಳಿ: ವಿದ್ಯಾರ್ಥಿಗಳಿಗೆ ಖಗೋಳ ವಿಜ್ಞಾನ ಹಾಗೂ ಅಂತರಿಕ್ಷದ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಹುಬ್ಬಳ್ಳಿಯಲ್ಲಿ ಪೂರ್ಣ ಪ್ರಮಾಣದ ತಾರಾಲಯ ಅವಶ್ಯವಿದ್ದು ಒಂದು ವರ್ಷದೊಳಗೆ ಆ ಕನಸು ನನಸಾಗಲಿದೆ. ಈಗಾಗಲೇ ಈ ಕುರಿತು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಜತೆ ಸಹ ಚರ್ಚಿಸಿರುವುದಾಗಿ ಸ್ವರ್ಣಾ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಡಾ. ವಿ.ಎಸ್.ವಿ ಪ್ರಸಾದ ಹೇಳಿದರು.

ಹಿಮಾಲಯನ್ ಸ್ಪೇಸ್ ಸೆಂಟರ್ ನಲ್ಲಿ ರಾಷ್ಟ್ರೀಯ ವಿಜ್ಞಾನ ದಿನ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನ-2026 ಅಂಗವಾಗಿ ವಿಸ್ತೃತ ಸ್ಪೇಸ್ ಲ್ಯಾಬ್ ಉದ್ಘಾಟಿಸಿ ಮತ್ತು ಪೋರ್ಟಬಲ್ ಪ್ಲಾನೆಟೇರಿಯಂ ಡೋಮ್ ಅನಾವರಣ ಮಾಡಿ ಮಾತನಾಡಿದರು.



ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಚಿಂತನೆ ಮತ್ತು ಅಂತರಿಕ್ಷ ಶಿಕ್ಷಣದ ಹೆಚ್ಚಿನ ಆಸಕ್ತಿ ಮೂಡಿಸುತ್ತಿರುವ ಹಿಮಾಲಯನ್ ಸ್ಪೇಸ್ ಸೆಂಟರ್ ಕಾರ್ಯ ಶ್ಲಾಘನೀಯ. ಮುಂಬರುವ ದಿನಗಳಲ್ಲಿ ಜಾಗತಿಕ ತಾಪಮಾನ ಇನ್ನಷ್ಟು ಹೆಚ್ಚಲಿದ್ದು, ಎಲ್ಲ ವಿದ್ಯಾರ್ಥಿಗಳು ಪರಿಸರ ಉಳಿಸುವ ಯತ್ನ ಮಾಡಬೇಕು ಎಂದರು.

ಗೌರವ ಅತಿಥಿಯಾಗಿ ಹಿರಿಯ ಮುಖಂಡ ಎಚ್. ಎಸ್. ರೂಗಿ, ಎಚ್ ಎಸ್‌ಸಿ ಯ ಸಹ-ಸ್ಥಾಪಕಿ ಶ್ರೀದೇವಿ ರೂಗಿ, ಸಂಸ್ಥೆಯ ಸಹ ಸ್ಥಾಪಕ ವೀರೇಶ್ ಪಾಟೀಲ್, ಮಮತಾ ಗೋಂಡ್ಕರ್ , ವಾಣಿ ಡಿ,, ರಾಜೇಶ್ವರಿ ಶೀಗಿಹಳ್ಳಿಮಠ, ಗೀತಾಂಜಲಿ ಲೋಖಂಡೆ ಹಾಗೂ ಲಿಂಗರಾಜ ರಾಮಾಪುರ ಇವರುಗಳಿಗೆ ''ಸ್ಟೆಲ್ಲರ್ ಮೆಂಟರ್ ಪ್ರಶಸ್ತಿ'' ಪ್ರದಾನ ಮಾಡಲಾಯಿತು.

ಅಧ್ಯಾತ್ಮದಿಂದ ಮನಸ್ಸಿಗೆ ನೆಮ್ಮದಿ: ಶಂಭು ಹೆಗಡಾಳ

ಉಪ್ಪಿನಬೆಟಗೇರಿ: ಪ್ರವಚನ ಮುಖಾಂತರ ಶರೀರದ ಮೂಲ ಚೈತನ್ಯ ಅನುಭವ ಪಡೆಯಬೇಕಾದರೆ ಅರಿವಿನ ಜ್ಞಾನ ಅವಶ್ಯ ಎಂದು ಧಾರವಾಡ ಸಿಎಸ್‌ಐ ಆರ್ಟ್ಸ್ ಮತ್ತು ಕಾಮರ್ಸ ಕಾಲೇಜ್ ಪ್ರಾಧ್ಯಾಪಕ ಶಂಭು ಹೆಗಡಾಳ ಹೇಳಿದರು.

ಅವರು ಶ್ರೀ ಗುರು ವಿರುಪಾಕ್ಷೇಶ್ವರ ಜಾತ್ರಾ ಮಹೋತ್ಸವ ಪ್ರಯುಕ್ತವಾಗಿ ಗದ್ದುಗೆ ಆವರಣದಲ್ಲಿ ಶುಕ್ರವಾರ ಏರ್ಪಡಿಸಿದ ವಿಶ್ವಗುರು ಬಸವಣ್ಣವರ ವೇದಿಕೆಯಲ್ಲಿ ನಡೆಯುವ 11 ದಿನ ಶರಣರ ಚರಿತಾಮೃತ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಜೀವನದಲ್ಲಿ ಇರುವ ಜಂಜಾಟಗಳನ್ನು ಮರೆತು ಮನಸ್ಸಿನ ಆರೋಗ್ಯ ಕಾಪಾಡಕೊಳ್ಳಲು ಮಠ ಮಂದಿರ ಆಧ್ಯಾತ್ಮಿಕ ಕೇಂದ್ರದಲ್ಲಿ ನಡೆಯುವ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಭಾಗಿಯಾಗಿ ತಾವು ಉತ್ತಮ ಗುಣಮಟ್ಟದ ಸಮಯವನ್ನು ಕಾಯ್ದುಕೊಂಡರೆ ಮಾತ್ರ ನಿಮ್ಮ ಜೀವನ ಸಮೃದ್ಧಯಾಗಲು ಸಾಧ್ಯ ಎಂದರು.

ನಿವೃತ್ತ ಪ್ರಧಾನ ಸಂಪಾದಕ ಗುರುಮೂರ್ತಿ ಯರಗಂಬಳಿಮಠ ಮಾತನಾಡಿದರು. ಕುಂದಗೋಳ ಕಲ್ಯಾಣಪುರದ ಅಭಿನವ ಬಸವಣ್ಣ ಅಜ್ಜನವರು ಸಾನ್ನಿಧ್ಯ ವಹಿಸಿದ್ದರು.



ಮೂರು ಸಾವಿರ ವಿರಕ್ತಮಠದ ಶ್ರೀ ಕುಮಾರ ವಿರುಪಾಕ್ಷ ಸ್ವಾಮೀಜಿಯವರ ಸಾನಿಧ್ಯದಲ್ಲಿ ಅತಿಥಿಗಳಿಗೆ ಹಾಗೂ ವಿವಿಧ ಗ್ರಾಮದ ಆಗಮಿಸಿದ ಹಿರಿಯರನ್ನು ಸತ್ಕರಿಸಿ ಸನ್ಮಾಸಿದರು.ನಿರೂಪಾದಿ ದೇವರು ಸಾನಿಧ್ಯ ವಹಿಸಿದ್ದರು.ನಿಕಟಪೂರ್ವ ಗ್ರಾಪಂ ಅಧ್ಯಕ್ಷ ಬಶೀರ ಅಹ್ಮದ್ ಮಾಳಗಿಮನಿ, ಉಪಾಧ್ಯಕ್ಷೆ ಛಾಯಾ ಹೆಗಡೆ,ಪಿಡಿಓ ಮಧೂಸುದನ ದೇಶಪಾಂಡೆ, ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾದಿಕಾರಿ ಎಸ್.ಎಮ್ ವಿಜಾಪುರ, ಬಿ.ಎಸ್ ಖಂಡೂ ನಾಯ್ಕ,ಅಗ್ನಿ ಶಾಮಕ ಠಾಣೆಯ ಮಕ್ತುಂ ಹುಸೇನ ನಿಚ್ಚಣಕಿ,ದೆಹಲಿ ಗಣರಾಜ್ಯೋತ್ಸವ ಪರೇಡನಲ್ಲಿ ಭಾಗಿಯಾದ ಚೈತ್ರಾ ಬೆಳವಡಿ,ಕಬ್ಬಡಿ ಕ್ರೀಡೆಯಲ್ಲಿ ಸಾಧನೆಗೈದ ಚೈತ್ರಾ ಕುಸುಬಿ, ಹಾಗೂ ಮುಡಕಲಕಟ್ಟಿ,ಕರಡಿಗುಡ್ಡ, ತಿಮ್ಮಾಪುರ, ಉಪ್ಪಿನಬೆಟಗೇರಿ ಗ್ರಾಮದ ಹಿರಿಯರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮಾದನಹಿಪ್ಪರಗಿ ನೂರಂದಯ್ಯ ಗವಾಯಿಗಳು, ಡೋಣಗಾಪೂರ ಸದಾನಂದ ಅವಾಡೆ ಸಂಗೀತ ಸೇವೆ. ಲಗಮಣ್ಣವರ ಬಂಧುಗಳಿಂದ ಅನ್ನ ಪ್ರಸಾದ ಸೇವೆ ಸಲ್ಲಿಸಿದರು.ಶ್ರೀ ಕುಮಾರೇಶ್ವರ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ರಮೇಶ ಮಡಿವಾಳರ ಸ್ವಾಗತಿಸಿದರು, ಮುಖ್ಯ ಶಿಕ್ಷಕ ಸಂಜಯ ಕೊಡಿ ಕಾರ್ಯಕ್ರಮ ನಿರ್ವಹಿಸಿದರು.

ಹಿಂದೂ ಸಮಾಜೋತ್ಸವ ನಾಳೆ

ಧಾರವಾಡ: ವಿದ್ಯಾಗಿರಿ ಉಪನಗರ ಹಿಂದೂ ಸಮಾಜೋತ್ಸವ ಸಮಿತಿಯಿಂದ ಹಿಂದೂ ಸಮಾಜೋತ್ಸವ ಮಾ.15ರಂದು ಸ್ಥಳೀಯ ಗಾಂಧಿನಗರ ಮೈದಾನದಲ್ಲಿ ಆಯೋಜಿಸಿರುವುದಾಗಿ ಸಮಿತಿಯ ಅಧ್ಯಕ್ಷ ನಾರಾಯಣ ಕೋಪರ್ಡೆ ಮಾಹಿತಿ ನೀಡಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಧ್ಯಾಹ್ನ 3 ಗಂಟೆಗೆ ಕೆಇಬಿ ಗಣಪತಿ ದೇವಸ್ಥಾನ ಹಾಗೂ ರಜತಗಿರಿ ವರಸಿದ್ಧಿ ವಿನಾಯಕ ದೇವಸ್ಥಾನದಿಂದ ಗಾಂಧಿನಗರದ ಮೈದಾನದವರೆಗೆ ಶೋಭಾಯಾತ್ರೆ ನಡೆಯಲಿದೆ ಎಂದು ತಿಳಿಸಿದರು.

ಸಂಜೆ 5.30ಕ್ಕೆ ವೇದಿಕೆ ಕಾರ್ಯಕ್ರಮದಲ್ಲಿ ದೇವರಹುಬ್ಬಳ್ಳಿಯ ನಾಗಭೂಷಣ ಶಿವಯೋಗಿ ಸ್ವಾಮೀಜಿ ಹಾಗೂ ಗರಗದ ಆತ್ಮಾರಾಮ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಆರ್‌ಎಸ್‌ಎಸ್ ಜೇಷ್ಠ ಪ್ರಚಾರಕ ಸು.ರಾಮಣ್ಣ ಅವರು ಭಾಷಣ ಮಾಡಲಿದ್ದಾರೆ ಎಂದರು. ಇದಕ್ಕೂ ಮೊದಲು ಮಾ.14ರಂದು ಸಂಜೆ 4 ಗಂಟೆಗೆ ಬೈಕ್ ರ‍್ಯಾಲಿ ಜರುಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಗುರುರಾಜ ಹುಣಸಿಮರದ, ಭಾರತಿ ಗಾಣಿಗೇರ, ಚಂದ್ರಿಕಾ ದೇಶಪಾಂಡೆ, ಸಂಜಯ ಟಿಕಾರೆ, ವಿ.ಎಸ್.ಗೌಡರ ಸೇರಿ ಅನೇಕರು ಇದ್ದರು.



ಎಂದಿಗೂ ಕುಗ್ಗದ ಕುಸ್ತಿ ಕ್ರೇಜ್: ಸಂಕನೂರ



ಧಾರವಾಡ: ಆಧುನಿಕ ಜಗತ್ತಿನ ಕ್ರಿಕೆಟ್ ಹಾವಳಿಯಲ್ಲಿ ದೇಶಿ ಕ್ರೀಡೆಗಳು ಅವನತಿ ಹಾದಿ ಹಿಡಿದಿವೆ. ಆದರೆ ಮಣ್ಣಿನ ಮಕ್ಕಳ ಕುಸ್ತಿ ಕ್ರೀಡೆ ಕ್ರೇಜ್ ಮಾತ್ರ ಇಂದಿಗೂ ಕುಗ್ಗಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಪ್ರೊ. ಎಸ್.ವಿ.ಸಂಕನೂರ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಕರ್ನಾಟಕ ಕಾಲೇಜು ಮೈದಾನದಲ್ಲಿ ಶುಕ್ರವಾರ ಜಂಗಿ ಕುಸ್ತಿಗೆ ಚಾಲನೆ ನೀಡಿ, ಕುಸ್ತಿ ಕ್ರೀಡೆ ಭವಿಷ್ಯದ ಪೀಳಿಗೆಗೆ ಹಸ್ತಾಂತರಿಸುವ ಕಾರ್ಯ ಹೆಚ್ಚೆಚ್ಚು ನಡೆಯುಬೇಕಿದೆ ಎಂದರು.

ಹು-ಧಾ ಮೇಯರ್ ಜ್ಯೋತಿ ಪಾಟೀಲ, ಸಭಾನಾಯಕ ಈರೇಶ ಅಂಚಟಗೇರಿ, ತಿಪ್ಪಣ್ಣ ಮಜ್ಜಗಿ, ಚಂದ್ರಶೇಖರ ಮನಗುಂಡಿ, ಶಂಕರ ಶೇಳಕೆ, ಸುರೇಶ ಬೇದ್ರೆ, ಶರಣು ಅಂಗಡಿ, ಶಂಕರ ಕೋಮಾರದೇಸಾಯಿ ಇತರರಿದ್ದರು. ಲಂಗೋಟಿ ಧರಿಸಿ, ಅಖಾಡಕ್ಕಿಳಿದ ಪೈಲ್ವಾನರನ್ನು ಪ್ರೇಕ್ಷಕರು ಕಣ್ತುಂಬಿಕೊಂಡರು. ಕಟ್ಟುಮಸ್ತಾದ ದೇಹ, ಮೈತುಂಬ ಮೆತ್ತಿದ ಮಣ್ಣು, ಬೆವರು ಹಾಗೂ ತೊಡೆ ತಟ್ಟಿ ಎದುರಾಳಿಗೆ ನೀಡುವ ಪಂಥಾಹ್ವಾನ ಕುಸ್ತಿ ಪಂದ್ಯವು ರಂಗೇರುವಂತೆ ಮಾಡಿತು. ಮೈದಾನದಲ್ಲಿ ಜಗಜಟ್ಟಿಗಳ ಕಾದಾಟ ಪ್ರೇಕ್ಷಕ ಪ್ರಭುಗಳನ್ನು ಬೆರಗುಗೊಳಿಸಿತು. ಅಲ್ಲದೇ ಎದುರಾಳಿ ಚಿತ್ ಮಾಡಿದಾಗ ಅವರ ಹರ್ಷಕ್ಕೆ ಪರಾವೇ ಇರುತ್ತಿರಲಿಲ್ಲ.

ಕರ್ನಾಟಕ ಸರ್ಕಾರ

ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತಿ, ಬಾಗಲಕೋಟೆ ಹಾಗೂ ರಾಜೀವಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇವರ ಸಹಯೋಗದೊಂದಿಗೆ



ಬಾಗಲಕೋಟೆ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ, ಬಾಗಲಕೋಟೆ ಶಂಕುಸ್ಥಾಪನೆ

ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಕಾರ್ಯಕ್ರಮ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-III ರ ಭೂಸ್ವಾಧೀನಗೊಳ್ಳುವ ಜಮೀನುಗಳಿಗೆ ಒಪ್ಪಂದದ ದರದಂತೆ ಪರಿಹಾರ ವಿತರಣೆಗೆ ಚಾಲನೆ

14.03.2026 ಶನಿವಾರ | **ಬೆಳಗ್ಗೆ 11:00** | **ಸೆಕ್ಟರ್ ನಂ.1, ನವನಗರ-ಬಾಗಲಕೋಟೆ**

ಉದ್ಘಾಟನೆ

ಶ್ರೀ ಸಿದ್ಧರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ

ಶ್ರೀ ಡಿ.ಕೆ. ಶಿವಕುಮಾರ
ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಜಲ ಸಂಪನ್ಮೂಲ ಮತ್ತು ಬೆಂಗಳೂರು ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ

ಶ್ರೀ ಆರ್.ಬಿ.ತಿಮ್ಮಾಪುರ
ಮಾನ್ಯ ಅಬಕಾರಿ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರು.

ಗೌರವ ಉಪಸ್ಥಿತಿ

ಶ್ರೀ ಎಚ್.ಕೆ. ಪಾಟೀಲ
ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ರಾಮಲಿಂಗಾ ರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಎಂ.ಬಿ.ಪಾಟೀಲ
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮೂಲಸೌಲಭ್ಯ ಅಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ದಿನೇಶ ಗುಂಡೂರಾವ್
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ಡಾ. ಹೆಚ್.ಸಿ. ಮಹದೇವಪ್ಪ
ಮಾನ್ಯ ಸಮಾಜ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಸತೀಶ ಜಾರಕಿಹೊಳಿ
ಮಾನ್ಯ ಲೋಕೋಪಯೋಗಿ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಪ್ರಿಯಾಂಕ ಖರ್ಗೆ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಶಿವಾನಂದ ಎಸ್. ಪಾಟೀಲ
ಮಾನ್ಯ ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಬಿ.ಜೆಡ್. ಜಮೀರ ಅಹ್ಮದ್ ಖಾನ್
ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ಡಾ. ಶರಣಪ್ರಕಾಶ ಆರ್. ಪಾಟೀಲ
ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

ಶ್ರೀ ಬೈರತಿ ಸುರೇಶ್
ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿಗಳು

ಶ್ರೀ ಪ್ರಕಾಶ ಹುಕ್ಕೇರಿ
ಮಾನ್ಯ ಶಾಸಕರು, ವಿಧಾನ ಪರಿಷತ್ ಹಾಗೂ ಕರ್ನಾಟಕ ವಿಶೇಷ ಪ್ರತಿನಿಧಿ–2 ನವದೆಹಲಿ

ಶ್ರೀ ಜೆ.ಟಿ. ಪಾಟೀಲ
ಮಾನ್ಯ ಶಾಸಕರು, ವಿಧಾನಸಭೆ, ಬೀಳಗಿ ಮತಕ್ಷೇತ್ರ ಹಾಗೂ ಅಧ್ಯಕ್ಷರು, ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

ಶ್ರೀ ವಿಜಯಾನಂದ ಎಸ್. ಕಾಶಪ್ಪನವರ
ಮಾನ್ಯ ಶಾಸಕರು, ವಿಧಾನಸಭೆ, ಹುನಗುಂದ ಮತಕ್ಷೇತ್ರ ಹಾಗೂ ಅಧ್ಯಕ್ಷರು, ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ

ಶ್ರೀ ಭರಮಗೌಡ ಅಲಗೌಡ ಕಾಗೆ (ರಾಜು ಕಾಗೆ)
ಮಾನ್ಯ ಅಧ್ಯಕ್ಷರು, ವಾ.ಕ.ರ.ಸಾ. ಸಂಸ್ಥೆ ಹಾಗೂ ಶಾಸಕರು, ವಿಧಾನಸಭೆ ಕಾಗವಾಡ ಮತಕ್ಷೇತ್ರ

ಶ್ರೀ ಪಿ.ಸಿ. ಗದ್ದಿಗೌಡರ
ಮಾನ್ಯ ಸಂಸದರು ಲೋಕಸಭೆ ಕ್ಷೇತ್ರ, ಬಾಗಲಕೋಟೆ

ಶ್ರೀ ನಾರಾಯಣಸಾ ಕೆ. ಭಾಂಡಗೆ
ಮಾನ್ಯ ರಾಜ್ಯಸಭೆ ಸದಸ್ಯರು, ಬಾಗಲಕೋಟೆ

ಶ್ರೀ ಲಕ್ಷ್ಮಣ ಸಂ. ಸವದಿ
ಮಾನ್ಯ ಶಾಸಕರು, ವಿಧಾನಸಭೆ ಅಥಣಿ ಮತಕ್ಷೇತ್ರ

ಶ್ರೀ ಸಿದ್ದು ಸವದಿ
ಮಾನ್ಯ ಶಾಸಕರು, ವಿಧಾನಸಭೆ ತೇರದಾಳ ಮತಕ್ಷೇತ್ರ

ಶ್ರೀ ಜಗದೀಶ ಎಸ್. ಗುಡಗುಂಟಿ
ಮಾನ್ಯ ಶಾಸಕರು, ವಿಧಾನಸಭೆ ಜಮಖಂಡಿ ಮತಕ್ಷೇತ್ರ

ಶ್ರೀ ಭೀಮಸೇನ ಬಿ. ಚಿಮ್ಮನಕಟ್ಟಿ
ಮಾನ್ಯ ಶಾಸಕರು, ವಿಧಾನಸಭೆ ಬಾದಾಮಿ ಮತಕ್ಷೇತ್ರ

ಶ್ರೀ ಹಣಮಂತ ಆರ್. ನಿರಾಣಿ
ಮಾನ್ಯ ಶಾಸಕರು, ವಿಧಾನ ಪರಿಷತ್

ಶ್ರೀ ಸುನೀಲಗೌಡ ಬಿ. ಪಾಟೀಲ
ಮಾನ್ಯ ಶಾಸಕರು, ವಿಧಾನ ಪರಿಷತ್

ಶ್ರೀ ಪಿ.ಹೆಚ್. ಪೂಜಾರ
ಮಾನ್ಯ ಶಾಸಕರು, ವಿಧಾನ ಪರಿಷತ್

ಡಾ. ಉಮಾಶ್ರೀ
ಮಾನ್ಯ ಶಾಸಕರು, ವಿಧಾನ ಪರಿಷತ್

ಶ್ರೀ ಎಸ್.ಜಿ. ನಂಜಯ್ಯನಮಠ
ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಕೈಗಾರಿಕಾ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು

ಶ್ರೀ ಅನೀಲಕುಮಾರ ದಡ್ಡಿ
ಮಾನ್ಯ ಅಧ್ಯಕ್ಷರು, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ, ಬಾಗಲಕೋಟೆ

ಶ್ರೀ ಅಬ್ದೂಲರಜಾಕ ಮೈನೂದ್ದೀನ ಬೇನೂರ
ಮಾನ್ಯ ಅಧ್ಯಕ್ಷರು, ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ

ಸರ್ವರಿಗೂ ಹಾರ್ದಿಕ ಸ್ವಾಗತ

ಸಂಗಪ್ಪ ಭಾ.ಆ.ಸೇ
ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬಾಗಲಕೋಟೆ

ಶಶಿಧರ ಕುರೇರ ಭಾ.ಆ.ಸೇ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತಿ, ಬಾಗಲಕೋಟೆ

ಸಿದ್ಧಾರ್ಥ ಗೋಯಲ್ ಭಾ.ಪೊ.ಸೇ
ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಬಾಗಲಕೋಟೆ

ಡಾ|| ಬಿ.ಹೆಚ್. ನಾರಾಯಣಿ
ವಿಶೇಷಾಧಿಕಾರಿಗಳು, ಬಾಗಲಕೋಟೆ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆ, ಬಾಗಲಕೋಟೆ

ಪ್ರಕಟಣೆ : ಮುಖ್ಯ ಅಭಿಯಂತರರು, ಬಿ.ಟಿ.ಡಿ.ಎ, ಬಾಗಲಕೋಟೆ

70 ಪಲ್ಲಕ್ಕಿ ಸೇರಿ 115 ಹೊಸ ಬಸ್

ಪುಟ ೧➜ ಈ ಬಸ್‌ನ ಮುಂಭಾಗಕ್ಕೆ ಡ್ಯಾಶ್ ಕ್ಯಾಮೆರಾ, ಹಿಂಭಾಗದ ಪಾರ್ಕಿಂಗ್ ಸಹಾಯಕ ಕ್ಯಾಮೆರಾ, ಬಸ್ಸಿನ ಒಳಭಾಗದಲ್ಲಿ ಕ್ಯಾಮೆರಾ, ವಿಎಲ್‌ಟಿ, ಪ್ಯಾನಿಕ್ ಬಟನ್, ವಾಹನ ಮೇಲ್ಭಾಗದ 2 ಭಾಗದಲ್ಲಿ ತುರ್ತುದ್ವಾರ, ಫೈರ್ ಡಿಟೆಕ್ಷನ್ ಹಾಗೂ ಅಲಾರ್ಮ್ ವ್ಯವಸ್ಥೆ, ಮೊಬೈಲ್ ಚಾರ್ಜಿಂಗ್ ಪಾಯಿಂಟ್, ಟಫೆಂಡ್ ವಿಂಡ್ ಶೀಲ್ಡ್ ಗ್ಲಾಸ್ ಪ್ಯಾನೆಲ್, ಸುರಕ್ಷತಾ ಹ್ಯಾಮರ್, ಬಸ್ಸಿನ ಹಿಂಭಾಗದಲ್ಲಿ ತುರ್ತು ದ್ವಾರ ಸೇರಿದಂತೆ ಮುಂತಾದ ವಿಶೇಷತೆಯಳಗೊಂಡಿದೆ ಎಂದರು.

ಎಲ್ಲೆಲ್ಲಿ ಸಂಚಾರ? ಪಲ್ಲಕ್ಕಿ ಬಸ್ಸುಗಳು ಉಡುಪಿ, ಮಂಗಳೂರು, ಮೈಸೂರು, ಧರ್ಮಸ್ಥಳ, ಶೃಂಗೇರಿ, ಹೊರನಾಡು, ಆಗುಂಬೆ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ಹಂಪಿ, ರಾಯಚೂರು, ಜಮಖಂಡಿ, ಪುತ್ತೂರು, ಕಾಣಿಯೂರು, ಕುಕ್ಕೆ ಸುಬ್ರಹ್ಮಣ್ಯ, ಕಾಸರಗೋಡು, ಮಂತ್ರಾಲಯ, ತಿರುಚಿ, ಕೋಜಿಕ್ಕೋಡ್, ಮುನ್ನಾರ್, ಪಾಂಡಿಚೇರಿ, ತಂಜಾವೂರು, ಕೊಟ್ಟಾಯಂ, ಹೈದರಾಬಾದ್, ಚೆನ್ನೈ, ಪಣಜಿ, ಮಧುರೈ, ಕುಂಭಕೋಣಂ, ಎರ್ನಾಕುಲಂಗೆ ಕಾರ್ಯಾಚರಣೆ ಮಾಡಲಾಗುತ್ತದೆ. ಜತೆಗೆ 45 ಕರ್ನಾಟಕ ಸಾರಿಗೆ ಬಸ್‌ಗಳು 16 ವಿಭಾಗದ



ವಿವಿಧ ಸ್ಥಳಗಳಲ್ಲಿ ಸಂಚರಿಸಲಿವೆ. ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ, ನಿರ್ದೇಶಕಿ ಗಾಯತ್ರಿ ಕೆ.ಎಂ., ವಿಜ್ಞಾನಿ ಡಾ.ಶುಭಾ ಉಪಸ್ಥಿತರಿದ್ದರು.

ಮಹಿಳೆಯರಿಗೂ ಸಮಾನ ಅವಕಾಶ ಒದಗಿಸಬೇಕು: ಕುಟುಂಬ, ಶಿಕ್ಷಣ, ವಿಜ್ಞಾನ, ಸಾಮಾಜಿಕ, ರಾಜಕೀಯ, ಆರ್ಥಿಕತೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರು ಮಹತ್ತರ ಸಾಧನೆಗಳನ್ನು ಮಾಡುತ್ತಿದ್ದಾರೆ. ಮಹಿಳೆಯರ ಸಬಲೀಕರಣವು ಸಮಾಜದ ಅಭಿವೃದ್ಧಿಗೆ ಅತ್ಯಂತ ಮುಖ್ಯವಾಗಿದ್ದು, ಅವರಿಗೆ ಸಮಾನ ಅವಕಾಶಗಳು ಮತ್ತು ಸುರಕ್ಷಿತ ವಾತಾವರಣವನ್ನು ಒದಗಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ರಾಮಲಿಂಗಾರೆಡ್ಡಿ ಹೇಳಿದರು.

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ

ವಿಧಾನಪರಿಷತ್: ಬಜೆಟ್‌ನಲ್ಲಿ ಹಲವು ಯೋಜನೆಗಳನ್ನು ಪ್ರಕಟಿಸಲಾಗಿದೆ. ಆದರೆ ಅದಕ್ಕೆ ಹಣ ಎಲ್ಲಿಂದ ಬರುತ್ತದೆ. ಮೀಸಲಿಟ್ಟ ಹಣವೆಷ್ಟು ಎಂಬ ಮಾಹಿತಿ ಸಿಗುತ್ತಿಲ್ಲ. ಶಾಲೆ, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಕ, ಬೋಧಕರ ತೀವ್ರ ಕೊರತೆಯಿದೆ ಎಂದು ಬಿಜೆಪಿಯ ಸದಸ್ಯ ಕೇಶವ ಪ್ರಸಾದ್ ತಿಳಿಸಿದರು.

ಬಜೆಟ್ ಮೇಲಿನ ಸಾಮಾನ್ಯ ಚರ್ಚೆ ಕಲಾಪದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮುಖ್ಯಮಂತ್ರಿಗಳು 4.5 ಲಕ್ಷ ಕೋಟಿ ರೂ. ಜಿಎಸ್‌ಟಿ ದುಡ್ಡು ಕೇಂದ್ರಕ್ಕೆ ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ ಹೇಗೆ ಹೋಗುತ್ತಿದೆ ಎಂಬ ಮಾಹಿತಿ ಸಿಗುತ್ತಿಲ್ಲ. ರಾಜ್ಯ ಸಾಲದ ಸುಳಿಗೆ ಸಿಳುಕಿರುವುದು ಸ್ಪಷ್ಟವಾಗಿದೆ ಎಂದು ಹೇಳಿದರು. ಈ ಹಿಂದೆ ಸಿದ್ದರಾಮಯ್ಯ ಅವರು ಹಣಕಾಸು ಸಚಿವರಾಗಿದ್ದರು. ಆ ಬಳಿಕ 1999ರಲ್ಲಿ ಎಸ್.ಎಂ. ಕೃಷ್ಣ ಅವರ ಸರ್ಕಾರ ಬಂದ ತಕ್ಷಣವೇ ಸಿದ್ದರಾಮಯ್ಯ ಅವರ ಅವಧಿಯ ಹಣಕಾಸು ಸ್ಥಿತಿಯ ಬಗ್ಗೆ ಶ್ವೇತ ಪತ್ರ ಹೊರಡಿಸಿತ್ತು. ಆ ಶ್ವೇತ ಪತ್ರ ಈಗ ಎಲ್ಲೂ ಸಿಗುತ್ತಿಲ್ಲ ಎಂದು ಹೇಳಿದರು. ಆಗ ಕಾಂಗ್ರೆಸ್ ಸದಸ್ಯ ರಮೇಶ್ ಬಾಬು ಅವರು, ಸಿದ್ದರಾಮಯ್ಯ ಅವರ ಬಜೆಟ್ ಅನ್ನು ಟೀಕೆ ಮಾಡುವವರು ಬೌದ್ಧಿಕ ದಿವಾಳಿಗಳು ಎಂದರು. ಅವರ ಈ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ಮುಖ್ಯ ಸಚೇತಕ ಎನ್.ರವಿಕುಮಾರ್, ಸಿದ್ದರಾಮಯ್ಯ ಅವರು ಬಹಳ ಅನುಭವಿ ಸಿಎಂ. ಆದರೆ, ನಿರಂತರವಾಗಿ ಸಾಲದ ಪ್ರಮಾಣ ಹೆಚ್ಚಾಗಿದೆ ಎಂದರು.

ಇದೇ ವೇಳೆ ಮುಖ್ಯಮಂತ್ರಿಗಳನ್ನು ಸಮರ್ಥಿಸಿಕೊಂಡ ಸಚಿವ ಶರಣಪ್ರಕಾಶ ಪಾಟೀಲ್, ಸಾಲದ ಪ್ರಮಾಣ ಜಿಡಿಪಿಯ ಶೇ. 25ಕ್ಕಿಂತ ಹೆಚ್ಚಾಗಿದೆ. ಅಲ್ಲದೇ ಸಾಲದ ಪ್ರಮಾಣವನ್ನು ನಿಗದಿತ ಶೇ. 25ರ ಮಿತಿಯಲ್ಲಿ ಕಾಪಾಡಿಕೊಂಡಿದ್ದೇವೆ ಎಂದು ಹೇಳಿದರು. ಆಗ ಬಿಜೆಪಿಯ ಭಾರತಿ ಶೆಟ್ಟಿ, ಎನ್. ರವಿಕುಮಾರ್ ಅವರು, ನಾವು ಕೇಂದ್ರದ ಬಗ್ಗೆ ನೀವು ರಾಜ್ಯದ ಬಗ್ಗೆ ಚರ್ಚೆ ಮಾಡಲು ದಿನ ನಿಗದಿ ಮಾಡಿ ಎಂದು ಸವಾಲು ಹಾಕಿದರು. ಇದೇ ವೇಳೆ ಸಚಿವ ದಿನೇಶ್ ಗುಂಡೂರಾವ್, ರಾಜ್ಯ ಸರ್ಕಾರದ ಪರ ಮಾತನಾಡಲು ಮುಂದಾಗುವಾಗ ಕೂಡಲೇ ಎದ್ದುನಿಂತ ಸಿ.ಟಿ. ರವಿ, ಮೊದಲು ಆಸ್ಪತ್ರೆಗಳಲ್ಲಿ ಔಷಧಿ ನೀಡಿ ಎಂದರು.

ಇರಾನ್ ಸ್ಥಿತಿ ಗಂಭೀರ

ಪುಟ ೧➜ ಇದರ ನಡುವೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್ ಶೀಘ್ರದಲ್ಲೇ ಶರಣಾಗಲಿದೆ ಎಂದು ಹೇಳಿಕೆ ನೀಡಿದ್ದಾರೆ. ಜಿ-7 ರಾಷ್ಟ್ರಗಳೊಂದಿಗೆ ನಡೆದ ವರ್ಚುವಲ್ ಸಭೆಯಲ್ಲಿ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದು, ಯುದ್ಧ ಯಾವಾಗ ಅಂತ್ಯವಾಗಲಿದೆ ಎಂಬುದನ್ನು ಸ್ಪಷ್ಟಪಡಿಸಲಿಲ್ಲ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕೂಡ ಈ ಯುದ್ಧದಲ್ಲಿ ಇಸ್ರೇಲ್ ಬಲವಾಗಿ ಎದುರಿಸುತ್ತಿದೆ ಎಂದು ಹೇಳಿದ್ದಾರೆ. ಇರಾನ್‌ನಲ್ಲಿ ಆಡಳಿತ ಬದಲಾವಣೆಗೆ ಪರಿಸ್ಥಿತಿ ರೂಪುಗೊಳ್ಳುತ್ತಿದೆ ಎಂಬುದಾಗಿ ಅವರು ಸೂಚಿಸಿದ್ದಾರೆ. ಇನ್ನೊಂದೆಡೆ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್, ಯುದ್ಧ ನಿಲ್ಲಿಸಲು ಮೂರು ಪ್ರಮುಖ ಷರತ್ತುಗಳನ್ನು ಮುಂದಿಟ್ಟಿದ್ದಾರೆ. ಇರಾನ್‌ನ ಕಾನೂನುಬದ್ಧ ಹಕ್ಕುಗಳಿಗೆ ಮಾನ್ಯತೆ ನೀಡಬೇಕು, ಯುದ್ಧದಲ್ಲಿ ಉಂಟಾದ ಹಾನಿಗೆ ಪರಿಹಾರ ನೀಡಬೇಕು, ಮುಂದಿನ ದಿನಗಳಲ್ಲಿ ದಾಳಿ ಮಾಡುವುದಿಲ್ಲ ಎಂಬ ಅಂತರರಾಷ್ಟ್ರೀಯ ಭರವಸೆ ನೀಡಬೇಕು ಎಂದು ಅವರು ತಿಳಿಸಿದ್ದಾರೆ.

ಈ ನಡುವೆ ಹಾರ್ಮುಜ್ ಜಲಸಂಧಿಯನ್ನು ಮುಚ್ಚುವ ಮೂಲಕ ಜಾಗತಿಕ ತೈಲ ಪೂರೈಕೆಗೆ ಅಡ್ಡಿಪಡಿಸುವ ಎಚ್ಚರಿಕೆಯನ್ನು ಇರಾನ್ ನೀಡಿದೆ.

ಇದರಿಂದ ಜಾಗತಿಕ ತೈಲ ಬೆಲೆಗಳು ಏರಿಕೆ ಕಾಣುವ ಸಾಧ್ಯತೆ ಹೆಚ್ಚಾಗಿದೆ. ಯುದ್ಧ ಮುಂದುವರಿದರೆ ಮಧ್ಯಪ್ರಾಚ್ಯದಲ್ಲಿ ಮತ್ತಷ್ಟು ಉದ್ವಿಗ್ನತೆ ಹೆಚ್ಚಾಗುವ ಆತಂಕ ವ್ಯಕ್ತವಾಗಿದೆ.

ಬುರ್ಜ್ ಖಲೀಫಾ ಬಳಿ ಭಾರೀ ಸ್ಫೋಟ

ಪುಟ ೧➜ ದುಬೈ ಇಂಟರ್‌ನ್ಯಾಷನಲ್ ಫೈನಾನ್ಶಿಯಲ್ ಸೆಂಟರ್ (ಡಿಐಎಫ್‌ಸಿ) ನಲ್ಲಿ ಈ ಘಟನೆ ನಡೆದಿದೆ. ಮಧ್ಯ ದುಬೈನ ಕಟ್ಟಡದ ಹೊರಭಾಗದಲ್ಲಿ ಸಣ್ಣ ಪ್ರಮಾಣದ ದಾಳಿಯಾಗಿದೆ ಆದರೆ ಯಾರೂ ಕೂಡಾ ಗಾಯಗೊಂಡಿಲ್ಲ ಎಂದು ದುಬೈ ಮಾಧ್ಯಮ ಕಚೇರಿ ಹೇಳಿದೆ. ಇಲ್ಲಿಯವರೆಗೂ ಯಾವುದೇ ಗಾಯದ ಕುರಿತು ವರದಿಯಾಗಿಲ್ಲ.

ಅಮೆರಿಕಗೆ ಇರಾನ್ ಎಚ್ಚರಿಕೆ

ಪುಟ ೧➜ ಅಮೆರಿಕಕ್ಕೆ ತಿರುಗೇಟು ನೀಡಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಇರಾನ್‌ನ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ, ಯುದ್ಧ ಆರಂಭಿಸುವುದು ಸುಲಭ. ಕೆಲವು ಎಕ್ಸ್ ಪೋಸ್ಟ್‌ಗಳ ಮೂಲಕ ಅದನ್ನು ಗೆಲ್ಲಲು ಸಾಧ್ಯವಿಲ್ಲ. ತಪ್ಪು ಲೆಕ್ಕಾಚಾರಕ್ಕೆ ನೀವು ವಿಷಾದಪಡುವಂತೆ ನಾವು ಮಾಡುತ್ತೇವೆ ಎಂದಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕನೇಜಿ

ಹಳೇ ಸಾಲ ವಾಪಸ್ ಕೇಳಿದ್ದಕ್ಕೆ ಹಲ್ಲೆ
- ಸವಣೂರಿನ ಸುದ್ದಿ
- ಕೊಟ್ಟವ ಕೋಡಂಗಿ, ಇಸಕೊಂಡವ ಈರಭದ್ರ ಎಂಬ ಗಾದೆ ಮಾತು ಸುಳ್ಳಾದೀತೇ?

ದಿನ ಭವಿಷ್ಯ

ಮೇಷ ಅನ್ಯರ ದುರ್ವರ್ತನೆ ನಿಮ್ಮ ದಿನ ಕೆಡಿಸಲು ಅವಕಾಶ ಕೊಡಬೇಡಿ. ಅದರಿಂದ ವಿಮುಖರಾಗಿ ನಿಲ್ಲಿ. ದೈಹಿಕ ನೋವು ಇದ್ದವರಿಗೆ ನಿರಾಳತೆ.

ವೃಷಭ ನಿಮ್ಮ ಉದ್ದೇಶಕ್ಕೆ ಹಿರಿಯರ ಅನುಮತಿ ಸಿಗಲಿದೆ. ಅದರಿಂದ ನಿಮ್ಮ ಒತ್ತಡ ನಿವಾರಣೆ. ವಿದ್ಯಾರ್ಥಿಗಳ ಶ್ರಮಕ್ಕೆ ಸೂಕ್ತ ಪ್ರತಿಫಲ ಲಭ್ಯ.

ಮಿಥುನ ನಿಮ್ಮ ಪಾಲಿಗೆ ಅಚ್ಚರಿಯ ಬೆಳವಣಿಗೆ ಸಂಭವ. ನಿಮ್ಮಿಂದ ತಪ್ಪಾದರೆ ಬೇಗ ಸರಿಪಡಿಸಿಕೊಳ್ಳಿ. ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿ.

ಕಟಕ ಕೆಲ ವಿಷಯ ಚಿಂತೆಗೆ ಕಾರಣವಾಗಲಿದೆ. ನಿಮಗೆ ಪೂರಕವಾಗಿ ಸಾಗುವುದಿಲ್ಲ. ತಾಳ್ಮೆಯಿಡಿ, ಬೇಗನೆ ಎಲ್ಲ ಸರಿಹೋಗಲಿದೆ. ಬಳಿಕ ನಿಮ್ಮ ಗುರಿ ಸಾಧನೆ.

ಸಿಂಹ ಇಂದು ಸಾಧಾರಣ ಯಶಸ್ಸು ಪಡೆಯುವಿರಿ. ಉದ್ದೇಶವು ಪೂರ್ಣ ಸಫಲವಾಗದು. ಬಂಧು ಅಸಹಕಾರ. ಹಣದ ವಿಚಾರದಲ್ಲಿ ಅತೃಪ್ತಿ.

ಕನ್ಯಾ ಆಪ್ತರ ಸಂಗದಲ್ಲಿ ಹರ್ಷೋಲ್ಲಾಸ. ಬಂಧು ಭೇಟಿ. ಆರ್ಥಿಕ ಸಂಕಷ್ಟ ನಿವಾರಣೆ. ವಿದ್ಯಾರ್ಥಿಗಳಿಗೆ ನಿರಾಳತೆ. ಶೈಕ್ಷಣಿಕ ಪ್ರಗತಿ.

ತುಲಾ ಕಠಿಣ ನಿರ್ಧಾರ ತಾಳಬೇಕಾಗಿ ಬಂದರೆ ಹಿಂಜರಿಯಬೇಡಿ. ಬೇರೆಯವರು ಏನು ತಿಳಿದುಕೊಂಡಾರು ಎಂಬ ಭಾವನೆ ತ್ಯಜಿಸಿ.

ವೃಶ್ಚಿಕ ಆತ್ಮೀಯ ಸಂಬಂಧ ಹಾಳಾಗಲು ಅವಕಾಶ ಕೊಡಬೇಡಿ. ನೀವೇ ಬಗ್ಗಿದರೂ ಪರವಾಗಿಲ್ಲ. ಹಠಮಾರಿ ಧೋರಣೆ ಕೆಟ್ಟದ್ದನ್ನೇ ಮಾಡಬಹುದು.

ಧನು ಹಣದ ವಿಚಾರದಲ್ಲಿ ಹೆಚ್ಚು ಶಿಸ್ತು ಪಾಲಿಸಿ. ಗಳಿಕೆ ಮತ್ತು ವೆಚ್ಚದ ಮಧ್ಯೆ ಸಮತೋಲನ ಇರಲಿ. ಇಲ್ಲವಾದರೆ ಸಂಕಷ್ಟಕ್ಕೆ ಸಿಲುಕುವಿರಿ.

ಮಕರ ಆರ್ಥಿಕ ಅಸ್ಥಿರತೆ. ಪಾಲುದಾರರ ಜತೆ ಭಿನ್ನಮತ. ಸಣ್ಣ ವಿಷಯವು ಚಿಂತೆಗೆ ಕಾರಣವಾಗುವುದು. ವಿದ್ಯಾರ್ಥಿಗಳಿಗೆ ಯಶ.

ಕುಂಭ ಸಂಬಂಧದಲ್ಲಿ ಬಿರುಕು ಉಂಟಾದೀತು. ಅದನ್ನು ದೀರ್ಘ ಎಳೆಯಬೇಡಿ. ಮುಖ್ಯ ಕೆಲಸ ಪೂರೈಸಲು ಕಾಲವ್ಯಯ ಮಾಡಬೇಡಿ.

ಮೀನ ಆತುರದ ಕ್ರಮ ತೆಗೆದುಕೊಳ್ಳಬೇಡಿ. ದೊಡ್ಡ ಪರಿಣಾಮ ಉಂಟಾದೀತು. ಏಕಾಂಗಿಗಳಿಗೆ ವಿವಾಹ ಸಂಬಂಧ. ವಿದ್ಯಾರ್ಥಿಗಳಿಗೆ ತುಸು ಕಠಿಣ ದಿನ.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 6,2,9,4

ಈಗ ಊಹಾ ಪತ್ರಿಕೋದ್ಯಮದ ಹಾವಳಿ ಹೆಚ್ಚು: ಸಿಎಂ ಸಿದ್ದರಾಮಯ್ಯ

ಪತ್ರಿಕಾ ವೃತ್ತಿಧರ್ಮ ಕಾಪಾಡಿ



ಬೆಂಗಳೂರು: ನಾವು ಯಾರ ಪರವಾಗಿ ಇದ್ದೇವೆ ಎನ್ನುವ ಸ್ಪಷ್ಟ ಅರಿವು ಮಾಧ್ಯಮದವರಿಗೆ ಇರಬೇಕು. ಸರ್ಕಾರ ಕಟ್ಟ ಕಡೆಯ ಮನುಷ್ಯರ ಪರವಾಗಿ ಇದೆಯಾ ಎನ್ನುವ ಬಗ್ಗೆ ಗಮನ ಹರಿಸಿ, ವೃತ್ತಿಧರ್ಮವನ್ನು ಬಹಳ ಮುಖ್ಯವಾಗಿ ಕಾಪಾಡಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಬ್ಯಾಂಕ್ವೆಟ್ ಸಭಾಂಗಣನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆಯ್ಕೆಯಾದ ಪತ್ರಕರ್ತರಿಗೆ -2025ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ವಿತರಿಸಿ, ಸನ್ಮಾನಿಸಿ ಮಾತನಾಡಿದರು. ಪತ್ರಕರ್ತರೂ ಆಗಿದ್ದ ಮಹಾತ್ಮ ಗಾಂಧಿಯವರ ಮಾತಿನಂತೆ ಸರ್ವೋದಯ, ಅಂತ್ಯೋದಯದ ಪರವಾಗಿ ಪತ್ರಕರ್ತರು ಇರಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಇನ್ನೂ ಅಸಮಾನತೆ ಕಾಣುತ್ತಿದ್ದೇವೆ. ಅಂಬೇಡ್ಕರ್ ಅವರು ಸಹ ಪತ್ರಕರ್ತರಾಗಿದ್ದರು. ಈ ಅಸಮಾನತೆ ಹೋಗದೆ ಹೋದರೆ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ ಎನ್ನುವ ಮಾತನ್ನು ಅಂಬೇಡ್ಕರ್ ಹೇಳಿದ್ದನ್ನು ಮುಖ್ಯಮಂತ್ರಿಗಳು ಉಲ್ಲೇಖಿಸಿದರು.


ನಾನು ನಿತ್ಯ ದಿನಪತ್ರಿಕೆಗಳನ್ನು ಓದಿದ ಬಳಿಕವೇ ಇತರೆ ಕಾರ್ಯಗಳಿಗೆ ಮುಂದಾಗುತ್ತೇನೆ. ಪತ್ರಿಕೆಗಳು ಇನ್ನೂ ಹೆಚ್ಚಿನ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡಿವೆ. ನಾನು ಟಿವಿ ನೋಡುವುದು ಕಡಿಮೆ ಎಂದರು. ಈಗ ಊಹಾ ಪತ್ರಿಕೋದ್ಯಮದ ಹಾವಳಿ ಹೆಚ್ಚುತ್ತಿದೆ. ಸತ್ಯ ಬರೆಯುವ ಮತ್ತು ಸಂಶೋಧನೆ ನಡೆಸಿ ಬರೆಯುವ ಪತ್ರಕರ್ತರ ಸಂಖ್ಯೆ ಸುಳ್ಳು ಬರೆಯುವ ಪತ್ರಕರ್ತರ ಸಂಖ್ಯೆಗಿಂತ ಹೆಚ್ಚಾಗಬೇಕು ಎಂದು ಕರೆ ನೀಡಿದರು. ಈ ವೇಳೆ ಶಾಸಕ ರಿಜ್ವಾನ್ ಅರ್ಷದ್, ಹಿರಿಯ ಸಾಹಿತಿ ಹಂಪನಾ, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್, ಅಕಾಡೆಮಿ ಅಧ್ಯಕ್ಷೆ ಆಯೆಷಾ ಖಾನಂ ಸೇರಿ ಹಲವು ಗಣ್ಯರು ಇದ್ದರು.

ವಾಸ್ತವಾಂಶಕ್ಕೆ ಕನ್ನಡಿಯಾಗಲಿ: ಮುಖ್ಯಮಂತ್ರಿ

ಒಂದು ಗುಂಪು ಅಥವಾ ಒಂದು ಸಿದ್ಧಾಂತಕ್ಕೆ ಮಾರು ಹೋಗದೆ ವಾಸ್ತವಾಂಶಕ್ಕೆ ಕನ್ನಡಿ ಹಿಡಿಯಬೇಕು ಸಿಎಂ ಸಿದ್ದರಾಮಯ್ಯ ಎಂದರು. ಹೊಸ ತಂತ್ರಜ್ಞಾನದ ಜತೆಗೆ ಮಾಧ್ಯಮ ರಂಗ, ಪತ್ರಕರ್ತರೂ ತಮ್ಮನ್ನು ತಾವು ಉನ್ನತೀಕರಿಸಿಕೊಳ್ಳಬೇಕು. ಹೊಸ ಸವಾಲುಗಳಿಗೆ ತಮ್ಮನ್ನು ತಾವು ಸಜ್ಜುಗೊಳಿಸಿ ಕೊಂಡು ಹದಗೊಳ್ಳಬೇಕು ಎಂದರು.

ಒಳ ಮೀಸಲಾತಿ ಗೊಂದಲ ಸರಿಪಡಿಸಿ: ಬೊಮ್ಮಾಯಿ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಅವರು ಒಳ ಮೀಸಲಾತಿ ವಿರೋಧಿ ಗುಂಪಿನ ಒತ್ತಡಕ್ಕೆ ಮಣಿದಿದ್ದರಿಂದ ಗೊಂದಲ ಸೃಷ್ಟಿಸಿದ್ದಾರೆ. ಸರ್ಕಾರವು ಕೂಡಲೇ ಒಳ ಮೀಸಲಾತಿ ಗೊಂದಲ ಸರಿಪಡಿಸಬೇಕೆಂದು ಸಂಸದ ಬಸವ ರಾಜ ಬೊಮ್ಮಾಯಿ ಆಗ್ರಹಿಸಿದರು.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ಸುಪ್ರೀಂ ಕೋರ್ಟ್ ಮಾರ್ಗದರ್ಶಿ ಸೂಚನೆಯಂತೆ ಒಳ ಮೀಸಲಾತಿ ನೀಡುವಂತೆ ನಾವು ಒತ್ತಾಯಿಸುತ್ತೇವೆ. ಇದಕ್ಕೆ ಎಲ್ಲ ರೀತಿಯ ಜನಜಾಗೃತಿಗೆ ನಾವು ಸಿದ್ಧರಿದ್ದೇವೆ. ಸಚಿವ ಮುನಿಯಪ್ಪನವರು ಮಾ.27ರಂದು ವಿಶೇಷ ಸಂಪುಟ ಸಭೆ ಮಾಡುವುದಾಗಿ ಹೇಳಿದ್ದಾರೆ. ಅದನ್ನು ಕಾದು ನೋಡುತ್ತೇವೆ. ಇಲ್ಲವಾದರೆ, ಈ ಜನಾಂಗವೇ ಎದ್ದು ನಿಂತು ಹೋರಾಟ ಮಾಡಲಿದೆ. ಈಗಾಗಲೇ ಒಂದು ದೊಡ್ಡ ಹೋರಾಟ ಗುರುವಾರ ನಡೆದಿದೆ ಎಂದರು.

ಕರ್ನಾಟಕದಲ್ಲಿ ನ್ಯಾಯಬದ್ಧ-ಕಾನೂನುಬದ್ಧ ಶೇ.56 ಮೀಸಲಾತಿ ಇದ್ದು, ಅದು ಶಿಕ್ಷಣ ಕ್ಷೇತ್ರದಲ್ಲಿ 4 ವರ್ಷಗಳಿಂದ ಸಿಗುತ್ತಿದೆ. ಎಂಬಿಬಿಎಸ್, ಎಂಜಿನಿಯರಿಂಗ್ ಮೊದಲಾದವುಗಳಿಗೆ ಅನುಷ್ಠಾನವಾಗಿದೆ. ಇದೀಗ ನೇರ ನೇಮಕಾತಿ ವೇಳೆ ಸರ್ಕಾರ ಅದರಂತೆ ಒಳ ಮೀಸಲಾತಿಯನ್ನು ಜಾರಿ ಮಾಡಬೇಕು. ಸರ್ಕಾರಿ ವಕೀಲರು ಇದನ್ನು ಗಟ್ಟಿಯಾಗಿ ಹೇಳಲು ತಯಾರಿಲ್ಲ. ಸುಪ್ರೀಂ ಕೋರ್ಟ್ ಮತ್ತು ನ್ಯಾ. ನಾಗಮೋಹನ್ ದಾಸ್ ಸಮಿತಿ ಹೇಳಿದ್ದನ್ನು ಪರಿಗಣಿಸಿ ಜಾರಿ ಮಾಡಿ ಎಂದು ಒತ್ತಾಯಿಸಿದರು.

ಚುನಾವಣಾ ಗಿಮಿಕ್ ಎಂದಿದ್ದರು

ನಾವು ಮೀಸಲಾತಿ ಪ್ರಮಾಣ ಹೆಚ್ಚಿಸಿದಾಗ ಅದು ಚುನಾವಣಾ ಗಿಮಿಕ್ ಎಂದಿದ್ದರು. ನಾವು ನವೆಂಬರ್‌ನಲ್ಲೇ ಮೀಸಲಾತಿ ಪ್ರಮಾಣ ಹೆಚ್ಚಿಸಿದ್ದೆವು. ಏಪ್ರಿಲ್- ಮೇ ತಿಂಗಳಿನಲ್ಲಿ ಚುನಾವಣೆ ನಡೆದಿತ್ತು. ನಾವು ಅದನ್ನು ಸಂವಿಧಾನಬದ್ಧವಾಗಿ ಮಾಡಿದ್ದೇವೆ. ಒಳ ಮೀಸಲಾತಿ ಸಂಬಂಧ ನಮ್ಮ ನಿಲುವನ್ನೇ ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಕೆಲವು ಮಾನದಂಡಗಳನ್ನೂ ಅದು ನೀಡಿದೆ. ಇವರಿಗೆ ಒಲ್ಲದ ಮನಸ್ಸು, ಸಮುದಾಯಗಳ ಒತ್ತಡವೂ ಇತ್ತು. ಅದಕ್ಕಾಗಿ ನ್ಯಾ. ನಾಗಮೋಹನ್ ದಾಸ್ ಅವರ ಮತ್ತೊಂದು ಸಮಿತಿ ರಚಿಸಿದರು. ಅವರು ಸುಪ್ರೀಂ ಕೋರ್ಟ್ ಆದೇಶದಡಿ ಕೆಲ ನಿರ್ಣಯ ಮಾಡಿದರು. ಅವರ ಶಿಫಾರಸನ್ನೂ ಮಾಡಿಲ್ಲ, ಸುಪ್ರೀಂ ಕೋರ್ಟ್ ಆದೇಶವನ್ನೂ ಪಾಲಿಸಿಲ್ಲ. ಯಾವುದನ್ನೂ ಮಾಡದೇ ಸಚಿವ ಸಂಪುಟ ಸಭೆಯಲ್ಲಿ ಮೌಖಿಕವಾಗಿ ಕೆಲವು ಮೀಸಲಾತಿ ಮಾಡಿ ಪ್ರಕಟಿಸಿದರು. ಇದು ಕೋರ್ಟಿಗೆ ಹೋಗಲಿದೆ ನಿಲ್ಲುವುದಿಲ್ಲ ಎಂಬುದು ಅವರಿಗೂ ಗೊತ್ತಿತ್ತು. ಈಗ ಗೊಂದಲದಲ್ಲಿ ಬಿದ್ದಿದ್ದಾರೆ ಎಂದು ದೂರಿದರು.

ಉಸಿರಿರುವವರೆಗೂ ರಾಜಕೀಯ ಮಾಡುವೆ

ಪುಟ ೧➜ 1980ರಲ್ಲಿ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮೇಲೆ 46 ವರ್ಷ ಮಂತ್ರಿಯಾಗಿ ಕೆಲಸ ಮಾಡಿರುವೆ. ಈವರೆಗೆ 13 ಬಾರಿ ಚುನಾವಣೆ ಎದುರಿಸಿದ್ದೇನೆ. ನಾಲ್ಕು ಬಾರಿ ಸೋತಿದ್ದೇನೆ. ಸೋತಾಗಲೂ ಕ್ಷೇತ್ರದ ಜನರು ಕೈಬಿಟ್ಟಿಲ್ಲ. ರಾಜಕೀಯದಲ್ಲಿ ಬೆಳೆದಿದ್ದರೆ, ಮುಖ್ಯಮಂತ್ರಿ ಆಗಿದ್ದರೆ, ನೀವೆಲ್ಲರೂ ಕಾರಣ ಎಂದು ಹೇಳಿದರು. ನನ್ನ ರಾಜಕೀಯ ಜೀವನ ಕೊಟ್ಟಿದ್ದು ಇಲ್ಲಿಂದಲೇ ಎನ್ನುವುದು ಮುಖ್ಯ.

2006ರ ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆಯಲ್ಲಿ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಎಷ್ಟು ಮತಗಳು ಇತ್ತೋ, ಅಷ್ಟು ಮತಗಳನ್ನು ನನಗೆ ಕೊಟ್ಟಿದ್ದರು. 1978ರಲ್ಲಿ ತಾಲೂಕು ಬೋರ್ಡ್ ಚುನಾವಣೆಯಲ್ಲಿ ನಿಂತಿದ್ದಾಗ ವರಕೋಡು ಗ್ರಾಮದ ತಮ್ಮಯ್ಯ ಅವರು ಸೇರಿದಂತೆ ಅನೇಕರು ಸಹಾಯ ಮಾಡಿರುವುದನ್ನು ಮರೆಯಲ್ಲ ಎಂದರು. ವೀರಭದ್ರನ ಮಕ್ಕಳ ಕುಣಿತಕ್ಕೆ ಕುಣಿಯಲು ಹೋಗಿದ್ದರಿಂದ ನಮ್ಮಪ್ಪ ನನ್ನ ಸ್ಕೂಲ್‌ಗೆ ಸೇರಿಸಲಿಲ್ಲ. ಅಂದು ರಾಚಪ್ಪ ಮಾಸ್ಟರ್ ಬರದಿದ್ದರೆ ನಾನು ನೇರವಾಗಿ ಐದನೇ ತರಗತಿಗೆ ಸೇರಲು ಸಾಧ್ಯವಾಗುತ್ತಿರಲಿಲ್ಲ. ನಾನು ವಕೀಲನಾಗುತ್ತಿರಲಿಲ್ಲ, ರಾಜಕೀಯವಾಗಿ ಬೆಳೆದು ಮುಖ್ಯಮಂತ್ರಿಯಾಗುತ್ತಿರಲಿಲ್ಲ ಎಂದು ಸ್ಮರಿಸಿದರು.

ಡಾ.ಯತೀಂದ್ರ ಬೆಳೆಸಿ

ಪುಟ ೧➜ ಅನೇಕ ಭಾಗ್ಯ, ಗ್ಯಾರಂಟಿ ಯೋಜನೆಗಳನ್ನು ನೀಡಿದ್ದೇನೆ ಎಂದರು. ಬಡಗಲಹುಂಡಿ, ಹೊಸಹುಂಡಿ, ಮೂಡಲಹುಂಡಿ, ವರಕೋಡು ಗ್ರಾಮದ ಮುಖಂಡರು, ಯಜಮಾನರು, ಭಕ್ತಾದಿಗಳು ಸೇರಿಕೊಂಡು ನಿರ್ಮಾಣ ಮಾಡಿರುವ ದೇವಸ್ಥಾನಕ್ಕೆ ಬೇಕಾದ ಎಲ್ಲಾ ರೀತಿಯ ಅನುಕೂಲ ಕಲ್ಪಿಸಲಾಗುವುದು ಎಂದರು. ಕಾಗಿನೆಲೆ ಶಾಖಾಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಕಾರ್ಯಕ್ರಮದಲ್ಲಿದ್ದರು.

ಬೆಂಗಳೂರಲ್ಲಿ ಮತ್ತೆ ಪ್ಲಾಸ್ಟಿಕ್ ರಸ್ತೆ ಚಿಂತನೆ

ಪುಟ ೧➜ **ವೆಚ್ಚದ ವಿಶ್ಲೇಷಣೆ:** ರಸ್ತೆ ನಿರ್ಮಾಣವಷ್ಟೇ ಅಲ್ಲ, ನಗರದ ಪ್ಲಾಸ್ಟಿಕ್ ತ್ಯಾಜ್ಯವನ್ನು ವಿಲೇವಾರಿ ಮಾಡುವ ಒಂದು ಉತ್ತಮ ತಂತ್ರಜ್ಞಾನವಾಗಿದ್ದು, ಪ್ರತಿ ಟನ್ ಡಾಂಬರು ಮಿಶ್ರಣದಲ್ಲಿ ಸುಮಾರು ಶೇ.8 ರಿಂದ 10ರಷ್ಟು ಪ್ಲಾಸ್ಟಿಕ್‌ನ್ನು ಬಳಸಲಾಗುತ್ತದೆ. ಇದರಿಂದ ಬಿಟುಮೆನ್ (ಡಾಂಬರು) ಬಳಕೆಯನ್ನು ಕಡಿಮೆ ಮಾಡಬಹುದಾಗಿದ್ದು, ಲಕ್ಷಾಂತರ ರೂಪಾಯಿಗಳ ಉಳಿತಾಯವಾಗುತ್ತದೆ ಮತ್ತು ರಸ್ತೆಗಳ ನಿರ್ವಹಣೆ ಸುಲಭವಾಗುತ್ತದೆ. ತ್ಯಾಜ್ಯ ಪ್ಲಾಸ್ಟಿಕ್ ಅಗ್ಗವಾಗಿ ಸಿಗುತ್ತದೆ. ಅಂದಾಜಿನ ಪ್ರಕಾರ, ಒಂದು ಕಿಲೋಮೀಟರ್ (3.75 ಮೀಟರ್ ಅಗಲದ) ರಸ್ತೆಗೆ ನಿರ್ಮಾಣ ಸಮಯದಲ್ಲಿ ಸುಮಾರು 60 ಸಾವಿರಕ್ಕೂ ಹೆಚ್ಚಿನ ಉಳಿತಾಯವಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರಮುಖ ರಸ್ತೆಗಳಲ್ಲಿ ಪ್ಲಾಸ್ಟಿಕ್ ಬಳಕೆ: ಬೆಂಗಳೂರು ವಿಮಾನ ನಿಲ್ದಾಣ ಟರ್ಮಿನಲ್ 2 ಬಳಿಯ 60 ಕಿ.ಮೀ., ಸೌತ್ ಎಂಡ್ ಬಳಿಯ ಪಟಾಲಮ್ಮ ರಸ್ತೆ, ನಾಯಂಡಹಳ್ಳಿ ಹತ್ತಿರದ ರಸ್ತೆಗಳು, ಜಯನಗರ ಮತ್ತು ಮಲ್ಲೇಶ್ವರದ ಕೆಲವು ರಸ್ತೆಗಳು, ಕೆ.ಆರ್. ಮಾರುಕಟ್ಟೆ ರಸ್ತೆ, ಬೆಳ್ಳಂದೂರು ಸಮೀಪ, ಬಳ್ಳಾರಿ ರಸ್ತೆ (ಮೇಖ್ರಿ ವೃತ್ತ) ಸೇರಿದಂತೆ ಅನೇಕ ಪ್ರಮುಖ ರಸ್ತೆಗಳ ನಿರ್ಮಾಣದಲ್ಲಿ ಪ್ಲಾಸ್ಟಿಕ್ ಬಳಸಲಾಗಿದ್ದು, ಬಾಳಿಕೆಯು ಉತ್ತಮವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿರ್ವಹಣಾ ವೆಚ್ಚದಲ್ಲಿ ಉಳಿತಾಯ

ಪುಟ ೧➜ ಡಾಂಬರು ರಸ್ತೆಗಳಿಗೆ ನೀರು ಶತ್ರು. ಆದರೆ ಪ್ಲಾಸ್ಟಿಕ್ ರಸ್ತೆಗಳು ಜಲ ನಿರೋಧಕವಾಗಿರಲಿದ್ದು, ನೀರನ್ನು ಒಳ ಬಿಡದ ಕಾರಣ ರಸ್ತೆ ಬೇಗ ಕಿತ್ತುಬರುವುದಿಲ್ಲ ಹಾಗೂ ಗುಂಡಿಗಳು (ಪಾಟ್ ಹೋಲ್) ನಿರ್ಮಾಣವಾಗುವುದಿಲ್ಲ. ಜತೆಗೆ ರಸ್ತೆಗೆ ಪ್ಲಾಸ್ಟಿಕ್ ಬಳಕೆ ಮಾಡುವುದರಿಂದ ಪ್ಲಾಸ್ಟಿಕ್ ಪರಿಸರ ಸೇರುವ ಪ್ರಮಾಣ ಕಡಿಮೆಯಾಗಿ, ಪರಿಸರ ಸಂರಕ್ಷಣೆಗೆ ಮಹತ್ತರ ಪಾತ್ರ ವಹಿಸಲಿದೆ ಎಂದು ಪ್ಲಾಸ್ಟಿಕ್ ರಸ್ತೆ ನಿರ್ಮಾಣಕ್ಕೆ ಮೆಟೀರಿಯಲ್ ಪೂರೈಕೆ ಮಾಡುವ ಪೇಟೆಂಟ್ ಪಡೆದುಕೊಂಡ ಮೊದಲ ಕಂಪನಿ ಕೆ.ಕೆ.ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್‌ಮೆಂಟ್ ನಿರ್ದೇಶಕರಾದ ಕೆ.ರಸುಲ್ ಖಾನ್ ಹೇಳುತ್ತಾರೆ.

ಒಮ್ಮೆ ರಸ್ತೆಗೆ ಪ್ಲಾಸ್ಟಿಕ್ ಬಳಸಿದ ನಂತರ ಅದು ಕರಗಲು 80-90 ಡಿಗ್ರಿ ಹೀಟ್ ಬೇಕಾಗುತ್ತದೆ. ನಮ್ಮ ವಾತಾವರಣದ ತಾಪಮಾನ ಅಷ್ಟಿಲ್ಲದ ಕಾರಣ ಏನೂ ಸಮಸ್ಯೆಯಾಗುವುದಿಲ್ಲ. ಇದು ಪರಿಸರಕ್ಕೆ ಪೂರಕವಾದ ಚಿಂತನೆಯಾಗಿದೆ.

■ **ಕೆ.ರಸುಲ್ ಖಾನ್**, ಕೆ.ಕೆ.ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್‌ಮೆಂಟ್ ನಿರ್ದೇಶಕ

ಪ್ಲಾಸ್ಟಿಕ್ ರಸ್ತೆ ನಿರ್ಮಾಣದ ಹಂತಗಳು

- ಸಂಗ್ರಹಿಸಿದ ಕಡಿಮೆ ಗುಣಮಟ್ಟದ ಪ್ಲಾಸ್ಟಿಕ್‌ನ್ನು ಚೆನ್ನಾಗಿ ತೊಳೆದು, ಒಣಗಿಸಿ, ನಂತರ ಶ್ರೆಡಿಂಗ್ ಯಂತ್ರದ ಮೂಲಕ 2 ಎಂಎಂನಿಂದ 4 ಎಂಎಂ ಗಾತ್ರದ ಚಿಕ್ಕ ತುಂಡುಗಳನ್ನಾಗಿ ಕತ್ತರಿಸಲಾಗುತ್ತದೆ
- ರಸ್ತೆ ನಿರ್ಮಾಣಕ್ಕೆ ಬಳಸುವ ಜಲ್ಲಿಕಲ್ಲನ್ನು ಸುಮಾರು 160ಕೆಸಿ - 170 ಕೆಸಿ ತಾಪಮಾನಕ್ಕೆ ಬಿಸಿ ಮಾಡಲಾಗುತ್ತದೆ
- ಬಿಸಿಯಾದ ಜಲ್ಲಿಕಲ್ಲಿನ ಮೇಲೆ ಚಿಕ್ಕದಾಗಿ ಕತ್ತರಿಸಿದ ಪ್ಲಾಸ್ಟಿಕ್ ತುಂಡುಗಳನ್ನು ಹಾಕಲಾಗುತ್ತದೆ (ಡ್ರೈ ಪ್ರೋಸೆಸ್)

ಯುದ್ಧ ಪರಿಸ್ಥಿತಿ ದೂರವಾಗಲಿ

ಪುಟ ೧➜ ಯುಜಿಸಿ ವಿಷಯದ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಅವರು, ಹಿಂದು ಸಮಾಜದ ಸಂಘಟನೆಗಾಗಿ ಮತ್ತು ಹಿಂದು ಸಮಾಜದಲ್ಲಿನ ಬೇಧಭಾವವನ್ನು ದೂರಗೊಳಿಸುವುದಕ್ಕಾಗಿಯೇ ಸಂಘದ ನಿರ್ಮಾಣವಾಗಿದೆ. ಸಮಾಜದ ಎಲ್ಲಾ ವರ್ಗಗಳ ಬಂಧುಗಳು ಒಂದು ಕಡೆ ಸೇರಿ ಇಂತಹ ವಿಷಯಗಳ ಕುರಿತು ಯೋಚಿಸಬೇಕು ಎಂದೇ ಹೇಳುತ್ತದೆ. ಹಾಗೆಯೇ ಈಗ ಎದ್ದಿರುವ ಯುಜಿಸಿ ವಿವಾದದ ಕುರಿತು ನ್ಯಾಯಾಲಯ ಮತ್ತು ಸರ್ಕಾರದ ಮಟ್ಟದಲ್ಲಿ ಅನೇಕ ಪ್ರಯತ್ನಗಳಾಗುತ್ತಿವೆ. ಆದರೆ, ಸಂಘದ ಪ್ರಯತ್ನ ಕೇವಲ ಈ ಸಮಯದಲ್ಲಿ ಮಾತ್ರವಲ್ಲದೆ ಸಮಾಜದ ಸರ್ವವರ್ಗಗಳ ಸರ್ವಬಂಧುಗಳನ್ನು ಸಂಘಟಿಸುವುದಾಗಿದೆ. ಸಮಾಜದ ಏಕತೆ, ರಾಷ್ಟ್ರದ ಏಕತೆ ಎನ್ನುವುದು ನಮ್ಮ ನಿಲುವು. ಸಂಘದ ಜನ್ಮವಾದದ್ದೇ ಹಿಂದು ಸಮಾಜದಲ್ಲಿನ ಶ್ರೇಷ್ಠ-ಕನಿಷ್ಠ ಬೇಧಭಾವಗಳನ್ನು ದೂರಗೊಳಿಸುತ್ತಾ ಸಮರಸತೆಯ ಸುಸಂಘಟಿತ ಸಮಾಜ ನಿರ್ಮಾಣ ಮಾಡುವುದಕ್ಕಾಗಿಯೇ ಎಂದರು. ಸಂಘದ ಸಂರಚನೆಯ ಕುರಿತಾದ ಪ್ರಶ್ನೆಗೆ ಪ್ರತಿಕ್ರಿಯಿಸಿ, ಕಾಲಕಾಲಕ್ಕೆ ಕೆಲವು ಬದಲಾವಣೆಗಳು ಆಗುತ್ತಿರುತ್ತವೆ. ಅದು ವಿಶೇಷ ಸಂಗತಿಯೇನಲ್ಲ. ಈಗಲೂ ಕೆಲವು ಬದಲಾವಣೆಗಳ ಕುರಿತು ಚರ್ಚೆ ಜಾರಿಯಲ್ಲಿದೆ. ನಿರ್ಣಯದ ನಂತರ ತಿಳಿಸಲಾಗುತ್ತದೆ. ಇನ್ನು ಭೌಗೋಳಿಕ ರಚನೆಯ ಕುರಿತು ಸಮಯಕ್ಕೆ ಸರಿಯಾದ, ಸಂಘಟನಾತ್ಮಕ ಅವಶ್ಯಕತೆಗಳಿಗೆ ಅನುಗುಣವಾಗಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತದೆ ಎಂದರು.

ಮೇಟಿ ಕುಟುಂಬಸ್ಥರಿಗೆ ಟಿಕೆಟ್: ಸಚಿವ ಜಾರಕಿಹೊಳಿ

ಬೆಳಗಾವಿ: ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಎಚ್.ವೈ.ಮೇಟಿ ಅವರ ನಿಧನದಿಂದ ತೆರವಾಗಿರುವ ಸ್ಥಾನಕ್ಕೆ ನಡೆಯಲಿರುವ ಉಪಚುನಾವಣೆಯಲ್ಲಿ ಅವರ ಕುಟುಂಬಸ್ಥರಿಗೆ ಟಿಕೆಟ್ ನೀಡಲಾಗುವುದು ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿ ಗೆಲ್ಲಿಸಲು ಈಗಾಗಲೇ ಸಿದ್ಧತೆ ನಡೆಸಿದ್ದೇವೆ. ಹೈಕಮಾಂಡ್, ಕ್ಷೇತ್ರದ ಮತದಾರರ, ಕುಟುಂಬದ ಒಮ್ಮತದ ಆಧಾರದ ಮೇಲೆ ಅಂತಿಮ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು ಎಂದರು. ಕೆಪಿಸಿಸಿ ಅಧ್ಯಕ್ಷ ಸ್ಥಾನ ಬೆಳಗಾವಿ ಜಿಲ್ಲೆಗೆ ದೊರುಕತ್ತಿದೆ ಎಂಬ ಚರ್ಚೆ ನಡೆಯುತ್ತಿವೆ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ನಾಯಕತ್ವ ಬದಲಾವಣೆ ಗೊಂದಲ ಬಗೆಹರಿಸಬೇಕೆಂದು ಹೈಕಮಾಂಡ್ ಗೆ ಹೇಳಿದ್ದೇವೆ. ಅವರೇ ಈ ಗೊಂದಲ ಬಗೆಹರಿಸುತ್ತಾರೆ. ಇನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನ ಬೆಳಗಾವಿ ಜಿಲ್ಲೆಗೆ ದೊರಕುವ ಬಗ್ಗೆ ಚರ್ಚೆ ನಡೆದಿಲ್ಲ. ಕೆಪಿಸಿಸಿ ಸ್ಥಾನ ಸಿಕ್ಕಾಗ ಸಂತೋಷ ಪಡೋಣ ಎಂದರು. ಮಹಾರಾಷ್ಟ್ರದಿಂದ 2 ಟಿಎಂಸಿ ನೀರು ಬಿಡುಗಡೆಗೆ ಮನವಿ: ಹಿಪ್ಪರಗಿ ಬ್ಯಾರೇಜ್‌ನ 22ನೇ ಕ್ರಸ್ಟ್ ಗೇಟ್ ಮುರಿದು ಬಿದ್ದ ಪರಿಣಾಮ ಕೃಷ್ಣಾ ನದಿಯ ಅಪಾರ ಪ್ರಮಾಣದ ನೀರು ವ್ಯರ್ಥವಾಗಿ ಪೋಲಾಗಿದೆ. ಸುಮಾರು 2 ರಿಂದ 3 ಟಿಎಂಸಿ ಅಡಿ ನೀರು ಹರಿದು ಹೋಗಿದೆ. ನೀರಿನ ಕೊರತೆ ನೀಗಿಸಲು ಮಹಾರಾಷ್ಟ್ರ ಸರ್ಕಾರದಿಂದ ಸುಮಾರು 2 ಟಿಎಂಸಿ ನೀರು ಬಿಡುಗಡೆ ಮಾಡುವಂತೆ ವಿನಂತಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು ಹೇಳಿದರು.

ಕೆಂಪು ಕಲ್ಲಿನಂತೆ ಮರಳು ಸಮಸ್ಯೆಗೂ ಪರಿಹಾರ ಹುಡುಕಿ

ಪುಟ ೧➜ ಇದಕ್ಕೆ ಉತ್ತರಿಸಿದ ಸಚಿವ ಎಸ್.ಎಸ್. ಮಲ್ಲಿಕಾರ್ಜುನ, ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಸ್ಥಳೀಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳನ್ನು ಪೂರೈಸಲು ಒಟ್ಟು 11 ಮರಳು ನಿಕ್ಷೇಪ ಗುರುತಿಸಲಾಗಿದೆ. ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಮರಳು ತೆಗೆದು ವಿಲೇವಾರಿ ಮಾಡಲು ಅಧಿಸೂಚನೆ ಹೊರಡಿಸಿ, ಕಾರ್ಯಾದೇಶ ನೀಡಲಾಗಿತ್ತು. ಆದರೆ, ಪಂಚಾಯತ್‌ಗಳು ಮರಳು ತೆಗೆದು ವಿಲೇವಾರಿ ಮಾಡಿಲ್ಲ. ಪ್ರಸಕ್ತ ಆ ಮರಳು ನಿಕ್ಷೇಪಗಳ ಅವಧಿ ಮುಕ್ತಾಯವಾಗಿದೆ. ಮತ್ತೆ ಜಂಟಿ ಸ್ಥಳ ಪರಿಶೀಲನೆ ನಡೆಸಿ ಮರಳು ಲಭ್ಯತೆ ಖಚಿತಪಡಿಸಿಕೊಂಡು ಮರಳು ತೆಗೆಯಲು ಕಾರ್ಯಾದೇಶ ನೀಡಲು ಕ್ರಮ ವಹಿಸಲು ಸೂಚಿಸಲಾಗಿದೆ. ದ.ಕ. ಜಿಲ್ಲಾ ವ್ಯಾಪ್ತಿಯಲ್ಲಿ ಹೊಸದಾಗಿ 7 ಮರಳು ನಿಕ್ಷೇಪ ಗುರುತಿಸಿ ಅಧಿಸೂಚನೆ ಹೊರಡಿಸಲಾಗಿದೆ. ಈ ಪೈಕಿ ಒಂದು ಮರಳು ದಿಬ್ಬ ಪ್ರದೇಶಕ್ಕೆ ಮರಳು ತೆಗೆಯಲು ಸಂಬಂಧಪಟ್ಟ ಪಂಚಾಯತ್‌ಗೆ ಕಾರ್ಯಾದೇಶ ನೀಡಲಾಗಿದೆ ಎಂದರು.

ಉಡುಪಿ ಜಿಲ್ಲೆಯಲ್ಲಿ 2020-21ನೇ ಸಾಲಿನಿಂದ 30 ಮರಳು ನಿಕ್ಷೇಪಗಳಲ್ಲಿ ಒಟ್ಟು 80,389 ಮೆಟ್ರಿಕ್ ಟನ್ ಮರಳನ್ನು ತೆಗೆದು ಸಂಬಂಧಪಟ್ಟ ಗ್ರಾ.ಪಂ.ಗಳ ವ್ಯಾಪ್ತಿಯ ಸ್ಥಳೀಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳನ್ನು ಪೂರೈಸಲಾಗಿದೆ ಎಂದು ಸಚಿವರು ತಿಳಿಸಿದರು.

ಈ ಉತ್ತರಕ್ಕೆ ತೃಪ್ತಿಗೊಳ್ಳದ ಶಾಸಕ ಪೂಂಜ, ಗಣಿ ಇಲಾಖೆಯಿಂದ ಅನುಮತಿ ನೀಡಿದರೂ ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧೀನ ಗ್ರಾ.ಪಂ.ಗಳಿಂದ ಮರಳು ತೆಗೆದು ವಿಲೇ ಮಾಡುವಲ್ಲಿ ಲೋಪವಾಗಿದೆ. ಇದರಿಂದ ಕರಾವಳಿ ಭಾಗದವರಿಗೆ ಮರಳು ಸಿಗದೆ ತೀವ್ರ ಸಮಸ್ಯೆ ಎದುರಿಸುವಂತಾಗಿದೆ. ಇಂತಹ ನಿರ್ಲಕ್ಷ್ಯ ಯಾಕೆ ಎಂದು ಆಕ್ಷೇಪಿಸಿದರು.

ಮಧ್ಯಪ್ರವೇಶಿಸಿದ ಬಿಜೆಪಿ ಶಾಸಕ ಸುನೀಲ್ ಕುಮಾರ್, ನಾನ್ ಸಿಆರ್‌ಝಡ್ ವ್ಯಾಪ್ತಿಯಲ್ಲಿ ನಮ್ಮ ಎರಡು ಜಿಲ್ಲೆಗಳಲ್ಲಿ ಸಮಸ್ಯೆಗಳೇ ಬೇರೆ ಇವೆ. ಉಡುಪಿ ಜಿಲ್ಲೆಯಲ್ಲಿ 80,389 ಮೆಟ್ರಿಕ್ ಟನ್ ಮರಳಿನ ಪ್ರಮಾಣ ಗುರುತಿಸಿದರೂ 21,990 ಮೆ.ಟನ್ ಮರಳು ತೆಗೆದು ಪೂರೈಸಲಾಗಿದೆ ಎಂದು ಹೇಳಿದೆ. ಹಾಗಾದರೆ, ನಮ್ಮ ಮರಳಿನ ಬೇಡಿಕೆ ಎಷ್ಟು? ಅಲ್ಲಿರುವ ಮಾನದಂಡಗಳನ್ನು ನೋಡಿದರೆ ಯಾರೂ ಮರಳನ್ನು ತೆಗೆಯಲು ಸಾಧ್ಯವಿಲ್ಲ. ಅಕ್ರಮವಾಗಿ ಮರಳುಗಾರಿಕೆ ನಡೆಸುತ್ತಿರುವುದರಿಂದ ಸರ್ಕಾರದ ಆದಾಯಕ್ಕೂ ನಷ್ಟವಾಗುತ್ತಿದೆ. ಇದಕ್ಕಾಗಿ ನಮ್ಮ ಎರಡು ಜಿಲ್ಲೆಗಳಿಗೆ ಪ್ರತ್ಯೇಕ ಮರಳು ನೀತಿ ರೂಪಿಸುವಂತೆ ಒತ್ತಾಯಿಸುತ್ತಲೇ ಇದ್ದೇವೆ. ಇಲ್ಲಿರುವವರಿಗೆ ನಮ್ಮ ಜಿಲ್ಲೆಗಳ ಮರಳು ಮತ್ತು ಕೆಂಪು ಕಲ್ಲಿನ ಸಮಸ್ಯೆ ಅರ್ಥವೇ ಆಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಟ್ಟಿನ ರಜೆ ಕಡ್ಡಾಯಗೊಳಿಸಿದರೆ ಮಹಿಳೆಯರ ವೃತ್ತಿಗೆ ದಕ್ಕೆ: ಸುಪ್ರೀಂ

ಪುಟ ೧➜ ಸೂಕ್ತ ಮಾಧ್ಯಮಗಳ ಸಲಹೆ ಪಡೆದುಕೊಂಡು ಋತುಸ್ರಾವ ರಜೆಗಾಗಿ ನೀತಿ ರಚಿಸುವ ಸಾಧ್ಯತೆಗಳನ್ನು ಪರಿಗಣಿಸಬಹುದು ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜೋಯ್ಮಲ್ಯಾ ಬಾಗ್ಚಿ ಅವರನ್ನು ಒಳಗೊಂಡ ನ್ಯಾಯಪೀಠ ಸಲಹೆ ನೀಡಿದೆ. ಅರ್ಜಿದಾರರ ಅಹವಾಲಿನ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶಿಸುವುದರೊಂದಿಗೆ ನ್ಯಾಯಪೀಠ ಅರ್ಜಿ ಇತ್ಯರ್ಥಗೊಳಿಸಿತು.

ಆತಂಕ ಮೂಡಿಸುತ್ತವೆ: ಈ ರೀತಿಯ ಅರ್ಜಿಗಳನ್ನು ಆತಂಕ ಮೂಡಿಸಲು ಸಲ್ಲಿಸಲಾಗುತ್ತೆ. ಋತುಸ್ರಾವ ತಮ್ಮ ಪಾಲಿನ ಅನಿಷ್ಟವೆಂಬುದಾಗಿ ಮಹಿಳೆಯರಲ್ಲಿ ಕೀಳರಿಮೆ ಹುಟ್ಟು ಹಾಕುವ ಅರ್ಜಿಗಳು ಇವಾಗಿವೆ. ಮುಟ್ಟಿನ ರಜೆ ಒಂದು ಸಮರ್ಥನೀಯ ಹಕ್ಕೆಂದು ಬಿಂಬಿಸಲಾಗುತ್ತಿದೆ. ಇಲ್ಲಿ ಮಹಿಳೆಗೆ ವೇತನಸಹಿತ ರಜೆ ಮಂಜೂರು ಮಾಡಬೇಕಾದ ಉದ್ಯೋಗದಾತನ ಪರಿಸ್ಥಿತಿಯನ್ನೂ ಅರ್ಥೈಸಿಕೊಳ್ಳುವುದು ಮುಖ್ಯವೆಂದು ನ್ಯಾಯಪೀಠ ಪ್ರತಿಪಾದಿಸಿದೆ.

ಶೈಲೇಂದ್ರ ಮಣಿ ತ್ರಿಪಾಠಿ ಸಾರ್ವಜನಿಕ ಹಿತಾಸಕ್ತಿ ಅರ್ಜಿದಾರರು. ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಎಂ.ಆರ್. ಶಂಸದ್, ಕೆಲವು ರಾಜ್ಯಗಳು ಮುಟ್ಟಿನ ರಜೆ ನೀಡಲು ಈಗಾಗಲೆ ಕ್ರಮ ಕೈಗೊಂಡಿವೆ ಎಂದು ವಾದಿಸಿದರು. ಕೇರಳದಲ್ಲಿ ಶಾಲಾ ವಿದ್ಯಾರ್ಥಿನಿಯರಿಗೆ ಈ ವಿಚಾರದಲ್ಲಿ ರಿಯಾಯಿತಿ ಕಲ್ಪಿಸಲಾಗಿದೆ ಮತ್ತು ಹಲವು ಖಾಸಗಿ ಕಂಪನಿಗಳು ಕೂಡ ಮಹಿಳಾ ಉದ್ಯೋಗಿಗಳಿಗೆ ಸ್ವಯಂಪ್ರೇರಿತವಾಗಿ ಮುಟ್ಟಿನ ರಜೆ ನೀಡಿವೆ ಎಂದು ಗಮನ ಸೆಳೆದರು.

ಕಾನೂನು ಮುಖೇನ ಕಡ್ಡಾಯ ಅಪಾಯಕಾರಿ: ಪ್ರತಿಯಾಗಿ, ಶಾಲೆಗಳು ಅಥವಾ ಖಾಸಗಿ ಕಂಪನಿಗಳು ಸ್ವಇಚ್ಛೆಯಿಂದ ಮುಟ್ಟಿನ ರಜೆ ನೀಡುವುದರಲ್ಲಿ ತಪ್ಪಿಲ್ಲ. ಇಂತಹ ಸ್ವಯಂಪ್ರೇರಿತ ನೀತಿಗಳು ಸ್ವಾಗತಾರ್ಹ. ಆದರೆ, ಈ ರೀತಿ-ನೀತಿಗಳನ್ನು ಕಾನೂನು ಮೂಲಕ ಕಡ್ಡಾಯಗೊಳಿಸುವುದು ಅಪಾಯಕಾರಿ ಎಂದು ಸಿಜೆಐ ಎಚ್ಚರಿಸಿದರು. ಸ್ವಯಂಪ್ರೇರಿತವಾಗಿ ರಜೆ ನೀಡುವುದು ಅದ್ಭುತ. ಆದರೆ ನೀವಿದನ್ನು ಕಾನೂನು ಪ್ರಕಾರವೂ ಕಡ್ಡಾಯಗೊಳಿಸಿದಲ್ಲಿ ಮಹಿಳೆಯರಿಗೆ ಯಾರೂ ಉದ್ಯೋಗ ನೀಡಲಾರರು.

ಮಹಿಳೆಯರನ್ನು ಯಾರೂ ನ್ಯಾಯಾಂಗ ಅಥವಾ ಸರಕಾರಿ ಹುದ್ದೆಗಳಿಗೆ ಸೇರಿಸಲಾರರು. ಅರ್ಥಾತ್ ಅವರ ವೃತ್ತಿ ಭವಿಷ್ಯ ಮುಗಿದೇಬಿಡುವುದು. ಎಲ್ಲರಿಗೂ ಮಾಹಿತಿ ನೀಡಿದ ನಂತರ ನೀವು ಮನೆಯಲ್ಲೇ ಕುಳಿತುಬಿಡಿ ಎಂಬ ಮಾತನ್ನು ಉದ್ಯೋಗದಾತ ಸಂಸ್ಥೆಗಳಿಂದ ಮಹಿಳೆಯರು ಕೇಳಬೇಕಾಗುವುದು ಎಂದು ಮುಖ್ಯ ನ್ಯಾಯಮೂರ್ತಿ ಎಚ್ಚರಿಸಿದರು. ಇಂತಹ ಕ್ರಮಗಳು ಉದ್ಯೋಗ ಜಾಗದಲ್ಲಿ ತಪ್ಪು ಗ್ರಹಿಕೆಗೆ ಕಾರಣವಾಗುವ ಸಾಧ್ಯತೆಯಿದೆ. ಔದ್ಯೋಗಿಕ ರಂಗದಲ್ಲಿ ಮಹಿಳೆಯರ ಉನ್ನತಿ ಮೇಲೂ ಋಣಾತ್ಮಕ ಪರಿಣಾಮ ಬೀರುವ ಆತಂಕವಿದೆ ಎಂದು ನ್ಯಾಯಪೀಠ ಕಳವಳ ವ್ಯಕ್ತಪಡಿಸಿದೆ. ಅರ್ಜಿದಾರರು ಈಗಾಗಲೆ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕುರಿತು ಮನವಿ ಮಾಡಿರುವ ಕಾರಣ, ಮುಟ್ಟಿನ ರಜೆ ಕಡ್ಡಾಯಕ್ಕೆ ಆಗ್ರಹಿಸಿ ಪದೇಪದೆ ನ್ಯಾಯಾಲಯದ ಕದ ಬಡಿಯುವ ಅಗತ್ಯವಿಲ್ಲ ಎಂದು ನ್ಯಾಯಪೀಠ ಸಲಹೆ ನೀಡಿದೆ.

ಸಾಲಗಾರರ ರಕ್ಷಣಾ ಖಾಸಗಿ ವಿಧೇಯಕ

ವಿಧಾನಪರಿಷತ್: ಹಣಕಾಸು ವ್ಯವಹಾರ ನಡೆಸುವ ಯಾವುದೇ ಸಂಸ್ಥೆ, ಕಂಪನಿ, ಹಣಕಾಸು ಸಂಸ್ಥೆ ಅಥವಾ ಬ್ಯಾಂಕ್ ಯಾವುದೇ ಸಾಲಗಾರನಿಗೆ ಸುಸ್ತಿ ದಿನಾಂಕದಿಂದ 180 ದಿನಗಳ ಕಾಲಾವಕಾಶ ನೀಡಿದ ನಂತರವಷ್ಟೆ ಅಡಮಾನವಿಟ್ಟ ಚಿನ್ನಾಭರಣಗಳನ್ನು ಹಾರಾಜು ಹಾಕಲು ಅನುಮತಿ ನೀಡಬೇಕು ಎನ್ನುವ ಕಾನೂನು ತರಲು ಖಾಸಗಿ ವಿಧೇಯಕ ಮಂಡಿಸಲಾಗಿದೆ.

ಶುಕ್ರವಾರ ವಿಧಾನ ಪರಿಷತ್‌ನ ಖಾಸಗಿ ಕಾರ್ಯಕಲಾಪದಲ್ಲಿ, ಕರ್ನಾಟಕ ಚಿನ್ನ ಅಡಮಾನವಿಟ್ಟ ಸಾಲಗಾರರ ರಕ್ಷಣಾ ವಿಧೇಯಕ, 2025 ಎನ್ನುವ ಖಾಸಗಿ ವಿಧೇಯಕವನ್ನು ಕಾಂಗ್ರೆಸ್ ಸದಸ್ಯ ರಮೇಶ್ ಬಾಬು ಮಂಡಿಸಿದ್ದಾರೆ. ಯಾವುದೇ ಹಣಕಾಸು ಸಂಸ್ಥೆಯಿಂದ ಸಾಲಗಾರರ ರಕ್ಷಣೆಗಾಗಿ ಹಾಗೂ ಅಡಮಾನವಿಟ್ಟ ಚಿನ್ನದ ಹರಾಜಿನ ಪ್ರಕ್ರಿಯೆಯನ್ನು ನಿಯಂತ್ರಿಸಲು ಈ ಖಾಸಗಿ ವಿದೇಯಕವನ್ನು ಮಂಡಿಸಲಾಗಿದೆ.

ಈ ವಿಧೇಯಕದಂತೆ ಸಾಲಗಾರನಿಗೆ ತಾನು ಅಡಮಾನವಿಟ್ಟ ಚಿನ್ನವನ್ನು ಹರಾಜು ಮಾಡುವುದಕ್ಕಿಂತ ಮೊದಲು ನ್ಯಾಯಯುತ ಹಾಗೂ ಸಮಂಜಸವಾದ ಅವಕಾಶವನ್ನು ಹಣಕಾಸು ಸಂಸ್ಥೆಗಳಿಂದ ಒದಗಿಸಲು ಈ ಖಾಸಗಿ ವಿಧೆಯಕ ಮಂಡಿಸಲಾಗಿದೆ.

180 ದಿನಗಳ ಕಾಲಾವಕಾಶ ನೀಡುವ ನೋಟಿಸ್ ಅವಧಿ ಯಲ್ಲಿ ಒಂದು ವೇಳೆ ಸಾಲಗಾರನು ತನಗೆ ಅನ್ವಯವಾಗುವ ಬಡ್ಡಿಯೊಂದಿಗೆ ಬಾಕಿ ಒತ್ತವನ್ನು ಪಾವತಿಸಿ ತಾನು ಅಡಮಾನವಿಟ್ಟ ಚಿನ್ನವನ್ನು ಬಿಡಿಸಿಕೊಳ್ಳಲು ಅವಕಾಶ ನೀಡುವ ಉದ್ದೇಶವನ್ನು ಈ ಖಾಸಗಿ ವಿಧೇಯಕ ಹೊಂದಿದೆ. ಅಲ್ಲದೇ ಸಾಲಗಾರನು ತನಗೆ ಹಣ ನೀಡಿದ ಸಂಸ್ಥೆಗೆ ಕೊನೆಯದಾಗಿ ತಿಳಿಸಿರುವ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ, ಇ-ಮೇಲ್, ಅಥವಾ ಎಸ್‌ಎಂಎಸ್‌ಗಳನ್ನು ಕಳುಹಿಸುವ ಮೂಲಕ ಹರಾಜು ಪ್ರಕ್ರಿಯೆಯ ಮಾಹಿತಿಯನ್ನು ಸಾಲಗಾರನ ಗಮನಕ್ಕೆ ಕಡ್ಡಾಯವಾಗಿ ತರಲು ಈ ವಿಧೇಯಕದಲ್ಲಿ ಮನವಿ ಮಾಡಿದ್ದಾರೆ.

ಹರಾಜು ಪ್ರಕ್ರಿಯೆ ನಿಯಂತ್ರಣ

ಸಾಲಗಾರನು ಅಡಮಾನವಿಟ್ಟ ಚಿನ್ನದ ಹರಾಜನ್ನು ರಾಜ್ಯ ಸರ್ಕಾರದಿಂದ ಅನುಮೋದಿತರಾಗಿರುವ ಪರವಾನಗಿ ಪಡೆದ ಹಾರಾಜುದಾರರ ಮೂಲಕ ಅಥವಾ ಸ್ಥಳೀಯ ತಹಶೀಲ್ದಾರ್, ಮಾತ್ರ ನಡೆಸತಕ್ಕದ್ದು, ಅಲ್ಲದೇ ಸಾಲಗಾರನಿಗೆ ಹರಾಜು ದಿನಾಂಕದ ಮಾಹಿತಿಯನ್ನು 15 ದಿನಗಳ ಮುಂಚಿತವಾಗಿ ನಿಡಲು ವಿಧೆಯಕದಲ್ಲಿ ಹೇಳಲಾಗಿದೆ.



ಬೆಂಗಳೂರು ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಆರಂಭವಾದ ಮೂರು ದಿನಗಳ ಪ್ರಯಾಣ ಮತ್ತು ಪ್ರವಾಸೋದ್ಯಮ ಮೇಳವನ್ನು (ಟಿಟಿಎಫ್) ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಚಾಲನೆ ನೀಡಿದರು. ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಕೆ.ವಿ.ತ್ರಿಲೋಕಚಂದ್ರ ಇದ್ದರು.

ಪಕ್ಷದ ವರಿಷ್ಠರಿಗೆ ಆಕಾಂಕ್ಷಿಗಳ ಹೆಸರು ರವಾನೆ: ವಿಜಯೇಂದ್ರ

ಬೆಂಗಳೂರು: ಇಂದಿನ ಕೋರ್ ಕಮಿಟಿ ಸಭೆಯಲ್ಲಿ ಮುಂದೆ ಬರುವ ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳು ಮತ್ತು ಆಕಾಂಕ್ಷಿಗಳ ಬಗ್ಗೆ ಚರ್ಚೆ ನಡೆದಿದೆ. ಕೋರ್ ಕಮಿಟಿಯಲ್ಲಿ ಚರ್ಚಿಸಿದ ಹೆಸರುಗಳನ್ನು ಪಕ್ಷದ ವರಿಷ್ಠರಿಗೆ ಕಳುಹಿಸಿಕೊಡುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ರಾಜ್ಯ ಕೋರ್ ಕಮಿಟಿ ಸಭೆಯು ಇಂದು ನಡೆದಿದೆ. ಕರ್ನಾಟಕ ರಾಜ್ಯ ಉಸ್ತುವಾರಿ ಡಾ. ರಾಧಾಮೋಹನ್ ದಾಸ್ ಅಗ್ರವಾಲ್, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಪ್ರತಿಪಕ್ಷ ನಾಯಕರು ಮತ್ತು ಎಲ್ಲ ಕೋರ್ ಕಮಿಟಿ ಸದಸ್ಯರು ಭಾಗವಹಿಸಿದ್ದರು ಎಂದರು. ವಿಧಾನಪರಿಷತ್ ಚುನಾವಣೆಗೆ ಅಭ್ಯರ್ಥಿಗಳ ಹೆಸರು ಘೋಷಿಸಿದ್ದೇವೆ. ವಿಧಾನಸಭೆ, ವಿಧಾನಪರಿಷತ್ ಚುನಾವಣೆಯ ಅಭ್ಯರ್ಥಿಗಳನ್ನು ಗೆಲ್ಲಿಸುವ ನಿಟ್ಟಿನಲ್ಲಿ ನಾವೆಲ್ಲ ಒಂದಾಗಿ, ಒಟ್ಟಾಗಿ ಪ್ರಯತ್ನ ಮಾಡಬೇಕು; ಸಂಪೂರ್ಣ ಶ್ರಮ ಹಾಕಬೇಕೆಂದು ಈ ಸಭೆಯಲ್ಲಿ ತೀರ್ಮಾನ ಆಗಿದೆ ಎಂದು ತಿಳಿಸಿದರು.

ಪ್ರಲ್ಹಾದ್ ಜೋಶಿ, ಗೋವಿಂದ ಕಾರಜೋಳ ಮತ್ತು ನಾನು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಎಲ್ಲ ಆಕಾಂಕ್ಷಿಗಳು, ಪಕ್ಷದ ಪ್ರಮುಖರ ಜೊತೆ ಕುಳಿತು ಚರ್ಚಿಸಿ ಹಿಂದೆ ಆಗಿದ್ದನ್ನು ಮರೆತು, ಬದಿಗಿಟ್ಟು ನಾವೆಲ್ಲ ಒಟ್ಟಾಗಿ ಚುನಾವಣೆಯಲ್ಲಿ ಗೆಲ್ಲಲು ಶ್ರಮ ಹಾಕಬೇಕೆಂದು ಆ ಸಭೆ ನಡೆಸಿದ್ದೇವೆ ಎಂದು ಹೇಳಿದರು. ಒಟ್ಟಾರೆಯಾಗಿ ಕೋರ್ ಕಮಿಟಿಯಲ್ಲಿ ಚರ್ಚೆಯಾದ ಪ್ರಕಾರ ಹೆಸರುಗಳನ್ನು ಇವತ್ತು ಅಥವಾ ನಾಳೆ ದಿಲ್ಲಿಗೆ ಕಳಿಸಿಕೊಡುತ್ತೇವೆ. ಅಸಮಾಧಾನಿತರಿಗೆ ಏನು ಹೇಳಬೇಕೋ ಅದನ್ನು ನಾಲ್ಕು ಗೋಡೆ ಮಧ್ಯೆ ಹೇಳಿದ್ದೇವೆ. ಎಲ್ಲರನ್ನೂ ಕೂರಿಸಿ ಮಾತನಾಡಿದ್ದೇವೆ ಎಂದರು.

ಕಿರುಸುದ್ದಿ

ಆದ್ಯತೆ ಮೇರೆಗೆ ಇ-ಸ್ವತ್ತು

ವಿಧಾನಸಭೆ: ಇ-ಆಸ್ತಿ ತಂತ್ರಾಂಶದಲ್ಲಿ ಉಂಟಾಗುವ ತಾಂತ್ರಿಕ ಸಮಸ್ಯೆಗಳನ್ನು ಆದ್ಯತೆಯ ಮೇರೆಗೆ ಬಗೆಹರಿಸಲಾಗುತ್ತಿದೆ. ಸ್ವತ್ತಿನ ಮಾಲೀಕರು ಇ-ಖಾತಾ ಕೋರಿ ಕರ್ನಾಟಕ ಒನ್ ಹಾಗೂ ಸಿಟಿಜನ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವ ಬೈರತಿ ಸುರೇಶ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಜ್ಯೋತಿ ಗಣೇಶ್ ಜಿ.ಬಿ ಅವರು ಇ-ತಂತ್ರಾಂಶದಲ್ಲಿನ ಲೋಪದೋಷಗಳನ್ನು ಸರಿಪಡಿಸಿ ಆಸ್ತಿಯ ಮಾಲೀಕರಿಗೆ ಇ-ಸ್ವತ್ತು ಖಾತೆ ಮಾಡಿಕೊಡಲು ಕೋರಿದರು. ಇದಕ್ಕೆ ಉತ್ತರಿಸಿದ ಸಚಿವರು, ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ರ ತಿದ್ದುಪಡಿಯಂತೆ 2024ರ ಸೆಪ್ಟೆಂಬರ್ 10ರ ಮೊದಲು ಅನಧಿಕೃತವಾಗಿ ರಚಿತವಾದ ಸ್ವತ್ತುಗಳಿಗೆ ಮಾತ್ರ ಖಾತಾ ನೀಡಲು ಇ-ಆಸ್ತಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಒಟ್ಟು ವಿಸ್ತೀರ್ಣ ನಿವೇಶನ ಅಥವಾ ಸ್ವತ್ತಿನ ಪೂರ್ಣ ಅಳತೆಯನ್ನು ನಮೂದಿಸಲು ಅವಕಾಶವಿದೆ. ಕ್ರಯಪತ್ರದಲ್ಲಿರುವಂತೆ ಅಳತೆಯನ್ನು ತಂತ್ರಾಂಶದಲ್ಲಿ ನಮೂದು ಮಾಡಬೇಕು. ಸ್ವತ್ತು ಎಂದರೆ ಖಾಲಿ ಭೂಮಿ ಅಥವಾ ಕಟ್ಟಡ ಎರಡನ್ನೂ ಒಳಗೊಂಡಿರುತ್ತದೆ ಎಂದರು.



ಹಂತ ಹಂತವಾಗಿ ತೋಟಗಾರಿಕಾ ಮಹಾವಿದ್ಯಾಲಯಗಳ ಸ್ಥಾಪನೆ

ವಿಧಾನಸಭೆ: ಕರ್ನಾಟಕ ರಾಜ್ಯದಲ್ಲಿ ಹಂತ ಹಂತವಾಗಿ ತೋಟಗಾರಿಕಾ ಮಹಾವಿದ್ಯಾಲಯಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಷಡಕ್ಷರಿ ಅವರು ತುಮಕೂರು ಜಿಲ್ಲೆ ತಿಪಟೂರಿನಲ್ಲಿ ತೋಟಗಾರಿಕೆ ಮಹಾವಿದ್ಯಾಲಯದ ಅವಶ್ಯಕತೆ ಇದೆ. ಇದಕ್ಕಾಗಿ ಸರ್ಕಾರ ಸರ್ಕಾರ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು ಕ್ರಮ ವಹಿಸ ಬೇಕೆಂದು ಕೋರಿದರು. ಇದಕ್ಕೆ ಉತ್ತರಿಸಿದ ಸಚಿವರು, ಹೊಸ ತೋಟಗಾರಿಕೆ ಮಹಾವಿದ್ಯಾಲಯಗಳನ್ನು ಸ್ಥಾಪಿಸಲು ಇರುವ ಸಾಧಕ-ಬಾಧಕಗಳನ್ನು ಪರಿಶೀಲಿಸಲು ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾ ಲಯದ ವಿಶ್ರಾಂತ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ತಿಪಟೂರು ತಾಲೂಕಿನ ಬಿದರೆಗುಡಿಕಾವಲಿ ನಲ್ಲಿ ತೋಟಗಾರಿಕೆ ಮಹಾವಿದ್ಯಾಲಯ ಸ್ಥಾಪಿಸುವುದು ಸೇರಿದಂತೆ ರಾಜ್ಯದ ವಿವಿಧ ಸ್ಥಳಗಳಲ್ಲಿ ತೋಟಗಾರಿಕೆ ಮಹಾವಿದ್ಯಾಲಯಗಳನ್ನು ಸ್ಥಾಪಿಸುವ ಬಗ್ಗೆ ಈ ಸಮಿತಿ ವಿವಿಧ ಆಯಾಮಗಳನ್ನು ಪರಿಶೀಲಿಸಿ ವರದಿ ನೀಡಿದೆ ಎಂದು ಸಚಿವರು ತಿಳಿಸಿದರು.



ಕಲಬುರಗಿಯಲ್ಲಿ ಶೀತಲೀಕರಣ ಘಟಕ: ಸಚಿವ

ವಿಧಾನಸಭೆ: ಕಲಬುರಗಿ ಜಿಲ್ಲೆಯ ಆಳಂದ ಅಥವಾ ಕಲಬುರಗಿಯಲ್ಲಿ ಶೀತಲೀಕರಣ ಘಟಕಗಳನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಅನುದಾನದ ಲಭ್ಯತೆಯನುಸಾರ ಸ್ಥಳೀಯ ಎಪಿಎಂಸಿ ಜತೆ ಚರ್ಚಿಸಿ ಘಟಕ ಸ್ಥಾಪನೆ ಮಾಡುವ ಬಗ್ಗೆ ತೀರ್ಮಾನಿಸಲಾಗುವುದು ಎಂದು ಸಚಿವ ಎಸ್.ಎಸ್. ಮಲ್ಲಿಕಾರ್ಜುನ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಲಬುರಗಿ ಜಿಲ್ಲೆಯಲ್ಲಿ 13624 ಮೆ.ಟನ್ ಸಾಮರ್ಥ್ಯವುಳ್ಳ 4 ಶಿಥಲೀಕರಣ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಅಲ್ಲದೆ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ ಯೋಜನೆಯಲ್ಲಿ ನಿರ್ಮಿಸಲು ಉತ್ತೇಜನ ನೀಡಲಾಗುತ್ತಿದೆ ಎಂದರು.

915 ಎಕರೆ ಸರ್ಕಾರ ಭೂಸ್ವಾಧೀನ: ಸಚಿವ ಎಂ.ಬಿ. ಪಾಟೀಲ್

ವಿಮಾನ ನಿಲ್ದಾಣ ನಿರ್ಮಾಣ

ವಿಧಾನಸಭೆ: ಬಳ್ಳಾರಿ, ಹೊಸಪೇಟೆ, ಹಂಪೆ, ಆನೆಗೊಂದಿ, ಸಂಡೂರು, ಕೊಪ್ಪಳ, ಕುರುಗೋಡು, ಸಿರಗುಪ್ಪ ಮುಂತಾದ ಭಾಗಗಳಿಗೆ ಅನುಕೂಲವಾಗುವಂತೆ ವಿಮಾನ ನಿಲ್ದಾಣ ಬರಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ವಿಷಯ ಪ್ರಸ್ತಾಪಿಸಿ, 2010ರಲ್ಲಿ ಬಳ್ಳಾರಿ ವಿಮಾನ ನಿಲ್ದಾಣಕ್ಕೆ ಜಾಗ ಗುರುತಿಸಿ 915 ಎಕರೆಯನ್ನು ಸರ್ಕಾರ ಭೂಸ್ವಾಧೀನ ಮಾಡಿದೆ. ಆದರೆ, 15 ವರ್ಷಗಳಾದರೂ ಇನ್ನೂ ವಿಮಾನ ನಿಲ್ದಾಣ ನಿರ್ಮಿಸಿಲ್ಲ, ಆ ಜಾಗವನ್ನು ಕೇಂದ್ರ ಸರ್ಕಾರಕ್ಕೆ ಹಸ್ತಾಂತರಿಸಿದರೆ 750 ಕೋಟಿ ರೂ. ವೆಚ್ಚದಲ್ಲಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಅದು ತಯಾರಿದೆ ಎಂದು ಹೇಳಿದರು.

ಇದಕ್ಕೆ ಉತ್ತರಿಸಿದ ಸಚಿವ ಎಂ.ಬಿ. ಪಾಟೀಲ ಅವರು, ಬಳ್ಳಾರಿ ವಿಮಾನ ನಿಲ್ದಾಣದಿಂದ ಆ ಜಿಲ್ಲೆಯ ಜೊತೆಗೆ ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ಜನರಿಗೂ ಪ್ರಯೋಜನ ಆಗಬೇಕು. ಬಳ್ಳಾರಿ ವಿಮಾನ ನಿಲ್ದಾಣದಿಂದ ನೆರೆಯ ಆಂಧ್ರಪ್ರದೇಶಕ್ಕೂ ಲಾಭವಾಗಲಿದೆ. ಈ ಯೋಜನೆಯ ಸಂಬಂಧ ಸದ್ಯದಲ್ಲೇ ಮೂರೂ ಜಿಲ್ಲೆಗಳ ಜನಪ್ರತಿನಿಧಿಗಳ ಸಭೆ ಕರೆದು, ಸಿಎಂ ಅಧ್ಯಕ್ಷತೆಯಲ್ಲಿ ಸಾಧಕ-ಬಾಧಕಗಳನ್ನು ಯೋಚಿಸಲಾಗುವುದು ಎಂದರು.

ಈಗ ಹೊಸದಾಗಿ ಗುರುತಿಸಿರುವ ಸ್ಥಳ ಬಳ್ಳಾರಿಯಿಂದ 19 ಕಿ.ಮೀ. ದೂರದಲ್ಲಿದೆ. ಅಲ್ಲಿಂದ ಹೊಸಪೇಟೆಗೆ 33 ಕಿ.ಮೀ., ಹಂಪಿಗೆ 26 ಕಿ.ಮೀ, ಸಂಡೂರಿಗೆ 33 ಕಿ.ಮೀ., ಕೊಪ್ಪಳಕ್ಕೆ 75 ಕಿ.ಮೀ., ಕುರುಗೋಡಿಗೆ 14 ಕಿ.ಮೀ., ತೋರಣಗಲ್ಲಿಗೆ 13 ಕಿ.ಮೀ. ಮತ್ತು ಸಿರಗುಪ್ಪಕ್ಕೆ 43 ಕಿ.ಮೀ. ಆಗಲಿದೆ. ಆದರೆ, ಈಗ ಗುರುತಿಸಿರುವ ಜಾಗವು ವಿಮಾನ ನಿಲ್ದಾಣಕ್ಕೆ ಎಷ್ಟರ ಮಟ್ಟಿಗೆ ಸೂಕ್ತ ಎನ್ನುವುದನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ ತೀರ್ಮಾನಿಸಬೇಕು. ಇದು ಕಾರ್ಯಸಾಧು ಎನಿಸಿದರೆ ಎಲ್ಲ ಜನಪ್ರತಿನಿಧಿಗಳ ಜತೆ ಚರ್ಚಿಸಿ ಮುಂದಿನ ಹೆಜ್ಜೆ ಇಡಲಾಗುವುದು ಎಂದು ವಿವರಿಸಿದರು.

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗುತ್ತಿತ್ತು
ವಿಮಾನ ನಿಲ್ದಾಣ ನಿರ್ಮಿಸುವಾಗಲೇ ದೂರದೃಷ್ಟಿ ಇರಬೇಕು. ಇಲ್ಲದಿದ್ದರೆ ಹುಬ್ಬಳ್ಳಿ, ಬೆಳಗಾವಿ, ಬೀದರ್ ಇಲ್ಲೆಲ್ಲ ಆಗಿರುವ ತಪ್ಪುಗಳೇ ಮುಂದುವರಿಯುತ್ತವೆ. ಬೆಳಗಾವಿ ಮತ್ತು ಹುಬ್ಬಳ್ಳಿ ವಿಮಾನ ನಿಲ್ದಾಣದ ಮಧ್ಯೆ ಕೇವಲ 70 ಕಿ.ಮೀ. ಅಂತರವಿದೆ. ಇವೆರಡೂ ಜಿಲ್ಲೆಗಳಿಗೆ ಅನುಕೂಲವಾಗುವ ಹಾಗೆ ನಡುವೆ ನಿಲ್ದಾಣ ನಿರ್ಮಿಸಿದ್ದರೆ ಪ್ರಯಾಣಿಕರ ದಟ್ಟಣೆ ಪರಿಗಣಿಸಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಘೋಷಿಸುತ್ತಿದ್ದರು. ಬೆಳಗಾವಿಯಲ್ಲಿ ಭಾರತೀಯ ವಾಯುಪಡೆ ಇರುವುದು ನಮ್ಮ ಪ್ರಯೋಜನಕ್ಕೆ ಬಂದಿದೆ ಎಂದವರು ಹೇಳಿದರು.

ವಿಜಯಪುರದಲ್ಲೂ ಇದೇ ತಪ್ಪಾಗಿದೆ. ಈಗ ಉದ್ಘಾಟನೆಗೆ ಸಜ್ಜಾಗಿರುವ ವಿಮಾನ ನಿಲ್ದಾಣ ಕಲಬುರಗಿ ರಸ್ತೆಯಲ್ಲಿದೆ. ಅದರ ಬದಲು ಆಲಮಟ್ಟಿ ಕಡೆಗೆ ಮಾಡಿದ್ದರೆ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬಾಗಲಕೋಟೆ ಮುಂತಾದ ಸ್ಥಳಗಳಿಗೆ ಪ್ರಯೋಜನ ಸಿಗುತ್ತಿತ್ತು. ವಿಮಾನ ನಿಲ್ದಾಣ ನಿರ್ಮಿಸಿದ ನಂತರ ಅದು ಸ್ತಬ್ಧವಾದರೆ ಪ್ರಯೋಜನವೇನು? ಹೀಗಾಗಿ ಬಳ್ಳಾರಿ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಕೆಐಎಡಿಬಿಯಿಂದ 800 ಮತ್ತು 1,200 ಎಕರೆ ಇರುವ ಎರಡು ಹೊಸ ತಾಣಗಳನ್ನು ನೋಡಲಾಗಿದೆ ಎಂದು ತಿಳಿಸಿದರು.

ಉಡಾನ್ ಯೋಜನೆ ವಿಸ್ತರಣೆಗೆ ಪ್ರಸ್ತಾವ

ಜಿಲ್ಲಾ ಮತ್ತು ವಿಭಾಗೀಯ ಮಟ್ಟದ ಕೇಂದ್ರಗಳಲ್ಲಿರುವ ವಿಮಾನ ನಿಲ್ದಾಣಗಳು ಇಡೀ ದೇಶದಲ್ಲಿ ತೊಂದರೆ ಎದುರಿಸುತ್ತಿವೆ. ರಾಜ್ಯದ ಬೀದರ್ ವಿಮಾನ ನಿಲ್ದಾಣ ಸದ್ಯಕ್ಕೆ ಕೆಕೆಆರ್‌ಡಿಬಿ ನೆರವಿನಿಂದ ನಡೆಯುವಂತಾಗಿದೆ. ಅದೇ ರೀತಿ ಕಲಬುರಗಿ ವಿಮಾನ ನಿಲ್ದಾಣ ಕೂಡ ಕಾರ್ಯಾಚರಣೆ ಮಾಡಬೇಕೆನ್ನುವ ಬೇಡಿಕೆ ಬಂದಿದ್ದು, ಅದನ್ನು ಮಾಡುತ್ತೇವೆ. ಹೀಗಾಗಿ ಉಡಾನ್ ಯೋಜನೆಯನ್ನು 3ರಿಂದ 5 ವರ್ಷಗಳಿಗೆ ವಿಸ್ತರಿಸಬೇಕು. ನಂತರದ ಐದು ವರ್ಷಗಳ ಕಾಲ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 50:50 ಅನುಪಾತದಲ್ಲಿ ನಿರ್ವಹಿಸಬೇಕು ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವರ ಬಳಿ ನಾನು ಪ್ರಸ್ತಾಪ ಇಟ್ಟಿದ್ದೇನೆ. ಅಲ್ಲದೇ ಕರ್ನಾಟಕದಲ್ಲಿ ವಿಮಾನ ಯಾನ ನೀತಿ ತರುವುದಕ್ಕೆ ತಯಾರಿ ನಡೆಸಲಾಗುತ್ತಿದೆ ಎಂದು ಎಂ.ಬಿ. ಪಾಟೀಲ ತಿಳಿಸಿದರು.



ಬಜೆಟ್‌ನಲ್ಲಿ ಮನೆ ಘೋಷಣೆ ಇಲ್ಲ: ಶಾಸಕ ಸುರೇಶ ಗೌಡ

ವಿಧಾನಸಭೆ: ಕಳೆದ ಮೂರು ವರ್ಷಗಳಲ್ಲಿ ಆಶ್ರಯ ಯೋಜನೆಯಡಿ ಜನರಿಗೆ ಒಂದೇ ಒಂದು ಮನೆ, ನಿವೇಶನ ನೀಡಿಲ್ಲ, ಕರಾವಳಿ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಕೋಸ್ಟಲ್ ಟೂರಿಸಂ ಕಾರಿಡಾರ್ ನಿರ್ಮಾಣದ ಬೇಡಿಕೆ ಬಗ್ಗೆ ಸರ್ಕಾರ ಬಜೆಟ್‌ನಲ್ಲಿ ಪ್ರಸ್ತಾಪಿಸಿಯೇ ಇಲ್ಲ ಎಂದು ಬಿಜೆಪಿ ಶಾಸಕ ಸುರೇಶ ಗೌಡ ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಈ ಬಾರಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಕೇವಲ 10.50 ಕೋಟಿ ರೂ. ಅನುದಾನ ಒದಗಿಸಿದೆ. ಇದು ಆನೆ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ ಎನ್ನುವಂತಾಗಿದೆ. ಈ ಹಿನ್ನೆಲೆಯಲ್ಲಿ ಕನಿಷ್ಠ 200 ಕೋಟಿ ರೂ. ಒದಗಿಸಬೇಕು. ಈ ಭಾಗದ ಜನರ ಜೀವನಾಡಿಯಾಗಿರುವ ಮತ್ಸೋದ್ಯಮಕ್ಕೂ ನಿರೀಕ್ಷಿತ ಅನುದಾನ ಸಿಕ್ಕಿಲ್ಲ, ಮತ್ಸ್ಯಾಶ್ರಯ ಯೋಜನೆಗೆ ನೀಡಿರುವ 1.20 ಲಕ್ಷ ರೂ. ಯಾವುದಕ್ಕೂ ಸಾಲದು. ಪ್ರತಿ ಕುಟುಂಬಕ್ಕೆ ಕನಿಷ್ಠ 5 ಲಕ್ಷ ರೂ. ಒದಗಿಸಬೇಕು.

ಉತ್ತರ ಕರ್ನಾಟಕದಿಂದ ವಲಸೆ ಬರುವ ಕಾರ್ಮಿಕರ ಮಕ್ಕಳ ಅನುಕೂಲಕ್ಕಾಗಿ ನಮ್ಮ ಭಾಗದಲ್ಲಿ ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗ ಗಳ ವಸತಿ ಶಾಲೆಗಳ ನಿರ್ಮಾಣಕ್ಕೆ ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.

ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಬಡವರಿಗೆ ಒಂದೇ ಒಂದು ಆಶ್ರಯ ಮನೆ, ನಿವೇಶನ ಒದಗಿಸಿಲ್ಲ, ಗ್ರಾಮೀಣ ಜನರಿಗೆ ನೀರೊದಗಿಸುವ ಜೆಜೆಎಂ ಯೋಜನೆ ಸತ್ತುಹೋಗಿದೆ. ಶಾಸಕರು ಕ್ಷೇತ್ರದಲ್ಲಿ ತಲೆ ಎತ್ತುಕೊಂಡು ತಿರುಗಾಡದ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದು ಅಸಹಾಯಕತೆಯನ್ನು ತೋಡಿಕೊಂಡ ಅವರು, ಕಳೆದ 3 ವರ್ಷಗಳಲ್ಲಿ ಘೋಷಿಸಿರುವ ಎಷ್ಟು ಯೋಜನೆಗಳನ್ನು ಜಾರಿಗೆ ತಂದಿದೆ ಎಂಬುದನ್ನು ಸರ್ಕಾರ ಸದನಕ್ಕೆ ತಿಳಿಸಬೇಕು ಎಂದು ಸವಾಲು ಹಾಕಿದರು.



> ವಿವಿಧ ದೇಶಗಳು ಕಡಲ ತೀರದಲ್ಲಿ ಸೃಷ್ಟಿಸಿರುವ ಪ್ರವಾಸೋದ್ಯಮ ಮಾದರಿಯಲ್ಲಿ ಮಂಗಳೂರು, ಉಡುಪಿ ಸೇರಿದಂತೆ ಕರಾವಳಿ ಭಾಗದಲ್ಲಿ 320 ಕಿ. ಮೀ. ಉದ್ದಕ್ಕೂ ಪ್ರವಾಸೋದ್ಯಮವನ್ನು ಉತ್ತೇಜಿಸಬೇಕು. ಪಿಪಿಪಿ ಮಾದರಿಯಲ್ಲಿ ಹೋಟೆಲ್, ರೆಸಾರ್ಟ್ ಹಾಗೂ ಹೋಂ ಸ್ಟೇಗಳನ್ನು ಸೃಷ್ಟಿಸಬೇಕು. ಅದಕ್ಕಾಗಿ ಕೋಸ್ಟಲ್ ಟೂರಿಸಂ ರೂಪಿಸಬೇಕು.
>
> ■ ಸುರೇಶ ಗೌಡ, ಬಿಜೆಪಿ ಶಾಸಕ

ವೈದ್ಯರ ವರ್ಗಾವಣೆಗೆ ಸದಸ್ಯರ ಆಕ್ರೋಶ

ವಿಧಾನಸಭೆ: ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿನ ವೈದ್ಯರ ವರ್ಗಾವಣೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ವಿಲೀನಗೊಳಿಸುವುದರ ವಿರುದ್ಧ ಪಕ್ಷಭೇದ ಮರೆತು ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪ್ರಶೋತ್ತರದ ಬಳಿಕ ಜೆಡಿಎಸ್ ಶಾಸಕಿ ಶಾರದಾ ಪೂರ್ಯನಾಯಕ್, ಶಿವಮೊಗ್ಗದಲ್ಲಿ ಸಮುದಾಯ ಆರೋಗ್ಯ ಕೇಂದ್ರದಲ್ಲಿದ್ದ ತಜ್ಞ ವೈದ್ಯರನ್ನು ತಾಲೂಕು ಆಸ್ಪತ್ರೆಗಳಿಗೆ ವರ್ಗಾವಣೆ ಮಾಡಲಾಗಿದೆ. ಹೀಗಾಗಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸರಿಯಾದ ಚಿಕಿತ್ಸೆ ಲಭಿಸುತ್ತಿಲ್ಲ, ವೈದ್ಯರನ್ನು ತಕ್ಷಣ ಕರ್ತವ್ಯದಿಂದ ಬಿಡುಗಡೆಯಾಗಿ ನಿಯೋಜಿಸಲಾದ ಸ್ಥಳದಲ್ಲಿ ವರದಿ ಮಾಡಿಕೊಳ್ಳುವಂತೆ ಬೆಂಗಳೂರಿನಿಂದ ಹಿರಿಯ ಅಧಿಕಾರಿಗಳು ಕರೆ ಮಾಡಿ, ಒತ್ತಡ ಹೇರುತ್ತಿದ್ದಾರೆ. ಈ ಬಗ್ಗೆ ಈ ಮೊದಲು ವಿಧಾನಸಭೆಯಲ್ಲಿ ಚರ್ಚಿಸಲಾಗಿತ್ತು. ಅರ್ಧ ತಾಸು ವಿಸ್ತ್ರತ ಚರ್ಚೆಗೆ ಅವಕಾಶ ನೀಡುವುದಾಗಿ ಸಭಾಧ್ಯಕ್ಷರು ಭರವಸೆ ನೀಡಿದ್ದರು. ಅದರಂತೆ ಈಗಾಗಲೇ ಚರ್ಚೆಗೆ ಅವಕಾಶ ನೀಡಿ ಎಂದು ಪಟ್ಟು ಹಿಡಿದರು.

ಇದಕ್ಕೆ ಬಿಜೆಪಿ ಶಾಸಕರಾದ ಸುನೀಲ್ ಕುಮಾರ್, ಚನ್ನಬಸಪ್ಪ, ಆರಗ ಜ್ಞಾನೇಂದ್ರ, ಕಾಂಗ್ರೆಸ್ ಶಾಸಕ ಅಶೋಕ್ ಕುಮಾರ್ ರೈ ಸೇರಿದಂತೆ ಹಲವಾರು ಮಂದಿ ಧ್ವನಿಗೂಡಿಸಿದರು. ಒಂದು ಹಂತದಲ್ಲಿ ಎಲ್ಲಾ ಶಾಸಕರು ಗದ್ದಲ ಮಾಡಿ ವೈದ್ಯರ ವರ್ಗಾವಣೆಯನ್ನು ಹಿಂಪಡೆಯಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮುಚ್ಚುವ ನಿರ್ಧಾರ ಕೈಬಿಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಸ್ವಯಂ ಪ್ರೇರಿತ ಹೇಳಿಕೆ ನೀಡಿ, ಗುರುವಾರ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿದೆ. ವೈದ್ಯರ ವರ್ಗಾವಣೆ ಮಾಡಬಾರದು ಎಂದು ಮುಖ್ಯಮಂತ್ರಿ ಅವರು ಸೂಚನೆ ನೀಡಿದ್ದಾರೆ ಎಂದರೂ ಸದಸ್ಯರು ಗದ್ದಲ ನಿಲ್ಲಿಸಲಿಲ್ಲ.

ಗೃಹ ಸಚಿವ ಪರಮೇಶ್ವರ್ ಮಧ್ಯ ಪ್ರವೇಶ ಮಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿಲೀನದ ಬಗ್ಗೆ ಸಂಪುಟದಲ್ಲಿ ಚರ್ಚೆಗಳಾಗಿವೆ. ಒಂದು ವೇಳೆ ವೈದ್ಯರ ವರ್ಗಾವಣೆಯಾಗಿದ್ದರೆ ಅವರನ್ನು ಮರಳಿ ಕೆಲಸ ನಿರ್ವಹಿಸುತ್ತಿದ್ದ ಸ್ಥಳಕ್ಕೆ ವಾಪಸ್ ಕಳುಹಿಸಲಾಗುವುದು. ಈ ಬಗ್ಗೆ ಮುಖ್ಯಮಂತ್ರಿಯವರು, ಆರೋಗ್ಯ ಸಚಿವರಿಗೆ ಸೂಚನೆ ನೀಡಿದ್ದಾರೆ. ತಾಲೂಕು ಆಸ್ಪತ್ರೆಗಳಲ್ಲಿ ಪ್ರಸೂತಿ ಮತ್ತು ಮಕ್ಕಳ ಆರೋಗ್ಯಕ್ಕೆ ಒತ್ತು ನೀಡುವಸಲುವಾಗಿ ತಜ್ಞ ವೈದ್ಯರನ್ನು ಪುನರ್ ನಿಯೋಜನೆ ಮಾಡುತ್ತಿರುವುದಾಗಿ ಆರೋಗ್ಯ ಸಚಿವರು ವಿವರಣೆ ನೀಡಿದ್ದಾರೆ. ಸದ್ಯಕ್ಕೆ ಅದ್ಯಾವುದನ್ನು ಮಾಡದಂತೆ ಮುಖ್ಯಮಂತ್ರಿ ತಿಳಿಸಿದ್ದಾರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೂ ಸೇವೆ ಮುಂದುವರಿಯಲಿದೆ ಎಂದು ತಿಳಿಸಿದರು.

ಸದಸ್ಯರು ಇದನ್ನು ಒಪ್ಪದೆ ವರ್ಗಾವಣೆ ಆದೇಶವಾಗಿರುವ ವೈದ್ಯರು ಬೇರೆಡೆ ಕರ್ತವ್ಯಕ್ಕೆ ವರದಿ ಮಾಡಿಕೊಂಡರೆ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸಮಸ್ಯೆಯಾಗುತ್ತದೆ ಎಂದು ಪ್ರತಿಪಾದಿಸಿದರು. ಕೊನೆಗೆ ಸಭಾಧ್ಯಕ್ಷರು ಮಧ್ಯಪ್ರವೇಶಿಸಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿಲೀನವನ್ನು ಕೈ ಬಿಡಲು ಮತ್ತು ವೈದ್ಯರ ವರ್ಗಾವಣೆಯನ್ನು ಸ್ಥಗಿತಗೊಳಿಸಲು ಮುಖ್ಯಮಂತ್ರಿ ಸಂಪುಟದಲ್ಲಿ ಸೂಚಿಸಿರುವುದಾಗಿ ಸಚಿವರು ಹೇಳುತ್ತಿದ್ದಾರೆ. ಸದ್ಯಕ್ಕೆ ಎಲ್ಲವೂ ಯಥಾ ಸ್ಥಿತಿಯಲ್ಲಿರಲಿದೆ ಎಂದರು.

20 ಎಕರೆಯಲ್ಲಿ ಆಧುನಿಕ ಹೂವಿನ ಮಾರುಕಟ್ಟೆ

ವಿಧಾನಸಭೆ: ಚಿಕ್ಕಬಳ್ಳಾಪುರದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯಾಪ್ತಿಯ 20 ಎಕರೆಯಲ್ಲಿ ಆಧುನಿಕ, ಸುಸಜ್ಜಿತ ಹೂವಿನ ಮಾರುಕಟ್ಟೆ ಸ್ಥಾಪಿಸಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಶರತ್ ಬಚ್ಚೇಗೌಡ ಪ್ರಶ್ನೆಗೆ ಉತ್ತರಿಸಿದ ಅವರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯ ಎಂಪಿಎಂಸಿ ಮಾರುಕಟ್ಟೆ ಪ್ರಾಂಗಣದಲ್ಲಿರುವ ಜಮೀನಿನಲ್ಲಿ ಹೂವಿನ ಮಾರುಕಟ್ಟೆ ಅಭಿವೃದ್ಧಿಪಡಿಸುವ ಯೋಜನಾ ವರದಿ ತಯಾರಿಸಲಾಗಿದ್ದು, ಸದ್ಯದಲ್ಲೇ ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಈ ಸಾಲಿನ ಬಜೆಟ್ ಭಾಷಣದಲ್ಲಿ ಚಿಕ್ಕಬಳ್ಳಾಪುರದಲ್ಲಿ ಹೂವಿನ ಮಾರುಕಟ್ಟೆ ಪ್ರಸ್ತಾವನೆ ಮಾಡಲಾಗಿದ್ದು, ಸುಮಾರು 20 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಇದಾದ ಬಳಿಕ ಹೊಸಕೋಟೆಯಲ್ಲಿ ಹೂವಿನ ಮಾರುಕಟ್ಟೆ, ಶೈತ್ಯಾಗಾರ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಒಂದು ಕಾಲದಲ್ಲಿ ನಾವು ಹೊರ ದೇಶಗಳಿಂದ ಪುಷ್ಪಗಳನ್ನು ಆಮದು ಮಾಡಿಕೊಳ್ಳುತ್ತಿದ್ದೆವು. ಈಗ ಪುಷ್ಪೋದ್ಯಮ ರಾಜ್ಯದಲ್ಲಿ ದೊಡ್ಡದಾಗಿ ಬೆಳೆದಿದ್ದು, ಪುಷ್ಪಗಳನ್ನು ರಫ್ತು ಮಾಡುವಷ್ಟು ಶಕ್ತಿ ಬಂದಿದೆ. ಸುಮಾರು 37 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಪುಷ್ಪ ಕೃಷಿ ಮಾಡಲಾಗುತ್ತಿದೆ. ರಾಜ್ಯದಲ್ಲಿ ಹೂವಿಗಾಗಿ ಸ್ವತಂತ್ರ ಮಾರುಕಟ್ಟೆ ಇಲ್ಲ, ಹಾಲಿ ಇರುವ 170 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ, ಇತರೆ ಅಧಿಸೂಚಿತ ಉತ್ಪನ್ನಗಳ ಜೊತೆಗೆ ಹೂವು ಉತ್ಪನ್ನದ ವಹಿವಾಟು ನಿಯಂತ್ರಣವಾಗುತ್ತಿದೆ ಎಂದರು.

ವಾರದಲ್ಲಿ ಸಿಲಿಂಡರ್ ಸಮಸ್ಯೆಗೆ ಪರಿಹಾರ: ಸಚಿವ ಮುನಿಯಪ್ಪ

ವಿಧಾನಪರಿಷತ್: ಹೊಟೇಲ್‌ಗಳಿಗೆ ಸಿಲಿಂಡರ್ ಪೂರೈಸಲು ಸದ್ಯದ ಮಟ್ಟಿಗೆ ದಾಸ್ತಾನಿಲ್ಲ, ಒಂದು ವಾರದಲ್ಲಿ ಸಮಸ್ಯೆ ಪರಿಹಾರವಾಗುವ ವಿಶ್ವಾಸವಿದೆ. 10 ದಿನಗಳವರೆಗೆ ಮಾಲೀಕರು ತಾಳ್ಮೆಯಿಂದ ಇರಬೇಕಾಗುತ್ತದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು. ಶೂನ್ಯ ವೇಳೆಯಲ್ಲಿ ಕಾಂಗ್ರೆಸ್‌ನ ಐವಾನ್ ಡಿಸೋಜಾ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ತೈಲ ಕಂಪನಿಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ. ಹೋಟೆಲ್‌ಗಳಿಗೆ ವಾಣಿಜ್ಯ ಗ್ಯಾಸ್ ಸಿಲಿಂಡರ್ ಅನ್ನು ಬೇಡಿಕೆಗೆ ಅನುಗುಣವಾಗಿ ಒದಗಿಸಲು ಸದ್ಯ ಆಗುತ್ತಿಲ್ಲ, ಆದರೆ ಆಸ್ಪತ್ರೆ, ಹಾಸ್ಟೆಲ್, ವಸತಿ ಶಾಲೆಗಳಿಗೆ ಗ್ಯಾಸ್ ಒದಗಿಸಲಾಗುತ್ತದೆ ಎಂದರು.

ವಾಟಾಳ್‌ಗೆ ರಾಜ್ಯೋತ್ಸವ ಪ್ರಶಸ್ತಿ

ವಿಧಾನಪರಿಷತ್: ಕರ್ನಾಟಕದಲ್ಲಿ ನೆಲ, ಜಲ, ಭಾಷೆಯ ಸಂರಕ್ಷಣೆಗೆ ಹೋರಾಟ ಮಾಡುವ ಸಂಘ ಸಂಸ್ಥೆಗಳಿಗೆ ಆರ್ಥಿಕ ಶಕ್ತಿ ಮತ್ತು ಇತರೆ ಸಂಪನ್ಮೂಲಗಳನ್ನು ನೀಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಆದರೆ, ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡಬೇಕಾಗಿದ್ದು ನಿಜ. ಈ ವರ್ಷ ಸಮಿತಿಯ ಮುಂದೆ ಈ ವಿಷಯವನ್ನು ಪ್ರಸ್ತಾಪಿಸಿ ಅವರ ಹೆಸರನ್ನು ಪರಿಗಣಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ತಿಳಿಸಿದರು.

ಶೂನ್ಯವೇಳೆಯಲ್ಲಿ ರಮೇಶ್ ಬಾಬು ಪ್ರಶ್ನೆಗೆ ಉತ್ತರಿಸಿದ ಅವರು, ವಾಟಾಳ್ ನಾಗರಾಜ್ ಅವರಂತಹ ಹಿರಿಯ ಹೋರಾಟಗಾರರು ಸೇರಿದಂತೆ ಇನ್ನೂ ಅನೇಕರಿಗೆ ಪ್ರಶಸ್ತಿ ನೀಡಬೇಕಿದೆ. ಪ್ರಸಕ್ತ ವರ್ಷ ಸಮಿತಿಯ ಮುಂದೆ ಈ ಪ್ರಸ್ತಾವನೆ ಇರಿಸಲಾಗುವುದು ಎಂದರು.

ಉತ್ತರ ನೀಡಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತಿಲ್ಲ

ಉತ್ತರ ನೀಡುವಲ್ಲಿ ಸರ್ಕಾರ ವಿಫಲ

ವಿಧಾನಪರಿಷತ್: ಸದಸ್ಯರು ಕೇಳಿದ ಹಲವಾರು ಪ್ರಶ್ನೆಗಳಿಗೆ ಇನ್ನೂ ಉತ್ತರವೇ ಬಂದಿಲ್ಲ ಎಂಬ ಸದಸ್ಯ ಭೋಜೆಗೌಡ ಅವರ ಆಕ್ಷೇಪಕ್ಕೆ ಸಹಮತ ವ್ಯಕ್ತಪಡಿಸಿದ ಸಭಾಪತಿ ಬಸವರಾಜ ಹೊರಟ್ಟಿ ಅವರು, ಉತ್ತರ ನೀಡುವಲ್ಲಿ ವಿಫಲವಾದ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.



ಉತ್ತರನೀಡಲುವಿಫಲವಾದರೆಅಧಿಕಾರಿಗಳ ಮೇಲೆ ಏಕೆ ಕ್ರಮ ಕೈಗೊಳ್ಳುತ್ತಿಲ್ಲ, ಉತ್ತರ ಕೊಡುವುದಿಲ್ಲ ಎಂದಾದರೂ ಹೇಳಿ ನಾನು ಕೇಳುವುದನ್ನೇ ಬಿಟ್ಟುಬಿಡುತ್ತೇನೆ ಎಂದು ಖಾರವಾಗಿ ನುಡಿದರು. ಆಗ ಸ್ಪಷ್ಟೀಕರಣ ನೀಡಲು ಮುಂದಾದ ಸಭಾನಾಯಕ ಎನ್. ಎಸ್. ಭೋಸರಾಜು ಅವರು, ಈಗಾಗಲೇ ಉತ್ತರಗಳನ್ನು ನಿಯಮಿತವಾಗಿ ಒದಗಿಸಲು ಅಧಿಕಾರಿಗಳಿಗೆ ಮಾಹಿತಿ ನೀಡಿದ್ದೇವೆ. ವಾರದಲ್ಲಿ ಉತ್ತರ ದೊರಕಿಸುತ್ತೇವೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಹೊರಟ್ಟಿ, ಪ್ರತಿ ಬಾರಿಯೂ ಇದನ್ನೇ ಹೇಳುತ್ತೀರಿ, ಉತ್ತರ ಕೊಡಲು ವೈಫಲ್ಯವಾದ ಅಧಿಕಾರಿಗಳ ಮೇಲೆ ಏಕೆ ಕ್ರಮ ಕೈಗೊಳ್ಳುತ್ತಿಲ್ಲ, ಈ ವಿಷಯವಾಗಿ ವಿಳಂಬ ನೀತಿ ಅನುಸರಿಸುವ ಒಂದಿಬ್ಬರು ಅಧಿಕಾರಿಗಳ ಮೇಲೆ ಮೊದಲು ಕ್ರಮಕೈಗೊಳ್ಳಿ ಎಂದು ಹೇಳಿದರು.

ಪ್ರಾರಂಭದಲ್ಲೇ ಈ ವಿಷಯ ಪ್ರಸ್ತಾಪಿಸಿದ ಸದಸ್ಯ ಭೋಜೆಗೌಡ, ಪ್ರಸಕ್ತ ಅಧಿವೇಶನದಲ್ಲಿ ಸದಸ್ಯರು 740 ಪ್ರಶ್ನೆಗಳನ್ನು ಕೇಳಿದ್ದು ಅದರಲ್ಲಿ 182 ಪ್ರಶ್ನೆಗಳಿಗೆ ಉತ್ತರವೇ ಬಂದಿಲ್ಲ, ಈ ರೀತಿ ಪ್ರಶ್ನೆಗಳಿಗೆ ಉತ್ತರವೇ ಬರದಿದ್ದರೆ ನಾವು ಪ್ರಶ್ನೆ ಏಕೆ ಕೇಳಬೇಕು ಎಂದು ಅಸಮಧಾನ ಹೊರಹಾಕಿದರು.

ಕಾನೂನು ತೊಡಕಿಲ್ಲದ ಪ್ರಶ್ನೆಗಳಿಗೆ ಉತ್ತರ

ಈ ವೇಳೆ ಮಧ್ಯ ಪ್ರವೇಶಿಸಿದ ಕಾನೂನು ಸಚಿವ ಎಚ್. ಕೆ. ಪಾಟೀಲ್, ಮಾ.20 ರಂದು ಉತ್ತರ ಬಾಕಿ ಇರುವ ಪ್ರಶ್ನೆಗಳ ಇಲಾಖೆಗಳ ಕಾರ್ಯದರ್ಶಿಗಳ ಜತೆ ಸಭೆ ನಡೆಸಲಾಗುವುದು. ಕಾನೂನು ತೊಡಕಿಲ್ಲದ ಪ್ರಶ್ನೆಗಳಿಗೆ ಮಾ.26ರ ಒಳಗೆ ಉತ್ತರ ಕೊಡಿಸಲಾಗುವುದು. ಒಂದು ವೇಳೆ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಸ್ಪಂದಿಸದಿದ್ದರೆ ಅವರ ವಿರುದ್ಧ ಸೂಕ್ತ ಕ್ರಮ ಜರುಗಿಸುವುದಾಗಿ ಪಾಟೀಲ್ ಸ್ಪಷ್ಟಪಡಿಸಿದರು.

ಸುಮ್ಮನಿದ್ದೇನೆ ಎಂದರೆ ಅದನ್ನು ನನ್ನ ಬಲಹೀನತೆ ಎಂದು ಭಾವಿಸಬೇಡಿ

ಸದನದಲ್ಲಿ ಸಚಿವರಿಗೆ ವಿಧಾನಸಭಾಧ್ಯಕ್ಷ ಎಚ್ಚರಿಕೆ

ವಿಧಾನಸಭೆ: ಶಾಸಕರು ಕೇಳುವ ಪ್ರಶ್ನೆಗಳಿಗೆ ಉತ್ತರ ಬಾರದಿದ್ದಾಗ ಸೌಮ್ಯವಾಗಿ ಹೇಳುತ್ತೇನೆಂದರೆ ಅದು ನನ್ನ ದೌರ್ಬಲ್ಯವಲ್ಲ, ಸುಮ್ಮನಿದ್ದೇನೆ ಎಂದರೆ ಅದನ್ನು ನನ್ನ ಬಲಹೀನತೆ ಎಂದು ಭಾವಿಸಬೇಡಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಸದನದಲ್ಲಿ ಸರ್ಕಾರ ಮತ್ತು ಸಚಿವರಿಗೆ ಎಚ್ಚರಿಕೆ ನೀಡಿದರು.



ಸದನದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಇಲಾಖೆಗಳಿಂದ ಸರಿಯಾಗಿ ಉತ್ತರ ಬರುತ್ತಿಲ್ಲ ಎಂಬ ಪ್ರತಿಪಕ್ಷ ಸದಸ್ಯರ ಮಾತಿಗೆ ದನಿಗೂಡಿಸಿದ ವಿಧಾನಸಭಾಧ್ಯಕ್ಷರು, ನಾನು ದಿನವೂ ಗಮನಿಸುತ್ತಿದ್ದೇನೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪೈಕಿ ಅತಿ ಕಡಿಮೆ ಪ್ರಶ್ನೆಗಳಿಗೆ ಉತ್ತರ ನೀಡಲಾಗುತ್ತಿದೆ. ಇದು ಸರಿಯಲ್ಲ, ನಾನು ಸೌಮ್ಯದಿಂದ ಹೇಳುತ್ತಿದ್ದೇನೆ, ಸುಮ್ಮನಿದ್ದೇನೆ ಎಂದರೆ ಅದನ್ನು ನನ್ನ ಬಲಹೀತನೆ ಎಂಬುದಾಗಿ ಭಾವಿಸಬೇಡಿ ಎಂದು ಸಚಿವರಿಗೆ ನೇರವಾಗಿಯೇ ಹೇಳಿದರು.

ಸದಸ್ಯರು ಉತ್ತರಕ್ಕಾಗಿ ಆಸಕ್ತಿಯಿಂದ ಪ್ರಶ್ನೆ ಕೇಳುತ್ತಾರೆ. ಯಾವುದೇ ಒಂದು ಪ್ರಶ್ನೆ ಕೇಳಿದ ನಂತರ ಉತ್ತರ ಕೊಡಲು 10 ದಿನ ಸಮಯ ಇರುತ್ತದೆ. 10 ದಿನದ ನಂತರವೂ ಉತ್ತರ ಬರುವುದಿಲ್ಲ ಎಂದರೆ ಏನರ್ಥ? ಸದಸ್ಯರು ಪ್ರಶ್ನೆ ಯಾಕೆ ಕೇಳಬೇಕು, ಅಧಿವೇಶನಕ್ಕೆ ಏನು ಅರ್ಥವಿದೆ? ಇದನ್ನೆಲ್ಲ ಕೊನೆಗೊಳಿಸಬೇಕು. ಸದನದಲ್ಲಿ ಕೇಳಿದ ಪ್ರಶ್ನೆಗಳಿಗೆ ಸದಸ್ಯರು ದುಂಬಾಲು ಬೀಳದಿದ್ದರೆ ಒಂದು ವರ್ಷವಾದರೂ ಉತ್ತರ ಬರುವುದಿಲ್ಲ, ಹೀಗಾದರೆ ಹೇಗೆ? ಇದನ್ನು ಗಂಭೀರವಾಗಿ ತೆಗೆದುಕೊಳ್ಳಿ, ಉತ್ತರ ಕೊಡಿ. ಅಧಿಕಾರಿಗಳನ್ನು ಕರೆಸಿ ಸೂಚನೆ ನೀಡಿ, ಪರಿಶೀಲನೆ ನಡೆಸಿ ಎಲ್ಲಾ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಬರುವಂತೆ ನೋಡಿಕೊಳ್ಳಿ ಎಂದು ತಾಕೀತು ಮಾಡಿದರು.

ಸದನದಲ್ಲಿ ಇದುವರೆಗೂ ಉತ್ತರ ಬಾರದ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಸಂಬಂಧ ಉಪಸಭಾಧ್ಯಕ್ಷರ ನೇತೃತ್ವದಲ್ಲಿ ಸಮಿತಿ ರಚಿಸಿದ್ದೇನೆ. ಸೋಮವಾರ ಯಾವ ಯಾವ ಇಲಾಖೆಯಿಂದ ಎಷ್ಟೆಷ್ಟು ಉತ್ತರಗಳು ಬಾಕಿ ಇವೆ ಎಂಬುದನ್ನು ಸದನದ ಮುಂದಿಡುತ್ತೇನೆ. ಉತ್ತರ ಕೊಡಲಾಗದಿದ್ದರೆ ಯಾವಾಗ ಉತ್ತರ ಕೊಡಲು ಸಾಧ್ಯ ಎಂಬುದನ್ನು ಪ್ರಶ್ನೆ ಕೇಳಿದ ಎಲ್ಲ ಶಾಸಕರಿಗೆ ಲಿಖಿತವಾಗಿ ಕೊಡಬೇಕು ಎಂದು ಸಭಾಧ್ಯಕ್ಷರು ಹೇಳಿದರು.

ಪ್ರತಿಪಕ್ಷ ನಾಯಕ ಆರ್. ಅಶೋಕ, ಈಗಾಗಲೇ ಸಭಾಧ್ಯಕ್ಷರು ಮೂರು ಬಾರಿ ಹೇಳಿದ್ದಾರೆ. ನಾಲ್ಕನೇ ಬಾರಿ ಹೇಳುವ ಸಂದರ್ಭ ಬರಬಾರದು. ಯಾವ ಇಲಾಖೆಯಿಂದ ಎಷ್ಟು ಪ್ರಶ್ನೆಗಳು ಬಾಕಿ ಇವೆ ಎಂಬ ಪಟ್ಟಿಯನ್ನು ಇಡಿ. ಕೆಲ ಅಧಿಕಾರಿಗಳು ಸೋಮಾರಿಗಳಿದ್ದಾರೆ. ಗಾಲ್ಫ್ ಆಡಲು ಹೋಗುತ್ತಾರೆ. ನಾವು ಇಲ್ಲಿ ಫುಟ್ಬಾಲ್ ಆಗಿದ್ದೇವೆ. ಸಚಿವರು ಉತ್ತರ ಕೊಡುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಶ್ನೆಗಳಿಗೆ ಉತ್ತರ ಒದಗಿಸುವ ಪ್ರಯತ್ನ: ಪರಂ

ಸರ್ಕಾರದ ಪರವಾಗಿ ಉತ್ತರ ನೀಡಿದ ಗೃಹ ಸಚಿವ ಡಾ. ಜಿ. ಪರಮೇಶ್ವರ, ಸಭಾಧ್ಯಕ್ಷರ ಮಾತುಗಳನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಮುಖ್ಯಮಂತ್ರಿಗಳು ಈಗಾಗಲೇ ಎಲ್ಲಾ ಸಚಿವರಿಗೂ ಈ ಬಗ್ಗೆ ಸೂಚನೆ ಕೊಟ್ಟಿದ್ದಾರೆ. ಅಪರೂಪಕ್ಕೆ ಸಭಾಧ್ಯಕ್ಷರು ಬಹಳ ಗಡುಸಾಗಿ ಮಾತನಾಡಿದ್ದಾರೆ. ಮುಂದಿನ ದಿನಗಳಲ್ಲಿ ಸದಸ್ಯರ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು.



ಸಂಪಾದಕೀಯ

ದಯಾಮರಣದ ಅನುಷ್ಠಾನ

ಸರ್ವೋಚ್ಚ ನ್ಯಾಯಾಲಯವು ಕಳೆದ 13 ವರ್ಷಗಳಿಂದ ಕೋಮಾದಲ್ಲಿರುವ ಹರೀಶ್ ರಾಣಾ ಎಂಬ ವ್ಯಕ್ತಿಗೆ ದಯಾಮರಣಕ್ಕೆ ಅವಕಾಶ ಕಲ್ಪಿಸುವುದರೊಂದಿಗೆ ದೇಶದ ಕಾನೂನು ವ್ಯವಸ್ಥೆಯಲ್ಲಿ ಹೊಸದೊಂದು ಅಧ್ಯಾಯ ತೆರೆದಿದೆ. 13 ವರ್ಷಗಳ ಹಿಂದೆ ಹರೀಶ್ ರಾಣಾ ಕಟ್ಟಡದಿಂದ ಕೆಳಬಿದ್ದು ಮೆದುಳಿಗೆ ಏಟು ಪಡೆದು, ಕೋಮಾ ಸ್ಥಿತಿಯಲ್ಲಿದ್ದಾನೆ. ಆತನಿಗೆ ದಯಾಮರಣ ಕಲ್ಪಿಸಬೇಕೆಂದು ಆಪ್ತ ಬಂಧುಗಳು



ನ್ಯಾಯಾಲಯದ ಮೊರೆ ಹೋಗಿದ್ದರು. ಆತ ಕೇವಲ ಜೀವರಕ್ಷಕ ವ್ಯವಸ್ಥೆಯ ಮೂಲಕವಷ್ಟೇ ಜೀವಂತವಾಗಿದ್ದಾನೆ ಎಂಬುದನ್ನು ವೈದ್ಯರಿಂದ ದೃಢಪಡಿಸಿಕೊಂಡ ನ್ಯಾಯಾಲಯವು ಜೀವರಕ್ಷಕ ವ್ಯವಸ್ಥೆಯನ್ನು ಕಿತ್ತು ಹಾಕುವ ಮೂಲಕ ದಯಾಮರಣಕ್ಕೆ ಅವಕಾಶ ಕಲ್ಪಿಸಬಹುದು ಎಂದು ತೀರ್ಪಿತ್ತಿದೆ. 'ಮನುಷ್ಯನಿಗೆ ಗೌರವದಿಂದ ಬದುಕುವ ಹಕ್ಕಿರುವಂತೆಯೇ ಗೌರವದಿಂದ ಸಾಯುವ ಹಕ್ಕೂ ಇದೆ' ಎಂಬುದಾಗಿ ನ್ಯಾಯಾಲಯವು ಅಭಿಪ್ರಾಯಿಸಿದೆ. ದಶಕದ ಹಿಂದೆಯೇ ನ್ಯಾಯಾಲಯವು ಅರುಣಾ ಶಾನ್‌ಭಾಗ್ ಪ್ರಕರಣದಲ್ಲಿ ಪರೋಕ್ಷ ದಯಾಮರಣಕ್ಕೆ ಸಮ್ಮತಿ ನೀಡಿತ್ತಾದರೂ, ಆಕೆಯನ್ನು ನೋಡಿಕೊಳ್ಳುತ್ತಿದ್ದ ಆಕೆಯ ಆಪ್ತರು ಅದಕ್ಕೆ ಸಮ್ಮತಿಸದ್ದರಿಂದ ದಯಾಮರಣವನ್ನು ಅನುಷ್ಠಾನಿಸಿರಲಿಲ್ಲ. ಹಾಗಾಗಿ ಹರೀಶ್ ರಾಣಾ ಪ್ರಕರಣವು ಭಾರತದಲ್ಲಿ ದಯಾಮರಣ ಅನುಷ್ಠಾನದ ಪ್ರಥಮ ನಿದರ್ಶನ ಎನ್ನಬಹುದು.

ದಯಾಮರಣದ ಕುರಿತಂತೆ ಬಹುಕಾಲದಿಂದಲೇ ಪರ-ವಿರೋಧ ಚರ್ಚೆ ನಡೆಯುತ್ತಿದೆ. ಕೊಲ್ಲುವ ಹಕ್ಕು ಯಾರಿಗೂ ಇಲ್ಲ ಎಂಬುದು ದಯಾಮರಣವನ್ನು ವಿರೋಧಿಸುತ್ತಿರುವವರ ವಾದವಾಗಿದೆ. ಆದರೆ ಹರೀಶ್ ರಾಣಾ ಪ್ರಕರಣದಲ್ಲಿ ನ್ಯಾಯಾಲಯವು ಜೀವರಕ್ಷಕ ವ್ಯವಸ್ಥೆಯನ್ನು ತೆಗೆದು ಆತನ ಸಾವಿಗೆ ಅವಕಾಶ ಕಲ್ಪಿಸಬಹುದು ಎಂದು ಹೇಳಿದೆಯೇ ಹೊರತು, ವಿಷದ ಔಷಧಿ ನೀಡಿ 'ಜೀವವನ್ನು ತೆಗೆಯುವ' ಕಾರ್ಯಕ್ಕೆ ಅನುಮತಿಸಿಲ್ಲ. ಸಾಯಲು ಬಯಸುವ ವ್ಯಕ್ತಿಗಳಿಗೆ ವಿಷಧ ಔಷಧ ನೀಡಿ ಜೀವನ ಕೊನೆಗಾಣಿಸಲೂ ಅವಕಾಶ ನೀಡಬೇಕು ಎಂದು ಕೆಲವರು ಪ್ರತಿಪಾದಿಸುವುದಿದೆ. ಭಾರತದಲ್ಲಿ ದಯಾಮರಣವನ್ನು ನೀಡುವ ಕಾನೂನು ಇಲ್ಲ. ನ್ಯಾಯಾಲಯವು ವಿಶೇಷ ಪ್ರಸಂಗಗಳಲ್ಲಿ ಇಂತಹ ತೀರ್ಪು ನೀಡಿದೆಯಷ್ಟೆ. ಸರಕಾರವು ಈ ನಿಟ್ಟಿನಲ್ಲಿ ಸೂಕ್ತ ಕಾನೂನು ತರುವಂತೆ ನ್ಯಾಯಾಲಯವು ಸಲಹೆ ನೀಡಿರುವುದನ್ನು ಕಡೆಗಣಿಸಲಾಗುವುದಿಲ್ಲ. ಆದರೆ ದಯಾಮರಣವನ್ನು ಕಾನೂನುಬದ್ಧಗೊಳಿಸಿದರೆ ಅದನ್ನು ದುರುಪಯೋಗ ಮಾಡುವ ಸಾಧ್ಯತೆಗಳೂ ಹೆಚ್ಚಿರುತ್ತವೆ. 'ಕೊಲೆ'ಗೆ ದಯಾಮರಣದ ಮುಖವಾಡ ತೊಡಿಸುವ ಸಾಧ್ಯತೆಗಳೂ ಇರುತ್ತವೆ. ಈ ನಿಟ್ಟಿನಲ್ಲಿ ಕಾನೂನು ತರುವ ಮುನ್ನ ಆ ಬಗ್ಗೆ ಹೆಚ್ಚಿನ ಪರಾಮರ್ಶೆಯ ಅಗತ್ಯವಿದೆ.

ವಿಶುದ್ಧ ಚಕ್ರ ಜಾಗೃತ ಆಗುವುದು ನಿಜವೇ?

ಆಧ್ಯಾತ್ಮಿಕವಾಗಿ ಬೆಳೆಯಲು ಅಪಾರ ಸಮಯ ಬೇಕು. ಅದು ನೀವು ಏನು ಮಾಡುವಿರಿ ಎನ್ನುವುದರ ಮೇಲೆ ನಿಂತಿಲ್ಲ. ನಿಮ್ಮ ಹೃದಯ ಮತ್ತು ಮಿದುಳಿನ ಕಾರ್ಯಕ್ಷಮತೆಯನ್ನು ಅವಲಂಬಿಸಿದೆ.

ಪೂರ್ಣ ಪರಿಪೂರ್ಣ

ಪೂರ್ಣಪ್ರಜ್ಞ ಬೇಲೂರು
poornaprajnabelur@gmail.com



ಬೇರೆಲ್ಲಾ ಚಕ್ರಗಳು ಜಾಗೃತವಾದಾಗ ಆಗುವ ಅನುಭವಕ್ಕಿಂತಾ ಮೇಲಿನ ಚಕ್ರಗಳು ಜಾಗೃತವಾಗುವಾಗ ಆಗುವ ಅನುಭವಗಳೇ ಬೇರೇ ರೀತಿ ಇರುತ್ತದೆ. ಹೃದಯ ಚಕ್ರದವರೆಗೆ ಅಂದರೆ ಅನಾಹತ ಚಕ್ರದವರೆಗೆ ಜಾಗೃತವಾದಾಗ ಆಗುವ ಅನುಭವಗಳು ಒಂದು ರೀತಿಯಲ್ಲಿ ಗೋಚರ ಎನ್ನುವಂತೆ ಇದ್ದರೆ, ಇನ್ನು ಮುಂದಿನ ಚಕ್ರಗಳ ಜಾಗೃತಿ ಅನುಭವಗಳು ಸೂಕ್ಷ್ಮವಾಗಿ ಇರುತ್ತವೆ. ಅತ್ಯಂತ ನಿಧಾನವಾಗಿಯೂ ಇರಬಹುದು. ನಿಮಗೆ ಗೋಚರವಾಗುವುದೇ ಇಲ್ಲ. ಕೇವಲ ಅನುಭವಕ್ಕೆ ಮಾತ್ರ ಬರುತ್ತಿರುತ್ತದೆ. ಅದಕ್ಕಾಗಿ ನೀವು ಕಠಿಣ ಪರಿಶ್ರಮ ಪಡುವುದು ಅಗತ್ಯ. ಅಥವಾ ಮೌನವಾಗಿರುವುದು ಅಗತ್ಯ.

ಬ್ರಹ್ಮ ಗಂಟು

ಉದಾಹರಣೆಗೆ ವಿಶುದ್ಧ ಜಾಗೃತವಾದಾಗ ಜನ ನಿಮ್ಮ ಕಡೆಗೆ ಆಕರ್ಷಿತರಾಗುವುದು ಸಹಜ. ಈ ಆಕರ್ಷಣೆ ಎನ್ನುವುದು ನಿಮ್ಮ ಸೌಂದರ್ಯದಿಂದ, ನಿಮ್ಮ ವ್ಯಕ್ತಿತ್ವದಿಂದ, ನಿಮ್ಮ ನಡವಳಿಕೆಯಿಂದ, ನಿಮ್ಮ ಹಾಸ್ಯ ಪ್ರವೃತ್ತಿಯಿಂದ, ನಿಮ್ಮ ಗಂಭೀರವಾದ ನೋಟದಿಂದ, ನೀವು ಧರಿಸಿದ ಉಡುಗೆ ತೊಡುಗೆಗಳಿಂದ ಅಲ್ಲ, ಅದು ಕೇವಲ ನಿಮ್ಮ ವಿಚಾರಧಾರೆಯಿಂದ, ಅದನ್ನು ನೀವು ಪ್ರಸ್ತುತ ಪಡಿಸಿದ ರೀತಿಯಿಂದ, ಹಾಗೂ ನಿಮ್ಮ ಮಾತಿನ ದಾಟಿಯಿಂದ ಎನ್ನಬಹುದು. ಹೀಗೆ ನೀವು ಇದ್ದಕ್ಕಿದ್ದಂತೆ ಅವರ ಗಮನವನ್ನು ಸೆಳೆಯುತ್ತೀರಿ ಅಥವಾ ಅವರು ನಿಮ್ಮ ಆಕರ್ಷಣೆಗೆ ಒಳಗಾಗುತ್ತಾರೆ. ಆಗ ಒಮ್ಮಿಂದೊಮ್ಮೆ ನೀವೂ ಸಹಾ ಅವರ ಪ್ರಭಾವದೊಳಕ್ಕೆ ಬೀಳುತ್ತೀರಿ. ಅವರ ಕಣ್ಣುಗಳು ನಿಮ್ಮ ಕಣ್ಣುಗಳನ್ನು ದಿಟ್ಟಿಸುತ್ತವೆ. ಆಗ ನಿಮಗೆ ತಕ್ಷಣದಲ್ಲಿ ಎಚ್ಚರವಾಗಿ ಅವರನ್ನು ನಿಮ್ಮ ಸೆಳೆತಕ್ಕೆ ಸೇರಿಸುತ್ತೀರಿ. ಇದೆಲ್ಲಾ ಆಗುತ್ತಿರುವುದು ವಿಶುದ್ಧ ಚಕ್ರದ ಜಾಗೃತಿಯಿಂದ. ಒಂದೊಮ್ಮೆ ಅವರೂ ಸಹಾ ಚಕ್ರ ಸಾಧಕರಾಗಿದ್ದರೆ ನಿಮ್ಮ ಮಾತುಗಳು ಸರಳವಾಗಿದೆ ಮತ್ತು ಸಮಯಕ್ಕೆ ತಕ್ಕುದಾಗಿದೆ ಎನ್ನುವ ಅನುಭವ ಉಂಟಾಗುತ್ತದೆ. ನೀವು ನಿರಾಳವಾಗುತ್ತೀರಿ. ತಕ್ಷಣದಲ್ಲಿ ನಿಮ್ಮ ಮುಖ ಶಾಂತಿಯನ್ನು ಸೂಸತೊಡಗುತ್ತದೆ.

ನಿಮಗೆ ಯಾರೋ ಒಬ್ಬರನ್ನು ಹೊಸದಾಗಿ ಭೇಟಿ ಮಾಡುವುದಿದೆ. ಆಗ ನೀವು ಅವರ ಬಗ್ಗೆ ತಿಳಿದುಕೊಳ್ಳುತ್ತೀರಿ. ಆಗ ನೀವು ಅರ್ಧ ಬಿದ್ದಂತೆ. ಕಾರಣ ನೀವು ನಿಮ್ಮ ಮೊದಲ ಭೇಟಿಯಲ್ಲಿ ನೋಡಿದ ವ್ಯಕ್ತಿ ಅವನಾಗಿರುವುದಿಲ್ಲ. ಅವನು ನಿಜವಾಗಿಯೂ ನಿಮ್ಮ ಮನದೊಳಗಿದ್ದ ಬೇರೆಯದೇ ಆದ ವ್ಯಕ್ತಿಯಾಗಿರುತ್ತಾನೆ; ನೀವು ಪರಿಕಲ್ಪನೆ ಮಾಡಿಕೊಂಡ ವ್ಯಕ್ತಿಯಾಗಿರುತ್ತಾನೆ. ಒಂದೊಮ್ಮೆ ಅವನು ನಿಮ್ಮ ಪರಿಕಲ್ಪನೆಗೆ ನಿಲುಕದಿದ್ದರೆ ನೀವು ಅವನ ದೂಷಣೆ ಮಾಡುತ್ತೀರಿ. ಏಕೆಂದರೆ ಅವನು ನಿಮ್ಮ ಊಹೆಯಲ್ಲಿ ಇದ್ದ ವ್ಯಕ್ತಿಯೇ ಅಲ್ಲ, ಬೇರೆಯವನು ಅಥವಾ ಅನ್ಯ. ಇಲ್ಲಿ ಅಸ್ತಿತ್ವದ ನಂಬಿಕೆ ಮತ್ತು ನಂಬದೇ ಇರುವಿಕೆಗಳ ನಡುವೆ ಹೊಡೆದಾಟ ಪ್ರಾರಂಭವಾಗುತ್ತದೆ. ನೀವು ನಂಬಿಕೆ ಇರದಿರದ ಕಡೆ ಹೋಗುತ್ತೀರಿ. ಆಗ ವಿಶುದ್ಧ ಚಕ್ರವು ನಿಮ್ಮ ಸಹಾಯಕ್ಕೆ ಬರುತ್ತದೆ. ಅದರಿಂದಾಗಿ ನಿಮ್ಮಲ್ಲಿ ನಂಬಿಕೆಯ ಮೇಲಿನ ವಿಶ್ವಾಸ ಹೆಚ್ಚಿ ನೀವು ವಾಸ್ತವದ ಕಡೆ ನಡೆಯುತ್ತೀರಿ. ಆ ಸಮಯದಲ್ಲಿ ನಿಮ್ಮ ಕೊರಳಿಗೆ ಎಕೆ-47 ಇಟ್ಟರೂ ನೀವು ಅಂಜದೇ ನಗತೊಡಗುತ್ತೀರಿ. ಹೀಗೆ ನೀವು ನಿಮ್ಮನ್ನು ಗೆದ್ದಿರುತ್ತೀರಿ. ಮತ್ತು ಅವರನ್ನೂ ಸಹಾ ಗೆದ್ದಿರುತ್ತೀರಿ.

ನಿಮ್ಮೊಳಗೆ ಒಂದೊಮ್ಮೆ ಸಂದೇಹವಿದ್ದರೆ ಅದನ್ನು ನೀವು ವ್ಯಕ್ತಪಡಿಸುವ ಮೊದಲೇ ಪರಿಹಾರ ಸಹಾ ನಿಮಗೆ ಅಲ್ಲಿಯೇ ಗೋಚರಿಸುತ್ತದೆ. ಹೀಗಾಗಿ ನಿಮ್ಮ ಪ್ರತಿಕ್ರಿಯೆ ಸಕಾರಾತ್ಮಕವಾಗಿ ಇರುತ್ತದೆ. ನಿಮ್ಮ ಅಸ್ತಿತ್ವದ ಮೇಲಿನ ನಂಬಿಕೆ ಹೆಚ್ಚುತ್ತದೆ. ನೀವು ಮತ್ತು ಅವರು ಪರಸ್ಪರ ನಂಬಲು ಪ್ರಾರಂಭಿಸುತ್ತೀರಿ. ಇದು ಇಡೀ ಸಭೆಯನ್ನೇ ಸಂಮೋಹನಗೊಳಿಸುವ ಕ್ರಿಯೆಯಾಗಿರುತ್ತದೆ. ನಿಮ್ಮ ಮಾತೆಲ್ಲವೂ ಅಂತರಾಳದಿಂದ ಬಂದ ಕಾರಣ ಅವರೆಲ್ಲರೂ ಯಾವುದೇ ವಿರೋಧವಿಲ್ಲದೇ ಒಪ್ಪತೊಡಗುತ್ತಾರೆ.

ನೀವು ಇಂತಹಾ ಅನುಭವಕ್ಕೂ ಮೊದಲು ಬೇಕಾದಷ್ಟು ಸವಾಲುಗಳನ್ನು ಎದುರಿಸಿ ಅನುಭವ ಹೊಂದಿದ ಕಾರಣ ನೀವು ಯಾವುದೇ ಪ್ರಶ್ನೆ ಬಂದರೂ ತಕ್ಷಣ ಅದನ್ನು ಅರ್ಥ ಮಾಡಿಕೊಂಡು ಉತ್ತರಿಸಲು ತೊಡಗುತ್ತೀರಿ ಮತ್ತು ಸಮಾಧಾನವನ್ನೂ ನೀಡುತ್ತೀರಿ. ಮೊಂಡುವಾದ ಮಾಡುವವರನ್ನು ಗೊಂದಲಕ್ಕೆ ಸಿಲುಕಿಸುವುದೂ ಸಹಾ ನಿಮಗೆ ಪ್ರೀತಿಯ ಅಭ್ಯಾಸ. ಹೀಗೆ ನಿಮ್ಮ ನಗು ನಿಮ್ಮ ಮುಖದಿಂದ ಮಾಸುವುದೇ ಇಲ್ಲ. ನಿಮ್ಮ ಸ್ವರ ತಗ್ಗುವುದೇ ಇಲ್ಲ.

ವಿಷ್ಣು ಗಂಟು

ನೀವೀಗ ಬದಲಾಗಿದ್ದೀರಿ. ಎಲ್ಲವನ್ನೂ ನೀವು ಕರುಣೆಯಿಂದ ನೋಡಲು ಕಲಿತಿದ್ದೀರಿ. ನಿಮ್ಮೊಳಗೆ ಅಪಾರವಾದ ಶಕ್ತಿ ಇರುವುದು ನಿಮ್ಮ ಅರಿವಿಗೆ ಬಂದಿದೆ. ನೀವು ನಿಮ್ಮ ಸುತ್ತಲಿನ ಪರಿಸರ, ಜೀವಿಗಳು, ಬ್ರಹ್ಮಾಂಡ ಹೀಗೆ ಎಲ್ಲದರೊಂದಿಗೂ ಸೌಹಾರ್ದ ಸಂಬಂಧ ಹೊಂದಿದ್ದೀರಿ ಎನ್ನುವುದೂ ಸಹಾ ನಿಮ್ಮ ಅರಿವಿಗೆ ಬಂದಿದೆ. ನೀವೀಗ ಕೇವಲ ಪ್ರೀತಿ ಸ್ವರೂಪರು. ನೀವು ಅವರ ಎಲ್ಲಾ ಅನುಮಾನಗಳನ್ನು ಗುಣಪಡಿಸಬಲ್ಲಿರಿ. ಅವರ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಬಲ್ಲಿರಿ. ನೀವು ಅವರ ಎಲ್ಲಾ ನೋವುಗಳನ್ನು ಶಮನ ಮಾಡಬಲ್ಲಿರಿ. ನೀವು ಅವರನ್ನು ಹೊಸ ವ್ಯಕ್ತಿಯನ್ನಾಗಿ ಮಾಡಬಲ್ಲಿರಿ.

ನೀವೀಗ ನಿಮ್ಮ ಕಣ್ಣುಗಳನ್ನು ಬಳಸುವುದನ್ನು ಕಲಿಯಿರಿ; ಆಗ ಸಂಮೋಹನ ಸುಲಭವಾಗುತ್ತದೆ. ನೀವು ನಿಮ್ಮ ಮುಖವನ್ನು ಬಳಸುವುದನ್ನು ಕಲಿಯಿರಿ; ಆಗ ಅವರನ್ನು ಸೆಳೆಯುವುದು ಸುಲಭವಾಗುತ್ತದೆ. ನೀವು ನಿಮ್ಮ ದೇಹವನ್ನು ಬಳಸುವುದನ್ನು ಕಲಿಯಿರಿ; ನಿಮ್ಮ ಕೆಲಸ ಸುಲಭವಾಗುತ್ತದೆ. ನೀವು ಪರಿಶುದ್ಧ; ಪಾರದರ್ಶಕ. ಪ್ರಾಮಾಣಿಕ. ಅದಕ್ಕಾಗಿ ನಿಮ್ಮ ಮನಸ್ಸು ಇನ್ನೊಬ್ಬರ ಮನಸ್ಸನ್ನು ಸುಲಭವಾಗಿ ಓದಬಲ್ಲದು. ನೆನಪಿಡಿ ನೀವು ಲೌಕಿಕದಲ್ಲಿ ಇದ್ದೀರಿ; ಅದಕ್ಕಾಗಿ ನಿಮ್ಮ ಶುದ್ಧತೆ ಸ್ವಲ್ಪ ಸಮಯದ್ದು, ಅನಿರ್ದಿಷ್ಟ ಅವಧಿಯದ್ದು, ಕ್ಷಣಿಕವಾದದ್ದು. ಅದಕ್ಕಾಗಿ ನೀವು ನಿಮ್ಮ ನಿರಂತರತೆಯನ್ನು ಕಾಯ್ದುಕೊಳ್ಳಬೇಕು. ನಿಮ್ಮ ಮಟ್ಟವನ್ನು ಉಳಿಸಿಕೊಳ್ಳಲು ಸತತ ಅನುಷ್ಠಾನವನ್ನು ಮಾಡಬೇಕು.

ನೀವು ಎಲ್ಲವನ್ನೂ ಹೊಂದಿದ್ದೀರಿ ಎಂದು ಭಾವಿಸಿದರೆ ಅಲ್ಲಿಂದ ನಿಮ್ಮ ಅವನತಿ ಪ್ರಾರಂಭವಾಗುತ್ತದೆ. ನೀವು ಗದ್ದಲದ ಮಧ್ಯೆ ಸಿಕ್ಕಿಕೊಳ್ಳುತ್ತೀರಿ. ನಿಮ್ಮ ಮತ್ತು ಸಭೆಯ ನಡುವೆ ವಾದ ನಡೆಯುತ್ತದೆ. ಅದು ವಿಕೋಪಕ್ಕೆ ಹೋಗುತ್ತದೆ. ನಿಮ್ಮ ಶಕ್ತಿ ವ್ಯಯವಾಗುತ್ತದೆ. ನೀವು ಸೋತು ಸೊಪ್ಪಾಗುತ್ತೀರಿ. ಬಾಡಿಹೋಗುತ್ತೀರಿ. ಅದೇ ನೀವು ತಟಸ್ಥವಾಗಿದ್ದರೆ; ನಿಮ್ಮ ರೂಪಾಂತರ ಎಲ್ಲರಿಗೂ ಗೋಚರವಾಗುತ್ತದೆ. ಅಲ್ಲೊಂದು ಮೌನ ಉಂಟಾಗುತ್ತದೆ. ಶಾಂತಿ, ನೆಮ್ಮದಿ ಇರುತ್ತದೆ. ಸುಸ್ಥಿರತೆ ಕಾಣಿಸುತ್ತದೆ. ಅಲ್ಲಿರುವುದು ನೀವೇ ಆದರೂ ನೀವಲ್ಲವೇನೋ ಎನ್ನುವ ಅನುಭವವೂ ಆಗುತ್ತದೆ.

ರುದ್ರ ಗಂಟು

ನೀವೀಗ ಸ್ಥಿರವಾದ ನಿಲುವನ್ನು, ವ್ಯಕ್ತಿತ್ವವನ್ನು, ಮನಸ್ಸನ್ನು ಹೊಂದಿದವರು. ನಿಮ್ಮಲ್ಲಿ ಯಾವುದೇ ದ್ವಂದ್ವ ಇಲ್ಲ. ನಿಮ್ಮ ಮಾತಿಗೆ ನೀವು ಬದ್ಧರು. ನಿಮ್ಮ ಅಸ್ತಿತ್ವಕ್ಕೆ ಬದ್ಧರು. ನೀವು ಈಗ ನಿಮ್ಮದೊಂದೇ ದೃಷ್ಟಿಯಿಂದಲ್ಲ, ಎಲ್ಲರ ದೃಷ್ಟಿಯಿಂದಲೂ ನೋಡುವುದನ್ನು ಕಲಿತಿದ್ದೀರಿ. ಹಾಗಾಗಿ ನೀವು ಒಂದೇ ವ್ಯಕ್ತಿಯಲ್ಲ; ಬಹುಮುಖಿಗಳು. ವಿಭಿನ್ನವಾದ ಆಯಾಮಗಳು ನಿಮಗೆ ಗೋಚರವಾಗಲು ತೊಡಗುತ್ತದೆ. ನೀವೀಗ ಎಲ್ಲವನ್ನೂ ಸಮಾನವಾಗಿ ತೆಗೆದುಕೊಳ್ಳಬಲ್ಲ ಆಧ್ಯಾತ್ಮಿಕರಾಗಿದ್ದೀರಿ. ನಿಮ್ಮೊಳಗಿನ ಸಾಕ್ಷಿಯನ್ನು ಯಾವಾಗಲೂ ಎಚ್ಚರದಿಂದ ಇಟ್ಟುಕೊಳ್ಳುತ್ತೀರಿ. ಯಾವುದೇ ಪೂರ್ವಾಗ್ರಹವಿಲ್ಲದೇ ಇರಬಲ್ಲಿರಿ. ನಿಮ್ಮೊಳಗಿನ ಉಪಪ್ರಜ್ಞೆ ಸದಾ ಎಚ್ಚರದಿಂದ ಇರುತ್ತದೆ. ನಿಮ್ಮ ಜೀವನದ ಉದ್ದೇಶ ಮತ್ತು ಸ್ಪಷ್ಟತೆ ನಿಮ್ಮ ಅರಿವಿಗೆ ಬಂದಿರುತ್ತದೆ. ನೀವು ಎಲ್ಲವನ್ನು ಸರಿಯಾಗಿಯೇ ಅದಿರುವಂತೆಯೇ ನೋಡಬಲ್ಲಿರಿ, ಅಥವಾ ಅವೆಲ್ಲಾ ನೈಜವಾಗಿಯೇ ಗೋಚರಿಸುತ್ತವೆ.

ನಿಮ್ಮ ಪೀಡಿತ ಮನಸ್ಸು ಮರಣ ಹೊಂದಿದೆ. ನಿಮ್ಮ ಅಹಂಕಾರ ಸತ್ತು ಹೋಗಿದೆ. ನಿಮ್ಮ ಅರಿಷಡ್ ವರ್ಗಗಳು ನಿರ್ನಾಮವಾಗಿವೆ. ಸುಳ್ಳು ಮತ್ತು ಭ್ರಮೆಗಳು ನಿಮ್ಮನ್ನು ಬಿಟ್ಟು ಓಡಿಹೋಗಿವೆ. ನೀವೀಗ ವಾಸ್ತವವಾದಿಗಳು, ಸಮನ್ವಯಕರು, ನ್ಯಾಯ ಚಿಂತಕರು, ಸಮಾಧಾನಿಗಳು, ಸುಸ್ಥಿರರು, ಶಾಂತಿದೂತರು.....ನೀವೀಗ ಮೊದಲ ಬಾರಿಗೆ ನಿಮ್ಮ ಆತ್ಮವನ್ನು ಭೇಟಿ ಮಾಡುತ್ತೀರಿ. ಮತ್ತು ಅದನ್ನು ನೋಡುತ್ತೀರಿ ಮಾತ್ರ. ಅಲ್ಲಿ ಗಂಡು ಹೆಣ್ಣು ಎನ್ನುವುದೇ ಇಲ್ಲ. ಅಲ್ಲಿ ಯಾವುದೂ ಎರಡು ಇಲ್ಲ; ಅಂದರೆ ಸತ್ಯ-ಸುಳ್ಳು, ನೋವು-ನಲಿವು, ಕಷ್ಟ-ಸುಖ, ಒಳಿತು-ಕೆಡುಕು, ಮೇಲು-ಕೀಳು ಹೀಗೆ ಯಾವುದೂ ಇಲ್ಲ. ಎಲ್ಲವೂ ಮಾಯವಾಗಿವೆ. ಮತ್ತು ನಿಮಗೆ ಅವೆಲ್ಲಾ ಇತ್ತು ಎಂದೂ ಸಹಾ ಅನಿಸುತ್ತಲೇ ಇಲ್ಲ.

ಆದರೆ ನಿಮ್ಮ ವಿಶುದ್ಧ ಚಕ್ರವು ತೆರೆಯಲು ನೀವು ಎಲ್ಲದರಿಂದ ಮುಕ್ತವಾಗಬೇಕು. ಆಧ್ಯಾತ್ಮಿಕವಾಗಿ ಬೆಳೆಯಲು ಅಪಾರವಾದ ಸಮಯ ಬೇಕು. ಅದು ನೀವು ಏನು ಮಾಡುವಿರಿ ಎನ್ನುವದರ ಮೇಲೆ ನಿಂತಿಲ್ಲ. ನಿಮ್ಮ ಹೃದಯ ಮತ್ತು ಮಿದುಳಿನ ಕಾರ್ಯಕ್ಷಮತೆಯನ್ನು, ಸಮನ್ವಯತೆಯನ್ನು ಅವಲಂಬಿಸಿದೆ. ನಿಮ್ಮೊಳಗಿನ ನೀವು ಮಾತ್ರ ಸಾರ್ವತ್ರಿಕ ಸತ್ಯ. ಅದು ಸುಲಭದಲ್ಲಿ ಅರಿವಾಗುವ ಸಂಗತಿಯಲ್ಲ. ಆಧ್ಯಾತ್ಮಿಕ ಸಾಧನೆ ಕಠಿಣವಾಗಿರುತ್ತದೆ. ನಿಯಂತ್ರಣದಲ್ಲಿ ಇರುತ್ತದೆ. ಪ್ರಯತ್ನ ಮಾತ್ರ ಇದನ್ನು ಸಾಧ್ಯವಾಗಿಸುತ್ತದೆ. ಪರಿಶ್ರಮ ಮಾತ್ರ ನಿಮಗೆ ಜ್ಞಾನವನ್ನು ನೀಡುತ್ತದೆ. ಜ್ಞಾನೋದಯವೇ ನಿಮ್ಮ ಗುರಿಯಾಗಿರುತ್ತದೆ.

ಬಡವನಾಗಿ ಸಾಯುವುದು ತಪ್ಪು

ಅಕಿಂಚನೋ ಜಾಯತೇ ಚೇತ್ ನರೋನ್ನೈವಾಪರಾಧ್ಯತಿ ।
ನೂನಂ ತಸ್ಯಾಪರಾಧೋಽಸ್ತಿ ಮ್ರಿಯತೇ ಚೇದಕಿಂಚನ ॥ -ಸುವಚನಶತಕಂ

ಬಡವನಾಗಿ ಹುಟ್ಟಿದರೆ ಅದು ಮನುಷ್ಯನ ತಪ್ಪಲ್ಲ. ಆದರೆ ಬಡವನಾಗಿ ಸತ್ತರೆ ಅದು ಅವನದೇ ತಪ್ಪು - ಎಂಬುದು ಶ್ಲೋಕಾರ್ಥ.

ಹುಟ್ಟು ಸಾವುಗಳೆರಡೂ ನಮ್ಮ ಕೈಯಲ್ಲಿಲ್ಲ. ಭಗವಂತನ ಸಂಕಲ್ಪದಂತೆ ಒಂದು ದಿನ ಹುಟ್ಟಿ ಇನ್ನೊಂದು ದಿನ ಸಾಯುತ್ತೇವೆ. ಆದರೆ ಹುಟ್ಟು ಸಾವುಗಳ ನಡುವಿನ ಬದುಕು ನಮ್ಮ ಕೈಯಲ್ಲಿದೆ. ಬದುಕನ್ನು ಎತ್ತರಕ್ಕೆ ಕೊಂಡೊಯ್ಯುವುದಕ್ಕೂ ಅಧಃಪತನಕ್ಕೆ ಒಯ್ಯುವುದಕ್ಕೂ ನಾವೇ ಕಾರಣವಾಗುತ್ತೇವೆ. ಧರ್ಮಯುಕ್ತ ಬದುಕಿಗೂ ಅಧರ್ಮದ ಬದುಕಿಗೂ ನಾವೇ ಕಾರಣರಾಗುತ್ತೇವೆ. ಧರ್ಮದ ನಡೆ ಉನ್ನತಿಗೆ ಕಾರಣವಾದರೆ ಅಧರ್ಮದ ನಡೆ ಅವನತಿಗೆ ಕಾರಣ.

ಶ್ಲೋಕ ಸಾಗರ

ಡಾ.ಸೋಂದಾ ಭಾಸ್ಕರ ಭಟ್

ಹುಟ್ಟು ಎಲ್ಲಾಗುತ್ತದೆ? ಶ್ರೀಮಂತನ ಮನೆಯಲ್ಲೂ ಹುಟ್ಟಬಹುದು. ಬಡವನ ಮನೆಯಲ್ಲೂ ಹುಟ್ಟಬಹುದು. ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಶ್ರೀಮಂತ ಬದುಕನ್ನೇ ಬಾಳಬೇಕು. ಇದ್ದದ್ದನ್ನೆಲ್ಲ ಕಳೆದು ತಿರುಪೆ ಎತ್ತುವ ಮಟ್ಟಕ್ಕಿಳಿಯಬಾರದು. ಇರುವ ಮಟ್ಟದಿಂದ ಮೇಲಕ್ಕೆ ಇರಬೇಕು. ಆಗಲೇ ಹುಟ್ಟಿದ್ದು ಸಾರ್ಥಕ. ಬಡವನಾಗಿ ಹುಟ್ಟಿದರೆ ಅದು ಅವನ ತಪ್ಪಲ್ಲ. ಬಡವನಾಗಿಯೇ ಸತ್ತರೆ ಅದು ಅವನ ತಪ್ಪು. ಬಡವನಾದರೂ ಸಾಧಿಸಿ ಉನ್ನತ ಮಟ್ಟಕ್ಕೆ ಏರಿದವರ ಜೀವನ ಗಾಥೆ ಸಾಕಷ್ಟಿದೆ. ಇದು ಬಡವನಿಗೆ ಪ್ರೇರಣೆಯಾಗಬೇಕು. ತಾನು ಬಡವ ಎಂದುಕೊಂಡೇ ಬದುಕಿದರೆ ಪ್ರಯೋಜನವಿಲ್ಲ. ಬಡತನದ ಮೂಲವನ್ನು ಶೋಧಿಸಿ, ಅದರಿಂದ ಹೊರಬರಬೇಕು. ಇದಕ್ಕೆ ಪ್ರಾಮಾಣಿಕತೆ, ಪರಿಶ್ರಮ, ಅಧ್ಯಯನ, ವ್ಯವಹಾರ ಚತುರತೆ ಇವೆಲ್ಲವೂ ಬೇಕಾಗುತ್ತದೆ.

ಉತ್ತಮ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ನೂರಾರು ಮಾರ್ಗಗಳಿವೆ. ಅದನ್ನು ಕಂಡುಕೊಳ್ಳಬೇಕು. ಪ್ರಾಮಾಣಿಕ ಪರಿಶ್ರಮ ಚೆಲ್ಲುವವನಿಗೆ ಶ್ರೀಮಂತನಾಗುವುದಕ್ಕೆ, ಬಡತನದಿಂದ ಹೊರಬರುವುದಕ್ಕೆ ಸಾಕಷ್ಟು ಮಾರ್ಗಗಳಿವೆ. ಸನ್ನಿವೇಶವನ್ನು ಅರ್ಥ ಮಾಡಿಕೊಂಡು ಮುಂದುವರಿಯಬೇಕು. ಬಡತನವನ್ನೇ ಜಪಿಸುತ್ತ ತನ್ನನ್ನೇ ಹಳಿದುಕೊಳ್ಳುತ್ತ ದಿನವನ್ನು ಕಳೆಯುವವನು ಉದ್ಧಾರನಾಗಲಾರ.

ಹೀಗೊಂದು ಘಟನೆಯನ್ನು ಹೇಳುತ್ತಾರೆ. ತಂದೆ ಕುಡುಕ, ತಾಯಿ ಪರಿಶ್ರಮಿ. ಅವರಿಗೆ ಇಬ್ಬರು ಮಕ್ಕಳು. ಗಂಡ ಯಾವಾಗಲೂ ದುಡಿದ ಹಣವನ್ನು ಮದ್ಯದಂಗಡಿಗೆ ಹಂಚುತ್ತಿದ್ದ. ನಿತ್ಯವೂ ಕುಡಿದು ಬಂದು ಹೆಂಡತಿ, ಮಕ್ಕಳಿಗೆ ಬಡಿಯುತ್ತಿದ್ದ. ಇದನ್ನು ನೋಡಿ ಮಕ್ಕಳಿಬ್ಬರೂ ಬೆಳೆದರು. ಅವರಲ್ಲಿ ಒಬ್ಬ ತಂದೆಯಂತೆ ಕುಡುಕನಾದ. ಒಬ್ಬ ಶ್ರೀಮಂತನಾದ. ಕುಡುಕ ಮಗನಲ್ಲಿ 'ನೀನು ಹೀಗಾಗಲು ಕಾರಣವೇನು?' ಎಂದು ಕೇಳಲು 'ತಂದೆಯೇ ಇದಕ್ಕೆ ಕಾರಣ. ತಂದೆ ಓದಿಸಲಿಲ್ಲ. ಅವನನ್ನು ನೋಡಿ ನಾನು ಅವನಂತಾದೆ. ತಂದೆ ಒಳ್ಳೆಯವನಾಗಿದ್ದರೆ ನಾನೂ ಒಳ್ಳೆಯವನಾಗುತ್ತಿದೆ'' ಎಂದ.

ಶ್ರೀಮಂತನಾದ ಮಗನಲ್ಲಿ ನಿನ್ನ ಈ ಸ್ಥಿತಿಗೆ ಕಾರಣ ಯಾರು? ಎಂದು ಕೇಳಲು 'ತಂದೆಯೇ ಕಾರಣ' ಎಂದ. 'ಹೇಗೆ' ಎಂದು ಕೇಳಿದಾಗ ಆತ ತಂದೆಯ ''ದುರಭ್ಯಾಸ, ದುರ್ನಡತೆ, ಕುಡಿತದ ಚಟ, ಜನರು ಮಾಡುವ ಅಪಹಾಸ್ಯಗಳನ್ನು ನೋಡಿ, ನಾನೆಂದೂ ಹೀಗಾಗಬಾರದು, ಸಾಧಿಸಬೇಕು ಎಂದು ಸಂಕಲ್ಪ ಮಾಡಿ ಓದಿ, ದುಡಿದ ಕಾರಣದಿಂದಾಗಿ ಹೀಗಾದೆ. ಹೀಗಾಗಲು ತಂದೆ ಕಾರಣ'' ಎಂದ.

ಭಗವಂತ ಬುದ್ಧಿ ಕೊಟ್ಟಿದ್ದಾನೆ. ವಿವೇಕವಿತ್ತಿದ್ದಾನೆ. ಲೋಕ ವಿಶಾಲವಾಗಿದೆ. ದುಡಿಯುವವನಿಗೆ ಕೈತುಂಬ ಕೆಲಸವಿದೆ. ಆದ್ದರಿಂದ ಶ್ರಮ ವಹಿಸಿ ದುಡಿದು ಬಡತನದಿಂದ ಹೊರಬರಬೇಕು. ಜೀವನದಲ್ಲಿ ಸಾಧಿಸಬೇಕು. ಹೀಗೆ ಮಾಡದಿದ್ದರೆ ಅದು ಅವನದೇ ತಪ್ಪು.

ಯುಗಾದಿ: ಹಿಂದು ಹೊಸವರ್ಷ

ಒಳನೋಟ

ಹೆ.ಬಾ. ಮಲ್ಯ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರಿಗೆ ಯುಗಾದಿ ಎರಡು ದೃಷ್ಟಿಯಿಂದ ಮಹತ್ವದ್ದಾಗಿದೆ. ಯುಗಾದಿ ಹಿಂದುಗಳ ಹೊಸವರ್ಷದ ದಿನ ಎಂಬುದು ಒಂದು. ಎರಡನೆಯದು ಸಂಘ ಸಂಸ್ಥಾಪಕ ಡಾಕ್ಟರ್ ಹೆಡ್ಗೇವಾರರ ಜನ್ಮದಿನವೂ ಯುಗಾದಿಯಂದೇ. ಸಂಘ ಆಚರಿಸುವ ಆರು ಉತ್ಸವಗಳಲ್ಲಿ ಯುಗಾದಿ ಉತ್ಸವ ಬಹಳ ಮಹತ್ವದ್ದು. ಡಾಕ್ಟರ್‌ಜೀ ಓರ್ವ ಯುಗಪುರುಷ ಎಂಬುದರಲ್ಲಿ ಸಂಶಯವಿಲ್ಲ. ಸಾವಿರ ವರ್ಷಗಳ ಸಂಘರ್ಷದಿಂದ ಸೋತು ಮಲಗಿದ್ದ ಹಿಂದು ಸಮಾಜವನ್ನು ಸಂಘಟಿಸಿ ಮತ್ತೆ ಅದರಲ್ಲಿ ಹೊಸ ಚೈತನ್ಯ, ಆತ್ಮವಿಶ್ವಾಸ ತುಂಬಿದ ಮಹಾನ್ ವ್ಯಕ್ತಿ ಡಾಕ್ಟರ್‌ಜೀ. ಸಂಘದಲ್ಲಿ ವ್ಯಕ್ತಿ ಆರಾಧನೆಯ ಪದ್ಧತಿ ಇಲ್ಲದಿದ್ದರೂ ಅಂಥ ಯುಗ ದ್ರಷ್ಟಾರನನ್ನು ಸ್ಮರಿಸುವುದು ಸೂಕ್ತವಾಗಿದೆ.

ನೂರು ವರ್ಷಗಳ ಹಿಂದೆ ಡಾಕ್ಟರ್‌ಜೀ ಸಂಘ ಸ್ಥಾಪನೆ ಮಾಡಿ ಹಿಂದೂ ಸಂಘಟನೆಯ ಕಾರ್ಯದಲ್ಲಿ ತೊಡಗಿದರು. ಅನಂತರ ಅವರು ಬದುಕಿದ್ದು 15 ವರ್ಷ ಮಾತ್ರ. ಆದರೆ ಅಷ್ಟರೊಳಗೆ ಸಂಘ ಕಾರ್ಯವನ್ನು ಸಣ್ಣ ರೂಪದಲ್ಲಾದರೂ ದೇಶಾದ್ಯಂತ ವಿಸ್ತರಿಸುವುದರಲ್ಲಿ ಯಶಸ್ವಿಯಾದರು. ಅವರ ಅದ್ಭುತ ಕಾರ್ಯಶೈಲಿ ಹಾಗೂ ಅವರ ನಿಷ್ಠೆ, ಪರಿಶ್ರಮ, ಪ್ರಾಮಾಣಿಕತೆ ಇದಕ್ಕೆ ಕಾರಣ. ನಂತರ ನೂರಾರು ಕಾರ್ಯಕರ್ತರು ಅವರ ಜೀವನದಿಂದ ಪ್ರೇರಣೆ ಪಡೆದು ಪೂರ್ಣಾವಧಿ ಪ್ರಚಾರಕರಾದರು. ಸಂಘ ಕಾರ್ಯವನ್ನು ಬೆಳೆಸಿದರು. ದೇಶದಲ್ಲಿ ಮಾತ್ರವಲ್ಲ ವಿದೇಶಗಳಲ್ಲೂ ಸಂಘ ಕಾರ್ಯ ವಿಸ್ತರಿಸಿತು. ಹಿಂದು ತರುಣ ಪೀಳಿಗೆಯಲ್ಲಿ ಮತ್ತೆ ಹಿಂದುತ್ವದ ಬಗ್ಗೆ ಜಾಗೃತಿ ಮೂಡಿತು. ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ಕಾರ್ಯಕರ್ತರು ಸಂಘಟನೆಗಳನ್ನು ಕಟ್ಟಿ ಆಯಾ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾದರು.

ದೇಶದ ರಾಜಕೀಯ ಕ್ಷೇತ್ರದಲ್ಲಿ ಕೂಡಾ ಅದ್ಭುತ ಪ್ರಗತಿ ಆಗಿರುವುದನ್ನು ನಾವೆಲ್ಲರೂ ಕಾಣಬಹುದು. ಸಂಘದ ಪ್ರಚಾರಕ ನರೇಂದ್ರ ಮೋದಿಯವರು ಪ್ರಧಾನಿಯಾಗಿ ಅದ್ಭುತ ಕಾರ್ಯ ಮಾಡಿದ್ದಾರೆ. ಸಂಘ ನೂರು ವರ್ಷಗಳಲ್ಲಿ ಏನು ಸಾಧಿಸಿದೆ ಎಂದು ಕೇಳುವವರಿಗೆ, ಒಂದು ವೇಳೆ ಅಂದು ಡಾಕ್ಟರ್‌ಜೀ ಸಂಘ ಪ್ರಾರಂಭಿಸದೇ ಹೋಗಿದ್ದರೆ ಇಂದು ದೇಶದ ಪರಿಸ್ಥಿತಿ ಏನಾಗುತ್ತಿತ್ತು? ಎಂದು ಮರು ಪ್ರಶ್ನೆ ಕೇಳಬೇಕು. ಸಂಘ ಇಲ್ಲದೇ ಹೋಗಿದ್ದರೆ ಮೋದಿ ಪ್ರಧಾನಿಯಾಗುತ್ತಿರಲಿಲ್ಲ. ಮೋದಿ ಪ್ರಧಾನಿಯಾಗದೇ ಹೋಗಿದ್ದರೆ ಇಂದು ದೇಶದ ಆಡಳಿತ ಸೂತ್ರ ಯಾರ ಕೈಯಲ್ಲಿರುತ್ತಿತ್ತು ಎಂಬುದನ್ನು ಯೋಚಿಸಬೇಕು.

ಡಾಕ್ಟರ್‌ಜೀಯವರು ಸಂಘದ ತತ್ವ-ಸಿದ್ಧಾಂತಗಳನ್ನು ಮಾತ್ರ ಬೋಧಿಸಿದ್ದಲ್ಲ, ಪ್ರತ್ಯಕ್ಷ ಆದರ್ಶಗಳನ್ನು ಯುವ ಪೀಳಿಗೆಯ ಮುಂದಿಟ್ಟು ಹೋದರು. ಆ ಕಾಲದಲ್ಲಿ ಮಸೀದಿ ಮುಂದೆ ಹಿಂದುಗಳು ವಾದ್ಯ ಬಾರಿಸಿಕೊಂಡು ಹೋಗುವಂಥ ಪರಿಸ್ಥಿತಿ ಇರಲಿಲ್ಲ. ಡಾಕ್ಟರ್‌ಜೀ ಸ್ವತಃ ಡೋಲು ಬಾರಿಸುತ್ತಾ ಸ್ವಯಂಸೇವಕರೊಂದಿಗೆ ಮೆರವಣಿಗೆಯಲ್ಲಿ ಮಸೀದಿಯ ಮುಂದೆ ಸಾಗುವ ಧೈರ್ಯ ತೋರಿದರು. ಕಟುಕನೊಬ್ಬ ಕಸಾಯಿಖಾನೆಗೆ ಹಸುವನ್ನು ಕೊಂಡು ಹೋಗುತ್ತಿದ್ದುದನ್ನು ನೋಡಿ ಅವನೊಂದಿಗೆ ವಾದ ಮಾಡಿ ಆ ಹಸುವನ್ನು ಬಿಡಿಸಿಕೊಂಡರು. ಅದರ ಬೆಲೆಯನ್ನು ಅವನಿಗೆ ತನ್ನ ಜೇಬಿನಿಂದ ತೆತ್ತರು. ಲಕ್ಷ್ಮೀಪೂಜೆಯ ಸಂದರ್ಭದಲ್ಲಿ ಪ್ರತಿವರ್ಷ ವ್ಯಾಪಾರಸ್ಥರು ಅಂಗಡಿಯಲ್ಲಿ ಹಣದ ನೋಟುಗಳು, ಚಿನ್ನಾಭರಣ ಇಟ್ಟು ಪೂಜೆ ಮಾಡುವುದು ಪದ್ಧತಿ. ಅಂದು ಮುಸ್ಲಿಂ ಗೂಂಡಾಗಳು ಅಂಗಡಿಗಳ ಮೇಲೆ ದಾಳಿ ಮಾಡಿ ಹಣ-ಚಿನ್ನಾಭರಣಗಳನ್ನು ದೋಚಿಕೊಂಡು ಪರಾರಿಯಾಗುತ್ತಿದ್ದರು. ಅವರನ್ನು ತಡೆಯುವ ಧೈರ್ಯ ಯಾರಿಗೂ ಇರಲಿಲ್ಲ. ಒಂದು ವರ್ಷ ಡಾಕ್ಟರ್‌ಜೀ ತರುಣ ಸ್ವಯಂಸೇವಕರನ್ನು ಸಂಘಟಿಸಿ ದಂಡ (ಲಾಠಿ)ಗಳೊಂದಿಗೆ ಗಲ್ಲಿಯಲ್ಲಿ ನಿಲ್ಲಿಸಿದರು. ಗೂಂಡಾಗಳು ದೋಚಲು ಬರುತ್ತಿದ್ದಂತೆ ಏಕಾಏಕಿ ಅವರ ಮೇಲೆ ಮುಗಿಬಿದ್ದು ದಂಡದ ರುಚಿ ತೋರಿಸಿದರು. ಅಂದಿನಿಂದ ಗೂಂಡಾಗಳ ಉಪಟಳ ನಿಂತು ಹೋಯಿತು. 1930ರಲ್ಲಿ ಬ್ರಿಟಿಷರ ವಿರುದ್ಧ ಸತ್ಯಾಗ್ರಹ ಮಾಡಿ ಜೈಲಿಗೆ ಹೋದರು. ಒಂದು ವರ್ಷ ಸೆರೆವಾಸ ಅನುಭವಿಸಿದರು. ಹೀಗೆ ತಮ್ಮ ಸ್ವಂತ ಮೇಲ್ಪಂಕ್ತಿಯಿಂದ ಸ್ವಯಂಸೇವಕರಲ್ಲಿ ಧೈರ್ಯ, ಪ್ರೇರಣೆ, ತ್ಯಾಗದ ಮನೋಭಾವನೆ ತುಂಬಿದರು. ಇವು ಸಾಂಕೇತಿಕ ಎನಿಸಿದರೂ ತರುಣರಿಗೆ ಬಲವಾದ ಸಂದೇಶಗಳಾದವು. ಹೀಗೆ ಡಾಕ್ಟರ್‌ಜೀ ದೂರದೃಷ್ಟಿ ಇಟ್ಟುಕೊಂಡು ಆರಂಭಿಸಿದ ಸಂಘ ಇಂದು ಜಗತ್ತಿನಲ್ಲೇ ಬಲಿಷ್ಠ ಸ್ವಯಂಸೇವಕ ಸಂಘಟನೆ ಎಂಬ ಖ್ಯಾತಿ ಪಡೆದಿದೆ.

ಯುಗಾದಿ ಮಹತ್ವ

ಯುಗಾದಿ ಹೊಸ ಸಂವತ್ಸರದ ಆರಂಭವಷ್ಟೇ ಅಲ್ಲದೆ ಖಗೋಳ ಶಾಸ್ತ್ರದ ದೃಷ್ಟಿಯಿಂದಲೂ ಮಹತ್ವ ಪಡೆದಿದೆ. ಪ್ರಾಚೀನ ಋಷಿಗಳು ಖಗೋಳ ಶಾಸ್ತ್ರದಲ್ಲಿ ಬಹಳ ಮುಂದಿದ್ದರು. ಕಾಲ ಗಣನ ವಿಜ್ಞಾನಕ್ಕೆ ಭದ್ರವಾದ ಅಡಿಗಲ್ಲನ್ನು ಹಾಕಿಟ್ಟರು. ಭಾರತದಿಂದಲೇ ಈ ಕಾಲಗಣನ ವಿಜ್ಞಾನ ಜಗತ್ತಿನ ಇತರ ದೇಶಗಳಿಗೆ ಹರಡಿತು.

ಭಾರತೀಯರ ಹೊಸ ವರ್ಷ ಆರಂಭವಾಗುವುದು ಜನವರಿ ಒಂದರಿಂದಲ್ಲ, ಯುಗಾದಿಯಿಂದ. ಹಿಂದೂ ಪಂಚಾಂಗವು ಗ್ರಹ, ನಕ್ಷತ್ರ, ಭೂಮಿಗಳ ಚಲನೆಯ ಆಧಾರದ ಮೇಲೆ ರಚಿತವಾಗುತ್ತದೆ. ಪಾಶ್ಚಾತ್ಯರದು ಕೃತಕ ಕಾಲಮಾನ. ಪ್ರಕೃತಿಯ ವಿದ್ಯಮಾನಗಳಿಗೂ ಅದಕ್ಕೂ ಸಂಬಂಧವಿಲ್ಲ. ಅನುಕೂಲತೆ ದೃಷ್ಟಿಯಿಂದ ಸದ್ಯಕ್ಕೆ ಅದನ್ನೇ ಅನುಸರಿಸುವುದರಲ್ಲಿ ತಪ್ಪೇನಿಲ್ಲ. ಅದೊಂದು ಅನಿವಾರ್ಯತೆ. ಆದರೆ ಭಾರತೀಯರಿಗೆ ಸ್ವದೇಶಿ ಕಾಲಗಣನೆಯ ಜ್ಞಾನ ಇರಬೇಕಾದದ್ದು ಅಗತ್ಯ. ಎಲ್ಲಾ ಹಬ್ಬ- ಹರಿದಿನ, ಗ್ರಹಣ, ಶ್ರಾದ್ಧ, ಹೋಮ, ಹವನ, ಯಾಗ, ಯಜ್ಞಗಳು, ಮದುವೆ, ಮುಂಜಿ, ಗೃಹಪ್ರವೇಶಗಳು ಮುಹೂರ್ತಕ್ಕೆ ಸರಿಯಾಗಿ ಇಂದಿಗೂ ನಡೆಯುತ್ತಿರುವುದು ಸಮಾಧಾನಕರ ಸಂಗತಿ.

ಯುಗಾದಿಯಿಂದ ವಸಂತ ಋತು ಆರಂಭವಾಗುತ್ತದೆ. ಈ ಬಾರಿ ಮಾರ್ಚ್ 19ರಂದು ಚಾಂದ್ರಮಾನ ಯುಗಾದಿ. ಏಪ್ರಿಲ್ 15ರಂದು ಸೌರಮಾನ ಯುಗಾದಿ. ವಸಂತ ಋತುವಿನಲ್ಲಿ ಆಹ್ಲಾದಕರ ವಾತಾವರಣವಿರುತ್ತದೆ. ಪ್ರಕೃತಿ ಮತ್ತೆ ಹಸಿರಿನಿಂದ ಕಂಗೊಳಿಸುತ್ತದೆ. ಹೂವು-ಹಣ್ಣುಗಳು ಬಿಡುವ ಕಾಲ. ಪ್ರಕೃತಿಯಲ್ಲಿ ಒಂದು ಆಹ್ಲಾದಕರ ಪರಿವರ್ತನೆಯ ಕಾಲ. ಅದಕ್ಕಾಗಿಯೇ ಪೂರ್ವಜರು ಯುಗಾದಿಯನ್ನು ವರ್ಷಾರಂಭ ಎಂದು ಪರಿಗಣಿಸಿದರು. ಅಂದು ಬೇವುಬೆಲ್ಲ ಸ್ವೀಕರಿಸುವುದು ವಾಡಿಕೆ. ಮುಂಬರುವ ಜೀವನದಲ್ಲಿ ಸಿಹಿ-ಕಹಿಗಳೆರಡನ್ನೂ ಸಮಾನವಾಗಿ ಸ್ವೀಕರಿಸಬೇಕೆಂಬ ಸಂದೇಶವನ್ನು ಯುಗಾದಿ ಹಬ್ಬ ನೀಡುತ್ತದೆ.

ಸೂರ್ಯ ದಕ್ಷಿಣದಿಂದ ಉತ್ತರಕ್ಕೆ ಚಲಿಸುತ್ತಾ ಯುಗಾದಿಯಂದು ಭೂಮಧ್ಯ ರೇಖೆಯನ್ನು ತಲುಪುತ್ತಾನೆ. ಹಗಲು ಮತ್ತು ರಾತ್ರಿಯದ್ದು ಸಮಾನ ಅವಧಿ. ಇದನ್ನು ವಸಂತ ವಿಷುವ ಎನ್ನುತ್ತಾರೆ. 72 ವರ್ಷಗಳಿಗೊಮ್ಮೆ ಅಯನಬಿಂದು (Equinox) ವಿಷುವದ್ ವೃತ್ತದ ಮೇಲೆ ಒಂದು ಡಿಗ್ರಿಯಷ್ಟು ಅಂದರೆ ಒಂದು ದಿನದಷ್ಟು ಹಿಂದಕ್ಕೆ ಸರಿಯುತ್ತದೆ. ಇದು ಭೂಮಿಯ ಮೂರನೇ ಬಗೆಯ ಚಲನೆ. ಇದನ್ನು ಅಯನ ಚಲನೆ ಎನ್ನುತ್ತಾರೆ. ಈ ಹಿಂಸರಿತ (Precession)ದ ಕಾರಣ ಆರ್ಯಭಟನ ಕಾಲದಲ್ಲಿದ್ದ (ಕ್ರಿ.ಶ. 500) ಅಯನ ಬಿಂದು ಈ ಒಂದೂವರೆ ಸಾವಿರ ವರ್ಷದಲ್ಲಿ ಸುಮಾರು 22 ದಿನಗಳಷ್ಟು ಹಿಂದೆ ಸರಿದಿದೆ. ಅಂದರೆ ಉತ್ತರಾಯಣ ಬಿಂದು ಮಕರ ಸಂಕ್ರಾಂತಿಯಂದು ಇರದೆ ಧನುರ್ಮಾಸಕ್ಕೆ ಹಿಂದೆ ಸರಿದು ಡಿಸೆಂಬರ್ 21ಕ್ಕೆ ಹೋಗಿದೆ. ಅದೇ ರೀತಿ ಸೌರ ಯುಗಾದಿ ಮಾರ್ಚ್ 21ರಂದು ಘಟಿಸುತ್ತದೆ. ಮೊದಲು ಏಪ್ರಿಲ್ 14ರಂದು ಅಂದರೆ ಮೇಷ ಸಂಕ್ರಮಣದಂದು ಘಟಿಸುತ್ತಿತ್ತು.

ಚಾಂದ್ರಮಾನ ಪ್ರಕಾರ ಚೈತ್ರ ಮಾಸದ ಪ್ರಥಮ ತಿಥಿಯಂದು ಯುಗಾದಿ. ಅಶ್ವಿನಿ ನಕ್ಷತ್ರವೂ ಅಂದೇ ಅಥವಾ ಒಂದು ದಿನ ಆಚೆ ಈಚೆ ಇರುತ್ತದೆ. ಚೈತ್ರ ಮಾಸವು ಸಂವತ್ಸರದ ಮೊದಲ ಮಾಸ. ಅಶ್ವಿನಿ ಮೊದಲ ನಕ್ಷತ್ರ. ಈ ಬಾರಿ ವಿಶ್ವಾವಸು ಸಂವತ್ಸರ ಕಳೆದು ಪರಾಭವ ಸಂವತ್ಸರ ಕಾಲಿಡುತ್ತದೆ. ಸಂಕ್ರಮಣ ಎಂದರೆ ಮೇಷ, ವೃಷಭ ರಾಶಿಗಳಿಗೆ ಸಂಬಂಧಿಸಿದ ವಿದ್ಯಮಾನ. ಅವುಗಳು ಬದಲಾಗುವುದಿಲ್ಲ. ಏಕೆಂದರೆ ರಾಶಿಗಳು ಸ್ಥಿರ. ಅವುಗಳ ಸ್ಥಾನಗಳು ಬದಲಾಗುವುದಿಲ್ಲ. ಆದರೆ ಅಯನ ಬಿಂದುಗಳು ಹಿಂಸರಿತದ ಕಾರಣದಿಂದ ಸ್ಥಾನಪಲ್ಲಟವಾಗುತ್ತವೆ. ಹಿಂದೆ ಉತ್ತರಾಯಣ, ದಕ್ಷಿಣಾಯನ ಕ್ರಮವಾಗಿ ಮಕರ ಸಂಕ್ರಾಂತಿ, ಕರ್ಕಾಟಕ ಸಂಕ್ರಾಂತಿಯಂದೇ ಬರುತ್ತಿದ್ದವು. ಇಂದು ಅಯನ ಮತ್ತು ಸಂಕ್ರಾಂತಿಯ ನಂಟು ಮುರಿದಿದೆ. ಇಂದಿನ ಆಕಾಶದ ಚಿತ್ರ ಅಂದಿಗಿಂತ ಬದಲಾವಣೆಯಾಗಿದೆ. ಇಂದು ದೂರದರ್ಶಕಗಳಿವೆ. ಅವುಗಳ ಮೂಲಕ ಆಕಾಶವನ್ನು ಪರಾಂಬರಿಸಿದರೆ ಈ ಬದಲಾವಣೆ ಗೋಚರವಾಗುತ್ತದೆ. ಈ ಬದಲಾವಣೆ ಮನುಷ್ಯ ಮಾಡಿದ್ದಲ್ಲ. ಪ್ರಕೃತಿಯೇ ಮಾಡಿರುವಂಥದ್ದು. ವಿಜ್ಞಾನವು ಪ್ರಕೃತಿಯನ್ನು ಅನುಸರಿಸಿ ನಡೆಯಬೇಕಾಗುತ್ತದೆ.

ಹಿಂದಿನವೈಜ್ಞಾನಿಕ ಗ್ರಂಥಗಳಾದ ಸೂರ್ಯಸಿದ್ಧಾಂತ, ಆರ್ಯಭಟೀಯ, ಬೃಹತ್ ಸಂಹಿತೆ ಮುಂತಾದವುಗಳಲ್ಲಿ ದಾಖಲಾದ ಸಂಗತಿಗಳು ಕಳೆದ ಸಹಸ್ರಾರು ವರ್ಷಗಳಲ್ಲಿ ಬದಲಾಗಿವೆ. ಕಾಲಕಾಲಕ್ಕೆ ಈ ಸಿದ್ಧಾಂತಗಳಲ್ಲಿ ಪರಿಷ್ಕರಣೆ ಆಗಬೇಕಾದುದು ಅಗತ್ಯ. ಸುದೀರ್ಘ ಸಂಘರ್ಷದ ದೆಸೆಯಿಂದ ಈ ಕಾರ್ಯ ನಡೆಯಲಿಲ್ಲ. ಈಗಲಾದರೂ ಜ್ಯೋತಿಷಿಗಳು, ಮಠಾಧಿಪತಿಗಳು, ಆಧುನಿಕ ಖಗೋಳ ವಿಜ್ಞಾನಿಗಳು ಒಂದೆಡೆ ಕಲೆತು ಚರ್ಚಿಸಿ ಸೂಕ್ತ ಪರಿಷ್ಕರಣೆ ಮಾಡುವ ಅಗತ್ಯವಿದೆ.

ಈ ಬಾರಿ ಮಾರ್ಚ್ 19ರಂದು ಅಮಾವಾಸ್ಯೆ ಬಂದಿದೆ. ಯುಗಾದಿ ಅದರ ಮರುದಿನ ಪಾಡ್ಯದಂದು ಬರಬೇಕಾಗಿತ್ತು. ಆದರೆ ಅಮಾವಾಸ್ಯೆ ಅಂದು ಇರುವುದು ಮುಕ್ಕಾಲು ಗಳಿಗೆ (18 ನಿಮಿಷ) ಮಾತ್ರ. ಸೂರ್ಯೋದಯದಲ್ಲಿ ಯಾವ ತಿಥಿ ಇರುತ್ತದೋ ಅಂದು ಇಡೀ ದಿನ ಅದೇ ತಿಥಿ ಎಂದು ಪರಿಗಣಿಸಬೇಕೆಂಬುದು ಸಾಮಾನ್ಯ ನಿಯಮ. ಆದರೆ ಅಂದು ನಂತರ ಇಡೀ ದಿನ ಚೈತ್ರ ಶುದ್ಧ ಪ್ರತಿಪದೆ ಇರುತ್ತದೆ, ಮಾತ್ರವಲ್ಲ ಮರುದಿನ ಸೂರ್ಯೋದಯದೊಳಗೆ ಮುಕ್ತಾಯವಾಗುತ್ತದೆ. ಮರುದಿನ ಸೂರ್ಯೋದಯಕ್ಕೆ ಬಿದಿಗೆ ಇರುತ್ತದೆ. ಹಾಗಾಗಿ 19ರಂದು ಚಾಂದ್ರ ಯುಗಾದಿ ಆಚರಣೆ.

'ಹವ್ಯಕ' ಪತ್ರಿಕೆಯ ವಜ್ರಮಹೋತ್ಸವ: ಸಮುದಾಯ ಮಾಧ್ಯಮವೊಂದರ ಸಾರ್ಥಕ ಪಯಣ

ಒಂದು ಸಂಸ್ಥೆಯ ಅಭಿವೃದ್ಧಿ ಪಥದಲ್ಲಿ ಪತ್ರಿಕೆಗಳ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಹವ್ಯಕ ಮಹಾಸಭೆ ಇಷ್ಟೊಂದು ಎತ್ತರಕ್ಕೆ ಬೆಳೆದು ಹೆಸರು ಗಳಿಸಿದ್ದರ ಹಿಂದೆ ಪತ್ರಿಕೆಯ ಪಾಲು ದೊಡ್ಡದಿದೆ.

ನಾರಾಯಣ ಭಟ್ ಹುಳೇಗಾರು



ವಿಶಿಷ್ಟ ಸಂಸ್ಕೃತಿ, ಮೌಲ್ಯಗಳಿಂದ ತನ್ನದೇ ಆದ ಛಾಪು ಮೂಡಿಸಿ ಸಾವಿರಾರು ವರ್ಷಗಳಿಂದ ಕನ್ನಡ ನೆಲದಲ್ಲಿ ನೆಲೆ ನಿಂತ ಒಂದು ಜನಾಂಗ ಹವ್ಯಕ ಸಮಾಜ. ಒಂದು ಅಪೂರ್ವ ಭಾಷೆಯನ್ನು, ವಿಶಿಷ್ಟ ತಳಿಯನ್ನು ಹೊಂದಿದ ಈ ಜನಾಂಗ ಸಂಘಟನೆಯ ದೃಷ್ಟಿಯಿಂದ ಬೆಂಗಳೂರಿನಲ್ಲಿ 1943ರಲ್ಲಿ ಶ್ರೀ ಅಖಿಲ ಹವ್ಯಕ ಮಹಾಸಭೆಯನ್ನು ಹುಟ್ಟುಹಾಕಿತು. ಇದೊಂದು ಪ್ರಾತಿನಿಧಿಕ ಸಂಸ್ಥೆಯಾಗಿ ಸಾರ್ಥಕ 82 ವಸಂತಗಳನ್ನು ಪೂರೈಸಿ ಸಮಾಜಕ್ಕೆ ಆತ್ಮವಿಶ್ವಾಸವನ್ನು ತುಂಬುವಲ್ಲಿ ತನ್ನೆಲ್ಲಾ ಶ್ರಮ ಹಾಕಿದೆ.

ಇದರ ಮುಖವಾಣಿಯಾಗಿ ಕಳೆದ ಅರವತ್ತು ವರ್ಷಗಳಿಂದ ನಿರಂತರವಾಗಿ ಪ್ರಕಟಗೊಳ್ಳುತ್ತಿರುವ 'ಹವ್ಯಕ ಪತ್ರಿಕೆ'ಯು ಇದೀಗ ವಜ್ರಮಹೋತ್ಸವ ಸಂಭ್ರಮದಲ್ಲಿದೆ. ಹವ್ಯಕ ಸಮಾಜದ ಚಿಂತನೆ, ನಡೆನುಡಿ, ಸಂಸ್ಕೃತಿ, ಸಂಪ್ರದಾಯ, ಸಂಸ್ಕಾರ, ಕೃಷಿ, ಸಾಹಿತ್ಯ, ಕಥೆ, ಕವನ ಮತ್ತು ಸಾಮಾಜಿಕ ಜಾಗೃತಿಗೆ ತನ್ನನ್ನು ತೆರೆದುಕೊಂಡ ಒಂದು ಮಹತ್ವಪೂರ್ಣ ಆಕರ ಸಂಚಿಕೆಯಾಗಿದೆ.

1966 ಜೂನ್ 1ರಂದು ಆರಂಭವಾದ ಈ ಪತ್ರಿಕೆ, 60 ವರ್ಷಗಳ ಕಾಲ ನಿರಂತರವಾಗಿ ಸಮಾಜದ ಧ್ವನಿಯಾಗಿ, ಮೌಲ್ಯಗಳ ಪ್ರತಿನಿಧಿಯಾಗಿ ಹಾಗೂ ಸಾಂಸ್ಕೃತಿಕ ಕೊಂಡಿಯಾಗಿಯೇ ಉಳಿದಿದೆ. ಆರಂಭಿಕ ದಿನಗಳಲ್ಲಿ ಪತ್ರಿಕೆ ತ್ರೈಮಾಸಿಕವಾಗಿ ಪ್ರಕಟವಾಗುತ್ತಿತ್ತು. ಅಚ್ಚು ಮೊಳೆ ಜೋಡಿಸಿ ಮುದ್ರಣ ಮಾಡಬೇಕಾಗಿತ್ತು. ಸೀಮಿತ ಸಂಪನ್ಮೂಲಗಳು, ವಿತರಣೆಯ ಅಡಚಣೆಗಳು ಮತ್ತು ಕಾಲದ ತಾಂತ್ರಿಕ ನಿರ್ಬಂಧಗಳ ನಡುವೆಯೂ ಅಖಿಲ ಮಹಾಸಭೆಯ ಮುಖವಾಣಿಯಾಗಿ ಡಿಜಿಟಲ್ ಮುದ್ರಣ ಪತ್ರಿಕೆಗೊಂದು ಹೊಸ ರೂಪವನ್ನು ತಂದಿತು. ಸಂಸ್ಥೆ ಬೆಳೆದಂತೆ, ಸಂಪರ್ಕ ಹೆಚ್ಚಿದಂತೆ 1981 ಜೂನ್ 1ರಿಂದ ಮಾಸ ಪತ್ರಿಕೆಯಾಗಿ ನಿರಂತರವಾಗಿ ಪ್ರಕಟವಾಗುತ್ತಾ ಬಂದಿದೆ. ಈ ರೂಪಾಂತರವು ವಿಷಯ ವೈವಿಧ್ಯತೆ, ಕಾಲಪ್ರಜ್ಞೆ ಮತ್ತು ಓದುಗರ ಸಂಪರ್ಕವನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಸಮಾಜದ ಆಗುಹೋಗುಗಳ ಬಗ್ಗೆ ಸೂಕ್ಷ್ಮ ದೃಷ್ಟಿಯನ್ನು ಬೀರಿ ಸಮುದಾಯಕ್ಕೆ ಸಮಾಚಾರವನ್ನು ತಲುಪಿಸುವ, ಹವ್ಯಕ ಮನಸ್ಸುಗಳನ್ನು ಸಾಂಸ್ಕೃತಿಕವಾಗಿ ಮುಟ್ಟುವ, ಗಟ್ಟಿಗೊಳಿಸುವ ಒಂದು ಸಮರ್ಥ ಮಾಧ್ಯಮವಾಗಿ ತನ್ನನ್ನು ತೆರೆದುಕೊಂಡಿದೆ.

ಇಂತಹ ಪತ್ರಿಕೆಗಳಲ್ಲಿ ಮುಖ್ಯವಾಗಿ 2 ವಿಧ. ಒಂದು ವ್ಯವಸಾಯಿ (ವಾಣಿಜ್ಯ) ಪತ್ರಿಕೆಗಳು. ಮತ್ತೊಂದು ಹವ್ಯಕದಂತಹ ಸಂಘ ಸಂಸ್ಥೆಗಳಿಂದ ಪ್ರಕಟವಾಗುವ



ಅದರ ಮುಖವಾಣಿ. ಹವ್ಯಕದ ಉದ್ದೇಶ ಹಣ ಗಳಿಕೆಯಲ್ಲ. ಈ ರೀತಿಯ ಪತ್ರಿಕೆಗಳು ಆರ್ಥಿಕ ಮಿತಿ, ಲೇಖನಗಳ ಮಿತಿ, ಲೇಖಕರ ಮಿತಿ, ಓದುಗರ ಮಿತಿ, ಪುಟಗಳ ಮಿತಿ, ಅಂಚೆ ಮಿತಿ ಇತ್ಯಾದಿ ಮಿತಿಗಳ ನಡುವೆ ಕೆಲಸ ಮಾಡಬೇಕಾಗುತ್ತದೆ. ಆದರೂ ಅದನ್ನು ಸವಾಲಾಗಿ ಸ್ವೀಕರಿಸಿದ ಹವ್ಯಕ ಪತ್ರಿಕೆ ಮೌಲಿಕವಾಗಿ ತನ್ನನ್ನು ಗುರುತಿಸಿಕೊಳ್ಳುತ್ತಾ ನಿರಂತರವಾಗಿ ಪ್ರಕಟವಾಗುತ್ತಿರುವುದು ಸಮಾಜಮುಖಿ ಸಂಸ್ಥೆಯ ಮೇಲಿನ ಅಭಿಮಾನದಿಂದ ಮತ್ತು ಅರ್ಥಪೂರ್ಣ ಕಾರ್ಯಕ್ರಮಗಳಿಂದ. ಇಂದು ಅನೇಕ ದೊಡ್ಡದೊಡ್ಡ ಸಂಸ್ಥೆಗಳಿಂದ ಪ್ರಕಟವಾಗುತ್ತಿರುವ ಪತ್ರಿಕೆಗಳು ತನ್ನ ರೆಗ್ಯುಲಾರಿಟಿಯನ್ನು ಕಳೆದುಕೊಂಡು ಸ್ಥಗಿತಗೊಂಡ ಉದಾಹರಣೆಗಳೇ ಹೆಚ್ಚು. ಆದರೆ 'ಹವ್ಯಕ' ಒಂದು ಸೀಮಿತ ಜನಾಂಗದ ಧ್ವನಿಯಾಗಿ ತನ್ನ ನಿರಂತರತೆಗೆ ಎಂದೂ ಬ್ರೇಕ್ ಹಾಕಿಲ್ಲ. ಸಾಮಾಜಿಕ ಪ್ರಜ್ಞೆಯನ್ನು ತನ್ನ ಪುಟ ಪುಟಗಳಲ್ಲಿ ಕಟ್ಟಿಕೊಡುತ್ತಾ 60 ಅನ್ನು ತುಂಬಿಕೊಂಡು, ಪ್ರತಿ ತಿಂಗಳು ಸುಮಾರು 30 ಸಾವಿರ ಕುಟುಂಬಗಳಿಗೆ ತಲುಪುತ್ತಿರುವುದು ಹೆಮ್ಮೆಯ ಸಂಗತಿ. ಕೇವಲ 3-4 ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಜನಾಂಗದ ಸಂಸ್ಥೆಯಾಗಿದ್ದರೂ ಹವ್ಯಕ ಪ್ರಜ್ಞೆಯನ್ನು ಕಟ್ಟಿಕೊಡುವಲ್ಲಿ ಇಟ್ಟ ಹೆಜ್ಜೆಯನ್ನು ಹಿಂದಿಡಲಿಲ್ಲ.

ಒಂದು ಸಂಸ್ಥೆಯ ಅಭಿವೃದ್ಧಿ ಪಥದಲ್ಲಿ ಪತ್ರಿಕೆಗಳ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಹವ್ಯಕ ಮಹಾಸಭೆ ಇಷ್ಟೊಂದು ಎತ್ತರಕ್ಕೆ ಬೆಳೆದು ಹೆಸರು ಗಳಿಸಿದ್ದರ ಹಿಂದೆ ಪತ್ರಿಕೆಯ ಪಾಲು ದೊಡ್ಡದಿದೆ. ದೂರದ ಊರುಗಳು ಮತ್ತು ವಿದೇಶಗಳಲ್ಲಿರುವ ಹವ್ಯಕರು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು ಮತ್ತು ಕೇಂದ್ರ ಸಂಸ್ಥೆಯೊಂದಿಗೆ ಸಂಪರ್ಕ ಇಟ್ಟುಕೊಳ್ಳಲು ಇದು ಮುಖ್ಯ ಮಾಧ್ಯಮವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಪತ್ರಿಕೆಯು 8 ಪುಟಗಳಿಂದ 68 ಪುಟಗಳಿಗೆ ಬೆಳೆದಿದ್ದು, ವೈವಿಧ್ಯಮಯ ವಿಚಾರಗಳೊಂದಿಗೆ ಮಾಹಿತಿ ಪತ್ರಿಕೆಯಾಗಿ ಹೊರಬರುತ್ತಿದೆ. ಇದೀಗ ಹವ್ಯಕ ಪತ್ರಿಕೆಗೆ ಷಷ್ಟ್ಯಬ್ದದ ಸಂಭ್ರಮ. ಇದರ ಸವಿ ನೆನಪಿಗಾಗಿ ವೈವಿಧ್ಯಮಯ ವಿಷಯಗಳು ಹಾಗೂ ಹೆಸರಾಂತ ಲೇಖಕರ ಲೇಖನಗಳನ್ನೊಳಗೊಂಡ ಎಪ್ರಿಲ್ ಸಂಚಿಕೆಯು ವಿಶೇಷಾಂಕವಾಗಿ ಹೊರಬರಲಿದೆ.



ಯುದ್ಧದ ತೀವ್ರತೆ ಮತ್ತಷ್ಟು ಹೆಚ್ಚಳ

ಟೆಹ್ರಾನ್‌ನಲ್ಲಿ ಅಮೆರಿಕ- ಇಸ್ರೇಲ್ ವಿರುದ್ಧ ಸಾವಿರಾರು ಜನ ಸೇರಿದ್ದ ಪ್ರತಿಭಟನೆ ಸಮೀಪದಲ್ಲೇ ಭಾರೀ ಸ್ಫೋಟ

ಟೆಹ್ರಾನ್/ದುಬೈ: ಇರಾನ್ ರಾಜಧಾನಿ ಟೆಹ್ರಾನ್‌ನ ಕೇಂದ್ರ ಭಾಗದಲ್ಲಿ ಶುಕ್ರವಾರ ಭಾರೀ ಸ್ಫೋಟ ಸಂಭವಿಸಿದೆ. ಸಾವಿರಾರು ಜನರು ಸೇರಿದ್ದ ಸರ್ಕಾರ ಪ್ರಾಯೋಜಿತ ಕುದ್ಸ್ ಡೇ ಪ್ರತಿಭಟನೆ ನಡೆಯುತ್ತಿದ್ದ ಪ್ರದೇಶದ ಸಮೀಪದಲ್ಲೇ ಈ ಸ್ಫೋಟ ಸಂಭವಿಸಿದೆ. ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಕೂಗಲು ಪ್ರತಿವರ್ಷ ನಡೆಯುವ ಈ ರ್‍ಯಾಲಿಯ ಸಮಯದಲ್ಲಿ ಈ ಸ್ಫೋಟ ಸಂಭವಿಸಿದೆ.

ಸ್ಫೋಟಕ್ಕೂ ಮೊದಲು ಕೇಂದ್ರ ಟೆಹ್ರಾನ್ ಪ್ರದೇಶವನ್ನು ಗುರಿಯಾಗಿಸಬಹುದು ಎಂದು ಇಸ್ರೇಲ್ ಎಚ್ಚರಿಕೆ ನೀಡಿತ್ತು. ಆದರೆ ತಕ್ಷಣದಂತೆ ಯಾವುದೇ ಸಾವುನೋವುಗಳ ಮಾಹಿತಿ ಲಭ್ಯವಾಗಿಲ್ಲ. ಆದರೂ ಈ ಘಟನೆ ಎರಡು ವಾರಗಳಿಂದ ಮುಂದುವರಿಯುತ್ತಿರುವ ಯುದ್ಧದ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಇರಾನ್ ಪ್ರತಿದಿನವೂ ಇಸ್ರೇಲ್ ಹಾಗೂ ಪರ್ಷಿಯನ್ ಗಲ್ಫ್ ಪ್ರದೇಶದ ಕೆಲವು ರಾಷ್ಟ್ರಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ನಡೆಸುತ್ತಿದ್ದು, ಜಾಗತಿಕವಾಗಿ ವ್ಯಾಪಾರವಾಗುವ ತೈಲದ ಸುಮಾರು ಐದನೇ ಭಾಗ ಸಾಗುವ ಹಾರ್ಮುಜ್ ಜಲಸಂಧಿಯನ್ನು ಕೂಡ ಬಹುತೇಕ ಮುಚ್ಚಿದೆ. ಇದೇ ವೇಳೆ ಅಮೆರಿಕ ಮತ್ತು ಇಸ್ರೇಲ್ ಯುದ್ಧ ವಿಮಾನಗಳು ಇರಾನ್‌ನ ಸೇನಾ ಹಾಗೂ ಇತರ ಪ್ರಮುಖ ಗುರಿಗಳ ಮೇಲೆ ನಿರಂತರ ದಾಳಿಗಳನ್ನು ಮುಂದುವರಿಸುತ್ತಿವೆ.

ರ್‍ಯಾಲಿ ಪ್ರದೇಶದಲ್ಲಿ ಭಾರೀ ಸ್ಫೋಟ

ಶುಕ್ರವಾರ ಮಧ್ಯಾಹ್ನದ ವೇಳೆಗೆ ಟೆಹ್ರಾನ್‌ನ ಫರ್ದೋಸಿ ಚೌಕದ ಬಳಿ ಸ್ಫೋಟ ಸಂಭವಿಸಿದೆ. ಇಲ್ಲಿ ಸಾವಿರಾರು ಜನರು 'ಇಸ್ರೇಲ್‌ಗೆ ಮರಣ', 'ಅಮೆರಿಕಗೆ ಮರಣ' ಎಂಬ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟಿಸುತ್ತಿದ್ದರು.

ಸ್ಫೋಟಕ್ಕೂ ಸ್ವಲ್ಪ ಹೊತ್ತಿಗೆ ಮೊದಲು ಇಸ್ರೇಲ್ ಫಾರ್ಸಿ ಭಾಷೆಯ ಎಕ್ಸ್ ಖಾತೆಯ ಮೂಲಕ ಆ ಪ್ರದೇಶವನ್ನು ಖಾಲಿ ಮಾಡುವಂತೆ ಎಚ್ಚರಿಕೆ ನೀಡಿತ್ತು. ಆದರೆ ಯುದ್ಧ ಆರಂಭವಾದ ನಂತರದಿಂದ ಇರಾನ್‌ನಲ್ಲಿ ಇಂಟರ್ನೆಟ್ ಬಳಕೆ ಬಹುತೇಕ ಸ್ಥಗಿತಗೊಂಡಿರುವುದರಿಂದ ಬಹುತೇಕ ಜನರಿಗೆ ಈ ಸಂದೇಶ ತಲುಪಿರಲಿಲ್ಲ.

ಸ್ಫೋಟದ ನಂತರ ಪ್ರದೇಶದಲ್ಲಿ ಹೊಗೆ ಏರುತ್ತಿರುವ ದೃಶ್ಯಗಳು ಕಂಡುಬಂದಿದ್ದು, ಜನರು 'ಅಲ್ಲಾಹು ಅಕ್ಬರ್' ಎಂದು ಘೋಷಣೆಗಳನ್ನು ಕೂಗುತ್ತಿರುವ ವಿಡಿಯೋಗಳು ಹರಿದಾಡಿವೆ.

ಆ ಸಂದರ್ಭದಲ್ಲಿ ಇರಾನ್ ನ್ಯಾಯಾಂಗ ಮುಖ್ಯಸ್ಥ ಗೊಲಾಮ್‌ಹೊಸೇನ್ ಮೊಹ್ಸೆನಿ ಈ ಸ್ಥಳದಲ್ಲೇ ಸರ್ಕಾರಿ ಟಿವಿಗೆ ಸಂದರ್ಶನ ನೀಡುತ್ತಿದ್ದರು. ಸ್ಫೋಟದ ನಂತರ ಅವರ ಭದ್ರತಾ ಸಿಬ್ಬಂದಿ ಅವರನ್ನು ಸುತ್ತುವರಿದು ರಕ್ಷಣೆ ನೀಡಿದರು. ಈ ಸಂದರ್ಭದಲ್ಲೂ ಅವರು 'ಕ್ಷಿಪಣಿಗಳ ಮಳೆಯಲ್ಲಿಯೂ ಇರಾನ್ ಹಿಂದೆ ಸರಿಯುವುದಿಲ್ಲ' ಎಂದು ಘೋಷಿಸಿದರು. ಮತ್ತೊಬ್ಬ ಹಿರಿಯ ಭದ್ರತಾ ಅಧಿಕಾರಿ ಅಲಿ ಲಾರಿಜಾನಿ ಈ ದಾಳಿ 'ಇಸ್ರೇಲ್‌ನ ನಿರಾಶೆಯ ಸಂಕೇತ' ಎಂದು ಹೇಳಿದ್ದಾರೆ.

ಇದರ ಜತೆಗೆ ಕಳೆದ 24 ಗಂಟೆಗಳಲ್ಲಿ 200ಕ್ಕೂ ಹೆಚ್ಚು ಗುರಿಗಳನ್ನು ಹೊಡೆದಿದ್ದಾಗಿ ಇಸ್ರೇಲ್ ಘೋಷಿಸಿದೆ. ಕ್ಷಿಪಣಿ ಉಡಾವಣಾ ತಾಣಗಳು, ರಕ್ಷಣಾ ವ್ಯವಸ್ಥೆಗಳು ಮತ್ತು ಶಸ್ತ್ರಾಸ್ತ್ರ ಉತ್ಪಾದನಾ ಕೇಂದ್ರಗಳು ಇದರಲ್ಲಿ ಸೇರಿವೆ.

ಗಲ್ಫ್‌ನಲ್ಲಿ ಇರಾನ್ ದಾಳಿ

ಗಲ್ಫ್ ಪ್ರದೇಶದ ತೈಲ ಮತ್ತು ಇತರ ಮೂಲಸೌಕರ್ಯಗಳ ಮೇಲೂ ಇರಾನ್ ದಾಳಿಗಳನ್ನು ಮುಂದುವರಿಸಿದೆ. ಸೌದಿ ಅರೇಬಿಯಾದ ಪ್ರಕಾರ ಸುಮಾರು 50 ಡ್ರೋನ್‌ಗಳನ್ನು ಅವರು ಹೊಡೆದುರುಳಿಸಿದ್ದಾರೆ. ಒಮಾನ್‌ನ ಸೋಹಾರ್ ಕೈಗಾರಿಕಾ ಪ್ರದೇಶದಲ್ಲಿ ಎರಡು ಡ್ರೋನ್‌ಗಳು ಪತನಗೊಂಡ ಪರಿಣಾಮ ಇಬ್ಬರು ಮೃತಪಟ್ಟಿದ್ದಾರೆ ಎಂದು ಒಮಾನ್ ಸುದ್ದಿಸಂಸ್ಥೆ ತಿಳಿಸಿದೆ. ಬಹ್ರೈನ್‌ನಲ್ಲಿ ಕೂಡ ಕ್ಷಿಪಣಿ ಎಚ್ಚರಿಕೆ ಸೈರನ್‌ಗಳು ಮೊಳಗಿದರೆ, ದುಬೈನಲ್ಲಿ ತಡೆದ ಡ್ರೋನ್ ಅವಶೇಷಗಳಿಂದ ಕೈಗಾರಿಕಾ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ದುಬೈ ಅಂತಾರಾಷ್ಟ್ರೀಯ ಹಣಕಾಸು ಕೇಂದ್ರದಲ್ಲಿನ ಒಂದು ಕಟ್ಟಡಕ್ಕೂ ಅವಶೇಷಗಳು ಬಿದ್ದು ಹಾನಿಯಾಗಿದೆ. ಇರಾನ್ ಈ ವಾರದ ಆರಂಭದಲ್ಲಿ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳನ್ನು ಗುರಿಯಾಗಿಸುವುದಾಗಿ ಹೇಳಿತ್ತು.



ಇಸ್ರೇಲ್- ಹಿಜ್ಬುಲ್ಲಾ ಸಂಘರ್ಷ ಹೆಚ್ಚಳ

ಲೆಬನಾನ್‌ನ ಇರಾನ್ ಬೆಂಬಲಿತ ಹಿಜ್ಬುಲ್ಲಾ ಗುಂಪು ಉತ್ತರ ಇಸ್ರೇಲ್ ಕಡೆಗೆ ಹಲವಾರು ರಾಕೆಟ್ ದಾಳಿಗಳನ್ನು ನಡೆಸಿದೆ. ಇದರಿಂದ ಸುಮಾರು 60 ಜನರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಬೇರುತ್‌ನ ದಕ್ಷಿಣ ಪಶ್ಚಿಮ ಭಾಗದಲ್ಲಿ ನಡೆದ ಇಸ್ರೇಲ್ ದಾಳಿಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ. ಮತ್ತೊಂದು ದಾಳಿಯಲ್ಲಿ ಒಂದು ಅಪಾರ್ಟ್‌ಮೆಂಟ್ ಕಟ್ಟಡ ಬೆಂಕಿಗಾಹುತಿಯಾಗಿದೆ.

ರಾಷ್ಟ್ರಗಳ ಗಮನಸೆಳೆದ ಕ್ವಾಡ್ ಕಾಪ್ಟರ್

» ಜಾಗತಿಕ ಡ್ರೋನ್ ರಕ್ಷಣಾ ವ್ಯವಸ್ಥೆಯಲ್ಲಿ ಹೊಸ ಬದಲಾವಣೆ

ಕೈವ್: ಸಾಂಪ್ರದಾಯಿಕ ವೈಮಾನಿಕ ರಕ್ಷಣಾ ಮಾದರಿ ಬದಲಾಗುತ್ತಿದ್ದು, ಉಕ್ರೇನ್‌ನ ಕಡಿಮೆ-ವೆಚ್ಚದ ಇಂಟರ್‌ಸೆಪ್ಟರ್ ಡ್ರೋನ್‌ಗಳ ಬಳಕೆ ಪೆಂಟಗನ್ ಮತ್ತು ಮಧ್ಯಪ್ರಾಚ್ಯ ಮಿತ್ರರಾಷ್ಟ್ರಗಳ ಗಮನ ಸೆಳೆಯುತ್ತಿದೆ. ಇರಾನ್ ವಿನ್ಯಾಸದ ಶಾಹೆದ್-136 ಡ್ರೋನ್‌ಗಳ ನಿರಂತರ ದಾಳಿಯನ್ನು ಎದುರಿಸುತ್ತಿರುವ ಉಕ್ರೇನ್ ಪಡೆಗಳು, ಆರ್ಥಿಕ ಮತ್ತು ಯುದ್ಧತಂತ್ರದ ದೃಷ್ಟಿಯಿಂದ ಸುಸ್ಥಿರ ಡ್ರೋನ್ ವಿರೋಧಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿವೆ.

ವೆಚ್ಚ ಅಜಗಜಾಂತರ: ಆಧುನಿಕ ಯುದ್ಧದ ನಿರ್ಣಾಯಕ ವ್ಯತ್ಯಾಸ ವೆಚ್ಚವೇ ಆಗಿದೆ. ಒಂದು ಶಾಹೆದ್ ಡ್ರೋನ್‌ನ ಬೆಲೆ ಅಂದಾಜು 30,000 ಆಗಿದ್ದರೆ, ಅದನ್ನು ಹೊಡೆದುರುಳಿಸಲು ಬಳಸುವ ಪೇಟ್ರಿಯಾಟ್ ಪಿಎಸಿ-3 ಕ್ಷಿಪಣಿಗಳ ಬೆಲೆ ಲಕ್ಷಾಂತರ ಡಾಲರ್‌ಗಳು. ಇದನ್ನು ಸರಿಪಡಿಸಲು, ವೈಲ್ಡ್ ಹಾರ್ನೆಟ್ಸ್ ತಯಾರಿಸಿದ ಹೆಚ್ಚಿನ ವೇಗದ ಸ್ಟಿಂಗ್ ಕ್ವಾಡ್‌ಕಾಪ್ಟರ್‌ಗಳನ್ನು ನಿಯೋಜಿಸಲಾಗುತ್ತಿದೆ. ಅಂದಾಜು 2,500 ವೆಚ್ಚದ ಈ ಇಂಟರ್‌ಸೆಪ್ಟರ್‌ಗಳು, 2022 ರಿಂದ ಉಕ್ರೇನ್ ಮೇಲೆ ನಡೆದ 57,000ಕ್ಕೂ ಹೆಚ್ಚು ಡ್ರೋನ್ ದಾಳಿಗಳನ್ನು ಕಡಿಮೆ ವೆಚ್ಚದಲ್ಲಿ ತಡೆದಿವೆ ಎನ್ನಲಾಗಿದೆ.

ತಾಂತ್ರಿಕ ಶ್ರೇಷ್ಠತೆ: ಸ್ಟಿಂಗ್ ಡ್ರೋನ್ ಅನ್ನು ವಿಶೇಷವಾಗಿ ವಾಯುದಾಳಿಯನ್ನು ವಿಫಲಗೊಳಿಸಲು ವಿನ್ಯಾಸಗೊಳಿಸಲಾಗಿದೆ. ಗಂಟೆಗೆ 150-170 ಕಿಮೀ ವೇಗದಲ್ಲಿ ಚಲಿಸುವ ಈ ಬುಲೆಟ್ ಆಕಾರದ ಯುನಿಟ್‌ಳನ್ನು ವಿಶೇಷ ಪತ್ತೆ ಜಾಲಗಳ ಮೂಲಕ ನಿಯಂತ್ರಿಸಲಾಗುತ್ತದೆ. ಜನವರಿ 2026 ರ ಹೊತ್ತಿಗೆ ಸರಿಸುಮಾರು ಶೇ.70 ಶಾಹೆದ್ ಡ್ರೋನ್‌ಗಳನ್ನು ಇಂತಹ ಇಂಟರ್‌ಸೆಪ್ಟರ್ ಡ್ರೋನ್‌ಗಳ ಮೂಲಕವೇ ಹೊಡೆದುರುಳಿಸಲಾಗಿದೆ ಎಂದು ವರದಿಯಾಗಿದೆ. ಜೆಟ್ ಚಾಲಿತ ಗೆರಾನ್-3ನಂತಹ ವೇಗದ ಡ್ರೋನ್‌ಗಳನ್ನು ಎದುರಿಸಲು ಎಐ-ಸಂಯೋಜಿತ ಮಾರ್ಗದರ್ಶನ ಮತ್ತು ಜೆಟ್-ಬೂಸ್ಟೆಡ್ ಮಾದರಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಇವುಗಳ ಯಶಸ್ಸಿನ ಪ್ರಮಾಣ ಶೇ.90ಕ್ಕೆ ಏರುವ ನಿರೀಕ್ಷೆಯಿದೆ.

ರಷ್ಯಿನ ಕಡೆಗೂ ಗಮನ: ಪೆಂಟಗನ್ ಈ ಹೆಚ್ಚಿನ ವೇಗದ ಇಂಟಸೆರ್‌ಪ್ಟರ್‌ಗಳ ಮೇಲೆ ಗಮನ ಕೇಂದ್ರೀಕರಿಸಿದೆ. ವಿಶೇಷವಾಗಿ, ಈ ಹಿಂದೆ ಯುಎಸ್ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡಿದ್ದ ಗಲ್ಫ್ ಪ್ರದೇಶದಲ್ಲಿ ಇವುಗಳನ್ನು ಬಳಸಲು ಆಸಕ್ತಿ ವಹಿಸಿದೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ, ಉಕ್ರೇನಿಯನ್ ಮಿಲಿಟರಿ ತಜ್ಞರನ್ನು ಕತಾರ್, ಯುಎಇ, ಸೌದಿ ಅರೇಬಿಯಾ ಮತ್ತು ಜೋರ್ಡಾನ್‌ಗೆ ಕಳುಹಿಸಿರುವುದನ್ನು ಖಚಿತಪಡಿಸಿದ್ದಾರೆ. ಈ ವಿನಿಮಯ, ಉಭಯ ದೇಶಗಳಿಗೆ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ.

ಉಕ್ರೇನಿಯನ್ ಡ್ರೋನ್ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಮೂಲಕ, ಮಿತ್ರರಾಷ್ಟ್ರಗಳು ತಮ್ಮ ದುಬಾರಿ ಕ್ಷಿಪಣಿಗಳನ್ನು ಬ್ಯಾಲಿಸ್ಟಿಕ್ ಬೆದರಿಕೆಗಳಿಗಾಗಿ ಉಳಿಸಿಕೊಳ್ಳಬಹುದು ಮತ್ತು ಕಡಿಮೆ ವೆಚ್ಚದ ಇಂತಹ ಆವಿಷ್ಕಾರಗಳನ್ನು ಹೆಚ್ಚು ಬಳಸಿಕೊಳ್ಳಬಹುದು ಎಂಬ ಲೆಕ್ಕಾಚಾರ ಇದರ ಹಿಂದಿದೆ.



ಅಮೆರಿಕ ಇಂಧನ ಮರುಪೂರಣ ವಿಮಾನ ಇರಾಕ್‌ನಲ್ಲಿ ಪತನ

ವಾಷಿಂಗ್ಟನ್: ಮಿಲಿಟರಿ ಕಾರ್ಯಾಚರಣೆಯ ಸಂದರ್ಭದಲ್ಲಿ ಅಮೆರಿಕದ ಕೆಸಿ-135 ಇಂಧನ ಮರುಪೂರಣ ವಿಮಾನವೊಂದು ಪಶ್ಚಿಮ ಇರಾಕ್‌ನಲ್ಲಿ ಪತನಗೊಂಡಿದೆ. ವಿಮಾನದಲ್ಲಿದ್ದ ಅಮೆರಿಕ ಸೇನೆಯ ನಾಲ್ಕು ಸಿಬ್ಬಂದಿ ಮೃತರಾಗಿದ್ದಾರೆ. ಗುರುವಾರ ರಾತ್ರಿ ಆಪರೇಷನ್ ಎಪಿಕ್ ಫ್ಯೂರಿ ಭಾಗವಾಗಿ ಹಾರಾಡುತ್ತಿದ್ದಾಗ ಈ ಘಟನೆ ಸಂಭವಿಸಿದೆ ಎಂದು ಅಮೆರಿಕ ಸೇನೆ ತಿಳಿಸಿದೆ.

ಇರಾನ್ ಸಂಘರ್ಷಕ್ಕೆ ಸಂಬಂಧಿಸಿದ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾಗ ಒಂದು ವಿಮಾನ ಪಶ್ಚಿಮ ಇರಾಕ್‌ನಲ್ಲಿ ಪತನಗೊಂಡರೆ, ಎರಡನೆಯದು ಸುರಕ್ಷಿತವಾಗಿ ಇಳಿದಿದೆ. ಅಪಘಾತಕ್ಕೆ ಶತ್ರುಪಡೆಗಳ ಅಥವಾ ಮಿತ್ರಪಡೆಗಳ ದಾಳಿ ಕಾರಣವಲ್ಲ ಎಂದು ಹೇಳಲಾಗಿದೆ. ಆದರೆ, ಇರಾಕ್‌ನ ಇಸ್ಲಾಮಿಕ್ ರೆಸಿಸ್ಟೆನ್ಸ್ ಎಂಬ ಸಶಸ್ತ್ರ ಇರಾನ್ ಬೆಂಬಲಿತ ಗುಂಪು ವಿಮಾನವನ್ನು ಹೊಡೆದುರುಳಿಸಿರುವುದಾಗಿ ಹೇಳಿಕೊಂಡಿದೆ.

ಕೆಸಿ-135 ವಿಮಾನದ ಬಗ್ಗೆ: ಬೋಯಿಂಗ್ ಕೆಸಿ-135 ಸ್ಟ್ರಾಟೋಟ್ಯಾಂಕರ್ ವಿಮಾನವನ್ನು ಅಮೆರಿಕದ ವಾಯುಪಡೆಯ ಯುದ್ಧ ವಿಮಾನಗಳಿಗೆ ಆಕಾಶದಲ್ಲೇ ಇಂಧನ ತುಂಬಿಸಲು ಬಳಸುತ್ತದೆ. ಬೋಯಿಂಗ್ 707 ವಿಮಾನದ ವಿನ್ಯಾಸವನ್ನು ಆಧರಿಸಿದ ಇದು ಕಳೆದ ಆರು ದಶಕಗಳಿಂದ ಸೇವೆಯಲ್ಲತ್ತು. ಪ್ರಸ್ತುತ ಅಮೆರಿಕದ ವಾಯುಪಡೆ ಇಂತಹ 376 ವಿಮಾನಗಳನ್ನು ಹೊಂದಿದೆ.

ಸರಣಿ ವಿಮಾನ ಅಪಘಾತಗಳು: ಇರಾನ್ ವಿರುದ್ಧದ ಇಸ್ರೇಲ್ ಮಿಲಿಟರಿ ಕಾರ್ಯಾಚರಣೆಗೆ ಅಮೆರಿಕ ಕೈಜೋಡಿಸಿದ ಎರಡು ವಾರಗಳಲ್ಲಿ ಸಂಭವಿಸಿದ ನಾಲ್ಕನೇ ವಿಮಾನ ನಷ್ಟ ಇದಾಗಿದೆ. ಇದಕ್ಕೂ ಮೊದಲು, ಕುವೈತ್‌ನಿಂದ ತಪ್ಪಾಗಿ ನಡೆಸಿದ ದಾಳಿಯಿಂದ ಮೂರು ಅಮೆರಿಕನ್ ಫೈಟರ್ ಜೆಟ್‌ಗಳು ಪತನಗೊಂಡಿದ್ದವು. ಈ ಸಂಘರ್ಷದಲ್ಲಿ ಇದುವರೆಗೆ ಏಳು ಅಮೆರಿಕನ್ ಸೈನಿಕರು ಮೃತಪಟ್ಟಿದ್ದು, ಸುಮಾರು 140 ಮಂದಿ ಗಾಯಗೊಂಡಿದ್ದಾರೆ ಎಂದು ಪೆಂಟಗನ್ ವರದಿ ಮಾಡಿದೆ.

ಕಿರುಸುದ್ದಿ

ಇರಾನಿನ ರೆಡ್ ಕ್ರೆಸೆಂಟ್ ಸೊಸೈಟಿಗೆ ಚೀನಾ ಸಹಾಯ

ಬೀಜಿಂಗ್: ಮಧ್ಯಪ್ರಾಚ್ಯ ಯುದ್ಧದ ಮಧ್ಯೆ ಇರಾನಿನ ರೆಡ್ ಕ್ರೆಸೆಂಟ್ ಸೊಸೈಟಿಗೆ 2,00,000 ಡಾಲರ್ ಮೌಲ್ಯದ ಮಾನವೀಯ ನೆರವನ್ನು ಒದಗಿಸುತ್ತದೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಗುವೊ ಜಿಯಾಕುನ್ ಘೋಷಿಸಿದ್ದಾರೆ. ವರದಿಗಳ ಪ್ರಕಾರ, ಸಂಘರ್ಷದ ವೇಳೆ ನಾಗರಿಕರು ಮತ್ತು ಸೈನಿಕೇತರ ಗುರಿಗಳ ಮೇಲೆ ವಿವೇಚನಾರಹಿತ ದಾಳಿಗಳನ್ನು ಗುವೊ ತೀವ್ರವಾಗಿ ಖಂಡಿಸಿದ್ದಾರೆ. ಈ ಪ್ರದೇಶದಲ್ಲಿ ಉದ್ವಿಗ್ನತೆಯನ್ನು ಕಡಿಮೆ ಮಾಡಲು ಸಹಾಯ ಮಾಡಲು ಒಳಗೊಂಡಿರುವ ಎಲ್ಲಾ ಪಕ್ಷಗಳೊಂದಿಗೆ ಸಂವಹನವನ್ನು ನಿರ್ವಹಿಸಲು ಚೀನಾ ಸಿದ್ಧವಾಗಿದೆ ಎಂದು ಹೇಳಿದರು.

ವಾಯು ರಕ್ಷಣಾ ವ್ಯವಸ್ಥೆ ಬಲಪಡಿಸುವುದು ಅಗತ್ಯ

ಹೊಸದಿಲ್ಲಿ: ಪ್ರಸ್ತುತ ಜಗತ್ತಿನ ಯುದ್ಧ ಸನ್ನಿವೇಶಗಳ ಮಧ್ಯೆ, ಹೆಚ್ಚಿನ ಶಸ್ತ್ರಾಸ್ತ್ರ ವ್ಯವಸ್ಥೆಗಳು, ರಾಡಾರ್‌ಗಳು ಮತ್ತು ಇತರ ಕಾರ್ಯಾಚರಣೆಯ ಸಾಮರ್ಥ್ಯಗಳೊಂದಿಗೆ ಅತ್ಯಂತ ಬಲವಾದ ವಾಯು ರಕ್ಷಣೆ ನಿರ್ಮಿಸುವ ಅವಶ್ಯಕತೆಯಿದೆ ಮಾಜಿ ಐಎಎಫ್ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ. ಆರ್. ಚೌಧರಿ ಅವರು ಎಂದು ಹೇಳಿದ್ದಾರೆ.

ಪಾಕ್ ಮೇಲೆ ಅಫ್ಘಾನಿಸ್ತಾನ ಪ್ರತೀಕಾರದ ಡ್ರೋನ್ ದಾಳಿ

ಕಾಬೂಲ್: ಅಫ್ಘಾನ್ ವಾಯುಪಡೆ ಶುಕ್ರವಾರ ಪಾಕಿಸ್ತಾನದ ಕೊಹತ್ ಪ್ರದೇಶದ ಸೇನಾ ಕೋಟೆಯ ಮೇಲೆ ಪ್ರತೀಕಾರದ ಡ್ರೋನ್ ದಾಳಿಗಳನ್ನು ನಡೆಸಿದೆ. ಕಾಬೂಲ್ ಮತ್ತು ಕಂದಹಾರ್‌ನಲ್ಲಿ ಆರು ಮಂದಿಯನ್ನು ಬಲಿಪಡೆದ ಪಾಕಿಸ್ತಾನದ ರಾತ್ರಿಕಾಲದ ವೈಮಾನಿಕ ದಾಳಿಗೆ ಪ್ರತಿಯಾಗಿ ಅಫ್ಘಾನಿಸ್ತಾನ ಈ ಕ್ರಮ ಕೈಗೊಂಡಿದೆ.

ನಿರ್ದಿಷ್ಟ ಗುರಿಗಳ ಮೇಲೆ ದಾಳಿ : ಖೈಬರ್ ಪಖ್ತುಂಖ್ವಾದಲ್ಲಿರುವ ಕೊಹತ್ ಸೇನಾ ಕೋಟೆ ಬೆಳಗಿನ ಕಾರ್ಯಾಚರಣೆಯಲ್ಲಿ ಧ್ವಂಸಗೊಂಡಿದೆ ಎಂದು ಅಫ್ಘಾನ್ ರಾಷ್ಟ್ರೀಯ ರಕ್ಷಣಾ ಸಚಿವಾಲಯ ದೃಢಪಡಿಸಿದೆ. ಇದರೊಂದಿಗೆ, ಡುರಾಂಡ್ ಲೈನ್ ಸಂಘರ್ಷದ ವಿಶೇಷ ಕಮಾಂಡ್ ಸೆಂಟರ್ ಮತ್ತು ಕಮಾಂಡರ್ ಕಚೇರಿಯನ್ನು ನಿಖರವಾಗಿ ಗುರಿಯಾಗಿಸಿ ದಾಳಿ ಮಾಡಲಾಗಿದೆ. ಈ ಕೇಂದ್ರಗಳು ಮುಖ್ಯ ಕೋಟೆಯ ಎರಡು ಕಿಲೋಮೀಟರ್ ವ್ಯಾಪ್ತಿಯಲ್ಲಿದ್ದವು.



ಪ್ರತೀಕಾರದ ಹಿನ್ನೆಲೆ ಅಫ್ಘಾನಿಸ್ತಾನದ ಪ್ರಮುಖ ನಗರಗಳ ಮೇಲೆ ಪಾಕಿಸ್ತಾನ ದಾಳಿ ನಡೆಸಿತ್ತು. ಇದರಿಂದ ಕಾಬೂಲ್‌ನಲ್ಲಿನ ಮನೆಗಳು ನಾಶವಾಗಿದ್ದವು ಮತ್ತು ಕಂದಹಾರ್ ವಿಮಾನ ನಿಲ್ದಾಣದ ಇಂಧನ ಡಿಪೋ ನಾಶವಾಗಿತ್ತು. ಗಡಿ ಘರ್ಷಣೆಯನ್ನು ಪಾಕಿಸ್ತಾ ಇತ್ತೀಚೆಗೆ ಮುಕ್ತ ಯುದ್ಧ ಎಂದು ಕರೆದ ನಂತರ ಉಭಯ ರಾಷ್ಟ್ರಗಳ ನಡುವೆ ಉದ್ವಿಗ್ನತೆ ಹೆಚ್ಚಾಗಿದೆ. ಪರಮಾಣು ಶಸ್ತ್ರಸಜ್ಜಿತ ನೆರೆಯ ರಾಷ್ಟ್ರದ ಆಕ್ರಮಣದ ವಿರುದ್ಧ ತನ್ನ ಸಾರ್ವಭೌಮತ್ವವನ್ನು ರಕ್ಷಿಸಲು ಈ ದಾಳಿಗಳು ಅನಿವಾರ್ಯ ಎಂದು ಅಫ್ಘಾನ್ ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ.

ಸಿಇಸಿ ಪದಚ್ಯುತಿಗೆ ಪ್ರತಿಪಕ್ಷಗಳ ನೋಟಿಸ್

ಹೊಸದಿಲ್ಲಿ: ಲೋಕಸಭಾ ಸಭಾಪತಿ ಓಂ ಬಿರ್ಲಾ ಪದಚ್ಯುತಿ ಯತ್ನ ವಿಫಲಗೊಂಡ ಬೆನ್ನಲ್ಲೇ, ಇದೀಗ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಪದಚ್ಯುತಿ ಆಗ್ರಹಿಸಿ, ವಿಪಕ್ಷ ಸಂಸದರು ಸಂಸತ್ತಿನ ಉಭಯ ಸದನಗಳಲ್ಲೂ ನೋಟೀಸ್ ಹೊರಡಿಸಿದ್ದಾರೆ. ಲೋಕಸಭೆಯ 130 ವಿಪಕ್ಷ ಸಂಸದರು ಹಾಗೂ ರಾಜ್ಯಸಭೆಯ 63ಸಂಸದರು ನೋಟೀಸ್‌ಗೆ ಸಹಿ ಹಾಕಿದ್ದಾರೆಂದು ಮೂಲಗಳು ತಿಳಿಸಿವೆ. ಇಂಡಿ ಕೂಟದ ಮಿತ್ರಪಕ್ಷಗಳ ಸದಸ್ಯರು ಮಾತ್ರವಲ್ಲ ವಿಪಕ್ಷ ಮಿತ್ರಕೂಟದ ಭಾಗವಲ್ಲದ ಆಪ್ ಸದಸ್ಯರು ಕೂಡ ಸಹಿ ಹಾಕಿದ್ದಾರೆಂದು ಮೂಲಗಳು ತಿಳಿಸಿವೆ. ಕೆಲವು ಪಕ್ಷೇತರ ಸಂಸದರು ಕೂಡ ನೋಟೀಸ್‌ಗೆ ಸಹಿ ಹಾಕಿದ್ದಾರೆ. ಇನ್ನು ಕೆಲವರು ಈ ಉಪಕ್ರಮಕ್ಕೆ ಕೈಜೋಡಿಸುವ ಆಸಕ್ತಿ ತೋರಿದ್ದಾರೆಂದು ಮೂಲಗಳು ವಿವರಿಸಿವೆ. ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಈ ತೆರ ನೋಟೀಸ್ ಹೊರಡಿಸಿದ್ದು ಇದೇ ಮೊದಲು. ಮುಖ್ಯ ಚುನಾವಣಾ ಆಯುಕ್ತರು ಪಕ್ಷಪಾತಿ, ತಾರತಮ್ಯ ಧೋರಣೆ ಹೊಂದಿದ್ದಾರೆ. ಚುನಾವಣಾ ವಂಚನೆ ತನಿಖೆಗೆ ಉದ್ದೇಶಪೂರ್ವಕ ತಡೆಯೊಡ್ಡುತ್ತಾರೆ. ಸಾಕಷ್ಟು ಮತದಾನ ಹಕ್ಕು ನಿರಾಕರಣೆ ಮಾಡುತ್ತಾರೆಂಬ ಆರೋಪ ಸಹಿತ ನೋಟೀಸ್‌ನಲ್ಲಿ ಜ್ಞಾನೇಶ್‌ಕುಮಾರ್ ಅವರ ವಿರುದ್ಧ ಇಂಡಿ ಕೂಟ ಏಳು ಆರೋಪಗಳನ್ನು ಮಾಡಿದೆ. ವೋಟ್‌ಬ್ಯಾಂಕ್‌ಗಾಗಿ ಧಾರಾಳ ಸಂಖ್ಯೆಯಲ್ಲಿ ಅಕ್ರಮ ನುಸುಳುಕೋರರನ್ನು ಮತದಾರ ಪಟ್ಟಿಗೆ ಸೇರ್ಪಡೆ ಮಾಡುವ ಮುಖೇನ ವಿವಿಧ ವಲಯಗಳ ಜನಸಂಖ್ಯಾ ಸ್ವರೂಪವನ್ನೇ ವ್ಯತ್ಯಯಗೊಳಿಸಿ, ರಾಷ್ಟ್ರೀಯ ಭದ್ರತೆಗೇ ಗಂಡಾಂತರ ಒಡ್ಡಿರುವ ವಿಪಕ್ಷ ಕೂಟ, ಇದಕ್ಕೆ ವಿರುದ್ಧವಾಗಿರುವ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಅಭಿಯಾನಕ್ಕೂ ವಿರೋಧ ವ್ಯಕ್ತಪಡಿಸಿದೆ.

ದೇಶ ರಕ್ಷಣೆಗೆ ನೂತನ ಆರ್ಥಿಕ ಸ್ಥಿರೀಕರಣ ನಿಧಿ

ಹೊಸದಿಲ್ಲಿ: ಅನಿರೀಕ್ಷಿತ ಜಾಗತಿಕ ಬಿಕ್ಕಟ್ಟುಗಳ ವಿರುದ್ಧ ರಾಷ್ಟ್ರೀಯ ಆರ್ಥಿಕತೆಯನ್ನು ರಕ್ಷಿಸಲು 1 ಲಕ್ಷ ಕೋಟಿ ರೂ. ಮೊತ್ತದ ಆರ್ಥಿಕ ಸ್ಥಿರೀಕರಣ ನಿಧಿ ಸ್ಥಾಪಿಸಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶುಕ್ರವಾರ ಘೋಷಿಸಿದರು. ಲೋಕಸಭೆ ಈ ನಿಧಿಗೆ ಧ್ವನಿಮತದ ಮೂಲಕ ಅನುಮೋದನೆ ನೀಡಿತು. ಪಶ್ಚಿಮ ಏಷ್ಯಾ ವಲಯದ ಅಸ್ಥಿರತೆ ಮತ್ತು ಪೂರೈಕೆ ಸರಪಳಿಯ ವ್ಯತ್ಯಯಗಳನ್ನು ಎದುರಿಸಲು ಈ ನಿಧಿಯನ್ನು ರೂಪಿಸಲಾಗಿದೆ. ಈ ಯೋಜನೆಗೆ ಒಟ್ಟು 1 ಲಕ್ಷ ಕೋಟಿ ರೂ. ನಿಗದಿಪಡಿಸಲಾಗಿದ್ದರೂ, ನಿವ್ವಳ ನಗದು ವೆಚ್ಚ 57,381 ಕೋಟಿ ರೂ.ಗೆ ಸೀಮಿತವಾಗಿದೆ. ಉಳಿದ ಮೊತ್ತವನ್ನು ಸರ್ಕಾರದ ಉಳಿತಾಯದಿಂದ ಪಡೆಯಲಾಗಿದೆ. ಈ ಹೆಚ್ಚುವರಿ ವೆಚ್ಚದ ಹೊರತಾಗಿಯೂ, 2025-26ರ ಹಣಕಾಸಿನ ಕೊರತೆಯನ್ನು ಜಿಡಿಪಿಯ ಶೇ.4.4 ರಷ್ಟರಲ್ಲಿಯೇ ಕಾಯ್ದುಕೊಳ್ಳುವ ನಿರೀಕ್ಷೆಯಿದೆ. ಸಾಮಾಜಿಕ ಮತ್ತು ಕೃಷಿ ಕ್ಷೇತ್ರಗಳಿಗೂ ಮಹತ್ವದ ಮೊತ್ತವನ್ನು ಮೀಸಲಿಡಲಾಗಿದೆ. ನರೇಗಾ ಬಾಕಿ ತೀರಿಸಲು 30,000 ಕೋಟಿ ರೂ., ರಸಗೊಬ್ಬರ ಸಬ್ಸಿಡಿಗಾಗಿ 19,230 ಕೋಟಿ ರೂ. ಮತ್ತು ಆಹಾರ ಸಬ್ಸಿಡಿಗಾಗಿ 23,641 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಇದಲ್ಲದೆ, ರಕ್ಷಣಾ ಸಚಿವಾಲಯಕ್ಕೆ 41,822 ಕೋಟಿ ರೂ.ಅನುಮೋದಿಸಲಾಗಿದೆ. ಕಳಪೆ ಬಜೆಟ್ ಎಂಬ ವಿರೋಧ ಪಕ್ಷದ ಆರೋಪಗಳನ್ನು ಸರ್ಕಾರ ತಳ್ಳಿಹಾಕಿದ ವಿತ್ತ ಸಚಿವೆ, ಆರ್ಥಿಕತೆಯಲ್ಲಿ ವಿಚಲಿತರಾಗದೆ ಬಾಹ್ಯ ಆಘಾತಗಳನ್ನು ಎದುರಿಸಲು ಸ್ಥೂಲ ಆರ್ಥಿಕ ಚೌಕಟ್ಟನ್ನು ಬಲಪಡಿಸಲಾಗಿದೆ ಎಂದರು.

ರಾಜ್ಯಗಳಿಗೆ ಹೆಚ್ಚುವರಿ ಸೀಮೆಎಣ್ಣೆ ಪೂರೈಕೆ

ಹೊಸದಿಲ್ಲಿ: ವಾಣಿಜ್ಯ ಅಡುಗೆ ಅನಿಲ ಪೂರೈಕೆಯಲ್ಲಿ ಕಂಡುಬಂದ ವ್ಯತ್ಯಯಗಳ ನಡುವೆಯೇ , ಕೇಂದ್ರ ಸರಕಾರವು ರಾಜ್ಯಗಳಿಗೆ 40,000ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಹೆಚ್ಚುವರಿಯಾಗಿ ಪೂರೈಸಿದೆ. ದೇಶದಲ್ಲಿ ಎಲ್‌ಪಿಜಿ ಉತ್ಪಾದನೆಯನ್ನು ಕಳೆದ 5ದಿನಗಳಲ್ಲಿ ಶೇ.28ರಷ್ಟು ಹೆಚ್ಚಳಗೊಳಿಸಿದೆ. ಅಲ್ಲದೆ ಇನ್ನಷ್ಟು ಪ್ರಮಾಣದಲ್ಲಿ ಎಲ್‌ಪಿಜಿ ಸಂಗ್ರಹಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಬುಕಿಂಗ್ ಬಳಿಕ ಸಿಲಿಂಡರ್ ವಿತರಣೆ ಅವಧಿ 2.5ದಿನಗಳೇ ಇರುತ್ತವೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ. ಹಾಗೆಯೇ ದೇಶದ 33ಕೋಟಿ ಕುಟುಂಬಗಳ ಅಡುಗೆ ಮನೆಗಳಿಗೆ , ಹಾಗೆಯೇ ಬಡ ಮತ್ತು ದುರ್ಬಲವರ್ಗಗಳವರಿಗೆ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಲು ಕೇಂದ್ರ ಗರಿಷ್ಠ ಆದ್ಯತೆ ನೀಡಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಚಿವ ಹರ್ದೀಪ್‌ಸಿಂಗ್ ಪುರಿ ತಿಳಿಸಿದ್ದಾರೆ. ಸಂಗ್ರಹ ಧಾವಂತ ಮತ್ತು ವಿತರಕರು ಮತ್ತು ಚಿಲ್ಲರೆ ಮಾರಾಟ ಮಟ್ಟದಲ್ಲಿ ಆತಂಕಿತ ಬುಕ್ಕಿಂಗ್‌ಗಳ ಬಗೆಗೆ ತಳಮಟ್ಟದಿಂದ ಬರುತ್ತಿರುವ ವರದಿಗಳು ಗ್ರಾಹಕರ ಆತಂಕದಿಂದ ಉದ್ಭವಾಗಿರುವಂಥವುಗಳೇ ವಿನಾ ವಾಸ್ತವಿಕ ಪೂರೈಕೆ ಕೊರತೆಗಳಿಂದಲ್ಲ ಎಂಬುದಾಗಿ ಸಚಿವರು ಸ್ಪಷ್ಟಪಡಿಸಿದರು.

ಸ್ಫೋಟದ ಸದ್ದು ಹಿಂದೆ ಈ ವಲಯದಲ್ಲಿ ಸಾಮಾನ್ಯವಾಗಿತ್ತು: ಮೋದಿ

ಈಶಾನ್ಯದಲ್ಲಿ ಬಿಜೆಪಿಯಿಂದ ಶಾಂತಿ ಖಾತ್ರಿ

ಗುವಾಹತಿ: ಬಾಂಬ್ ಸ್ಫೋಟದ ಸದ್ದು ಗುಂಡಿನ ಸುರಿಮಳೆ ಈಶಾನ್ಯ ವಲಯದಲ್ಲಿ ಹಿಂದೆ ಮಾಮೂಲಾಗಿತ್ತು. ಆದರೆ, ಬಿಜೆಪಿ ಈ ವಲಯದಲ್ಲಿ ಶಾಶ್ವತವಾಗಿ ಶಾಂತಿ ನೆಲೆಯೂರುವಂತೆ ಮಾಡಿದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಸ್ವಾರ್ಥಯುಕ್ತ ರಾಜಕೀಯ ಹಿತಾಸಕ್ತಿಗಾಗಿ ವಿವಿಧ ಒಪ್ಪಂದಗಳಿಗೆ ಸಹಿ ಹಾಕಿತ್ತು ವಿನಾ ಜನರ ಮೇಲಿನ ಕಾಳಜಿಯಿಂದ ಅಲ್ಲ, ಯಾಕೆಂದರೆ ಕಾಂಗ್ರೆಸ್‌ಗೆ ಆಶ್ವಾಸನೆಗಳ ಸಾಕಾರದ ಧ್ಯೇಯವೇ ಇಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಡಬಲ್ ಇಂಜಿನ್ ಸರಕಾರದಲ್ಲಿ ರಾಜ್ಯವು ಶಾಂತಿ ಮತ್ತು ಅಭಿವೃದ್ಧಿಯ ಹೊಸ ಅಧ್ಯಾಯ ಬರೆಯುತ್ತಿದೆ ಎಂದು ಪ್ರಧಾನಿ ಮೋದಿ ಗಮನ ಸೆಳೆದರು. ಮಳೆಯಿಂದಾಗಿ ಪ್ರವಾಸ ಪಟ್ಟಿಯಲ್ಲಿ ವ್ಯತ್ಯಾಸವಾದ್ದರಿಂದ, ಅಸ್ಸಾಂನ ಕೊಕ್ರಜಾರ್ ಜಿಲ್ಲೆಯಲ್ಲಿ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬೇಕಿದ್ದ ಪ್ರಧಾನಿ ಮೋದಿ, ಗುವಾಹತಿಯಿಂದ ವರ್ಚ್ವಲ್ ನೆಲೆಯಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.



ನುಸುಳುಕೋರರಿಗೆ ಜಾಗ ಇಲ್ಲ: ಅಕ್ರಮ ನುಸುಳುಕೋರರಿಗೆ ದೇಶೀಯರ ಭೂಮಿಯನ್ನು ಹಸ್ತಾಂತರಿಸುವ ಮೂಲಕ ಕಾಂಗ್ರೆಸ್ ರಾಷ್ಟ್ರೀಯ ಭದ್ರತೆಗೆ ಗಂಡಾಂತರವೊಡ್ಡಿದೆ. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸುವ ಮುಖೇನ, ಈ ದೇಶದಲ್ಲಿ ನುಸುಳುಕೋರರಿಗೆ ಜಾಗವಿಲ್ಲ ಎಂಬ ಸ್ಪಷ್ಟ ಸಂದೇಶವನ್ನು ಸಾರುವಂತೆ ಜನರಿಗೆ ಕರೆ ನೀಡಿದರು. ಅಕ್ರಮ ನುಸುಳುಕೋರರ ಜತೆ ನಿಕಟ ಸಖ್ಯ ಹೊಂದಿದ್ದ ಕಾಂಗ್ರೆಸ್ ಅಸ್ಸಾಂನ ಮೂಲವಾಸಿ ಜನರಿಗೆ ಯಾವತ್ತೂ ಭೂಮಿಯ ಹಕ್ಕನ್ನು ನೀಡಿರಲಿಲ್ಲ, ಕಾಂಗ್ರೆಸ್ ಪಕ್ಷ ಮೂಲವಾಸಿಗಳ ಭೂಮಿಯನ್ನು ನುಸುಳುಕೋರರಿಗೆ ಹಸ್ತಾಂತರಿಸಿತ್ತು. ಧುಬ್ರಿ ಮತ್ತು ಗೋಲ್ಪಾರಾ ಜಿಲ್ಲೆಗಳಲ್ಲಿ ಪರಿಸ್ಥಿತಿ ಅದೆಷ್ಟು ಕರಾಳವಾಗಿತ್ತೆಂದರೆ , ಕೊಕ್ರಜಾರ್‌ನ ಜನಸಂಖ್ಯಾ ಸ್ವರೂಪ ತೀರಾ ವ್ಯತ್ಯಯವಾಗಿತ್ತು. ಇದೀಗ ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಅತಿಕ್ರಮಿತ ಭೂಮಿಯ ತೆರವಿಗೆ ಬೃಹತ್ ಅಭಿಯಾನವನ್ನೇ ನಡೆಸುತ್ತಿರುವುದು ಸಂತೋಷದ ವಿಚಾರ. ಇಲ್ಲಿನ ಬಿಜೆಪಿ ಸರಕಾರ ಭೂಮಿಯ ಹಕ್ಕನ್ನು ಮರಳಿ ಇಲ್ಲಿನ ಮೂಲವಾಸಿಗಳಿಗೇ ಹಸ್ತಾಂತರಿಸಿದೆ. ಈ ನಿಟ್ಟಿನಲ್ಲಿ ತುಂಬು ಸಹಕಾರ ನೀಡಿರುವ ಇಲ್ಲಿನ ಆದಿವಾಸಿ ಸಮುದಾಯಗಳ ಕೊಡುಗೆಗೆ ತಾನು ಕೃತಜ್ಞನಾಗಿರುವೆ ಎಂದು ಪ್ರಧಾನಿ ಮೋದಿ ಹೇಳಿದರು.

ಪ.ಬಂಗಾಳಕ್ಕೆ ಇಂದು ಮೋದಿ

ಕೋಲ್ಕತ್ತಾ: ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡಲಿದ್ದು, ಇಲ್ಲಿನ ಪ್ರತಿಷ್ಠಿತ ಬ್ರಿಗೇಡ್ ಪರೇಡ್ ಮೈದಾನದಲ್ಲಿ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಸುಮಾರು 18,680 ಕೋಟಿ ರೂ. ಮೌಲ್ಯದ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ.

ಅಪರಾಧಗಳಿಗೆ ಹಂತ, ಹಂತದ ಶಿಕ್ಷೆ ಪರಿಚಯಿಸುವ ಬಿಲ್ ಮಂಡನೆ

ತೃತೀಯಲಿಂಗಿ ಸ್ಪಷ್ಟ ವ್ಯಾಖ್ಯಾನಕ್ಕೆ ಮಸೂದೆ

ಹೊಸದಿಲ್ಲಿ: ತೃತೀಯಲಿಂಗಿ ಎಂಬ ಪದಕ್ಕೆ ನಿಖರ ಕಾನೂನು ವ್ಯಾಖ್ಯಾನ ನೀಡುವ ಮತ್ತು ಅಂತಹ ವ್ಯಕ್ತಿಗಳ ವಿರುದ್ಧ ನಡೆಯುವ ಅಪರಾಧಗಳಿಗೆ ಹಂತ-ಹಂತದ ಶಿಕ್ಷೆಯನ್ನು ಪರಿಚಯಿಸುವ ಮಸೂದೆಯನ್ನು ಶುಕ್ರವಾರ ಲೋಕಸಭೆಯಲ್ಲಿ ಮಂಡಿಸಲಾಯಿತು. ಪ್ರಸ್ತಾವಿತ ಶಾಸನ, ಅಸ್ತಿತ್ವದಲ್ಲಿರುವ ಕಾನೂನಿನ ಅಸ್ಪಷ್ಟತೆಯನ್ನು ನಿವಾರಿಸಲು ಮತ್ತು ತೃತೀಯಲಿಂಗಿ ವ್ಯಕ್ತಿಗಳಿಗೆ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುವ ಗುರಿ ಹೊಂದಿದೆ.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ವೀರೇಂದ್ರ ಕುಮಾರ್, ತೃತೀಯಲಿಂಗಿ ವ್ಯಕ್ತಿಗಳ(ಹಕ್ಕುಗಳ ರಕ್ಷಣೆ) ತಿದ್ದುಪಡಿ ಮಸೂದೆಯನ್ನು ಮಂಡಿಸಿದರು. ಸರಿಯಾದ ಗುರುತಿಸುವಿಕೆಗಾಗಿ ಮತ್ತು ಪ್ರಸ್ತುತ ಕಾನೂನಿನ ಅಡಿಯಲ್ಲಿ ಸಿಗುವ ಪ್ರಯೋಜನಗಳು ಉದ್ದೇಶಿತ ಫಲಾನುಭವಿಗಳನ್ನು ತಲುಪುವುದನ್ನು ಖಚಿತಪಡಿಸಿಕೊಳ್ಳಲು ಸ್ಪಷ್ಟ ವ್ಯಾಖ್ಯಾನ ಅಗತ್ಯ ಎಂದು ಮಸೂದೆ ಒತ್ತಿಹೇಳುತ್ತದೆ.

ಪ್ರಸ್ತಾವಿತ ತಿದ್ದುಪಡಿಯ ಅನ್ವಯ, ತೃತೀಯಲಿಂಗಿ ಎಂದರೆ ಕಿನ್ನರ, ಹಿಜ್ರಾ, ಅರವಣಿ, ಜೋಗ್ತಾ ಅಥವಾ ನಪುಂಸಕ ಅಂತಹ ಸಾಮಾಜಿಕ-ಸಾಂಸ್ಕೃತಿಕ ಗುರುತುಗಳಿಗೆ ಸೇರಿದ ವ್ಯಕ್ತಿಗಳು, ಹಾಗೆಯೇ ಲಿಂಗ ಗುಣಲಕ್ಷಣಗಳಲ್ಲಿ ಜನ್ಮಜಾತ ವ್ಯತ್ಯಾಸಗಳನ್ನು ಹೊಂದಿರುವ ವ್ಯಕ್ತಿಗಳು, ಎಂದು ವ್ಯಾಖ್ಯಾನಿಸಲಾಗಿದೆ. ಬಲವಂತವಾಗಿ ಅಥವಾ ವಂಚನೆಯ ಮೂಲಕ ಅಂಗವಿಕಲತೆ, ಹಾರ್ಮೋನ್ ಪ್ರಕ್ರಿಯೆಗಳು ಅಥವಾ ಅಂತಹುದೇ ಹಸ್ತಕ್ಷೇಪಗಳ ನಂತರ ತೃತೀಯಲಿಂಗಿ ಎಂದು ಗುರುತಿಸಿಕೊಳ್ಳಬೇಕಾದ ವ್ಯಕ್ತಿಗಳು ಅಥವಾ ಮಕ್ಕಳನ್ನೂ ಇದು ಒಳಗೊಂಡಿದೆ.

ಅಪರಾಧಗಳಿಗೆ ಹಂತ, ಹಂತದ ಶಿಕ್ಷೆ

ಅಸ್ತಿತ್ವದಲ್ಲಿರುವ 2019ರ ಕಾನೂನು ತೃತೀಯಲಿಂಗಿಗಳ ವಿರುದ್ಧದ ಅಪರಾಧಗಳಿಗೆ ಗರಿಷ್ಠ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸುತ್ತದೆ. ಪ್ರಸ್ತಾವಿತ ಮಸೂದೆ, ಅಪಹರಣ, ಖಾಯಂ ದೈಹಿಕ ಹಾನಿ ಅಥವಾ ಬಲವಂತದ ಲಿಂಗ ಬದಲಾವಣೆಯಂತಹ ಪ್ರಕರಣಗಳಿಗೆ, ವಿಶೇಷವಾಗಿ ಇಂತಹ ದೌರ್ಜನ್ಯಕ್ಕೆ ಮಕ್ಕಳು ಬಲಿಯಾದ ಸಂದರ್ಭದಲ್ಲಿ ಹಂತ-ಹಂತದ ಕಠಿಣ ಶಿಕ್ಷೆಯನ್ನು ಶಿಫಾರಸು ಮಾಡುತ್ತದೆ. ಅಲ್ಲದೆ, ಗುರುತಿನ ಪ್ರಮಾಣಪತ್ರ ಹೊಂದಿರುವ ತೃತೀಯಲಿಂಗಿ ವ್ಯಕ್ತಿಗಳು ತಮ್ಮ ಜನನ ಪ್ರಮಾಣಪತ್ರ ಮತ್ತು ಇತರ ಅಧಿಕೃತ ದಾಖಲೆಗಳಲ್ಲಿ ತಮ್ಮ ಹೆಸರು ಬದಲಾಯಿಸಿಕೊಳ್ಳಲು ಇದು ಅವಕಾಶ ನೀಡುತ್ತದೆ.

ಆದರೆ, ವಿಭಿನ್ನ ಲೈಂಗಿಕ ದೃಷ್ಟಿಕೋನ, ಅಥವಾ ಕೇವಲ ಸ್ವಯಂ-ಗ್ರಹಿಸಿದ ಲಿಂಗ ಗುರುತುಗಳನ್ನು ಹೊಂದಿರುವ ವ್ಯಕ್ತಿಗಳು ಈ ವ್ಯಾಖ್ಯಾನದಲ್ಲಿ ಬರುವುದಿಲ್ಲ.

ಗುರುತಿಸುವಿಕೆಗೆ ಪ್ರಾಧಿಕಾರ: ಗುರುತಿಸುವಿಕೆಗಾಗಿ ಮೆಡಿಕಲ್ ಬೋರ್ಡ್ ಅನ್ನು ಪ್ರಾಧಿಕಾರ ಎಂದು ನೇಮಿಸಲು ಈ ಶಾಸನದಲ್ಲಿ ಪ್ರಸ್ತಾಪಿಸಿದೆ. ಇದು ಕೇಂದ್ರ, ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳಿಂದ ನೇಮಕಗೊಂಡ ಮುಖ್ಯ ವೈದ್ಯಕೀಯ ಅಧಿಕಾರಿ ಅಥವಾ ಉಪ ಮುಖ್ಯ ವೈದ್ಯಕೀಯ ಅಧಿಕಾರಿಯ ನೇತೃತ್ವದಲ್ಲಿ ಇರುತ್ತದೆ. ಅಗತ್ಯವಿದ್ದಾಗ ಈ ಪ್ರಾಧಿಕಾರ ತಜ್ಞರ ಸಲಹೆ ಪಡೆಯಬಹುದು.

ದೇಶಕ್ಕಿಂತ ಮುಖ್ಯವೇ ಫ್ರಾಂಚೈಸಿ ವ್ಯವಹಾರ?

ಐಎಎಫ್, ವಿಂಗ್ ಕಮಾಂಡರ್ ಅಭಿನಂದನ್ ವರ್ಧಮಾನ್‌ರನ್ನು ಅವಮಾನಿಸಿದ್ದ ಪಾಕ್ ಕ್ರಿಕೆಟಿಗ

ಹೊಸದಿಲ್ಲಿ: ಸನ್‌ರೈಸರ್ಸ್ ಹೈದರಾಬಾದ್ ಐಪಿಎಲ್ ಫ್ರಾಂಚೈಸಿಯ ಸಹ-ಮಾಲಕಿ ಹಾಗೂ ಸನ್ ಟಿವಿ ನೆಟ್ವರ್ಕ್ ಮಾಲೀಕ ಕಲಾನಿಧಿ ಮಾರನ್ ಪುತ್ರಿ ಕಾವ್ಯ ಮಾರನ್, ಹಂಡ್ರೆಡ್ ಹರಾಜಿನಲ್ಲಿ ಖುದ್ದಾಗಿ ಹಾಜರಿದ್ದರು. ಹೀಗಾಗಿ ನನಗೆ ಇದೇನು ಗೊತ್ತಿರಲಿಲ್ಲ ಎಂದು ಜಾರಿಕೊಳ್ಳುವಂತಿಲ್ಲ, ಎಲ್ಲವೂ ಕಾವ್ಯ ಅವರ ಉಪಸ್ಥಿತಿಯಲ್ಲೇ ನಡೆದಿದೆ. ಕಾವ್ಯ ಅವರಿಗೆ ಫ್ರಾಂಚೈಸಿ ವ್ಯವಹಾರ ದೇಶದ ಘನತೆಗಿಂತ ಮುಖ್ಯವೇ? ಇದು ಜಾಲತಾಣಗಳಲ್ಲಿ ದೇಶಭಕ್ತರು ಎತ್ತಿರುವ ಪ್ರಶ್ನೆ.

ಇಂಗ್ಲೆಂಡ್‌ನ ಪುರುಷರ ದಿ ಹಂಡ್ರೆಡ್ ಹರಾಜಿನಲ್ಲಿ ಪಾಕಿಸ್ತಾನಿ ಸ್ಪಿನ್ನರ್ ಅಬ್ರಾರ್ ಅಹ್ಮದ್‌ನನ್ನು ಖರೀದಿಸಿದ ಕೆಲವೇ ಗಂಟೆಗಳಲ್ಲಿ ಸನ್‌ರೈಸರ್ಸ್ ಲೀಡ್ಸ್ ಫ್ರಾಂಚೈಸಿಯ ಎಕ್ಸ್ ಖಾತೆ ಅಮಾನತುಗೊಂಡಿದ್ದು, ಸ್ವಲ್ಪ ಸಮಯದ ಬಳಿಕ ಲೀಡ್ಸ್ ಖಾತೆ ಮತ್ತೆ ಸಕ್ರಿಯಗೊಂಡಿದೆ.

2.35 ಕೋಟಿ ರೂ. ಮೂಲ ಬೆಲೆಗೆ ಪಾಕ್ ಸ್ಪಿನ್ನರ್ ಅನ್ನು ಎಸ್‌ಆರ್‌ಎಚ್ ಲೀಡ್ಸ್ ಗುರುವಾರ ಖರೀದಿಸಿದೆ. ಇದಲ್ಲದೆ ಪಾಕ್ ಸ್ಪಿನ್ನರ್ ಖರೀದಿಸುವ ಮೂಲಕ ಕಾವ್ಯಾ ಮಾರನ್ ಒಡೆತನದ ಸನ್‌ರೈಸರ್ಸ್ ಮ್ಯಾನೇಜ್‌ಮೆಂಟ್ ಉದ್ಧಟತನ ಮೆರೆದಿದ್ದಲ್ಲದೆ, ಆತನ ಖರೀದಿಗೆ ಹಲವು ಕಾರಣಗಳನ್ನು ನೀಡಿ ಸಮರ್ಥಿಸಿಕೊಂಡಿದೆ. ಖಾತೆ ಸ್ಥಗಿತಗೊಳಿಸಿರುವ ಕಾರಣ ತಿಳಿದುಬಂದಿಲ್ಲ, ಎಕ್ಸ್ ನಿಯಮಗಳನ್ನು ಉಲ್ಲಂಘಿಸಿರುವ ಕಾರಣದಿಂದ ಖಾತೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಎಕ್ಸ್ ಪುಟದಲ್ಲಿ ಕಾಣಿಸಿತ್ತು. ಕೆಲವು ಸಮಯದ ನಂತರ ಆ ಪುಟವನ್ನು ಮತ್ತೆ ಸಕ್ರಿಯಗೊಳಿಸಲಾಯಿತು ಮತ್ತು ಹಿಂದಿನಂತೆ ಪೋಸ್ಟ್‌ಗಳು ಕೂಡ ಕಾಣಿಸಿಕೊಳ್ಳಲಾರಂಭಿಸಿವೆ. ಭಾರತೀಯ ಮಾಧ್ಯಮ ಸಂಸ್ಥೆ ಸನ್ ಟಿವಿ ಸ್ವಾಮ್ಯದ ಸನ್‌ರೈಸರ್ಸ್ ಲೀಡ್ಸ್ ತಂಡವು ಐಪಿಎಲ್‌ನ ಸನ್‌ರೈಸರ್ಸ್ ಹೈದರಾಬಾದ್ ತಂಡದ ಸಹೋದರ ಫ್ರಾಂಚೈಸಿಯಾಗಿದೆ. ದಿ ಹಂಡ್ರೆಡ್ 2026ರಲ್ಲಿ ಪಾಕ್ ಆಟಗಾರನೊಬ್ಬನನ್ನು ಖರೀದಿಸಿದ ಮೊದಲ ತಂಡ ಎಂಬ ಕುಖ್ಯಾತಿಯನ್ನು ಸನ್‌ರೈಸರ್ಸ್ ಲೀಡ್ಸ್ ಪಡೆದುಕೊಂಡಿದೆ.

ಈ ನಿರ್ಧಾರ ಸಾಮಾಜಿಕ ಜಾಲತಾಣಗಳಲ್ಲಿ ಭಾರತೀಯ ಅಭಿಮಾನಿಗಳ ಆಕ್ರೋಶಕ್ಕೆ ಕಾರಣವಾಗಿದ್ದು, ಡಿಎಂಕೆ ಕುಟುಂಬದ ಸನ್ ಟಿವಿ ಸಂಸ್ಥೆ ಮತ್ತು ಕಲಾನಿಧಿ ಮಾರನ್ ಪುತ್ರಿ ಕಾವ್ಯ ಮಾರನ್ ಭಾರತೀಯರ ಭಾವನೆಗಳಿಗೆ ಧಕ್ಕೆ ಉಂಟುಮಾಡಿದ್ದಾರೆ.

» ಪಾಕ್ ಸ್ಪಿನ್ನರ್ ಅಬ್ರಾರ್ ಖರೀದಿಸಿ ದೇಶದ ವಿರೋಧ ಕಟ್ಟಿಕೊಂಡ ಸನ್ ಗ್ರೂಪ್

» ಕೆಲವು ಸಮಯದ ಬಳಿಕ ಮತ್ತೆ ಸಕ್ರಿಯಗೊಂಡ ಲೀಡ್ಸ್ ಎಕ್ಸ್ ಖಾತೆ



ಇನ್‌ಸ್ಟಾಗ್ರಾಂನಲ್ಲಿ 1 ಲಕ್ಷ ಅನ್‌ಫಾಲೋ!

ಫ್ರಾಂಚೈಸಿ ನಿರ್ಧಾರವನ್ನು ದೇಶಭಕ್ತ ಅಭಿಮಾನಿಗಳು ವಿರೋಧಿಸಿದ್ದು, ಸನ್ ರೈಸರ್ಸ್ ಹೈದರಾಬಾದ್ ಐಪಿಎಲ್ ಫ್ರಾಂಚೈಸಿ ತನ್ನ ಇನ್‌ಸ್ಟಾಗ್ರಾಂನಲ್ಲಿ 24 ಗಂಟೆಗಳೊಳಗೆ 1 ಲಕ್ಷ ಹಿಂಬಾಲಕರನ್ನು ಕಳೆದುಕೊಂಡಿದೆ.

ಜಾರಿಕೊಂಡ ಬಿಸಿಸಿಐ


ಬೆಳವಣಿಗೆ ಕುರಿತು ಬಿಸಿಸಿಐ ತನ್ನ ಮೌನ ಮುರಿದಿದೆ. ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ, ಇದು ನಮ್ಮ ವ್ಯಾಪ್ತಿಯಲ್ಲಾಗಲೀ ನಿಯಂತ್ರಣದಲ್ಲಾಗಲಿ ಇಲ್ಲ. ವಿದೇಶಿ ಲೀಗ್‌ನಲ್ಲಿ ಪಾಕ್ ಆಟಗಾರನನ್ನು ಆಯ್ಕೆ ಮಾಡಿದ್ದಾರೆ. ಈ ನಿರ್ಧಾರ ಫ್ರಾಂಚೈಸಿಯದ್ದು, ನಾವು ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು ಶುಕ್ಲಾ ಜಾರಿಕೊಂಡಿದ್ದಾರೆ.

ಸನ್‌ರೈಸರ್ಸ್ ಪರ ಕೋಚ್ ವೆಟ್ಟೋರಿ ಸಮರ್ಥನೆ!

ಯಾವುದೇ ಜಾಗತಿಕ ಟಿ20 ಪಂದ್ಯಾವಳಿಗಳಲ್ಲಿ ಪಾಕ್ ಆಟಗಾರರನ್ನು ಖರೀದಿ ಮಾಡುವುದು ಬೇಡವೆಂದು ಭಾರತೀಯ ಫ್ರಾಂಚೈಸಿಗಳು ಒಮ್ಮತದ ನಿಲುವು ತಳೆದಿದ್ದವು. ಆದರೆ ಅಬ್ರಾರ್ ಖರೀದಿಸುವ ಮೂಲಕ ಲೀಡ್ಸ್, ಈ ನಿಲುವನ್ನು ಉಲ್ಲಂಘಿಸಿದೆ. ತನ್ನ ತಪ್ಪಿಗೆ ಕ್ಷಮೆಯಾಚಿಸಿ ಪಾಕ್ ಆಟಗಾರನನ್ನು ಕೈಬಿಡುವ ಬದಲು ಸನ್‌ರೈಸರ್ಸ್ ಸಮರ್ಥನೆ ನೀಡಿದೆ. ಲೀಡ್ಸ್ ಮುಖ್ಯ ಕೋಚ್ ಡೇನಿಯೆಲ್ ವೆಟ್ಟೋರಿ ಮಾತನಾಡಿ, ಪಾಕ್ ಆಟಗಾರರನ್ನು ಖರೀದಿಸದಿರಲು ನಮಗೆ ಯಾವುದೇ ಸೂಚನೆ ಇರಲಿಲ್ಲ. ಇನ್ಯಾವುದೇ ಕ್ರಿಕೆಟೇತರ ಚರ್ಚೆಗಳು ಫ್ರಾಂಚೈಸಿಯೊಳಗೆ ನಡೆದಿಲ್ಲ. ಪ್ರದರ್ಶನ ಮತ್ತು ಆಟಗಾರರ ಲಭ್ಯತೆ ಆಧಾರದಲ್ಲಿ ಖರೀದಿಸಿದ್ದೇವೆ ಎಂದು ಸಮರ್ಥಿಸಿದ್ದಾರೆ.

ಐಎಎಫ್, ಅಭಿನಂದನ್ ಅವಮಾನಿಸಿದ್ದ ಅಬ್ರಾರ್

ಹಲವು ಸಂದರ್ಭಗಳಲ್ಲಿ ಭಾರತೀಯ ವಾಯುಪಡೆಯನ್ನೂ ಹಾಗೂ ಅಭಿಮಾನಿಗಳನ್ನೂ ಟೀಕಿಸುವ ರೀತಿಯಲ್ಲಿ ಪೋಸ್ಟ್‌ಗಳನ್ನು ಮಾಡಿದ್ದ. ಒಂದು ಬಾರಿ, ಟೀ ಈಸ್ ಫೆಂಟಾಸ್ಟಿಕ್ (ಚಹಾ ಅದ್ಭುತವಾಗಿದೆ) ಎಂಬ ಶೀರ್ಷಿಕೆ ಚಹಾ ಕಪ್ ಹಿಡಿದ ಫೋಟೋ ಪೋಸ್ಟ್ ಮಾಡಿದ್ದ. ಇದು ಪಾಕ್‌ನಲ್ಲಿ ತಾತ್ಕಾಲಿಕ ಬಂಧನದಲ್ಲಿದ್ದ ಐಎಎಫ್ ಪೈಲಟ್ ವಿಂಗ್ ಕಮಾಂಡರ್ ಅಭಿನಂದನ್ ವರ್ಧಮಾನ್ ಹೇಳಿದ ಮಾತನ್ನು ಉಲ್ಲೇಖಿಸಿ ಅವಮಾನಿಸಿದ್ದ. ಇನ್ನೊಂದು ಸಂದರ್ಭ ಪಾಕ್ ಸಹ ಆಟಗಾರರೊಂದಿಗೆ ಚಹಾ ಕುಡಿಯುತ್ತಿರುವ ವಿಡಿಯೋ ಹಂಚಿಕೊಂಡಿದ್ದ.



ಆರ್‌ಸಿಬಿ ವರ್ಸಸ್ ಪಾಕಿಸ್ತಾನ?



ಸನ್‌ರೈಸರ್ಸ್ ಫ್ರಾಂಚೈಸಿಗೆ ಭಾರತಕ್ಕಿಂತ ಪಾಕಿಸ್ತಾನವೇ ಮುಖ್ಯ, ಹೀಗಾಗಿ ಸನ್‌ರೈಸರ್ಸ್ ಫ್ರಾಂಚೈಸಿಯನ್ನು ಬಹಿಷ್ಕರಿಸಬೇಕೆಂದು ಭಾರತೀಯ ಕ್ರಿಕೆಟ್ ಅಭಿಮಾನಿಗಳು ಕರೆ ನೀಡಿದ್ದಾರೆ. ಇದೇ ಸಂದರ್ಭ ಹಲವು ಸಾಮಾಜಿಕ ಜಾಲತಾಣ ಬಳಕೆದಾರರು, ಐಪಿಎಲ್ 2026ರ ಉದ್ಘಾಟನಾ ಪಂದ್ಯದಲ್ಲಿ ಆರ್‌ಸಿಬಿ ಮತ್ತು ಸನ್‌ರೈಸರ್ಸ್ ಪಂದ್ಯವನ್ನು, ಆರ್‌ಸಿಬಿ ಮತ್ತು ಪಾಕಿಸ್ತಾನ ನಡುವಿನ ಪಂದ್ಯ, ಇದರಲ್ಲಿ ಆರ್‌ಸಿಬಿ ಗೆಲ್ಲಲೇಬೇಕು. ನಮ್ಮ ಬೆಂಬಲ ಆರ್‌ಸಿಬಿಗೆ ಇರುತ್ತದೆ ಎಂದು ಪೋಸ್ಟ್ ಹಂಚಿಕೊಂಡಿದ್ದಾರೆ.

ಲೀಡ್ಸ್ ಫ್ರಾಂಚೈಸಿಯಲ್ಲಿ ಶೇ.100 ಸನ್ ಹೂಡಿಕೆ

ಸನ್ ಟಿವಿ ಗುಂಪು ಸನ್‌ರೈಸರ್ಸ್ ಲೀಡ್ಸ್ ಫ್ರಾಂಚೈಸಿಯಲ್ಲಿ ಶೇ.100 ಹಂಚಿಕೆಯನ್ನು ಹೊಂದಿದೆ. ಈ ಹಿಂದೆ ಇದೇ ಫ್ರಾಂಚೈಸಿ ನಾರ್ಥರ್ನ್ ಸೂಪರ್‌ಚಾರ್ಜರ್ಸ್ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಬೋರ್ಡ್, ಯಾರ್ಕ್‌ಶೈರ್‌ನಿಂದ ಹಂಚಿಕೆಗಳನ್ನು ಖರೀದಿಸಿ ಸನ್ ಗ್ರೂಪ್ ಸಂಪೂರ್ಣ ಮಾಲೀಕತ್ವ ಮತ್ತು ನಿಯಂತ್ರಣವನ್ನು ಪಡೆದುಕೊಂಡಿದ್ದರು.

ಕಿರುಸುದ್ದಿ

ಬ್ಯಾಟಿಂಗ್‌ನಲ್ಲಿ ಧೋನಿಗೆ ಬಡ್ತಿ ನೀಡಿ: ಪೂಜಾರ ಸಲಹೆ

ಚೆನ್ನೈ: ಎಂಎಸ್ ಧೋನಿ ಅವರಂತಹ ಬ್ಯಾಟರ್ ತಂಡದ ಇನ್ನಿಂಗ್ಸ್‌ನ ಕೊನೆಯ ಕೆಲವು ಓವರ್‌ಗಳಲ್ಲಿ ಬ್ಯಾಟ್ ಮಾಡುವ ಬದಲು ಕ್ರೀಸ್‌ನಲ್ಲಿ ಹೆಚ್ಚು ಕಾಲ ಕಳೆದರೆ ಪಂದ್ಯದ ಮೇಲೆ ದೊಡ್ಡ ಪರಿಣಾಮ ಬೀರಬಲ್ಲರು ಎಂದು ಮಾಜಿ ಕ್ರಿಕೆಟಿಗ ಚೇತೇಶ್ವರ್ ಪೂಜಾರ ಸಲಹೆ ನೀಡಿದ್ದಾರೆ.



ಕಳೆದ ಐಪಿಎಲ್ ಆವೃತ್ತಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ಇನ್ನಿಂಗ್ಸ್ ಕೊನೆಯಲ್ಲಿ ಬ್ಯಾಟಿಂಗ್‌ಗೆ ಇಳಿಸಲ್ಪಟ್ಟಿದ್ದು, ತ್ವರಿತ ಗತಿಯಲ್ಲಿ ರನ್ ಗಳಿಸುವುದು ಅವರ ಪಾತ್ರವಾಗಿತ್ತು. ಆದರೆ ಇನ್ನಿಂಗ್ಸ್ ಕೊನೆಯಲ್ಲಿ ಬ್ಯಾಟ್ ಬೀಸುತ್ತಿದ್ದರಿಂದ ಹೆಚ್ಚು ಎಸೆತಗಳು ಸಿಗುತ್ತಿರಲಿಲ್ಲ. ಒಂದು ವೇಳೆ ಅವರನ್ನು ಮೇಲಿನ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಕಳುಹಿಸಬೇಕು, ಮಾಹಿ ಭಾಯ್‌ಗೆ 25ರಿಂದ 30 ಎಸೆತಗಳು ಸಿಕ್ಕರೆ ಪಂದ್ಯದ ಮೇಲೆ ದೊಡ್ಡ ಪರಿಣಾಮ ಬೀರಬಲ್ಲರು ಎಂದು ಪೂಜಾರ ಚೆನ್ನೈ ಫ್ರಾಂಚೈಸಿಗೆ ಸಲಹೆ ನೀಡಿದ್ದಾರೆ. ಕಳೆದ ಐಪಿಎಲ್‌ನಲ್ಲಿ ಆರ್‌ಸಿಬಿ ವಿರುದ್ಧ ಧೋನಿ 9ನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಿದ್ದು, ಅವರಿಗೆ ಮಂಡಿ ನೋವು ಇರುವುದಾಗಿ ಕೋಚ್ ಫ್ಲೆಮಿಂಗ್ ಹೇಳಿದ್ದರು. ಆದರೆ ಉಳಿದ ಪಂದ್ಯಗಳಲ್ಲೂ ಧೋನಿ ಕೆಳ ಕ್ರಮಾಂಕದಲ್ಲಿ ಕ್ರೀಸ್‌ಗಿಳಿದಿದ್ದರು.

ಜುಲೈನಲ್ಲಿ ಟೇಬಲ್ ಟೆನಿಸ್ 7ನೇ ಆವೃತ್ತಿಗೆ ಮುಹೂರ್ತ

ಮುಂಬೈ: ಅಲ್ಟಿಮೇಟ್ ಟೇಬಲ್ ಟೆನಿಸ್ (ಯುಟಿಟಿ) ಪಂದ್ಯಾವಳಿಯ 7ನೇ ಆವೃತ್ತಿ ಜುಲೈನಲ್ಲಿ ಗೋವಾದ ತಾಲೇಗಾಂವ್ ಶ್ಯಾಮ ಪ್ರಸಾದ ಮುಖರ್ಜಿ ಒಳಾಂಗಣ ಕ್ರೀಡಾಂಗಣದಲ್ಲಿ ಆರಂಭವಾಗಲಿದೆ ಎಂದು ಆಯೋಜಕರು ಶುಕ್ರವಾರ ಘೋಷಿಸಿದ್ದಾರೆ. ಕಳೆದ 6 ಆವೃತ್ತಿಗಳನ್ನು ಮುಂಬೈ, ಪುಣೆ, ದಿಲ್ಲಿ, ಕೋಲ್ಕತ, ಚೆನ್ನೈ ಮತ್ತು ಅಹಮದಾಬಾದ್‌ನಲ್ಲಿ ಆಯೋಜಿಸಿದ ಬಳಿಕ ಇದೀಗ ಪಂದ್ಯಾವಳಿಯ 7ನೇ ಆವೃತ್ತಿ ಕರಾವಳಿ ರಾಜ್ಯ ಗೋವಾ ತಲುಪಿದೆ. ಇದೇ ಮೊದಲ ಬಾರಿಗೆ ಗೋವಾ ಆತಿಥ್ಯ ವಹಿಸಿಕೊಂಡಿದೆ. ಅಲ್ಟಿಮೇಟ್ ಟೇಬಲ್ ಟೆನಿಸ್ ಪಂದ್ಯಾವಳಿಯು ಭಾರತೀಯ ಟೇಬಲ್ ಟೆನಿಸ್‌ನ ಅವಿಭಾಜ್ಯ ಅಂಗವಾಗಿ ರೂಪಾಂತರ ಆಗುತ್ತಿದೆ. ಕಳೆದ ಕೆಲವು ವರ್ಷಗಳಲ್ಲಿ ಭಾರತೀಯ ಟೇಬಲ್ ಟೆನಿಸ್‌ನ ಕ್ರೀಡಾ ಗುಣಮಟ್ಟವನ್ನು ವಿಶ್ವದರ್ಜೆಗೆ ಕೊಂಡೊಯ್ಯುವಲ್ಲಿ ಯುಟಿಟಿ ಯಶಸ್ವಿಯಾಗಿದೆ ಎಂದು ಯುಟಿಟಿ ಸಹ-ಪ್ರಾಯೋಜಕಿ ವಿಟಾ ಡೇನಿ ಹೇಳಿದ್ದಾರೆ.

ಸ್ವಿಸ್ ಓಪನ್ ಕ್ವಾರ್ಟರ್‌ಗೆ ಸಾತ್ವಿಕ್-ಚಿರಾಗ್ ಜೋಡಿ

ಹೊಸದಿಲ್ಲಿ: ಭಾರತದ ಬ್ಯಾಡ್ಮಿಂಟನ್ ಪುರುಷರ ಡಬಲ್ಸ್ ಜೋಡಿ ಸಾತ್ವಿಕ್‌ಸಾಯಿರಾಜ್ ರಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಗುರುವಾರ ಜಪಾನ್ ಜೋಡಿಯನ್ನು ಮಣಿಸಿ ಸ್ವಿಸ್ ಓಪನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಕೆಳ ಶ್ರೇಯಾಂಕದ ಜಪಾನ್‌ನ ಹಿರೋಕಿ ಒಕಾಮುರಾ ಮತ್ತು ಕಿಯೋಹೇ ಯಮಾಶಿತಾ ವಿರುದ್ಧ ಭಾರತೀಯ ಜೋಡಿ 74 ನಿಮಿಷಗಳ ಕಠಿಣ ಹೋರಾಟದ ನಂತರ 21-15, 15-21, 28-26 ಅಂಕಗಳಿಂದ ಜಯ ಸಾಧಿಸಿತು. ಭಾರತದ ತಾರೆಯರಾದ ಕಿರಣ್ ಜಾರ್ಜ್, ತನಿಷಾ ಮತ್ತು ಧ್ರುವ್ ಸ್ಪರ್ಧೆಯಿಂದ ಹೊರಬಿದ್ದಿದ್ದಾರೆ.

ರಜನಿ ಹಾಡು ಬಳಕೆ: ಸಿಎಸ್‌ಕೆ ವಿರುದ್ಧ ಸನ್ ಟಿವಿ ಮೊಕದ್ದಮೆ

ಚೆನ್ನೈ: ಐಪಿಎಲ್ 2026ರ ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ಜೆರ್ಸಿ ಬಿಡುಗಡೆ ಕಾರ್ಯಕ್ರಮದಲ್ಲಿ ಸನ್ ಪಿಕ್ಚರ್ಸ್ ನಿರ್ಮಾಣದ ರಜನೀಕಾಂತ್ ಅಭಿನಯದ ಚಿತ್ರಗಳ ಹಾಡುಗಳು, ಹಿನ್ನೆಲೆ ಧ್ವನಿ ಮತ್ತು ಸಂಭಾಷಣೆಗಳನ್ನು ಬಳಸಿದ್ದರ ವಿರುದ್ಧ ಸನ್ ಟಿವಿ ನೆಟ್‌ವರ್ಕ್ ಮದ್ರಾಸ್ ಹೈಕೋರ್ಟ್‌ನಲ್ಲಿ ಹಕ್ಕು ಸ್ವಾಮ್ಯ ಮೊಕದ್ದಮೆಯನ್ನು ಹೂಡಿದೆ. ಸೂಪರ್‌ಸ್ಟಾರ್ ರಜನೀಕಾಂತ್ ನಟಿಸಿದ ಜೈಲರ್, ಜೈಲರ್-2 ಮತ್ತು ಕೂಲಿ ಚಿತ್ರಗಳ ಹಾಡುಗಳನ್ನು ಮಾ.1ರಂದು ಬಿಡುಗಡೆಗೊಳಿಸಿದ ವಿಡಿಯೋದಲ್ಲಿ ಬಳಸಲಾಗಿತ್ತು.

ಇಂಡಿಯನ್ ವೆಲ್ಸ್: ಸೆಮಿಗೆ ಅಲ್ಕರಾಜ್, ಎಲಿನಾ ಪ್ರವೇಶ

ಕ್ಯಾಲಿಫೋರ್ನಿಯಾ: ಅಮೆರಿಕದಲ್ಲಿ ನಡೆಯುತ್ತಿರುವ ಇಂಡಿಯನ್ ವೆಲ್ಸ್ ಟೆನಿಸ್ ಪಂದ್ಯಾವಳಿಯಲ್ಲಿ ಸ್ಪೇನ್ ತಾರೆ ಕಾರ್ಲೋಸ್ ಅಲ್ಕರಾಜ್ ಸತತ 5ನೇ ವರ್ಷ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಗುರುವಾರ ತಡರಾತ್ರಿ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಕ್ಯಾಮರೂನ್ ನೋರಿ ಅವರನ್ನು 6-3, 6-4 ನೇರ ಸೆಟ್‌ಗಳಿಂದ ಮಣಿಸಿದ ಅಲ್ಕರಾಜ್ ಸೆಮಿ ಪ್ರವೇಶಿಸಿದ್ದಾರೆ. ಸೆಮಿಫೈನಲ್‌ನಲ್ಲಿ ರಷ್ಯಾದ ಡೇನಿಲ್ ಮೆಡ್ವೆಡೆವ್ ಅವರನ್ನು ಎದುರಿಸಲಿದ್ದಾರೆ.

ಸ್ವಿಯಾಟೆಕ್‌ಗೆ ಆಘಾತ: ವಿಶ್ವ ನಂ.2 ಪೋಲೆಂಡ್ ಆಟಗಾರ್ತಿ ಇಗಾ ಸ್ವಿಯಾಟೆಕ್ ಆಘಾತ ಅನುಭವಿಸಿದ್ದಾರೆ. ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಉಕ್ರೇನ್ ಆಟಗಾರ್ತಿ ಎಲಿನಾ ಸ್ವಿಟೊಲಿನಾ ವಿರುದ್ಧ 2-6, 6-4, 4-6 ಸೆಟ್‌ಗಳಿಂದ ಸೋಲುಂಡರು.

ರೋಕೋ ಫ್ಯಾನ್ಸ್‌ಗೆ ಬಿಸಿಸಿಐ ಶುಭ ಸುದ್ದಿ?

ಹೊಸದಿಲ್ಲಿ: ತಾರಾ ಬ್ಯಾಟರ್‌ಗಳಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಅಭಿಮಾನಿಗಳಿಗೆ ಬಿಸಿಸಿಐ ಶೀಘ್ರ ಶುಭಸುದ್ದಿ ನೀಡುವ ಸಾಧ್ಯತೆಯಿದೆ.

2027ರ ಐಸಿಸಿ ಏಕದಿನ ವಿಶ್ವಕಪ್‌ಗಾಗಿ ತಯಾರಿ ನಡೆಸಲು ಬಯಸುತ್ತಿರುವ ಹಲವು ವಿದೇಶಿ ಕ್ರಿಕೆಟ್ ನಿಯಂತ್ರಣ ಸಂಸ್ಥೆಗಳು ದ್ವಿಪಕ್ಷೀಯ ಏಕದಿನ ಸರಣಿಗಳನ್ನು ಹೆಚ್ಚಿಸಬೇಕೆಂದು ಬಿಸಿಸಿಐಗೆ ಮನವಿ ಮಾಡಿದ್ದು, ಈ ಮನವಿಯನ್ನು ಬಿಸಿಸಿಐ ಪರಿಗಣಿಸುವ ಸಾಧ್ಯತೆಯಿದೆ.

ಕೊಹ್ಲಿ, ರೋಹಿತ್ ಇಬ್ಬರು 2027ರ ವಿಶ್ವಕಪ್ ಆಡುತ್ತಾರೆಯೇ ಎಂಬ ವಿವಾದಾತ್ಮಕ ಪ್ರಶ್ನೆಯನ್ನು ಕೆಲವು ಟೀಕಾಕಾರರು ಎತ್ತಿದ್ದರು. ಆದರೆ ವಿಜಯ್ ಹಜಾರೆ ಟ್ರೋಫಿಯಲ್ಲಿ ರೋಕೋ ಜೋಡಿ ತಮ್ಮ ಬ್ಯಾಟ್‌ನಿಂದಲೇ ಉತ್ತರಿಸಿ ಟೀಕಾಕಾರರ ಬಾಯಿ ಮುಚ್ಚಿಸಿದ್ದರು.

ವಿಶ್ವಕಪ್ ತಯಾರಿಗಾಗಿ ಏಕದಿನ ಸರಣಿ ಹೆಚ್ಚಿಸುವ ಸಾಧ್ಯತೆ

ಇದೀಗ ಏಕದಿನ ಸರಣಿಗಳು ಹೆಚ್ಚಿಸಲು ಬಿಸಿಸಿಐ ಒಪ್ಪಿಕೊಂಡರೆ, ಆರಂಭಿಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಹೆಚ್ಚು ಏಕದಿನ ಪಂದ್ಯಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈಗಾಗಲೇ ಟೆಸ್ಟ್ ಮತ್ತು ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಪಡೆದಿರುವ ಕಾರಣ ಕೊಹ್ಲಿ ಮತ್ತು ರೋಹಿತ್ ತಮ್ಮ ಏಕದಿನ ಅಂತಾರಾಷ್ಟ್ರೀಯ ಪಂದ್ಯಗಳಿಗಿಂತ ಹೆಚ್ಚು ಐಪಿಎಲ್ ಫ್ರಾಂಚೈಸಿ ಕ್ರಿಕೆಟ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಏಕದಿನ ಪಂದ್ಯಗಳ ಹೆಚ್ಚಳದಿಂದ ಕೊಹ್ಲಿ ಮತ್ತು ರೋಹಿತ್ ಅವರಿಗೂ 2027ರ ಏಕದಿನ ವಿಶ್ವಕಪ್‌ಗೆ ಪೂರ್ವಸಿದ್ಧತೆ ನಡೆಸಿದಂತಾಗಲಿದೆ. ಸದ್ಯ ಕೊಹ್ಲಿ, ರೋಹಿತ್ ಇಬ್ಬರೂ ತಮ್ಮ ವೃತ್ತಿಜೀವನದ ಅತ್ಯುತ್ತಮ ಲಯದಲ್ಲಿದ್ದರೂ ಸಹ ವಿಶ್ವಕಪ್‌ಗಿನ್ನೂ ಸಾಕಷ್ಟು ಸಮಯವಿದೆ.



ಯಾವೆಲ್ಲಾ ಕ್ರಿಕೆಟ್ ಸಂಸ್ಥೆಗಳ ಮನವಿ?

ಇಂಗ್ಲೆಂಡ್, ನ್ಯೂಜಿಲೆಂಡ್, ಐರ್ಲೆಂಡ್ ಮತ್ತು ಶ್ರೀಲಂಕಾ ಕ್ರಿಕೆಟ್ ನಿಯಂತ್ರಣ ಸಂಸ್ಥೆಗಳು ದ್ವಿಪಕ್ಷೀಯ ಏಕದಿನ ಸರಣಿ ಆಯೋಜನೆಗಾಗಿ ಮನವಿ ಮಾಡಿವೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ವಿಶ್ವಕಪ್ ಅರ್ಹತೆ ಗೆದ್ದ ಭಾರತ | ಇಟಲಿ ವಿರುದ್ಧ 1-0 ಜಯ

ಮಹಿಳಾ ಹಾಕಿ ವಿಶ್ವಕಪ್‌ಗೆ ಭಾರತ ಲಗ್ಗೆ

ಹೈದರಾಬಾದ್: 2026ರ ಮಹಿಳಾ ಹಾಕಿ ವಿಶ್ವಕಪ್ ಅರ್ಹತೆಯನ್ನು ಭಾರತ ತಂಡ ಸಂಪಾದಿಸಿದೆ. ವಿಶ್ವಕಪ್ ಅರ್ಹತಾ ಸುತ್ತಿನ ಸೆಮಿಫೈನಲ್‌ನಲ್ಲಿ ಇಟಲಿ ತಂಡವನ್ನು ಪರಾಭವಗೊಳಿಸಿದ ಭಾರತ ವನಿತೆಯರು ಫೈನಲ್ ಪ್ರವೇಶಿಸಿದ್ದಾರೆ. ಇದರೊಂದಿಗೆ ಅಧಿಕೃತವಾಗಿ ಭಾರತ ತಂಡ ವಿಶ್ವಕಪ್ ಅರ್ಹತೆಯನ್ನು ಸಂಪಾದಿಸಿದೆ.

ಫೈನಲ್‌ನಲ್ಲಿ ಭಾರತೀಯ ವನಿತೆಯರು ಇಂಗ್ಲೆಂಡ್ ತಂಡವನ್ನು ಎದುರಿಸಲಿದ್ದಾರೆ. ಭಾರತ ಎದುರು ಸೋಲುಂಡ ಇಟಲಿ ಮತ್ತು ಸ್ಕಾಟ್ಲೆಂಡ್ ತಂಡಗಳು ಮೂರನೇ ಸ್ಥಾನಕ್ಕಾಗಿ ಸೆಣಸಾಡಲಿವೆ. ಶುಕ್ರವಾರ ಹೈದರಾಬಾದ್‌ನಲ್ಲಿ ನಡೆದ ಎಫ್‌ಐಎಚ್ ಅರ್ಹತಾ ಸುತ್ತಿನ ಸೆಮಿಫೈನಲ್‌ನಲ್ಲಿ ಇಟಲಿ ವಿರುದ್ಧ ಭಾರತ ವನಿತೆಯರು 1-0 ಅಂತರದ ರೋಚಕ ಜಯ ಸಾಧಿಸಿದ್ದಾರೆ. ಪಂದ್ಯದಲ್ಲಿ ಹಲವು ರೋಚಕ ಮತ್ತು ಕಠಿಣ ಸನ್ನಿವೇಶಗಳೂ ಎದುರಾದರೂ ಭಾರತೀಯ ವನಿತೆಯರು ತಮ್ಮ ಶ್ರೇಷ್ಠ ಪ್ರದರ್ಶನ ನೀಡಿದರು.

39ನೇ ನಿಮಿಷದಲ್ಲಿ ಮನೀಶಾ ಚೌಹಾನ್ ಗೋಲ್



ಮನೀಶಾ ಡ್ರ್ಯಾಗ್ ಫ್ಲಿಕ್ ಗೋಲ್!: 39ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಕಾರ್ನರ್ ಬಳಸಿಕೊಂಡ ಮನೀಶಾ ಚೌಹಾನ್ ಭಾರತ ಪರ ಏಕೈಕ ಗೋಲ್ ದಾಖಲಿಸಿ ಫೈನಲ್ ಪ್ರವೇಶವನ್ನು ಮತ್ತು ವಿಶ್ವಕಪ್ ಅರ್ಹತೆ ಸಂಪಾದನೆಯನ್ನೂ ಖಚಿತಪಡಿಸಿದರು. ಅವರು ಡ್ರ್ಯಾಗ್ ಫ್ಲಿಕ್ ಮಾಡುವುದರೊಂದಿಗೆ ಗೋಲ್ ದಾಖಲಿಸಿದರು.

ಕಾರವಾರ ಬಂದರಿಗೆ ಬಂತು ಚೆಂಗ್ ಎಕ್ಸ್ ವಾಣಿಜ್ಯ ಹಡಗು

ಕಾರವಾರ: ಮಧ್ಯಪ್ರಾಚ್ಯದ ಭೀಕರ ಯುದ್ಧಗ್ರಸ್ತ ಸ್ಥಿತಿಯ ಮಧ್ಯೆಯೇ ಯುಎಇಯಿಂದ ಬಿಟುಮಿನ್ (ಕಚ್ಚಾಡಾಂಬರ್) ಹೊತ್ತು 'ಚೆಂಗ್ ಎಕ್ಸ್' ಹೆಸರಿನ ವಾಣಿಜ್ಯ ಹಡಗೊಂದು ಕಾರವಾರ ಬಂದರಿಗೆ ಸುರಕ್ಷಿತವಾಗಿ ಬಂದಿದೆ.


ಈ ಚೆಂಗ್ ಎಕ್ಸ್' ಹಡಗು ಸುಮಾರು 5,500 ಟನ್ ಸಾಮರ್ಥ್ಯ ಹೊಂದಿದ್ದು ಇದರಲ್ಲಿ ಒಟ್ಟು 3,100 ಟನ್ ಬಿಟುಮಿನ್ ಲೋಡ್ ಮಾಡಲಾಗಿದೆ. ಯುಎಇಯ ಕೋರ್ಫಕಾನ್ ಬಂದರಿನಿಂದ ಮಾರ್ಚ್ 3ರಂದು ಹೊರಟಿದ್ದ ಈ ಹಡುಗು ಕಾರವಾರ ಬಂದರಿಗೆ ತಲುಪಿದೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಕಾರಣ ಇರಾನ್



ತನ್ನ ಹಿಡಿತದಲ್ಲಿರುವ ಹಾರ್ಮೋಜ್ ಜಲಸಂಧಿಯಲ್ಲಿ ಹಡಗು ಗಳ ಸಂಚಾರಕ್ಕೆ ನಿರ್ಬಂಧ ಹೇರಿ ರುವುದು ಜಾಗತಿಕ ವ್ಯವಹಾರದ ಮೇಲೆ ಕರಿನೆರಳು ಚಾಚಿದೆ. ಈ ನಿರ್ಬಂಧದ ನಡುವೆಯೇ ಯುಎಇಯಿಂದ ಹೊರ ಟಿದ್ದ ಈ ಹಡಗು ಸುರಕ್ಷಿತವಾಗಿ ಕಾರವಾರ ಬಂದರಿಗೆ ಬಂದಿರುವುದು ಗಮನಾರ್ಹ. ಕಾರವಾರ ಬಂದರಿನಲ್ಲಿ ಬಿಟುಮಿನ್ ಇಳಿಸಿ ಈ ಹಡುಗು ಮರಳಿ ಎಲ್ಲಿ ಹೋಗಲಿದೆ ಎನ್ನುವ ಸ್ಪಷ್ಟ ಮಾಹಿತಿ ಇಲ್ಲ.

ಪದಬಂಧ

» ರಾಜಾ ಸಂಗಮೇಶ ಹಿರೇಮಠ



5923

ಎಡದಿಂದ ಬಲಕ್ಕೆ

2.ಅಂತರಂಗ-ಚಿತ್ತವಿದು (3)
5.ಭಾರತದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿ (4)
6.ಸೊಕ್ಕಿನಿಂದಿರುವ ಆನೆ (4)
7.ಹೊಡೆತದಿಂದ ದೇಹದಲ್ಲುಂಟಾಗುವ ಕಚ್ಚು (2)
8.ಉದಯಕಾಲದಲ್ಲಿ ಮೂಡಿದ ಕರುಣೆ (2)
10.ತಿದ್ದಿ ತೊಳೆದು ಇಟ್ಟದ್ದು ಈ ಚರ್ಮದ ಚೀಲವನ್ನು (2)
12.ಹೂವಿನಿಂದ ಹೂವಿಗೆ ಹಾರುವ ಕೀಟ (2)
13.ಅಂಗೈ ಗುಳಿಯಲ್ಲಿನ ಶುದ್ಧೋದಕವನ್ನು ಕುಡಿಯುವುದು (4)
15.ಹಾರದ ನಡುವೆ ಕುಳಿತ ಗಾಯಕ (4)
16. ಸುರರು ದಿನವೂ ತೊಟ್ಟುಕೊಳ್ಳುವ ಬಟ್ಟೆ (3)

ಮೇಲಿನಿಂದ ಕೆಳಕ್ಕೆ

1.ಒಂದಕ್ಕೊಂದು ಹೊಂದದಿರುವುದು (4)
2.ಇದು ಸಂನ್ಯಾಸಿಗಳ ಕುಟೀರ (2)
3.ಮಸುಕು ಬೆಳಕಲ್ಲಿ ಕಾಣಸಿದ ಹೂವು (2)
4.ಮದದ ನಡುವೆ ಹೂವಿನ ರಸವಿದೆ (4)
7.ಈಕೆ ಹಾಡುವವಳು-ಗಾಯಕಿ (3)
9.ಶ್ವೇತವರ್ಣವಿಲ್ಲಿ ತಲೆಕೆಳಗಾಗಿದೆ (3)
11.ದಿನದ ಕೆಲಸ ಘಟನೆ ಬರೆದಿಡುವ ಪುಸ್ತಕ (4)
12.ಮಿತಿಯಿಲ್ಲದೆ ಖರ್ಚು ಮಾಡುವವನು (4)
14.ತೊರೆಗಿಂತ ಕೊಂಚ ದೊಡ್ಡದು (2)
15.ಬಿಚ್ಚಿ ಹರಡುವಿಕೆಯಿದು (2)

5922 ಉತ್ತರ

ಎಡದಿಂದ ಬಲಕ್ಕೆ:

1.ನಟ್ಟುವಿಗ 3.ಕಥಾನಕ
5.ಹರಿವು 6.ನವಣೆ
8.ವಾಹನ 10.ಸಾರಥಿ
11.ಕೆಳದಿ 15.ಶಬರಿ
16.ಮನೋಬಲ
17.ತರಂಗಿಣಿ

ಮೇಲಿನಿಂದ ಕೆಳಕ್ಕೆ :

1.ನವವನ 2.ಗವುಳಿ
3.ಕಹಳೆ 4.ಕಟಾಂಜನ
7.ವಜೀರ 9.ಹವಳ
10.ಸಾರ್ವಭೌಮ
12.ದಿವ್ಯವಾಣಿ 13.ಕುಶಲ
14.ಹರಿತ

ಎಂಟು ಒಡಿಶಾ ಶಾಸಕರನ್ನು ಭೇಟಿಯಾದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್

ಖಾಸಗಿ ರೆಸಾರ್ಟ್‌ನಲ್ಲಿ ಒಡಿಶಾ ಶಾಸಕರು

ಬೆಂಗಳೂರು: ಅಡ್ಡಮತದಾನದ ಭೀತಿಯಿಂದ ಬಿಡದಿ ಬಳಿಯ ಖಾಸಗಿ ರೆಸಾರ್ಟ್‌ವೊಂದರಲ್ಲಿ ತಂಗಿರುವ ಒಡಿಶಾದ 8 ಶಾಸಕರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಶುಕ್ರವಾರ ಭೇಟಿ ಮಾಡಿದರು.

ಅಧಿವೇಶನ ನಡೆಯುತ್ತಿರುವ ಹಿನ್ನೆಲೆಯಲ್ಲಿ ಬೆಳಗ್ಗೆ ಅವರನ್ನು ಭೇಟಿ ಮಾಡಲು ಸಾಧ್ಯವಾಗದ ಹಿನ್ನೆಲೆ, ಕಲಾಪ ಮುಗಿದ ಬಳಿಕ ಶುಕ್ರವಾರ ಸಂಜೆ ಒಡಿಶಾ ಶಾಸಕರು ತಂಗಿರುವ ರೆಸಾರ್ಟ್‌ಗೆ ತೆರಳಿ ಭೇಟಿ ಮಾಡಿ ರಾಜ್ಯಸಭೆ ಚುನಾವಣೆ ಹಾಗೂ ಪ್ರಸ್ತುತ ರಾಜಕೀಯದ ಬಗ್ಗೆ ಒಡಿಶಾ ಪಿಸಿಸಿ ಅಧ್ಯಕ್ಷ ಭಕ್ತ ಚರಣ್ ದಾಸ್ ಹಾಗೂ ಎಐಸಿಸಿ ಕಾರ್ಯದರ್ಶಿ ಮಯೂರ್ ಜೈಕುಮಾರ್ ಜತೆಗೆ ಚರ್ಚೆ ನಡೆಸಿದರು. ಬಳಿಕ ಮಾತನಾಡಿದ ಅವರು, ಬಿಜೆಪಿಯವರು ಆಪರೇಷನ್ ಕಮಲದ ಪಿತಾಮಹರು, ಕುದುರೆ ವ್ಯಾಪಾರಕ್ಕೆ ಹೆಸರುವಾಸಿ. ನಾವು ಅದಕ್ಕೆ ಅವಕಾಶ ನೀಡುವುದಿಲ್ಲ ಎಂದು ಬಿಜೆಪಿ ವಿರುದ್ಧ ಹರಿಹಾಯ್ದರು. ರಾಜಕೀಯ ಪಕ್ಷಗಳಿಗೆ ಕುದುರೆ ವ್ಯಾಪಾರದ ಭೀತಿ ಇರುತ್ತದೆ. ರಾಜಕೀಯ



ರಂಗದಲ್ಲಿ ಎಲ್ಲಾ ಪಕ್ಷಗಳು ಎದುರಿಸುವ ವಿಚಾರ ಇದು. ಅವರು ಇಲ್ಲಿಗೆ ಬಂದಿರುವಾಗ ಅವರಿಗೆ ನೆರವು ನೀಡುವುದು ನಮ್ಮ ಕರ್ತವ್ಯ. ನಾನು ಹಾಗೂ ನಮ್ಮ ಶಾಸಕರು ಅವರನ್ನು ಭೇಟಿ ಮಾಡಿದ್ದೇವೆ ಎಂದು ತಿಳಿಸಿದರು. ಕಾಂಗ್ರೆಸ್ ಪಕ್ಷಕ್ಕೆ ಅವರದೇ ಶಾಸಕರ ಮೇಲೆ ನಂಬಿಕೆ ಇಲ್ಲ ಎಂಬ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ಹಾಗಿದ್ದರೆ ಕರ್ನಾಟಕದಲ್ಲಿ ಆಪರೇಷನ್ ಕಮಲ ಮಾಡಿದ್ದು ಯಾಕೆ? ಎಂದು ಪ್ರಶ್ನಿಸಿದರು.

ನಮ್ಮ ಶಾಸಕರಿಗೆ ದೊಡ್ಡ ಆಫರ್‌ಗಳು ಬಂದಿವೆ: ಇದು ಹೈಕಮಾಂಡ್ ಟಾಸ್ಕ್ ಅಲ್ಲ, ರಾಜ್ಯಸಭಾ ಚುನಾವಣೆ ಇರುವ ಕಾರಣಕ್ಕೆ ಆಪರೇಷನ್ ಕಮಲದ ಭೀತಿ ಎದುರಾಗಿದೆ. ನಮ್ಮವರ ಮೇಲೆ ಒತ್ತಡವಿದೆ. ದೊಡ್ಡ ಆಫರ್‌ಗಳನ್ನು ಕೊಡುತ್ತಿದ್ದಾರೆ. ಒಡಿಶಾ ಪಿಸಿಸಿ ಅಧ್ಯಕ್ಷರು ಕರೆ ಮಾಡಿ ಜಾತ್ಯಾತೀತ ಪಕ್ಷಗಳೆಲ್ಲಾ ಒಂದಾಗಿದ್ದೇವೆ. ಆಪರೇಷನ್ ಕಮಲ ನಡೆಯುವ ಸಂಭವವಿದೆ ಎಂದರು.

ಬಿಡದಿಯಲ್ಲಿ ಶಾಸಕರ ವಾಸ್ತವ್ಯ

ಬಿಡದಿಯಲ್ಲಿ ಮೊದಲ ಬಾರಿಗೆ ಗೆದ್ದಿರುವ 8 ಶಾಸಕರು ವಾಸ್ತವ್ಯ ಹೂಡಿದ್ದಾರೆ. ರಾಜನ್ ಎಕ್ಕ, ಅಶೋಕ್ ದಾಸ್, ಅಪ್ಪಲ ಕುಮಾರ್ ಸ್ವಾಮಿ, ಮಂಗು ಕಿಲ್ಲೋ, ಪವಿತ್ರ ಸೌಂತಾ, ನೀಲಮಾಧವ್ ಹಿಕ್ಕ, ಪ್ರಫುಲ್ಲ ಪ್ರಧಾನ್, ಸತ್ಯಜಿತ್ ಗೋಮಂಗೋ ಇವರ ಜತೆಗೆ ಒಡಿಶಾ ಪಿಸಿಸಿ ಅಧ್ಯಕ್ಷ ಅಧ್ಯಕ್ಷ ಭಕ್ತ ಚರಣ್ ದಾಸ್ ಕೂಡಾ ಇದ್ದಾರೆ.

ಲೈಂಗಿಕ ದೌರ್ಜನ್ಯಕ್ಕೊಳಗಾದ ಮಕ್ಕಳಿಗೆ ನೆರವು ನೀಡಿ: ಸುಧಾ ಮೂರ್ತಿ

ಶಾಲೆಗಳಲ್ಲಿ ಆಪ್ತ ಸಲಹೆಗಾರರನ್ನು ನೇಮಿಸಿ

ಹೊಸದಿಲ್ಲಿ: ಲೈಂಗಿಕ ದೌರ್ಜನ್ಯಗಳಿಗೆ ಬಲಿಪಶುಗಳಾಗುವ ಮಕ್ಕಳಿಗೆ ನೆರವಾಗಲು, ಶಾಲೆಗಳಲ್ಲಿ ಕಡ್ಡಾಯವಾಗಿ ಆಪ್ತ ಸಲಹೆಗಾರರನ್ನು ನಿಯೋಜಿಸುವಂತೆ ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಶುಕ್ರವಾರ ಕರೆ ನೀಡಿದ್ದಾರೆ. ಇಂತಹ ಆಪ್ತ ಸಲಹೆಗಾರರನ್ನು ನೇಮಿಸದ ಶಾಲೆಗಳ ನೋಂದಣಿಯನ್ನೇ ರದ್ದುಪಡಿಸಬೇಕೆಂದು ಸುಧಾಮೂರ್ತಿ ಸಲಹೆ ಮಾಡಿದ್ದಾರೆ. 2025ರ ಫೆ.7ರಂದು ಎನ್‌ಸಿಪಿ-ಎಸ್‌ಪಿಯ ಫೌಝಿಯಾ ಖಾನ್ ಅವರು ಮಂಡಿಸಿದ್ದ, ಖಾಸಗಿ ಸದಸ್ಯ ಮಸೂದೆಯಾದ, ಲೈಂಗಿಕ ಅಪರಾಧಗಳಿಂದ ಮಕ್ಕಳ ಸುರಕ್ಷೆ (ತಿದ್ದುಪಡಿ) ಮಸೂದೆ 2024ರ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಸುಧಾಮೂರ್ತಿ ಈ ರೀತಿ ಸಲಹೆ ನೀಡಿದರು. ಮಗುವಿಗೆ ಧೈರ್ಯ ತುಂಬೋದು ಮುಖ್ಯ, ತಪ್ಪು ನಿನ್ನದಲ್ಲ ಎಂಬ ಆಶ್ವಾಸನೆ ಲೈಂಗಿಕ ದೌರ್ಜನ್ಯ ಸಂತ್ರಸ್ತ ಮಕ್ಕಳಿಗೆ ಸಿಗಬೇಕು, ಇದನ್ನವರು ನಿರೀಕ್ಷಿಸುತ್ತಾರೆ ಮತ್ತು ಈ ಆಶ್ವಾಸನೆಗಳನ್ನು ಮನೆಯಲ್ಲಿ ಮಗುವಿನ ತಾಯಿ ಅಥವಾ ಶಾಲೆಯಲ್ಲಿ ಶಿಕ್ಷಕಿ ಅಥವಾ ಆಪ್ತ ಸಲಹೆ ಕೊಡಲು ಶಕ್ಯರು. ನೀನು ತಪ್ಪು ಮಾಡಿಲ್ಲ ಎಂದು ಹೇಳಿ ಧೈರ್ಯ ತುಂಬಬಲ್ಲ, ತನಗಾದ ಅನ್ಯಾಯವನ್ನು ಸಹನೆಯಿಂದ ಆಲಿಸಬಲ್ಲ ಸ್ನೇಹಿತರು ಅಥವಾ ಸಮಾನರನ್ನು ಸಂತ್ರಸ್ತ ಮಗು ನಿರೀಕ್ಷಿಸುತ್ತದೆ. ಆಪ್ತ ಸಲಹೆಗಾರರು ಈ ನಿಟ್ಟಿನಲ್ಲಿ ಸಂತ್ರಸ್ತ ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಬಲ್ಲರು ಮತ್ತು ಮಗುವಿನ ಸಮಸ್ಯೆಗೆ ಸ್ಪಂದಿಸಬಲ್ಲರು ಎಂದು ಸುಧಾಮೂರ್ತಿ ಮಸೂದೆ ಪರವಾಗಿ ಚರ್ಚೆ ಮಂಡಿಸಿದರು.



ಸಾಕಷ್ಟು ಸಂಖ್ಯೆಯಲ್ಲಿ ಕೌನ್ಸಿಲರ್‌ಗಳ ನೇಮಕ

ಶಾಲಾ ಮಕ್ಕಳ ಸಂಖ್ಯಾಬಲದ ಆಧಾರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಆಪ್ತ ಸಲಹೆಗಾರರನ್ನು ನಿಯುಕ್ತಿಗೊಳಿಸಬೇಕು. ಹಾಗೆಂದು 2000ಮಕ್ಕಳಿಗೆ ಓರ್ವ ಆಪ್ತ ಸಲಹೆ ನೇಮಿಸಿದರೆ ಸಾಲದು. ಕೌನ್ಸಿಲರ್‌ಗಳನ್ನು ಹೊಂದಿಲ್ಲದ ಶಾಲಾ ನೋಂದಣಿಯನ್ನೇ ಸರಕಾರ ರದ್ದುಪಡಿಸಬೇಕು. ಯಾಕೆಂದರೆ ಬಾಲ್ಯಾವಸ್ಥೆಯಲ್ಲಿ ಹುಡುಗರು ಮತ್ತು ಹುಡುಗಿಯರು ತುಂಬ ಸುರಕ್ಷಿತರಾಗಿರಬೇಕು ಮತ್ತು ಯಾವುದೇ ಲೈಂಗಿಕ ದೌರ್ಜನ್ಯಗಳಿಂದ ಮುಕ್ತವಾಗಿ ತಮ್ಮ ಬಾಲ್ಯದ ಸವಿಯನ್ನು ಅನುಭವಿಸಬೇಕು. ಕೆಟ್ಟ ಘಟನಾವಳಿಗಳು ಮಕ್ಕಳ ಮನಸ್ಸಿನ ಮೇಲೆ ಆಳ ಗಾಯ ಮೂಡಿಸಿಬಿಡುತ್ತದೆ ಎಂದು ಸುಧಾಮೂರ್ತಿ ಆತಂಕ ವ್ಯಕ್ತಪಡಿಸಿದರು. ಮಕ್ಕಳ ಮೇಲೆ ದೌರ್ಜನ್ಯ ನಡೆದಾಗ ಹೆತ್ತವರು ತಮ್ಮ ಮಕ್ಕಳ ಜತೆ ಹೇಗೆ ವರ್ತಿಸಬೇಕೆಂಬ ಬಗ್ಗೆ ಸಂತ್ರಸ್ತ ಮಗುವಿನ ಹೆತ್ತವರಿಗೂ ಅರಿವು ನೀಡುವುದಗತ್ಯ. ಲೈಂಗಿಕ ದೌರ್ಜನ್ಯಕ್ಕೀಡಾದ ಮಕ್ಕಳ ನಡವಳಿಕೆ ಗಮನಿಸಲು ಸೂಕ್ತ ಕ್ರಮ ಕೈಗೊಳ್ಳಲು ಶಿಕ್ಷಕರಿಗೆ ಪೂರಕವಾಗುವಂತೆ ಪೋಸ್ಕೋ ಕಾಯಿದೆಯನ್ನು ಬ್ಯಾಚುಲರ್ ಆಫ್ ಎಜುಕೇಶನ್ ಕರಿಕ್ಯುಲಮ್‌ನ ಭಾಗವಾಗಿಸಬೇಕೆಂದು ಸುಧಾಮೂರ್ತಿ ಸಲಹೆ ನೀಡಿದ್ದಾರೆ. ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಪರಾಮರ್ಶಿಸುವಾಗ, ಈಗಿನ ದಿನಗಳಲ್ಲಿ ಬಹುತೇಕ ಕುಟುಂಬಗಳು ಪ್ರತ್ಯಪ್ರತ್ಯೇಕವಾಗುವುದು, ಹೆತ್ತವರಿಬ್ಬರೂ ಹೊರಗೆ ದುಡಿಯುವವರು, ಮುಂದಿನ ಭವ್ಯ ಭವಿಷ್ಯಕ್ಕಾಗಿ ಹೆತ್ತವರು ಮಕ್ಕಳಿಗೆ ಮಿತಿ ಮೀರಿ ಒತ್ತಡ ಹೇರುವುದೇ ಇತ್ಯಾದಿ ಅಂಶಗಳನ್ನೂ ಪರಿಗಣಿಸಬೇಕೆಂದು ಬಿಜೆಪಿಯ ಘನಶ್ಯಾಮ್ ತಿವಾರಿ ಸಲಹೆಯಿತ್ತರು.

ಕರ್ನಾಟಕ ಸರಕಾರ

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿ

ಕಸಂ: ಕೆಎಮ್‌ಸಿಆರ್‌ಐ/ಪೂವಿ(4)/14/2025-26 ದಿನಾಂಕ: 12.03.2026

ಇ-ಟೆಂಡರ ಪ್ರಕಟಣೆ

ಈ ಮೂಲಕ ಅಧಿಕೃತ ಪೂರೈಕೆದಾರರಿಗೆ ತಿಳಿಸುವುದೇನೆಂದರೆ, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿಯ ವಿವಿಧ ವಿಭಾಗಗಳಿಗೆ ವಿವಿಧ ನಮೂನೆಯ ಪ್ರಿಂಟಿಂಗ್ ಸಾಮಗ್ರಿಗಳನ್ನು ಮುದ್ರಿಸಿ ಪೂರೈಸುವದಕ್ಕಾಗಿ ಇ-ಟೆಂಡರ ಕರೆಯಲಾಗಿದೆ. ಈ ಬಗ್ಗೆ ನಿಗಧಿಪಡಿಸಿದ ಹೆಚ್ಚಿನ ವಿವರ ಮತ್ತು ಮಾಹಿತಿಯನ್ನು **www.kppp.karnataka.gov.in** ವೆಬ್ ಸೈಟಿನಲ್ಲಿ ಪಡೆಯಬಹುದು.

ನಿರ್ದೇಶಕರು
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ
ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

ಹಾಸನ ವಿಶ್ವವಿದ್ಯಾನಿಲಯ

(ಸ್ಥಾಪನೆ-2023)
ಹೇಮಗಂಗೋತ್ರಿ, ಕೆಂಚಟಹಳ್ಳಿ, ಹಾಸನ-573226
ವಿಶ್ವವಿದ್ಯಾಲಯ ಕಾರ್ಯಾಲಯ https://hassanuniversity.ac.in./Home.aspx.
ದೂರವಾಣಿ ಸಂಖ್ಯೆ:08172-220014 ಇ-ಮೇಲ್:reg.hassan.uni@gmail.com

ಇ-ಟೆಂಡರ್

ಇ-ಟೆಂಡರ್ ಸಂ.HU/2025-26/SE0007ರ ಮೂಲಕ ಹೊರಗುತ್ತಿಗೆಯಲ್ಲಿ ಮಾನವ ಸಂಪನ್ಮೂಲ ಸೇವೆಯನ್ನು ಒಂದು ವರ್ಷದ ಅವಧಿಗೆ ಪಡೆಯಲು ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿ ಆಸಕ್ತದಾರರು ಭಾಗವಹಿಸಲು ಕೋರಿದೆ. ಟೆಂಡರ್‌ನ ಮೊತ್ತ ಮತ್ತು ವೇಳಾಪಟ್ಟಿ ಈ ಕೆಳಕಂಡಂತಿದೆ. ಕ್ರ.ಸಂ.ವಿವರ 1.ಮಾನವ ಸಂಪನ್ಮೂಲ ಸೇವ ಸಂಗ್ರಹಣೆ ಅಂದಾಜು ಮೊತ್ತ:40,38,885 ರೂಪಾಯಿಗಳು ಟೆಂಡರ್ ವೇಳಾಪಟ್ಟಿ ಕ್ರ.ಸಂ.ವಿವರ 1.ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕಡೆ ದಿನಾಂಕ 27.3.2026 ಸಮಯ 05.00 ಪಿ.ಎಂ 2.ಇ-ಪ್ರೊಕ್ಯೂರ್‌ಮೆಂಟ್‌ನಂತೆ ಟೆಂಡರ್‌ಗೆ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ 17.03.2026 ಸಮಯ 11.00 ಪಿ.ಎಂ 3.ಇ-ಪ್ರೊಕ್ಯೂರ್‌ಮೆಂಟ್‌ನಂತೆ ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 31.03.2026 ಸಮಯ 05.30 ಪಿ.ಎಂ 4.ತಾಂತ್ರಿಕ ಬಿಡ್ ತೆರೆಯುವ ದಿನಾಂಕ 02.04.2026 ಸಮಯ 11.00 ಎ.ಎಂ 4.ಆರ್ಥಿಕ ಬಿಡ್ ತೆರೆಯುವ ದಿನಾಂಕ 04.04.2026 ಸಮಯ 11.00 ಎ.ಎಂ ಆಸಕ್ತ ಅರ್ಹತೆಯುಳ್ಳ ಸಂಸ್ಥೆಯವರು ನಿಗಧಿತ ದಿನಾಂಕದೊಳಗೆ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಇ-ಟೆಂಡರ್‌ನ ಹೆಚ್ಚಿನ ವಿವರವನ್ನು, ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://kppt.karnataka.gov.in ನಲ್ಲಿ ಜಾಲತಾಣದಲ್ಲಿ ಪಡೆಯಬಹುದಾಗಿದೆ.

ಸಹಿ/-ಬಿ.ಎ.ಜಗದೀಶ, ಕೆ.ಎ.ಎಸ್.
ಕುಲಸಚಿವರು, ಹಾ.ವಿ.ಹಾಸನ

ವಾಸಾಸಂಇ/ಹಿಸನಿ/ಹಾಸನ/1181/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ
ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಕಚೇರಿ,

ಲೋಕೋಪಯೋಗಿ ಕಟ್ಟಡ ಸಂಕೀರ್ಣ, ನೆಹರೂ ಮೈದಾನ ರಸ್ತೆ,
ದಕ್ಷಿಣ ಕನ್ನಡ, ಮಂಗಳೂರು – 575001. ದೂ: 0824-2423672
ಇಮೇಲ್: dhodkannada2019@gmail.com

ಸಂ.: ಎಸ್‌ಯುಪಿ/64/2025-26 ದಿನಾಂಕ: 13-03-2026

ಟೆಂಡರ್ ಪ್ರಕಟಣೆ (ಇ-ಸಂಗ್ರಹಣೆ ವೇದಿಕೆ ಮೂಲಕ)

ವಿಷಯ: 2026-27 ನೇ ಸಾಲಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ 159 ಗ್ರೂಪ್ ಡಿ, 15 ವಾಹನ ಚಾಲಕರು, 1 ಶುಶ್ರೂಷಕಿ, 1 ಗಣಕಯಂತ್ರ ಸಹಾಯಕರ ಸೇವೆಯನ್ನು ನೋಂದಾಯಿತ ಹೊರಸಂಪನ್ಮೂಲ ಏಜೆನ್ಸಿ ಮುಖಾಂತರ ಎರಡು ಟೆಂಡರ್ ಡಾಕ್ಯೂಮೆಂಟ್ ಸಿಸ್ಟಂನಲ್ಲಿ ಪಡೆಯುವ ಬಗ್ಗೆ.

ವಿಷಯ: (1) ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ/ ದಸ್ತಾವೇಜು ಡೌನ್‌ಲೋಡ್ ದಿನಾಂಕ: 12-03-2026 (2) ಇ-ಟೆಂಡರ್ ಮೊತ್ತ: ರೂ. 4,45,00,000.00 (ನಾಲ್ಕು ಕೋಟಿಯ ನಲವತ್ತೈದು ಲಕ್ಷ ಮಾತ್ರ) (3) ಪ್ರೀ-ಬಿಡ್ ಸಭೆ: ದಿನಾಂಕ: 23-03-2026 ಅಪರಾಹ್ನ 03.00 ಗಂಟೆಗೆ (4) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25-03-2026 ಸಮಯ: 04.00 ಗಂಟೆಗೆ (5) ಇ-ಟೆಂಡರ್ ದಸ್ತಾವೇಜನ್ನು (ಇ-ಪ್ರೊಕ್ಯೂರ್‌ಮೆಂಟ್ ಅಂತರ್ಜಾಲ ಮುಖಾಂತರ) ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 12-04-2026 ಅಪರಾಹ್ನ 04.00 ಗಂಟೆಗೆ (6) ತಾಂತ್ರಿಕ ಲಕೋಟೆ ತೆರೆಯುವ ವೇಳೆ ಮತ್ತು ದಿನಾಂಕ: 13-04-2026 ಅಪರಾಹ್ನ 04.00 ಗಂಟೆಗೆ. ಸ್ಥಳ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಕಚೇರಿ ಕೊಠಡಿ, ದ.ಕ. ಮಂಗಳೂರು. (7) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: ಸೂಚಿಸಲಾಗುವುದು.

(8) ಪಡೆಯಲು ಬಯಸಿರುವ ಸೇವೆಗಳ ವಿವರ ಮತ್ತು ಸಂಖ್ಯೆ

1.	ಗ್ರೂಪ್ ಡಿ	159
2.	ವಾಹನ ಚಾಲಕರು	15
3.	ಶುಶ್ರೂಷಕಿ	1
4.	ಗಣಕಯಂತ್ರ ಸಹಾಯಕ	1

(9) ಟೆಂಡರ್ ಲಕೋಟೆಯನ್ನು ತೆರೆಯುವ ಸ್ಥಳ ಮತ್ತು ಸಂಪರ್ಕಿಸಲಾದ ವಿಳಾಸ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಕಚೇರಿ, ದ.ಕ. ಲೋಕೋಪಯೋಗಿ ಕಟ್ಟಡ, ನೆಹರು ಮೈದಾನದ ಎದುರುಗಡೆ, ಮಂಗಳೂರು. (10) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ: ರೂ. 6,68,000/- (ರೂಪಾಯಿ ಆರು ಲಕ್ಷದ ಅರವತ್ತ ಎಂಟು ಸಾವಿರ ಮಾತ್ರ)

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

DIPR/DK/KSMCA/1756/
25-26 dt.13.03.2026

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ,
ಕನೀನಿನಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ
ನಂ-1, ಮುಂಡರಗಿ, ಗದಗ ಜಿಲ್ಲೆ. Ph No: 08371 – 295016
E-mail ID : **eeslis1mdg@gmail.com**

ಅಲ್ಪಾವಧಿ ಟೆಂಡರ್ ಪ್ರಕಟಣೆ
(ONLY THROUGH “KPP-Procurement” SYSTEM)

ಉಲ್ಲೇಖ : 1. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 1546/2025-26 ದಿನಾಂಕ: 12.03.2026

ಸಿಂಗಟಾಲೂರು ಏತ ನೀರಾವರಿ ಯೋಜನೆ ಮುಂಡರಗಿ ಕಛೇರಿವತಿಯಿಂದ ಗದಗ ಜಿಲ್ಲೆ ಮುಂಡರಗಿ ತಾಲೂಕಿನ ರಾಮೇನಹಳ್ಳಿ ಮತ್ತು ಬೆನ್ನಿಹಳ್ಳಿ ಗ್ರಾಮಗಳ ನಡುವೆ ಇರುವ ಚೆಕ್ ಡ್ಯಾಂ ದುರಸ್ಥಿ ಕಾಮಗಾರಿಗೆ ಲೆಕ್ಕಶೀರ್ಷಿಕೆ **4701** ರಡಿ ಉಲ್ಲೇಖ(1)ರ ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವಂತೆ, ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಕೆಪಿಪಿ-ಪೋರ್ಟಲ್ ಮೂಲಕ **Work Indent No.4198** ರಂತೆ ಟೆಂಡರನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿ ಕಾಮಗಾರಿಯ ಟೆಂಡರ್‌ಗೆ ಇಟ್ಟ ಮೊತ್ತವು (ಜಿ.ಎಸ್.ಟಿ. ಸೇರಿ) ರೂ. **197.06** ಲಕ್ಷ ಆಗಿರುತ್ತದೆ ಹಾಗೂ ಈ ಕಾಮಗಾರಿಗೆ ಇ.ಎಂ.ಡಿ. ಮೊತ್ತವು ರೂ. **2.51** ಲಕ್ಷಗಳು ಆಗಿರುತ್ತದೆ. ಇನ್ನುಳಿದಂತೆ, ಸದರಿ ಟೆಂಡರಿಗೆ ಸಂಬಂಧಿಸಿದ ಷರತ್ತು / ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ದಿನಾಂಕ : **12.03.2026** ರ ನಂತರ **“https://kppp.karnataka.gov.in”** ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ : **24.03.2026** ಎಂದು ಮತ್ತು ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : **25.03.2026** ಎಂದು ನಿಗದಿಪಡಿಸಿದೆ. ಅದರಂತೆ, ಸದರಿ ಟೆಂಡರ್‌ಗಳ ಕುರಿತು **Pre-bid** ಸಭೆಯನ್ನು ದಿನಾಂಕ : **17.03.2026** ರಂದು ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ-01 ಮುಂಡರಗಿ ಕಛೇರಿಯಲ್ಲಿ ನಿಗದಿಪಡಿಸಲಾಗಿರುತ್ತದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು **KPP-Procurement Helpdesk Phone No : 080-46010000, 080-68948777, 09240214000 & 09240214001** ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಸಿಂ.ಏ.ನೀ.ಯೋಜನೆ, ನಂ. 1 ವಿಭಾಗ, ಕ.ನೀ.ನಿ.ನಿ., ಮುಂಡರಗಿ, ಜಿ॥ ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/706/2025-26

ಕ್ರಿ.ಮಿ. ನಂ. 12/2026
ಮಾನ್ಯ 3ನೇ ಅಧಿಕ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ
ಅರ್ಜಿದಾರಳು : ಶ್ರೀಮತಿ ಲಕ್ಷ್ಮೀಬಾಯಿ ಕೋಂ ಪಾಂಡುರಂಗಸಾ ಜೋಷಿ
ವಿರುದ್ಧ
ಎದುರುಗಾರರು : ಮಾನ್ಯ ಆಯುಕ್ತರು, ಜನನ ವ ಮರಣ ನೋಂದಣಾಧಿಕಾರಿಗಳು, ಹು.ಧಾ.ಮ. ಪಾಲಿಕೆ, ಹುಬ್ಬಳ್ಳಿ ಮತ್ತು ಇನ್ನೊಬ್ಬರು

ನೋಟಿಸು

ಈ ಮೇಲ್ಕಂಡ ಪ್ರಕರಣವನ್ನು, ಅರ್ಜಿದಾರಳು ಮೃತ ತನ್ನ **ಗಂಡನಾದ ಪಾಂಡುರಂಗಸಾ ತಂದೆ ಯಲ್ಲಪ್ಪ ಜೋಷಿ ಇವರು ದಿನಾಂಕ : 01-06-2021** ರಂದು ಯಶಸ್ವಿನಿ ಅಪಾರ್ಟಮೆಂಟ್, ಗಾಂಧಿನಗರ, ಗೋಕುಲ ರಸ್ತೆ, ಹುಬ್ಬಳ್ಳಿಯ ಮನೆಯಲ್ಲಿ ಪೋತಿಯಾಗಿದ್ದು ಅಂತಾ, ಸದರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ದಾಖಲಿಸಿರುತ್ತಾರೆ.

ಸದರ ಮರಣ ದಾಖಲಾತಿ ಆದೇಶ ಪಡೆದು ಕೊಳ್ಳುವ ಕುರಿತು ಯಾರದಾದರೂ ಯಾವುದೇ ರೀತಿಯ ಹಕ್ಕು ಹಿತ ಸಂಬಂಧ ತಂಟೆ ತಕರಾರು ವಗೈರೆ ಇದ್ದಲ್ಲಿ ಅವರ ಹಾಜರಾತಿಗಾಗಿ ದಿ:17-04-2026 ರಂದು ಮುಂಜಾನೆ 11 :00 ಗಂಟೆಗೆ ಮುದ್ದತ್ತು ನೇಮಿಸಿದ್ದು ಆ ದಿವಸ ಸದರಿಯವರು ತಾವಾಗಲಿ ತಮ್ಮ ವಕೀಲರ ಮುಖಾಂತರ ಹಾಜರಾಗತಕ್ಕದ್ದು ತಪ್ಪಿದಲ್ಲಿ ಪ್ರಕರಣವನ್ನು ನಿರ್ಣಯಿಸಲಾಗುವದು.

ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ದಿ:12-03-2026 ರಂದು ಇದನ್ನು ಕೊಡಲಾಗಿದೆ.

ಹುಬ್ಬಳ್ಳಿ (ಕೋರ್ಟ ಮೊಹರು) ಕೋರ್ಟಿನ ಆಜ್ಞೆಯ ಮೇರೆಗೆ ಸಹಿ/-ಶಿರಸ್ತೇದಾರರು
12-03-2026 ಮಾನ್ಯ 3ನೇ ಅಧಿಕ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ
ಮಂಜುನಾಥ ಹೆಚ್.ಅಲದಕಟ್ಟಿ
ಅರ್ಜಿದಾರಳ ಪರ ವಕೀಲರು, ಹುಬ್ಬಳ್ಳಿ.

ಕಳೆದಿದೆ

ಜಿ.ಎಸ್.ಸಿ ಸಂಖ್ಯೆ / GSC No: P01485260600287 velas zoal / Ref No:
ಅರ್ಜಿ ನಮೂನೆ / Petition Type : Documents Lost
Date: 08/03/2026
1. ಅರ್ಜಿದಾರರ ಹೆಸರು / Name: Akbar Khajisab Kadoli
2. ವಿಳಾಸ /Address : Atahni, Tq. Athani, Belagavi Dist., Karnataka - 591304
3. ಮೊಬೈಲ್ ನಂ. / Mobile No : 9448420338
4. ತೆಗೆದುಕೊಂಡಿರುವ ಕ್ರಮ / Action Taken: ಕಳೆದು ಹೋದ ಖರೀದಿ ದಸ್ತ ಬಗೆ ತಪಾಸಣೆ ಕೈಕೊಂಡಿದ್ದು ಆದೆ
5.ಹಿಂಬರಹದ ವಿವರಗಳು / Endorsement Details:

ಸಾರ್ವಜನಿಕರ ಗಮನಕ್ಕೆ

ನಿಮ್ಮ ತಂದೆಯಾದ ಮೃತ ಖಾಜಿಸಾಬ ಅಪ್ಪಾಲಾಲ ಕಡೋಲಿ ಇವರು ಅಥಣಿ ಪಟ್ಟಣದ ಹದ್ದಿ ರಿ ಸ ನಂ. 1219 / ಕ ಪ್ಲಾಟ ನಂ 01 ಮತ್ತು 02 ಇವುಗಳನ್ನು ಗೋಲಪ್ಪ @ ಶಶಿಕಾಂತ ತಂದೆ ಮುರಗೆಪ್ಪ ಹುಲಕುಂದ ಇವರ ಕಡೆಯಿಂದ ಖರೀದಿ ಪಡೆದುಕೊಂಡಿದ್ದು, ಅವುಗಳ ದಸ್ತ ನಂ. 4383

ನೇದ್ದು ಇದ್ದು, ಸದರ ಖರೀದಿ ದಸ್ತ ಕಳೆದು ಹೋಗಿದ್ದು ಸದರ ಖರೀದಿ ದಸ್ತ ಬಗ್ಗೆ ನಾವು ತಪಾಸಣೆ ಮಾಡಿದ್ದು ಪತ್ತೆ ಆಗಿರುವುದಿಲ್ಲ.

ಕ್ರಮ ಕೈಗೊಂಡವರು
ಸಹಿ/-, ಠಾಣಾಧಿಕಾರಿಗಳು
ಅಥಣಿ ಪೋಲಿಸ್ ಠಾಣೆ

CHANGE OF NAME

I, **SHIVRAJ** (old name) Resident of 194/B, KCC Bank Colony, Gamanagatti Road, Navanagar, Hubli - 580025, have changed my name as **SHIVRAJ RUDRAGOUDA** (new name) henceforth I will be called and recognized by new name for all future purposes, dated: 13/03/2026.

CHANGE OF NAME

I, **MANJUNATHA VISHWANATHA RAO SUTRAVE** (old name) Resident of 2543/3B, 6th Main, MCC A Block, Near Sukruthindra Kalyanamantapa, Davangere - 577004, have changed my name as **MANJUNATH VISHWANATHA RAO SUTRAVE** (new name) henceforth I will be called and recognized by new name for all future purposes, dated: 13/03/2026.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ,
ಕೇಂದ್ರ ಕಚೇರಿ, ಹುಬ್ಬಳ್ಳಿ

ಟೆಂಡರ್ ಪ್ರಕಟಣೆ ಸಂ. 14/2025-26 ದಿನಾಂಕ: 13-03-2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆಪಿಪಿ) ಯ ಮೂಲಕ

ಆಸಕ್ತ ಬಿಡ್‌ದಾರರಿಂದ ಈ ಕೆಳಗೆ ತೋರಿಸಿದಂತೆ ಸಾಮಗ್ರಿಗಳ ಸರಬರಾಜಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಟೆಂಡರ್ ವಿವರಣೆ	ಅಂದಾಜು ಮೌಲ್ಯ
1	ಟೈರ್, ಟ್ಯೂಬ್ ಮತ್ತು ಫ್ಲ್ಯಾಪ್‌ಗಳು.	ರೂ. 1817.00 ಲಕ್ಷ
2	ಗೇರ್ ಮತ್ತು ಗೇರ್ ಬಿಡಿಭಾಗಗಳು.	ರೂ. 819.00 ಲಕ್ಷ
3	ಪಿಸಿಟಿಆರ್ (ಟ್ರೆಡ್ ರಬ್ಬರ್) ಮತ್ತು ಸಂಯೋಜಿತ ಸಾಮಗ್ರಿಗಳು.	ರೂ. 642.00 ಲಕ್ಷ
4	ಗ್ಯಾಸ್ಕೆಟ್‌ಗಳು.	ರೂ. 234.00 ಲಕ್ಷ
5	ಟೈ ರಾಡ್, ಪುಶ್ ರಾಡ್ ಕಿಟ್ಸ್, ಎಂಡ್ಸ್ ಮತ್ತು ಅಸೆಂಬ್ಲಿಗಳು	ರೂ. 145.00 ಲಕ್ಷ
6	ಫೀನಾಲ್ ಬಾಂಡೆಡ್ ಡೆನ್ಸಿಫೈಡ್ ಕಾಂಪ್ರೆಸ್ಡ್ ವುಡನ್ ಫ್ಲೋರ್ ಬೋರ್ಡ್‌ಗಳು.	ರೂ. 82.00 ಲಕ್ಷ
7	ಪ್ಲೈವುಡ್ ಶೀಟ್‌ಗಳು.	ರೂ. 64.02 ಲಕ್ಷ

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಸಮಯ: ಟೆಂಡರ್ ಕ್ರ.ಸಂ. 1 ರಿಂದ 4 ರಲ್ಲಿನ ಟೆಂಡರ್‌ಗಳಿಗೆ **13-04-2026**. ಕ್ರ. ಸಂ. 5 ರಿಂದ 7 ರಲ್ಲಿರುವ ಟೆಂಡರ್ ಗಳಿಗೆ ದಿನಾಂಕ: **02-04-2026** ಗಂಟೆ: **17:30** ರವರೆಗೆ.

ವಿವರಗಳಿಗಾಗಿ ವೆಬ್ ಸೈಟ್: **http://kppp.karnataka.gov.in** ಅಥವಾ ಮೊಬೈಲ್ ಫೋನ್ ಸಂಖ್ಯೆ **7022009113** ಗೆ ಸಂಪರ್ಕಿಸಿ.

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು,
(ಟೆಂಡರ್ ಕರೆಯುವ ಪ್ರಾಧಿಕಾರ)

ವಾ.ಸಾ.ಇ/ಧಾರವಾಡ/1352/ದೇಶಪಾಂಡೆಪಬ್ಲಿಸಿಟಿ/2025-26

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಕೊಪ್ಪಳ. ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೊಪ್ಪಳ.

ಸಂಖ್ಯೆ:ಗ್ರಾ.ಕು.ನೀ & ನೈ/ವಿಕೊ/ಟೆಂಡರ್/2025-26/1476 ದಿನಾಂಕ: 13.03.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ http://kppp.karnataka.gov.in ಪೋರ್ಟ್‌ಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2026-27 ನೇ ಸಾಲಿನ ವಿಭಾಗ ಮತ್ತು ಉಪ-ವಿಭಾಗ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಸಮಾಲೋಚಕರು ಒದಗಿಸುವ ಕುರಿತು ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಪೋರ್ಟ್‌ಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು: 1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ email:eerwsskpl@gmail.com ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ: **17/03/2026** ರಿಂದ Download ಮಾಡಿಕೊಳ್ಳಬಹುದಾಗಿದೆ.

ಟೆಂಡರ್ ಪ್ರೋಸೆಸಿಂಗ್ ಶುಲ್ಕ: ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ: 12 ತಿಂಗಳು ಟೆಂಡರ್ ಆಕ್ಷೇಪಣೆ/ ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು: **17/03/2026** ಸಮಯ 10:00 ಗಂಟೆಯಿಂದ **26/03/2026** ಸಮಯ 16:00 ಗಂಟೆವರೆಗೆ ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : **17/03/2026** ಸಮಯ 10:00 ಗಂಟೆಯಿಂದ **26/03/2026** ಸಮಯ 16:00 ಗಂಟೆವರೆಗೆ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **27/03/2026** ರಂದು 16:30 ಗಂಟೆಗೆ ಕಛೇರಿ ಸಮಯದಲ್ಲಿ ಅಥವಾ ರಜಾಇದ್ದ ಪಕ್ಷದಲ್ಲಿ ಮರುದಿನ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ **30/03/2026** ರಂದು ಅಥವಾ ತಾಂತ್ರಿಕ ಬಿಡ್ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದ ನಂತರ

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ ನಂತರ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಸಹಿ/-ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ಡಿಐಪಿಆರ್/ಕೊಪ್ಪಳ/752/ಕೆಎಸ್‌ಎಂಸಿಎ/2025-26

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)
(CIN: U31401KA2002SGC030437)
ನಿಗಮ ಕಚೇರಿ, ನವನಗರ, ಹುಬ್ಬಳ್ಳಿ-580025
E-mail ID: seepmc.hescom@gmail.com / eepmc2.hescom@gmail.com
Website: www.hescom.gov.in

No: HESCOM/SEE(PMC)/EE-P1/AEE-2/2025-26/CYS12362 Date 13-03-2026

ಟೆಂಡರ ಪ್ರಕಟಣೆ
(ಕೆ.ಪಿ.ಪಿ.ಪಿ. ಮೂಲಕ ಮಾತ್ರ)

ಅಧೀಕ್ಷಕ ಇಂಜನೀಯರ (ವಿ), ಪಿಎಮ್‌ಸಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಪೂರ್ಣ ಗುತ್ತಿಗೆ ಆಧಾರದಡಿಯಲ್ಲಿ ಕೆಳಕಂಡ ಕಾಮಗಾರಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ.

Sl. No	Particulars	Bid indent No for SC Category	Bid indent No for ST Category	Bid indent No for CAT-I	Bid indent No for CAT-II-A	Bid indent No for Others
1	ಹಾಲಿ ಇರುವ ವಿದ್ಯುತ್ ಉಪಕೇಂದ್ರಗಳಿಂದ 11ಕೆವಿ ವಿದ್ಯುತ್ ಮಾರ್ಗಗಳ ನಿರ್ಮಾಣ	HESCOM/ 2025-26/EL/ WORK_INDENT 1070, 1079, 1084, **(3 packages)**	HESCOM/ 2025-26/ EL/ WORK_ INDENT 1089,		HESCOM/ 2025-26/EL/ WORK_ INDENT 1071, 1087, 1093, **(3 packages)**	HESCOM/2025-26/EL/WORK_INDENT 1051, 1052 1053, 1054, 1055, 1056, 1057, 1058, 1059, 1060, 1061, 1062, 1063, 1072, 1073, 1074, 1075, 1076, 1077, 1078, 1080, 1081, 1082, 1083, 1085, 1086, 1088, 1090, 1091, 1092, 1094, 1095, 1096, 1097 & 1098 **(35 packages)**
2	11ಕೆವಿ ವಿದ್ಯುತ್ ಮಾರ್ಗಗಳವಾಹಕ ಬದಲಾವಣೆ ಕಾಮಗಾರಿಗಳು.	HESCOM/ 2025-26/EL/ WORK_INDENT 983, 1001, **(2 packages)**	HESCOM/ 2025-26/EL/ WORK_ INDENT 1002 & 1010, **(2 packages)**	HESCOM/ 2025-26 / EL/ WORK_ INDENT 993, 997, **(2 packages)**	HESCOM/ 2025-26/ EL/WORK_I NDENT 1004, 1023, 1040 & 1046 **(4 packages)**	HESCOM/2025-26/EL/WORK_INDENT 977, 978,979, 980, 981, 982, 984, 985, 986, 987, 988,991, 992, 994, 995, 996, 998, 999, 1000, 1003, 1005, 1006, 1007, 1008, 1009, 1011, 1012, 1024, 1025, 1026, 1027, 1028, 1029, 1030, 1031, 1032, 1033, 1034, 1035, 1036, 1037, 1038, 1039, 1041, 1042, 1043, 1044, 1045, 1047, 1048, 1049 & 1050 **(52 packages)**

ಸದರಿ ಟೆಂಡರಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್ www.kppp.karnataka.gov.in ರಲ್ಲಿ ದಿನಾಂಕ: **13.03.2026 ರ 5:00 PM** ನಂತರ ಪಡೆಯಬಹುದು.

ಸಹಿ/-
ಅಧೀಕ್ಷಕ ಇಂಜನೀಯರರು(ವಿ)
(ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ

ಡಿಐಪಿಆರ್/ಧಾರವಾಡ/1354/ಮಣಿಪಾಲ್/2025-26



THE CAMPCO LTD

P B NO.223, VARANASHI TOWERS, MISSION STREET, MANGALURU – 575001 (D.K),Karnataka | Ph: +91-0824-2888211/225 | Email: administration@campco.org

OPPORTUNITIES

Applications are invited from the eligible candidates for the following post:

Sl. No.	Name of the Post	Educational qualification & Experience	No. of Posts
1	JUNIOR EXECUTIVE (LAW)	LLB with a minimum 5 years of experience.	1

For more details visit at our website **www.campco.org** /careers tab

Place: Mangalore
Date: 13. 03. 2026

Sd/-
Managing Director

ಕಲಬುರಗಿ, ಮಹಾನಗರ ಪಾಲಿಕೆ, ಕಲಬುರಗಿ

ದೂರವಾಣಿ : 08472 – 278675, ಫಾಕ್ಸ್ : 08472/260776, ಇ-ಮೇಲ್ : itstaff_ulb_gulbarga@yahoo.com

No.KMP/NULM/SUH/01/2025-26/ ದಿನಾಂಕ : 12.03.2026

ಟೆಂಡರ್ ಪ್ರಕಟಣೆ

1) ಕಾಮಗಾರಿಯ ವಿವರ : ಕಲಬುರಗಿ ಮಹಾನಗರ ಪಾಲಿಕೆಯಿಂದ ನಲ್ಮ ಯೋಜನೆಯಡಿಯಲ್ಲಿ (05) ನಿರ್ಗತಿಕ ವಸತಿ ಕೇಂದ್ರಗಳ ವಾರ್ಷಿಕ ನಿರ್ವಹಣೆಗಾಗಿ ಕೆ.ಸಿ. -1 ರ ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಸಂಕ್ಷಿಪ್ತ ಟೆಂಡರ್ ಕರೆಯಲಾಗಿದೆ. 2) ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : ಗರಿಷ್ಠ **ರೂ.10,18,147.00** ಮತ್ತು ಕನಿಷ್ಠ ಮೊತ್ತ **ರೂ.8,38,147.00,** 3) ಗುತ್ತಿಗೆದಾರರ ಅರ್ಹತೆ : ನೊಂದಾಯಿತ ಸಂಘ ಸಂಸ್ಥೆಗಳು, 4) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ : 13.04.2026 ಸಾಯಂಕಾಲ 4.30 ಗಂಟೆಯವರೆಗೆ, 5) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಟೆಂಡರ್ ಫಾರಂ ಬೆಲೆ As per e- Portal, EMD ಗರಿಷ್ಠ **ರೂ.25,000.00,** ಮತ್ತು ಕನಿಷ್ಠ ಮೊತ್ತ **ರೂ.21,000.00,** 6) ಟೆಂಡರ್ ತೆರೆಯುವ ದಿನಾಂಕ : **ಆರ್ಥಿಕ : 15.04.2026** ಸಾಯಂಕಾಲ 4.35 ಗಂಟೆಗೆ, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ 8) ಅಂತರಜಾಲ ತಾಣದ ವಿಳಾಸ www.kppp.karnataka.gov.in/

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/1168/ದೇಶಪಾಂಡೆ ಪಬ್ಲಿಸಿಟಿ/2025-26

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು-570017, ದೂರವಾಣಿ ಸಂಖ್ಯೆ: 94489994705
ಇ-ಮೇಲ್ ಐಡಿ: **gmpurc@cescmysore.org** ವೆಬ್‌ಸೈಟ್:**www.cescmysore.org**

ಚಾವಿಸನಿನಿ/ಪ್ರವ್ಯ/ಟಿ.ಎto ಎಂ.ಡಿ/2025-26/42323 ದಿನಾಂಕ: 12.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾವಿಸನಿನಿ ವತಿಯಿಂದ ಅರ್ಹ ಬಿಡ್ಡುದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ.ಸಂ	ಸಾಮಾಗ್ರಿಗಳ ವಿವರ	ವಿಚಾರಣೆ ಸಂಖ್ಯೆ/ದಿನಾಂಕ
1	ಚಾವಿಸನಿನಿಯ ನಿಗಮ ಕಛೇರಿ ಹಾಗೂ ವ್ಯವಸ್ಥಾಪಕ ನಿರ್ದೇಶಕರವರ ಗೃಹ ಕಛೇರಿಯಲ್ಲಿ ಶಕ್ತಿ ಸಂರಕ್ಷಣೆಗಾಗಿ IoT ಆಧಾರಿತ ವೈರ್‌ಲೆಸ್ ಸ್ಮಾರ್ಟ್ ಆಫೀಸ್ ಆಟೋಮೇಷನ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವ ಕಾಮಗಾರಿ	C2-6480/12.03.2026

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ದಿನಾಂಕ **16.03.2026** ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ **+91-8046010000, +91-8068948777** ಅಥವಾ ಇ-ಮೇಲ್ ವಿಳಾಸ **support@eprochelpdesk.com.** ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ವಾಸಾಸಂಇ/ಮೈಸೂರು/829/ಎಸ್‌ಎಸ್‌ಸಿ/2025-26

ಸಹಿ/- ಪ್ರಧಾನ ವ್ಯವಸ್ಥಾಪಕರು (ಖರೀದಿ) ಚಾವಿಸನಿನಿ, ಮೈಸೂರು

ಕರ್ನಾಟಕ ಸರಕಾರ

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ

ಟೆಂಡರ್ ಪ್ರಕಟಣೆ ಸಂ: ಕಾಇಂ:ಪಂರಾಇಂವಿಉ: ಟೆಂಡರ್‌ಪ್ರಕಟಣೆ ನಂ.22/2025-26:ಎಇ-4872/ದಿನಾಂಕ : 12/03/2026

ಟೆಂಡರ್ ಪ್ರಕಟಣೆ
(ಇ-ಪೋರ್ಟಲ್ ಪದ್ಧತಿಯಲ್ಲಿ e-portal ನಡಿಯಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ 2025-26 ಸಾಲಿನ ಜಿಲ್ಲಾ ವಿಪತ್ತು ಉಪಶಮನ ನಿಧಿ (SDMF)ರಡಿಯ ಅನುದಾನದ ಯೋಜನೆಯಡಿಯಲ್ಲಿನ ಈ ಕೆಳಗಿನ ಕಾಮಗಾರಿಗಳಿಗೆ ಇ-ಪೋರ್ಟಲ್ ಪದ್ಧತಿಯಲ್ಲಿ(Standard Tender Documents for Procurement of Goods)ನ ನಿಬಂಧನೆಗೊಳಪಟ್ಟಂತೆ ನೋಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು ಇ-ಪೋರ್ಟಲ್ ಮೂಲಕ ನಮೂದಿಸಿದ ದಿನಾಂಕದಂದು Government of Karnataka e-procurement portal WEB site https://www.kppp.karnataka.gov.in ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು.

ಕ್ರ. ಸಂ	ಕಾಮಗಾರಿಗಳ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ ರೂ.ಗಳಲ್ಲಿ	ಗುತ್ತಿಗೆದಾರರ ಅರ್ಹತೆ
1	Construction of a Retaining Wall at landslide area of Palimar Kote road in the Palimaru Grama Panchayat area of kaup Taluk. (Reserved For CAT-IIA)	70.00	70000.00	ಕ್ಲಾಸ್-3 ಮತ್ತು ಮೇಲ್ಪಟ್ಟು (CAT-II ಗುತ್ತಿಗೆದಾರರು ಮಾತ್ರ)
2	Construction of a Retaining Wall at landslide area of Maltaru Katchettu, Handadi Grama Panchayat of Brahmavara Taluk.	15.00	37500.00	ಕ್ಲಾಸ್-4 ಮತ್ತು ಮೇಲ್ಪಟ್ಟು
3	Protection wall at Huiyaramakki on kabbinale Marmannu Nadubettu link road Madamakki Village of Hebri Taluk.	100.00	200000.00	ಕ್ಲಾಸ್-3 ಮತ್ತು ಮೇಲ್ಪಟ್ಟು
4	Protection wall at the hill behind Durga Anganavadi in Durga Village of Kakala Taluk	30.00	60000.00	ಕ್ಲಾಸ್-3 ಮತ್ತು ಮೇಲ್ಪಟ್ಟು
5	Construction of a Retaining Wall at landslide area of near the Government Higher Primary School, Mudradi Grama panchayath of Hebri Taluk. (Reserved For CAT-IIA)	60.00	60000.00	ಕ್ಲಾಸ್-3 ಮತ್ತು ಮೇಲ್ಪಟ್ಟು (CAT-II ಗುತ್ತಿಗೆದಾರರು ಮಾತ್ರ)

1. ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ:12.03.2026ರಿಂದ 20.03.2026ರ 4.00 (PM) ಗಂಟೆಯವರೆಗೆ.
2. ಟೆಕ್ನಿಕಲ್ ಬಿಡ್ಡುಗಳನ್ನು ತೆರೆಯುವ ದಿನಾಂಕ : 23-03-2026ರ 10.00 (AM) ಗಂಟೆಯ ನಂತರ.
3. ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 26-03-2026ರ 11.00 (AM) ಗಂಟೆಯ ನಂತರ.

ಇನ್ನಿತರೆ ನಿಬಂಧನೆಗಳು, ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ವೆಬ್‌ಸೈಟ್ **https://www.kppp.karnataka.gov.in**ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಚೇರಿಯವರಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದ ರಾವ್ ವೃತ್ತ, ಬೆಂಗಳೂರು – 560 009

ಸಂ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಸಿಎಂಟಿ/ಟಿಎನ್‌ಡಿ/2025-26 ದಿನಾಂಕ: 13.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕದ ಕೆಆರ್‌ಐಡಿಎಲ್ ಉಪ ವಿಭಾಗಗಳಿಗೆ ಸಿಮೆಂಟ್ ಪೂರೈಕೆಗಾಗಿ ಕೆಳಗೆ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದಂತೆ ಕಳೆದ 3 ಹಣಕಾಸು ವರ್ಷಗಳಲ್ಲಿ ವಾರ್ಷಿಕ ವಹಿವಾಟು ಹೊಂದಿರುವ ತಯಾರಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ತಯಾರಕರು/ಏಜೆಂಟರು/ಡೀಲರ್‌ಗಳು ಇ-ಆಡಳಿತ ಸಚಿವಾಲಯದ ಮೂಲಕ ಮಾತ್ರ ವೀಕ್ಷಿಸಬಹುದು, ಡೌನ್‌ಲೋಡ್ ಮಾಡಬಹುದು ಮತ್ತು ಅರ್ಜಿ ಸಲ್ಲಿಸಬಹುದು. ನೂತನ ವೆಬ್‌ಸೈಟ್: **www.kppp.karnataka.gov.in** ಸಂಪರ್ಕಿಸಿ: +91 9240214000, +91 9240214001, +91 80 68948777, +91 80 46010000.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರಿಗಿಟ್ಟಿರುವ ಒಪಿ ಸಿಮೆಂಟ್ ಪ್ರಮಾಣ ಚೀಲಗಳಲ್ಲಿ	ಟೆಂಡರಿಗಿಟ್ಟಿರುವ ಪಿಪಿ ಸಿಮೆಂಟ್ ಪ್ರಮಾಣ ಚೀಲಗಳಲ್ಲಿ	ಟೆಂಡರಿಗಿಟ್ಟಿರುವ ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ. ಲಕ್ಷಗಳಲ್ಲಿ	ಸಂಸ್ಥೆಯು ಹೊಂದಿರಬೇಕಾದ ವಾರ್ಷಿಕ ವಹಿವಾಟು ರೂ.ಲಕ್ಷಗಳಲ್ಲಿ
1	ಟೆಂಡರ್ ಭಾಗ-I, ಬೆಂಗಳೂರು ಮತ್ತು ಬಿಬಿಎಂಪಿ ವಲಯ ಒಪಿ ಸಿಮೆಂಟ್	158900	-	487.82	7.32	1561.00
2	ಟೆಂಡರ್ ಭಾಗ-II, ಕೇಂದ್ರ (ಚಿತ್ರದುರ್ಗ) ವಲಯ ಒಪಿ ಸಿಮೆಂಟ್	386500	-	1186.55	15.00	3796.00
3	ಟೆಂಡರ್ ಭಾಗ-III, ಮೈಸೂರು ವಲಯ ಒಪಿ ಸಿಮೆಂಟ್	425000	-	1318.13	15.00	4218.00
4	ಟೆಂಡರ್ ಭಾಗ-IV, ಬೆಳಗಾವಿ ವಲಯ ಒಪಿ ಸಿಮೆಂಟ್	210500	-	617.05	9.26	1974.00
5	ಟೆಂಡರ್ ಭಾಗ-V, ಕಲಬುರಗಿ ವಲಯ ಒಪಿ ಸಿಮೆಂಟ್	170000	-	494.70	7.42	1583.00
6	ಟೆಂಡರ್ ಭಾಗ-VI, ಬೆಳಗಾವಿ ವಲಯ ಪಿಪಿ ಸಿಮೆಂಟ್	-	70000	178.45	2.68	571.00
7	ಟೆಂಡರ್ ಭಾಗ-VII, ಕಲಬುರಗಿ ವಲಯ ಪಿಪಿ ಸಿಮೆಂಟ್	-	70000	177.80	2.67	568.00

ಪೂರೈಕೆಗೆ ಆದೇಶ ನೀಡಿದ ದಿನಾಂಕದಿಂದ 3 ತಿಂಗಳು ಪೂರೈಕೆ ಅವಧಿ ಆಗಿರುತ್ತದೆ.

ವಿಚಾರಣೆಯ ಕಡೆಯ ದಿನಾಂಕ ಮತ್ತು ಸಮಯ: **01.04.2026** ರಂದು **14.00** ಗಂಟೆವರೆಗೆ. ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: **01.04.2026** ರಂದು **15.00** ಗಂಟೆವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **04.04.2026** ರಂದು **15.00** ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **06.04.2026** ರಂದು **15.00** ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಮುಖ್ಯ ಅಭಿಯಂತರರು (ಉತ್ತರ)
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು-09.
ದೂರವಾಣಿ: 080-28015605, ಇ-ಮೇಲ್: **ddworkskskridl@gmail.com**
ಮಾಹಿತಿಗಾಗಿ **www.kridl.org.in** ಇಲ್ಲಿಗೆ ಲಾಗಾನ್ ಆಗಿ.

ಸಹಿ/- ಮುಖ್ಯ ಅಭಿಯಂತರರು (ಉತ್ತರ)

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಜಮಖಂಡಿ ಪ್ರಾದೇಶಿಕ ಉಪ ವಿಭಾಗ, ಜಮಖಂಡಿ
OFFICE OF THE ASSISTANT CONSERVATOR OF FORESTS, BAGALKOTE TERRITORIAL SUB DIVISION, JAMAKHANDI
ದೂರವಾಣಿ ಸಂಖ್ಯೆ: 7348962827 ಇ-ಮೇಲ್: acftjkd@gmail.com

ಸಂಖ್ಯೆ: ಸಅಸಂ/ಜೆಕೆಡಿ/ಇ-ಟೆಂಡರ್/2025-26 ದಿನಾಂಕ: 12-03-2026

ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2026-27ನೇ ಸಾಲಿಗೆ ಜಮಖಂಡಿ ಉಪ ವಿಭಾಗ ವ್ಯಾಪ್ತಿಗೆ ಬರುವ ಉಪ ವಿಭಾಗ ಕಛೇರಿ ಮತ್ತು ವಲಯ ಕಛೇರಿಗಳಿಗೆ ಗಣಕಯಂತ್ರ ನಿರ್ವಹಕರು, ಇಲಾಖಾ ವಾಹನಗಳ ವಾಹನ ಚಾಲಕರುಗಳನ್ನು ಮತ್ತು ಮುದ್ದೇಬಿಹಾಳ, ಬೀಳಗಿ ವಲಯಗಳ ಕಚ್ಚೇರಿ ತಡೆ ಶಿಬಿರಗಳ ಕಾವಲುಗಾರರನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **www.kppp.karnataka.gov.in** ನಲ್ಲಿ ಪ್ರಕಟಿಸಿದಂತೆ, ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ 26-03-2026 ಮಧ್ಯಾಹ್ನ 13.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27-03-2026 ಮಧ್ಯಾಹ್ನ 15.00 ಗಂಟೆ** ಹಾಗೂ ಆರ್ಥಿಕ ಬಿಡ್‌ಗಳನ್ನು **ದಿನಾಂಕ: 30-03-2026 ರಂದು ಮಧ್ಯಾಹ್ನ 15-30 ಗಂಟೆಗೆ** ತೆರೆಯಲಾಗುವುದು. ಇನ್ನುಳಿದ ವಿವರಗಳನ್ನು ಪಿಟಿಐಪ್ರತಿಯಿಂದ ಇ-ಟೆಂಡರ್‌ಗಾಗಿ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿಗಾಗಿ ರಜೆ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/-
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಜಮಖಂಡಿ ಉಪವಿಭಾಗ, ಜಮಖಂಡಿ

ವಾ.ಸಾ.ಇ/ಬಾಗಲಕೋಟೆ/643/2025-26/ಕೆಎಸ್‌ಎಂಸಿಎ

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಪ್ಪಳ ಉಪ ವಿಭಾಗ, ಕೊಪ್ಪಳ ಇವರ ಕಾರ್ಯಾಲಯ
ಇ-ಮೇಲ್-acfkpl2016@gmail.com

ಸಂ:ಎ3/ಬಿಜಿಟಿ/ಟೆಂಡರ್/ ಸಿಆರ್-/2026-27/344 ದಿನಾಂಕ: 13/03/2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕೊಪ್ಪಳ ಅರಣ್ಯ ವಿಭಾಗದಲ್ಲಿ ನೊಂದಾಯಿತ / ನವೀಕರಿಸಿಕೊಂಡಿರುವ ಅರ್ಹ ಅರಣ್ಯ ಗುತ್ತಿಗೆದಾರರಿಂದ 2026-27ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಮುಂದುವರೆದ ಅರಣ್ಯ ಕಾಮಗಾರಿಗಳನ್ನು ನಿರ್ವಹಿಸಲು ಅಲ್ಪಾವಧಿ ಇ-ಟೆಂಡರ್‌ಗಳನ್ನು ದಿ: **13/03/2026** ರಂದು ಆಹ್ವಾನಿಸಿರುವ ಒಟ್ಟು 101 ಕಾಮಗಾರಿಗಳ ಒಟ್ಟು ಮೊತ್ತ **ರೂ. 5,33,21,268/-** ಗಳಿರುತ್ತವೆ ಕನಿಷ್ಠ ಮೊತ್ತ **ರೂ. 150000/-** ಮತ್ತು ಗರಿಷ್ಠ ಮೊತ್ತ **ರೂ. 39,10,464/-**ಇರುತ್ತವೆ ಆದುದರಿಂದ ಗುತ್ತಿಗೆದಾರರು ಅಲ್ಪಾವಧಿ ಇ-ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮುಂದೆ ಹೇಳಿದ ವೆಬ್‌ಸೈಟ್‌ನ್ನು ಆನ್‌ಲೈನ್ ಮುಖಾಂತರ ಸಂಪರ್ಕಿಸುವುದು. **https://kppp.karnataka.gov.in/**

ಅಲ್ಪಾವಧಿ ಇ-ಟೆಂಡರ್ ವೇಳಾಪಟ್ಟಿ : (1) ಟೆಂಡರ್ ವಿತರಣೆ / ಸ್ಪಷ್ಟೀಕರಣಕ್ಕೆ ಕೊನೆಯ **ದಿನಾಂಕ : 18/03/2026 ಸಾಯಂಕಾಲ 16.00 ಗಂಟೆಗೆ (2)** ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ **23/03/2026 ಸಾಯಂಕಾಲ 16.00 ಗಂಟೆಗೆ (3)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **24/03/2026 ಸಾಯಂಕಾಲ 16.15 ಗಂಟೆಗೆ (4)** ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **25/03/2026 ಸಾಯಂಕಾಲ 16.30 ಗಂಟೆಗೆ**

ಒಂದು ವೇಳೆ ಮೇಲ್ಕಂಡ ದಿನಾಂಕಗಳಲ್ಲಿ ಯಾವ ಬಿಡ್‌ದಾರರು ಭಾಗವಹಿಸದಿದ್ದಲ್ಲಿ ಸದರಿ ಟೆಂಡರ್‌ಗಳನ್ನು ಈ ಕೆಳಗಿನಂತೆ ಮರು ಅಲ್ಪಾವಧಿ ಇ-ಟೆಂಡರ್‌ನ್ನು ಕರೆಯಲಾಗುವುದು.

ಮರು ಅಲ್ಪಾವಧಿ ಇ-ಟೆಂಡರ್ ವೇಳಾಪಟ್ಟಿ : (1) ಟೆಂಡರ್ ವಿತರಣೆ / ಸ್ಪಷ್ಟೀಕರಣಕ್ಕೆ ಕೊನೆಯ **ದಿನಾಂಕ : 01/04/2026 ಸಾಯಂಕಾಲ 16.00 ಗಂಟೆಗೆ (2)** ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ **06/04/2026 ಸಾಯಂಕಾಲ 16.00 ಗಂಟೆಗೆ (3)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **07/04/2026 ಸಾಯಂಕಾಲ 16.15 ಗಂಟೆಗೆ (4)** ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **08/04/2026 ಸಾಯಂಕಾಲ 16.30 ಗಂಟೆಗೆ**

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಯಿಸುವ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಸಲ್ಲಿಸುವುದು ಹೆಚ್ಚಿನ ವಿವರಗಳಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪಳ ಉಪ ವಿಭಾಗ, ಕೊಪ್ಪಳ

ವಾ.ಸಾ.ಇ/ಕೊಪ್ಪಳ/754/ಕೆಎಸ್‌ಎಂಸಿಎ/2025-26

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೈಲಹೊಂಗಲ.
ಬೆಳಗಾವಿ ರಸ್ತೆ, ಬೈಲಹೊಂಗಲ-591102, ಜಿಲ್ಲೆ:ಬೆಳಗಾವಿ, ರಾಜ್ಯ:ಕರ್ನಾಟಕ.
Email-apmcbailhongal@gmail.com, (ದೂ):08288-233136

ಕ್ರ.ಸಂ.ಕೃಉಮಾಸ(ಬೈ)/ಅಭಿ/ಆರ್‌ಐಡಿಎಫ್-31/516/2025-26 ದಿನಾಂಕ:12/03/2026.

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸನ್ 2025-26 ನೇ ಸಾಲಿನ ಆರ್‌ಐಡಿಎಫ್-31 ಯೋಜನೆಯಡಿ ಮಂಜೂರಾದ Construction of CC Roads, Drains and CC Parking, Compound wall & Providing electrification at Bailhongala APMC (under NABARD RIDF-31 Scheme) (APMC/2025-26/RD/WORK_INDENT853) ನಿರ್ವಹಣಾ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಕೆಪಿಪಿ) ಮೂಲಕ Standard Tender Document KW-4 ರನ್ವಯ ಸ್ಪರ್ಧಾತ್ಮಕ ಏಕವಾರು ಟೆಂಡರನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವಿಳಾಸ https://kppp.karnataka.gov.in

ಕ್ರ ಸಂ:01:ಕಾಮಗಾರಿಯ ವಿವರ:Construction of CC Roads, Drains and CC Parking, Compound wall & Providing electrification at Bailhongala APMC under NABARD RIDF-31 Scheme, ಟೆಂಡರ್‌ಗಿಟ್ಟ ಮೊತ್ತ (ರೂ.):4,15,92,796.00 (EXCLUSIVE OF GST), ಇಎಂಡಿ ಮೊತ್ತ (ರೂ.):6,24,000.00, ಟೆಂಡರ್ ಪ್ರೋಸೆಸಿಂಗ ಫೀ:As per KPPP Portal, ಅವಧಿ:6 Months (Excluding monsoon), ಗುತ್ತಿಗೆದಾರರ ದರ್ಜೆ:As per KW-4 Eligible

ಟೆಂಡರ ಪ್ರಕ್ರಿಯೆ ವೇಳಾ ಪಟ್ಟಿ

1:ಪ್ರೀ ಬಿಡ್ ಮೀಟಿಂಗ್:02/04/2026 ರಂದು 11.00 ಗಂಟೆಗೆ ಬೈಲಹೊಂಗಲ ಎಪಿಎಂಸಿ ಕಚೇರಿಯಲ್ಲಿ, 2:ಟೆಂಡರ್ ಕುರಿತು ಸ್ಪಷ್ಟೀಕರಣ :08/04/2026 ರ 4.30 ರವರೆಗೆ ಬೈಲಹೊಂಗಲ ಎಪಿಎಂಸಿ ಕಚೇರಿಯಲ್ಲಿ, 3:ಭರ್ತಿಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 16/04/2026 ರ 4.00 ಗಂಟೆಯವರೆಗೆ, 4:ತಾಂತ್ರಿಕ ಬಿಡ್ ತೆರೆಯುವ ದಿನಾಂಕ:18/04/2026 ರ 4.30 ಗಂಟೆಗೆ, 5:ಆರ್ಥಿಕ ಬಿಡ್ ತೆರೆಯುವ ದಿನಾಂಕ:28/04/2026 ರ 4.00 ಗಂಟೆಗೆ.

ಇ-ಟೆಂಡರ್ ಪ್ರೋಸೆಸಿಂಗ್ ಶುಲ್ಕ ಹಾಗೂ ಇ.ಎಂ.ಡಿ ಮೊತ್ತವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಕೆಪಿಪಿ) ಮೂಲಕ ಸಂದಾಯ ಮಾಡುವುದು ಮತ್ತು ಟೆಂಡರ್ ಷರತ್ತು ವ ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಕೆಪಿಪಿ) ಸಹಾಯವಾಣಿ ಸಂಖ್ಯೆ 9240214000 ಮತ್ತು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೈಲಹೊಂಗಲ (08288-233136) ಇವರಿಂದ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.

ಸಹಿ/- (ಎಸ್.ಎಸ್.ಆರಳೀಕಟ್ಟಿ) ಕಾರ್ಯದರ್ಶಿ ಕೃಉಮಾಸ, ಬೈಲಹೊಂಗಲ
ಸಹಿ/-(ಹನುಮಂತ ಶಿರಹಟ್ಟಿ) ಆಡಳಿತಾಧಿಕಾರಿಗಳು ಕೃಉಮಾಸ, ಬೈಲಹೊಂಗಲ

DIPR/BGM/RO-NO-2076/KSMCA/2025-26

ತೋಟ ಉತ್ಪನ್ನಗಳ ಮಾರಾಟ ಸಹಕಾರ ಸಂಘ ನಿ., ಚನ್ನಗಿರಿ
ಎಪಿಎಂಸಿ ಆವರಣ ಚನ್ನಗಿರಿ, ದಾವಣಗೆರೆ ಜಿಲ್ಲೆ:-577213,
Email: info@tumcos.com ,

ಕ್ರ.ಸಂ.:2025-26/1387 ದಿನಾಂಕ: 12-03-2026

ಟೆಂಡರ್ ಪ್ರಕಟಣೆ

ಸಂಘದ ಸಾಗರವಿದೆ ಶಾಖೆಯ ಕಟ್ಟಡಕ್ಕೆ 65KW ಸಾಮರ್ಥ್ಯದ ಸೋಲಾರ್ ರೂಫ್‌ಟಾಪ್ ವ್ಯವಸ್ಥೆ ಅಳವಡಿಸಲು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ. ಇ.ಎಂ.ಡಿ.ಮೊತ್ತ: 50,000/-ರೂ.ಗಳು, ಟೆಂಡರ್ ನಂಬರ್: TUMCOSL/2025-26/IND0007 ಟೆಂಡರ್ ಟೈಟಲ್: SUPPLY AND INSTALLATION OF SOLAR ROOFTOP PROJECT FOR TUMCOS LTD AT SAGARAPETE. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್: https://kppp.karnataka.gov.in ರಲ್ಲಿ 28-03-2026ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಮೇಲ್ಕಂಡ ಅಂತರ್ಜಾಲ ಅಥವಾ https://www.tumcos.com ಸಂಪರ್ಕಿಸಿ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ತುಮ್‌ಕೋಸ್ ಲಿ.,ಚನ್ನಗಿರಿ

ಕರ್ನಾಟಕ ಸರ್ಕಾರ
ಜಿಲ್ಲಾ ಅಂಧತ್ವ ನಿವಾರಣ ಕಾರ್ಯಕ್ರಮಾಧಿಕಾರಿಗಳ ಕಾರ್ಯಾಲಯ, ವಿಜಯನಗರ.
Telephone: 9449842086
E-mail: dlovijayanagara@gmail.com

ಸಂಖ್ಯೆ:ಜಅನಿಕಾ/ವಿ.ನ/251/2025-26 ದಿನಾಂಕ:13.03.2026

ಇ-ಟೆಂಡರ್ ಪ್ರಕಟಣೆ

ಜಿಲ್ಲಾ ಅಂಧತ್ವ ನಿಯಂತ್ರಣ ಅಧಿಕಾರಿಗಳ ಕಛೇರಿ ವಿಜಯನಗರ ಇದರ ಅಧೀನದ ವಿಜಯನಗರ ಜಿಲ್ಲೆಯ 4 ತಾಲೂಕು ಆಸ್ಪತ್ರೆಗಳಿಗೆ ಅವಶ್ಯವಿರುವ ವಿವಿಧ ಔಷಧಿಗಳನ್ನು (DRUGS AND SURGICAL ITEMS) ಗಳನ್ನು 2025-26ನೇ ಸಾಲಿನ ಎನ್.ಹೆಚ್.ಎಮ್ ಅನುದಾನದಡಿಯಲ್ಲಿ ಸರಬರಾಜು ಮಾಡಲು ಇ-ಸಂಗ್ರಹಣಾ ಕೋಶದ ವೆಬ್‌ಸೈಟ್ **(https://kppp.karnataka.gov.in)** ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಟೆಂಡರ್ ದಾರರು ದಿನಾಂಕ:13-03-2026 ರಿಂದ ದಿನಾಂಕ:27-03-2026 ರ ಸಮಯ ಸಾಯಂಕಾಲ 05:00 ಗಂಟೆಯವರೆಗೆ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಬಹುದಾಗಿದೆ. (ಟೆಂಡರ್ ಮೊತ್ತ ರೂ.10.00 ಲಕ್ಷ)

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 9449842086 ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಮುದ್ರಾ ಪಡೆಯಬಹುದಾಗಿದೆ.

ಸಹಿ/-ಜಿಲ್ಲಾ ಅಂಧತ್ವ ನಿವಾರಣಾ ಕಾರ್ಯಕ್ರಮಾಧಿಕಾರಿಗಳ ಕಾರ್ಯಾಲಯ, ವಿಜಯನಗರ

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/592

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ, ಸಂಕೇಶ್ವರ.

ಕ್ರಸಂ:ಪುಸಸಂ/ಕಂದಾಯವಿಭಾಗ/2025-26 ದಿನಾಂಕ: 12-02-2026.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಸಂಕೇಶ್ವರ ಪಟ್ಟಣದ ಪಾದಗುಡಿ ಹತ್ತಿರ (ನಿಪ್ಪಾಣಿ ರಸ್ತೆ ಬದಿಗೆ) ಇರುವ ಸಂಕೇಶ್ವರ ಪುರಸಭೆ ಮಾಲಿ ರಿ.ಸ.ನಂ 175ಬ+ಕ+ಡ ಪ್ಲಾಟ್ ನಂ.46 (ಕ್ಷೇತ್ರ 730.00 ಚ.ಮೀ) ಜಾಗೆಯನ್ನು ಸಮಸ್ತ ಮರಾಠಾ ಸಮಾಜ ಅಭಿವೃದ್ಧಿ ಸಂಘಕ್ಕೆ ಮರಾಠಾ ಸಮಾಜದ ಸಮುದಾಯ ಭವನ ನಿರ್ಮಿಸಲು 30 ವರ್ಷಗಳ ಲೀಜ್ ನೀಡಲು ಸಂಕೇಶ್ವರ ಪರಸಭೆಯ ಮಾನ್ಯ ಆಡಳಿತಾಧಿಕಾರಿಗಳ ಗೊತ್ತುವಳಿ ಸಂಖ್ಯೆ 10 ದಿನಾಂಕ: 12-02-2026 ರನ್ವಯ ಮಂಜೂರಾತಿಯನ್ನು ನೀಡಿದ್ದು, ಸದರೀ ಬಗ್ಗೆ ಯಾರಾದರೂ ತಕ್ರಾರು ಇದ್ದಲ್ಲಿ ಈ ಪ್ರಕಟಣೆ ನೀಡಿದ 30 ದಿವಸಗಳಲ್ಲಿ ಲಿಖಿತ ಮೂಲಕ ಪುರಸಭೆಗೆ ತಿಳಿಸಲು ವಿನಂತಿಸಿದೆ. ಅವಧಿ ಮೀರಿ ಬಂದ ತಕ್ರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ಶ್ರೀ ಪ್ರಕಾಶ ಬ. ಮಠದ ಕೆ.ಎಂ.ಎ.ಎಸ್. ಗ್ರೇಡ್-1 ಮುಖ್ಯಾಧಿಕಾರಿ ಪುರಸಭೆ ಸಂಕೇಶ್ವರ.
ಸಹಿ/-ಶ್ರೀ ಶ್ರವಣ ನಾಯ್ಕ ಕೆ.ಎ.ಎಸ್. ಆಡಳಿತಾಧಿಕಾರಿ, ಪುರಸಭೆ ಸಂಕೇಶ್ವರ ಹಾಗೂ ಉಪವಿಭಾಗಾಧಿಕಾರಿ, ಬೆಳಗಾವಿ ಉಪವಿಭಾಗ, ಬೆಳಗಾವಿ.

DIPR/BGM/RO-NO-2072/KSMCA/2025-26

ಜಂಟಿ ನಿರ್ದೇಶಕರ ಕಾರ್ಯಾಲಯ
ಸಮಾಜ ಕಲ್ಯಾಣ ಇಲಾಖೆ, ತುಮಕೂರು ಜಿಲ್ಲೆ
ತುಮಕೂರು. ದೂರವಾಣಿ ನಂ:0816-2278132 ಫ್ಯಾಕ್ಸ್ ಸಂಖ್ಯೆ:0816-2278132 E-mail- tumkur.dswo@gmail.com

ಸಮಜಿನ/ಸಕಾ/ಹೊ.ಸಂ.ಸಿಬ್ಬಂದಿ/ಸಿಆರ್-22/2025-26 ದಿನಾಂಕ: 10.03.2026

ಇ-ಟೆಂಡರ್ ಪ್ರಕಟಣೆ

2026-27 ನೇ ಸಾಲಿಗೆ ತುಮಕೂರು ಜಿಲ್ಲೆಯ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ ಖಾಲಿ ಇರುವ ಗ್ರೂಪ್ "ಸಿ" ಮತ್ತು ಗ್ರೂಪ್ "ಡಿ" ಹುದ್ದೆಗಳಾದ ಅಡುಗೆಯವರು, ಅಡುಗೆ ಸಹಾಯಕರು ರಾತ್ರಿಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ, ಜವಾನರ ಹಾಗೂ ಶುಶ್ರೂಷಕರು ಮತ್ತು ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ಹೊರಸಂಪನ್ಮೂಲ ಏಜೆನ್ಸಿ ಮುಖಾಂತರ ಟೆಂಡರ್ ಪಡೆಯಲು ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಅಂದಾಜು ಮೊತ್ತ ರೂ.920.00 ಲಕ್ಷಗಳಿಗೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತ ಟೆಂಡರ್‌ದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.Karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸ ಬಹುದಾಗಿರುತ್ತದೆ. ಟೆಂಡರ್ ಅರ್ಜಿಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ಪ್ರಾರಂಭ ದಿನಾಂಕ: 10.03.2026 ಮತ್ತು ಕೊನೆಯ ದಿನಾಂಕ: 08.04.2026 ಸಂಜೆ 4.00 ಗಂಟೆಯಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಜಂಟಿ ನಿರ್ದೇಶಕರು, ಕಛೇರಿ, ಸಮಾಜ ಕಲ್ಯಾಣ ಇಲಾಖೆ ರವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಹಾಗೂ ಮೇಲಿನ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/-ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ತುಮಕೂರು ಜಿಲ್ಲೆ.

DIPR/TUM/491/KSMCA/2025-26

ಕರ್ನಾಟಕ ಸರಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಬಂದರು ಮತ್ತು ಮೀನುಗಾರಿಕಾ ವಿಭಾಗ
ಶ್ಯಾಮಿಲಿ ಹಾಲ್, 2ನೇ ಮಹಡಿ, ಅಂಬಲಪಾಡಿ, ಉಡುಪಿ-576103
ದೂ.: 0820-2532961, Email: pfdudupi@gmail.com

ಸಂ: ಕಾನಿಇಂ: ಬಂಮೀವಿಉಡುಪಿ/ಟೆಂಡರ್/30/2025-26 ದಿ:12-03-2026

ಮರು ಟೆಂಡರ್ ಪ್ರಕಟಣೆ (ಎರಡನೇ ಕರೆ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ ಇವರು ಪ್ರತ್ಯೇಕ ಮೊಹರಾದ ಟೆಂಡರುಗಳನ್ನು ಮ್ಯಾನುವಲ್ ಟೆಂಡರ್ ಅರ್ಹ ಗುತ್ತಿಗೆದಾರರಿಂದ **"Construction of multipurpose Fisheries centre for local Fishermen at Kodavooru in Malpe, Udupi Taluk & District (ಟೆಂಡರ್ ಮೊತ್ತ ರೂ. 105.94 ಲಕ್ಷ), Construction of multipurpose Fisheries centre for local Fishermen at Uppunda Madikal, Byndoor Taluk & District (ಟೆಂಡರ್ ಮೊತ್ತ ರೂ. 109.73 ಲಕ್ಷ)"** ಕಾಮಗಾರಿಯನ್ನು ಕೈಗೊಳ್ಳಲು ಎರಡನೇ ಕರೆ ಟೆಂಡರ್ ಕರೆಯಲಾಗಿದ್ದು, **www.kppp.karnataka.gov.in**ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ **ದಿ:20.03.2026ರಂದು 17.00 ಗಂಟೆಯವರೆಗೆ. ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ವೇಳೆ ದಿ:23.03.2026ರಂದು 17.00 ಗಂಟೆಯವರೆಗೆ** ಹಾಗೂ ಟೆಂಡರ್ ಮುಂದೂಡಿಕೆಯ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್ ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ

CHANGE OF NAME

I, **ARSHIYA SAMEER BAGWAN** (old name) Resident of Plot No: 5,6 Flat No 107 1st Floor, 3rd Cross, Veerabhadra Nagar, Rehmat Heights Apartment, Shivaji Nagar, Hukkeri,district: Belagavi, State: Karnataka, Pin Code: 590016, have changed my name as **ARSHIYA BAGAWAN** (new name) henceforth I will be called and recognized by new name for all future purposes, dated: 13/03/2026.

CHANGE OF NAME

I, **ARSHIYA HAWALDAR** (old name) Resident of 5, Khadri Galli, Malapur, Dharwad, Hubballi - Dharwad City - 580008, Karnataka, India, have changed my name as **ARSHIYA DAFEDAR** (new name) henceforth I will be called and recognized by new name for all future purposes, dated: 13/03/2026.

PUBLIC NOTICE

This is to notify the general public regarding loss of original sale deed dated 23-03-1998 in respect of Agricultural property bearing RS no 163/1A measuring 2A 15G assessed at Rs 2.89/- situated at Ilkal town, the said property bounded with East : Property belongs to Vijayamahtesh Vidyavartaka Sangha, West: Road, North: RS no 153/1B, South: property belongs to Mohan Hosamani and the said sale deed was duly registered before sub register office at Hungund on 27-03-1998 in book no 1 with volume no 1075 pages 60 to 62 document no 2695 which was executed by Hanamantappa Irappa Kotegar in fevour of Raju Mongilal Bora ie me and it was lost by me while transit near bus stand at Ilkal town on 2-03-2026. All the efforts to trace the said document has proved abortive.

Also the property converted under the above said Sale deed has not been mortgaged in fevour of any financial institution.

If the said document is found kindly contact the nearest police station as I have registered a petition in this regard before Ilkal police station through online on 8-03-2026 with petition no 2098551/2025.

Now I want to avail loan from State Bank Of India Branch Ilkal with Branch code SB - NO040312. If any body has claim towards the above said property can approach the said branch and file objections within 7 days from the date of this publication.

Raju Mongilal Bora
Ward no 1 Ilkal.PH no 9481134567

ಕ್ರಿ ಮಿ ನಂ : 36/2026
ಮಾನ್ಯ ಹಿರಿಯ ಶ್ರೇಣಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಕುಂದಗೋಳ ಇವರ ನ್ಯಾಯಾಲಯದಲ್ಲಿ

ಅರ್ಜಿದಾರನು : ಶ್ರೀ ನಿಂಗಪ್ಪ ತಂದೆ ಫಕ್ಕೀರಪ್ಪ ಕಟಗಿ ವಯ: 71, ಉದ್ಯೋಗ : ಶೇತ್ಕಿ, ಸಾ॥ ತಾ॥ ಕುಂದಗೋಳ ಜಿ॥ ಧಾರವಾಡ.

ವಿರುದ್ಧ

ಎದುರುಗಾರರು : 1) ಮಾನ್ಯ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತಿ (ಜನನ-ಮರಣ ನೋಂದಣಿ ಅಧಿಕಾರಿಗಳು) ಸಾ॥ ಕುಂದಗೋಳ ತಾ॥ ಕುಂದಗೋಳ ಜಿ॥ ಧಾರವಾಡ, ಹಾಗೂ ಇನ್ನೊಬ್ಬ.

ಆರ್ಡರ 5 ರೂಲ 20 ಸಿಪಿಸಿ ಕೆಳಗೆ ನೋಟಿಸು

ಸದರಿ ಅರ್ಜಿದಾರನು ತನ್ನ ಪೋತಿ ತಾಯಿಯ ಮರಣ ನೋಂದಣಿಯನ್ನು ಎದುರುಗಾರರು ಹೊಂದಿರುವ ಮರಣ ನೋಂದಣಿ ಪುಸ್ತಕದಲ್ಲಿ ದಾಖಲ ಮಾಡುವ ಕುರಿತು ಸೂಕ್ತ ಆದೇಶ ಪಡೆದುಕೊಳ್ಳಲು ಮೇಲ್ಕಂಡ ಅರ್ಜಿ ದಾಖಲ ಮಾಡಿದ್ದು ಇರುತ್ತದೆ. ಕಾರಣ ಮೇಲ್ಕಂಡ ವಿಷಯದಲ್ಲಿ ಯಾರದಾದರೂ ಹಕ್ಕು, ಹಿತಾಸಕ್ತಿ, ವಗೈರೆ, ಇದ್ದಲ್ಲಿ ಅವರು ದಿನಾಂಕ: 04-04-2026 ರಂದು ಮುಂಜಾನೆ 10:30 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಇಲ್ಲವೆ ತಮ್ಮಿಂದ ಅಧಿಕಾರ ಪಡೆದ ವಕೀಲರ ಮುಖಾಂತರ ಹಾಜರಾಗಿ ತಮ್ಮದೇನಾದರೂ ತಕರಾರು ಇದ್ದಲ್ಲಿ ಸದರಿ ಸಲ್ಲಿಸಬೇಕು. ಇದಕ್ಕೆ ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕತರ್ಫಿ ನಿಕಾಲೆ ಮಾಡುವದರಲ್ಲಿ ಬರುವದು ತಿಳಿಯಿರಿ.

ಈ ಹೊತ್ತು ದಿನಾಂಕ: 09-03-2026 ರಂದು ನನ್ನ ಸಹಿ ಮಾಡಿ ನ್ಯಾಯಾಲಯದ ಮೊಹರು ಹಾಕಿ ಕೊಡಲ್ಪಟ್ಟಿತು.

ನ್ಯಾಯಾಲಯದ ಆಜ್ಞೆಯ ಮೇರೆಗೆ
ಶಿರಸ್ತೇದಾರರು ಜೆ.ಎಂ.ಎಫ್.ಸಿ ನ್ಯಾಯಾಲಯ ಕುಂದಗೋಳ
ಶ್ರೀಮತಿ ಶಾರದಾ ಎಸ್ ವಲಮಣ್ಣವರ
ಅರ್ಜಿದಾರನ ಪರ ವಕೀಲರು, ಕುಂದಗೋಳ

ಕ್ರಿ. ಮಿ. ನಂ . 370/2026
ರಾಣೇಬೆನ್ನೂರಿನ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧಿಶರು ವ ಜೆ. ಎಂ. ಎಫ್. ಸಿ. ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು :1) ಡಿಳ್ಳೆಪ್ಪ ತಂದೆ ಫುಟ್ಟಪ್ಪ ಸತ್ಯಪ್ಪನವರ, ವಯಾ: 49, ವರ್ಷ ಉದ್ಯೋಗ: ವ್ಯವಸಾಯಿ,ಸಾ: ಕಳ್ಳೆ ಓಣಿ, ಜೋಹಿಸರಹರಳಹಳ್ಳಿ, ತಾ, ರಾಣೇಬೆನ್ನೂರು, ಜಿ; ಹಾವೇರಿ ಹಾಗೂ ಇತರರು.

ವಿರುದ್ಧ

ಎದುರುಗಾರರು : 1) ಉಪ ತಹಶೀಲ್ದಾರರು ವ ಜನನ, ಮರಣ ನೋಂದಣಾಧಿಕಾರಿಗಳು ನಾಡ ಕಛೇರಿ ಮೇಡ್ಲೇರಿ , ತಾ; ರಾಣೇಬೆನ್ನೂರು ಜಿ; ಹಾವೇರಿ

:- ಇಸ್ತಿಯಾರ ನಾಮ-:

ಇದರಲ್ಲಿ ಅರ್ಜಿದಾರರ ಅಜ್ಜ ಡಿಳ್ಳೆಪ್ಪ ತಂದೆ ಕರಿಯಪ್ಪ ಸತ್ಯಪ್ಪನವರ, ಇವರು ರಾಣೇಬೆನ್ನೂರು ತಾಲೂಕಾ ಅಂಕಸಾಪೂರ ಗ್ರಾಮದಲ್ಲಿ ದಿನಾಂಕ-02/01/1985 ರಂದು ಮರಣ ಹೊಂದಿರುತ್ತಾರೆ. ಸದರ ಅರ್ಜಿದಾರರ ಅಜ್ಜನ ಮರಣ ದಿನಾಂಕವನ್ನು ಎದುರುಗಾರರ ಕಛೇರಿಯ ಮರಣ ನೋಂದಣಿ ದಾಖಲಾತಿಯಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಅತೀ ಅವಶ್ಯವಿದ್ದು ಇದರ ಬಗ್ಗೆ ಸಾರ್ವಜನಿಕರ ಯಾವುದೇ ತಂಟೆ ವ ತಕರಾರು ಇದ್ದಲ್ಲಿ ದಿನಾಂಕ 10/4/2026 ರಂದು ಬೆಳಿಗ್ಗೆ 10-30 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಮಾನ್ಯ ನ್ಯಾಯಾಲಯದವರು ಏಕತರ್ಫಿ ಇದ್ದು ಯಾರದ್ದು ತಕರಾರು ಇರುವುದಿಲ್ಲ ಅಂತಾ ಪರಿಗಣಿಸಿ ಮುಂದಿನ ಆದೇಶವನ್ನು ಮಾಡುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟಿಸು.

ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಇಂದು ದಿ; 10/03/2026 ರಂದು ನೀಡಿದೆ.
ಸ್ಥಳ; ರಾಣೇಬೆನ್ನೂರು
ದಿನಾಂಕ : 10/3/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೆದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧಿಶರು ವ ಜೆ.ಎಂ. ಎಫ್.ಸಿ ರಾಣೇಬೆನ್ನೂರು ಇವರ ನ್ಯಾಯಾಲಯ.
ಸಹಿ/- ಶ್ರೀ ಯು. ಎನ್. ಕೂನಬೇವು.
ಅರ್ಜಿದಾರರಪರ ವಕೀಲರು

ಕ್ರಿ. ಮಿ. ನಂ . 372/2026
ರಾಣೇಬೆನ್ನೂರಿನ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧಿಶರು ವ ಜೆ. ಎಂ. ಎಫ್. ಸಿ. ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು:1) ರತ್ನವ್ವ ಕೋಂ ಸಿದ್ದಪ್ಪ ನಿಂಬಣ್ಣನವರ, ವಯಾ: 50, ವರ್ಷ ಉದ್ಯೋಗ: ಕೂಲಿ ಸಾ: ಅಂಕಸಾಪೂರ, ತಾ, ರಾಣೇಬೆನ್ನೂರು, ಜಿ; ಹಾವೇರಿ.

ವಿರುದ್ಧ

ಎದುರುಗಾರರು : 1) ಉಪ ತಹಶೀಲ್ದಾರರು ವ ಜನನ, ಮರಣ ನೋಂದಣಾಧಿಕಾರಿಗಳು ನಾಡ ಕಛೇರಿ ಮೇಡ್ಲೇರಿ ,ತಾ; ರಾಣೇಬೆನ್ನೂರು ಜಿ; ಹಾವೇರಿ,

:- ಇಸ್ತಿಯಾರ ನಾಮ-:

ಇದರಲ್ಲಿ ಅರ್ಜಿದಾರಳ ಗಂಡ ಸಿದ್ದಪ್ಪ ತಂದೆ ಭರಮಪ್ಪ ನಿಂಬಣ್ಣನವರ ಇವರು ರಾಣೇಬೆನ್ನೂರು ತಾಲೂಕಾ ಅಂಕಸಾಪೂರ ಗ್ರಾಮದಲ್ಲಿ ದಿನಾಂಕ-14/09/2022 ರಂದು ಮರಣ ಹೊಂದಿರುತ್ತಾರೆ. ಸದರ ಅರ್ಜಿದಾರರ ಗಂಡನ ಮರಣ ದಿನಾಂಕವನ್ನು ಎದುರುಗಾರರ ಕಛೇರಿಯ ಮರಣ ನೋಂದಣಿ ದಾಖಲಾತಿಯಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಅತೀ ಅವಶ್ಯವಿದ್ದು ಇದರ ಬಗ್ಗೆ ಸಾರ್ವಜನಿಕರ ಯಾವುದೇ ತಂಟೆ ವ ತಕರಾರು ಇದ್ದಲ್ಲಿ ದಿನಾಂಕ 10/4/2026 ರಂದು ಬೆಳಿಗ್ಗೆ 10-30 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಮಾನ್ಯ ನ್ಯಾಯಾಲಯದವರು ಏಕತರ್ಫಿ ಇದ್ದು ಯಾರದ್ದು ತಕರಾರು ಇರುವುದಿಲ್ಲ ಅಂತಾ ಪರಿಗಣಿಸಿ ಮುಂದಿನ ಆದೇಶವನ್ನು ಮಾಡುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟಿಸು.

ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಇಂದು ದಿ; 10/03/2026 ರಂದು ನೀಡಿದೆ.
ಸ್ಥಳ; ರಾಣೇಬೆನ್ನೂರು
ದಿನಾಂಕ : 10/3/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೆದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧಿಶರು ವ ಜೆ.ಎಂ. ಎಫ್.ಸಿ ರಾಣೇಬೆನ್ನೂರು ಇವರ ನ್ಯಾಯಾಲಯ.
ಸಹಿ/- ಶ್ರೀ ಯು. ಎನ್. ಕೂನಬೇವು.
ಅರ್ಜಿದಾರರ ಪರ ವಕೀಲರು

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ.
ಕುಲಸಚಿವರ ಕಛೇರಿ, ಜ್ಞಾನ-ಶಕ್ತಿ ಆವರಣ (ತೊರವಿ)
ದೂರವಾಣಿ: 08352-220951, ವೆಬ್‌ಸೈಟ್:www.kswu.ac.in

ಸಂಖ್ಯೆ:ಕರಾಅಮವಿವಿ/ಉಗ್ರಾಣ/ಕ್ರೀಡಾ.ಸಾ/ಇ-ಟೆಂಡರ್/2025-26/3463 ದಿನಾಂಕ:12.03.2026

ಅಲ್ಪಾವಧಿ ಟೆಂಡರ್ ಅಧಿಸೂಚನೆ ಪ್ರಕಟಣೆ
ಎರಡು ಲಕೋಟೆ ಪದ್ಧತಿ (ಇ-ಪ್ರಾಕ್ಯೂರ್‌ಮೆಂಟ್)

ಕರ್ನಾಟಕ ಸರ್ಕಾರದ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1992-2000ರ ಪ್ರಕಾರ ಅಧಿನಿಯಮ 2000ರ ನಿಯಮದಂತೆ ನೊಂದಾಯಿತ ಅರ್ಹ ಏಜೆನ್ಸಿ/ಸರಬರಾಜುದಾರರಿಂದ/ಗುತ್ತಿಗೆದಾರರಿಗೆ ಇ-ಪ್ರಾಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸುತ್ತಾರೆ.

1) ಟೆಂಡರ್‌ಗಳನ್ನು ಸ್ವೀಕರಿಸುವ ಪ್ರಾರಂಭ **ದಿನಾಂಕ: 11.03.2026 ಮಧ್ಯಾಹ್ನ 4.00 ಗಂಟೆಗೆ.**

2) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 23.03.2026 ರ ಮಧ್ಯಾಹ್ನ 4.00 ಗಂಟೆಯವರೆಗೆ.**

3) ಎಲ್ಲಾ ದಾಖಲೆಗಳನ್ನು ಸಲ್ಲಿಸುವ (ಹಾರ್ಡ್ ಕಾಫಿ) **ದಿನಾಂಕ: 24.03.2026 ಮಧ್ಯಾಹ್ನ 4.00 ಗಂಟೆಯವರೆಗೆ.**

4) ಟೆಕ್ನಿಕಲ್ ಬಿಡ್ ತೆರೆಯುವ **ದಿನಾಂಕ: 24.03.2026 ಮಧ್ಯಾಹ್ನ 4.00 ಗಂಟೆಯವರೆಗೆ.**

5) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 26.03.2026 ಮಧ್ಯಾಹ್ನ 4.00 ಗಂಟೆ ಅಥವಾ ನಂತರ.**

ಉಳಿದ ವಿವರಗಳನ್ನು ಗುತ್ತಿಗೆ ದಸ್ತಾವೇಜುಗಳಲ್ಲಿ ನೋಡಬಹುದು.

01. ಕಾಮಗಾರಿಯ ಹೆಸರು: Supplying of Sports Materials to Physical Education Dept at KSAWU, Vijayapura. For the year 2025-26. ಟೆಂಡರ್ ಮೊತ್ತ (ರೂ.ಗಳಲ್ಲಿ) 8,68,182/- + GST. ಟೆಂಡರ್ ಸಂಖ್ಯೆ: KSAWUV/Store/Sports/Materials/2025-26/IND/. ಬಡ್ಡಿ ರಹಿತ ಇ.ಎಂ.ಡಿ ರೂ. **43,409/-. ಟೆಂಡರ್ ಅವಧಿ: 45 days.**

ಹೆಚ್ಚಿನ ವಿವರ / ವಿಚಾರಣೆಗೆ ಇ-ಪ್ರಾಕ್ಯೂರ್‌ಮೆಂಟ್‌ನ http://eproc.karnataka.gov.in ನಿಂದ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಏಜೆನ್ಸಿದಾರರ ಅರ್ಹತೆ / ಟೆಂಡರಿನ ನಿಯಮ/ಟೆಂಡರ್ ಪ್ರೋಸೆಸಿಂಗ್ ಶುಲ್ಕ, ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ http://eproc.karnataka.gov.in ಮೂಲಕ ಮಾಹಿತಿಯನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಸದರಿ ಕಛೇರಿಯಿಂದ ಹಾಗೂ ಸಹಾಯಕ ದೂರವಾಣಿ ಸಂಖ್ಯೆ:080-25501216, 9449962003 ರಿಂದ ಪಡೆಯಬಹುದಾಗಿದೆ.

ಸಹಿ/- ಕುಲಸಚಿವರು, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

ವಾಸಾಸಂಇ/ವಿಜಯಪುರ/800/ಕೆಎಸ್‌ಎಂಸಿಎ/2025-26

ಸಿದ್ದಾಪುರ ಜೆ. ಎಂ ಎಫ್.ಸಿ. ರವರ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸಲೇನಿಯಸ ನಂ. 11/2026

ಅರ್ಜಿದಾರ : ಸೋಮಶೇಖರ ರಾಮಚಂದ್ರ ಗೊಂಡ ಸಾ: ಮತ್ತಿಗಾರ, ಗ್ರಾಮ: ಮತ್ತಿಗಾರ ತಾ: ಸಿದ್ದಾಪುರ (ಉ.ಕ.)

ವಿರುದ್ಧ

ಎದುದಾರರು : 1. ತಹಶೀಲ್ದಾರ ಸಿದ್ದಾಪುರ ಉ.ಕ. ಹಾಗೂ ಜನನ-ಮರಣ ನೋಂದಣಿ ಅಧಿಕಾರಿಗಳು ಮತ್ತು ಕೂಡ

ಸಾರ್ವಜನಿಕ ಪ್ರಕಟಣೆ

ಸದ್ರಿ ಪ್ರಕರಣದ ಅರ್ಜಿದಾರನ ಅಜ್ಜಿ ಬೊಮ್ಮಿ ಮೂಕ ಗೊಂಡ ಇವರು ದಿನಾಂಕ: 02-08-1970ರಂದು ಸಿದ್ದಾಪುರ ತಾಲೂಕಿನ ಕೋಡ್ನಣಿ ಮೋಬಳಿ ಮತ್ತಿಗಾರ ಗ್ರಾಮದ ಮತ್ತಿಗಾರಿನನಲ್ಲಿ ಮರಣ ಹೊಂದಿದ್ದು, ಸದ್ರಿಯವರ ಮರಣ ದಿನಾಂಕವನ್ನು ಜನನ ಮರಣ ರಜಿಸ್ಟರದಲ್ಲಿ ನೋಂದಾಯಿಸಿ ಅರ್ಜಿದಾರನಿಗೆ ಆತನ ಅಜ್ಜಿ ಬೊಮ್ಮಿ ಮೂಕ ಗೊಂಡ ಇವರ ಮರಣ ಪ್ರಮಾಣಪತ್ರವನ್ನು ನೀಡುವಂತೆ ಎದುರುದಾರ ನಂ. 1 ಮತ್ತು 2 ರವರಿಗೆ ನಿರ್ದೇಶನ ನೀಡಬೇಕೆಂದು ಮಾನ್ಯ ನ್ಯಾಯಾಲಯದಲ್ಲಿ ಸದ್ರಿ ಪ್ರಕರಣವನ್ನು ದಾಖಲಿಸಿದ್ದು, ಸದ್ರಿ ಅರ್ಜಿಗೆ ತಕರಾರು ಸಲ್ಲಿಸುವುದಕ್ಕಾಗಿ ಸದ್ರಿ ಪ್ರಕರಣವನ್ನು ದಿನಾಂಕ: 07-05-2026 ರಂದು ಬೆಳಿಗ್ಗೆ 10.30 ಘಂಟೆಗೆ ನಿಗದಿಪಡಿಸಿದ್ದು, ಯಾರಾದರೂ ತಕರಾರು ಸಲ್ಲಿಸುವುದಿದ್ದಲ್ಲಿ ಸ್ವತಃ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸಬಹುದಾಗಿದೆ. ಇಲ್ಲದಿದ್ದಲ್ಲಿ ಸದ್ರಿ ಪ್ರಕರಣದಲ್ಲಿ ನಿಮ್ಮ ತಕರಾರು ಇಲ್ಲ ಎಂದು ಸದ್ರಿ ಅರ್ಜಿಯ ವಿಚಾರಣೆಯನ್ನು ನಿಮ್ಮ ಅನುಪಸ್ಥಿತಿಯಲ್ಲಿ ಇತ್ಯರ್ಥಪಡಿಸಲಾಗುವುದು.

ಇಂದು ದಿನಾಂಕ:12/3/2026 ರಂದು ನ್ಯಾಯಾಲಯದ ಮೊಹರು ಸಹಿತ ನೀಡಿದೆ.
ಸಿದ್ದಾಪುರ (ಉ.ಕ.)
ದಿನಾಂಕ : 12-03-2026

ಸಹಿ/-(ಜಗದೀಶ F C.)
ಶಿರಸ್ತೆದಾರರು (D)
ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಸಿದ್ದಾಪುರ
ಸಹಿ/- (ಎಸ್. ಎಮ್. ನಾಯ್ಕ)
ಅರ್ಜಿದಾರರ ಪರ ವಕೀಲರು

ಕ್ರಿ. ಮಿ. ನಂ: 38/2026
ಮಾನ್ಯ ಹಿರಿಯ ಶ್ರೇಣಿಯ ದಿವಾಣಿ ನ್ಯಾಯಾಧಿಶರ ನ್ಯಾಯಾಲಯ ಕುಂದಗೋಳ ಇವರ ನ್ಯಾಯಾಲಯದಲ್ಲಿ

ಅರ್ಜಿದಾರಳು : ಶ್ರೀ ಸಿಂಗಪ್ಪ ತಂದೆ ಯಲ್ಲಪ್ಪ ಕೆಡ್ಯೂರಿ ವಯಾ: 65, ಉದ್ಯೋಗ : ಶೇತ್ಕಿ, ಸಾ॥ ಬೆಟದೂರ ತಾ॥ ಕುಂದಗೋಳ ಜಿ॥ ಧಾರವಾಡ.

ವಿರುದ್ಧ

ಎದುರುಗಾರರು : 1) ಮಾನ್ಯ ತಹಶೀಲ್ದಾರ ಕುಂದಗೋಳ (ಜನನ-ಮರಣ ನೋಂದಣಿ ಅಧಿಕಾರಿಗಳು) ಸಾ॥ ಕುಂದಗೋಳ ತಾ॥ ಕುಂದಗೋಳ ಜಿ॥ ಧಾರವಾಡ, ಹಾಗೂ ಇನ್ನೊಬ್ಬ

ಆರ್ಡರ 5 ರೂಲ 20 ಸಿಪಿಸಿ ಕೆಳಗೆ ನೋಟಿಸು

ಸದರಿ ಅರ್ಜಿದಾರನು ತನ್ನ ಪೋತಿ ಸಹೋದರಿಯ ಮರಣ ನೋಂದಣಿಯನ್ನು ಎದುರುಗಾರರು ಹೊಂದಿರುವ ಮರಣ ನೋಂದಣಿ ಪುಸ್ತಕದಲ್ಲಿ ದಾಖಲ ಮಾಡುವ ಕುರಿತು ಸೂಕ್ತ ಆದೇಶ ಪಡೆದುಕೊಳ್ಳಲು ಮೇಲ್ಕಂಡ ಅರ್ಜಿ ದಾಖಲ ಮಾಡಿದ್ದು ಇರುತ್ತದೆ. ಕಾರಣ ಮೇಲ್ಕಂಡ ವಿಷಯದಲ್ಲಿ ಯಾರದಾದರೂ ಹಕ್ಕು, ಹಿತಾಸಕ್ತಿ ವಗೈರೆ, ಇದ್ದಲ್ಲಿ ಅವರು ದಿನಾಂಕ : 04-04-2026 ರಂದು ಮುಂಜಾನೆ 10:30 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಇಲ್ಲವೆ ತಮ್ಮಿಂದ ಅಧಿಕಾರ ಪಡೆದ ವಕೀಲರ ಮುಖಾಂತರ ಹಾಜರಾಗಿ ತಮ್ಮದೇನಾದರೂ ತಕರಾರು ಇದ್ದಲ್ಲಿ ಸದರಿ ಸಲ್ಲಿಸಬೇಕು. ಇದಕ್ಕೆ ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕತರ್ಫಿ ನಿಕಾಲೆ ಮಾಡುವದರಲ್ಲಿ ಬರುವದು ತಿಳಿಯಿರಿ.

ಈ ಹೊತ್ತು ದಿನಾಂಕ:-04-04-2026 ರಂದು ನನ್ನ ಸಹಿ ಮಾಡಿ ನ್ಯಾಯಾಲಯದ ಮೊಹರು ಹಾಕಿ ಕೊಡಲ್ಪಟ್ಟಿತು.

ನ್ಯಾಯಾಲಯದ ಆಜ್ಞೆಯ ಮೇರೆಗೆ
ಶಿರಸ್ತೇದಾರರು ಜೆ.ಎಂ.ಎಫ್.ಸಿ ನ್ಯಾಯಾಲಯ ಕುಂದಗೋಳ
ಶ್ರೀಮತಿ ಶಾರದಾ ಎಸ್ ವಲಮಣ್ಣವರ
ಅರ್ಜಿದಾರನ ಪರ ವಕೀಲರು, ಕುಂದಗೋಳ

ಜಿ & ಡಬ್ಲ್ಯೂ ನಂ: 7/2026
ಮಾನ್ಯ ಪ್ರಧಾನ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ ಧಾರವಾಡ ಇವರ ನ್ಯಾಯಾಲಯದಲ್ಲಿ,
ಮಾನ್ಯ ಹಿರಿಯ ಶ್ರೇಣಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಕುಂದಗೋಳ ಇವರ ನ್ಯಾಯಾಲಯದಲ್ಲಿ.

ಅರ್ಜಿದಾರರು : 1] ಶ್ರೀ ಮಹೇಶ ತಂದೆ ರಾಮಪ್ಪ ಅಕ್ಕಿಗೇರಿ ವಯಾ: 46 ವರ್ಷ, ಉ: ಶೇತ್ಕಿ ಸಾ॥ ಸಂಶಿ ತಾ॥ ಕುಂದಗೋಳ, ಜಿಲ್ಲಾ॥ ಧಾರವಾಡ

2] ಕು: ಪವನ ತಂದೆ ಮಹೇಶ ಅಕ್ಕಿಗೇರಿ ವಯಾ: 13 ವರ್ಷ, ಉ: ವಿದ್ಯಾರ್ಥಿ ಸಾ: ಸಂಶಿ ತಾ॥ ಕುಂದಗೋಳ, ಜಿಲ್ಲಾ॥ ಧಾರವಾಡ

3] ಕು: ಫಕ್ಕೀರೇಶ ತಂದೆ ಮಹೇಶ ಅಕ್ಕಿಗೇರಿ ವಯಾ: 11 ವರ್ಷ, ಉ: ವಿದ್ಯಾರ್ಥಿ ಸಾ: ಸಂಶಿ ತಾ॥ ಕುಂದಗೋಳ, ಜಿಲ್ಲಾ॥ ಧಾರವಾಡ

4] ಕು: ಪ್ರಜ್ವಲ್ ತಂದೆ ಮಹೇಶ ಅಕ್ಕಿಗೇರಿ ವಯಾ: 05 ವರ್ಷ, ಉ: ವಿದ್ಯಾರ್ಥಿ ಸಾ: ಸಂಶಿ ತಾ॥ ಕುಂದಗೋಳ, ಜಿಲ್ಲಾ॥ಧಾರವಾಡ

[2 ರಿಂದ 4 ನೇ ಅರ್ಜಿದಾರರು ಅಲ್ಪವಯಿಗಳು ಇದ್ದು, 1ನೇ ಅರ್ಜಿದಾರನು ತಂದೆ ಮತ್ತು ಪಾಲಕನಾಗಿದ್ದು 2 ರಿಂದ 4 ನೇ ಅರ್ಜಿದಾರ ಪರ ಪ್ರತಿನಿಧಿಸಿ ಸಹಿ ಮಾಡಿದ್ದು ಇರುತ್ತದೆ.]

ವಿರುದ್ಧ

ಎದುರುಗಾರರು : ಯಾರು ಇಲ್ಲಾ

ಸಾರ್ವಜನಿಕ ನೋಟೀಸು

ಮೇಲ್ಕಂಡ ಪ್ರಕರಣದಲ್ಲಿ ಧಾರವಾಡ ಜಿಲ್ಲಾ ಕುಂದಗೋಳ ತಾಲೂಕ ಸಂಶಿ ಗ್ರಾಮದ ಹದ್ದಿನಲ್ಲಿ ಬರುವ ರಿ.ಸ.ನಂ:508/2 ಕ್ಷೇತ್ರ 07-ಎಕರೆ 00-ಗುಂಟೆ ಆಕಾರ 19-ರೂ 32-ಪೈಸೆ ನೇ ಜಮೀನನ್ನು ಅಲ್ಪವಯಿ 2 ರಿಂದ 4ನೇ ಅರ್ಜಿದಾರರ ಪರವಾಗಿ ಮಾರಾಟ ಮಾಡಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದು ಇರುತ್ತದೆ. 2 ರಿಂದ 4ನೇ ಅರ್ಜಿದಾರರ ಅ.ಪಾ.ದಾರ ಅಂತಾ 1ನೇ ಅರ್ಜಿದಾರನನ್ನು ನೇಮಿಸುವ ಕುರಿತು ಅನುಮತಿಗೆ ಯಾವುದೇ ವ್ಯಕ್ತಿಯ ತಕರಾರು ಇದ್ದಲ್ಲಿ ಮೇಲ್ಕಂಡ ಪ್ರಕರಣವು ದಿನಾಂಕ: 09-04-2026 ರಂದು ಮುಂಜಾನೆ 10.30 ಗಂಟೆಗೆ ಸದರಿ ಪ್ರಕರಣದ ವಿಚಾರಣೆಗಾಗಿ ಮಾನ್ಯ ಹಿರಿಯ ಶ್ರೇಣಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಕುಂದಗೋಳ ಸಾ॥ತಾ॥ ಕುಂದಗೋಳ ನಿಯಮಿಸಿದ್ದು ಇರುತ್ತದೆ. ತಮ್ಮದೇನಾದರೂ ತಕರಾರುಗಳು ಇದ್ದರೆ ಅವುಗಳನ್ನು ಸಲ್ಲಿಸಬೇಕು. ತಪ್ಪಿದಲ್ಲಿ ಸೂಕ್ತ ಆದೇಶ ಹೊರಡಿಸಲಾಗುವದು.

ಈ ಹೊತ್ತು ದಿ: 11/03/2025 ರಂದು ನಮ್ಮ ಸಹಿ ಮಾಡಿ ಕೋರ್ಟಿನ ಮೊಹರು ಹಾಕಿ ಕೊಡಲ್ಪಟ್ಟಿತು.

ಕೋರ್ಟಿನ ಆಜ್ಞೆಯ ಮೇರಿಗೆ
ಸಹಿ/- ಶಿರಸ್ತೆದಾರ
ಮಾನ್ಯ ಹಿರಿಯ ಶ್ರೇಣಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಕುಂದಗೋಳ
ಆರ್.ಎನ್.ಕಮತರ
ಅರ್ಜಿದಾರರ ಪರ ವಕೀಲರು, ಕುಂದಗೋಳ

ಕ್ರಿ. ಮಿ. ನಂ . 369/2026
ರಾಣೇಬೆನ್ನೂರಿನ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧಿಶರು ವ ಜೆ, ಎಂ, ಎಫ್, ಸಿ, ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು :1) ಡಿಳ್ಳೆಪ್ಪ ತಂದೆ ಫುಟ್ಟಪ್ಪ ಸತ್ಯಪ್ಪನವರ, ವಯಾ: 49, ವರ್ಷ ಉದ್ಯೋಗ: ವ್ಯವಸಾಯಿ, ಸಾ: ಕಳ್ಳೆ ಓಣಿ, ಜೋಹಿಸರಹರಳಹಳ್ಳಿ, ತಾ, ರಾಣೇಬೆನ್ನೂರು, ಜಿ; ಹಾವೇರಿ ಹಾಗೂ ಇತರರು.

ವಿರುದ್ಧ

ಎದುರುಗಾರರು : 1) ಉಪ ತಹಶೀಲ್ದಾರರು ವ ಜನನ, ಮರಣ ನೋಂದಣಾಧಿಕಾರಿಗಳು ನಾಡ ಕಛೇರಿ ಮೇಡ್ಲೇರಿ , ತಾ; ರಾಣೇಬೆನ್ನೂರು ಜಿ; ಹಾವೇರಿ

:- ಇಸ್ತಿಯಾರ ನಾಮ-:

ಇದರಲ್ಲಿ ಅರ್ಜಿದಾರರ ಅಜ್ಜಿಯಾದ ನಾಗಮ್ಮ ಕೋಂ ಡಿಳ್ಳೆಪ್ಪ ಸತ್ಯಪ್ಪನವರ ಇವರು ರಾಣೇಬೆನ್ನೂರು ತಾಲೂಕಾ ಅಂಕಸಾಪೂರ ಗ್ರಾಮದಲ್ಲಿ ದಿನಾಂಕ-07/12/199[illegible] ರಂದು ಮರಣ ಹೊಂದಿರುತ್ತಾರೆ. ಸದರ ಅರ್ಜಿದಾರರ ಅಜ್ಜಿಯ ಮರಣ ದಿನಾಂಕವನ್ನು ಎದುರುಗಾರರ ಕಛೇರಿಯ ಮರಣ ನೋಂದಣಿ ದಾಖಲಾತಿಯಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಅತೀ ಅವಶ್ಯವಿದ್ದು ಇದರ ಬಗ್ಗೆ ಸಾರ್ವಜನಿಕರ ಯಾವುದೇ ತಂಟೆ ವ ತಕರಾರು ಇದ್ದಲ್ಲಿ ದಿನಾಂಕ 10/4/2026 ರಂದು ಬೆಳಿಗ್ಗೆ 10-30 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಮಾನ್ಯ ನ್ಯಾಯಾಲಯದವರು ಏಕತರ್ಫಿ ಇದ್ದು ಯಾರದ್ದು ತಕರಾರು ಇರುವುದಿಲ್ಲ ಅಂತಾ ಪರಿಗಣಿಸಿ ಮುಂದಿನ ಆದೇಶವನ್ನು ಮಾಡುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟಿಸು.

ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಇಂದು ದಿ: 10/03/2026 ರಂದು ನೀಡಿದೆ.
ಸ್ಥಳ; ರಾಣೇಬೆನ್ನೂರು
ದಿನಾಂಕ : 10/3/2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೆದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧಿಶರು ವ ಜೆ.ಎಂ. ಎಫ್.ಸಿ ರಾಣೇಬೆನ್ನೂರು ಇವರ ನ್ಯಾಯಾಲಯ.
ಸಹಿ/- ಶ್ರೀ ಯು. ಎನ್. ಕೂನಬೇವು.
ಅರ್ಜಿದಾರರಪರ ವಕೀಲರು

ಎಫ್.ಡಿ.ಪಿ. ನಂ. 27/2025
ಮೆ: ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು/ವಾದಿಯರು :.. ಶ್ರೀಯುತ ಮಲ್ಲ[illegible] ತಂದೆ ಶಿವಪ್ಪ ಯಲಗೂರ, ವಯಾ:65 ವರ್ಷ ಉ: ಒಕ್ಕಲುತನ, ಸಾ : ಯಂಕಂಚಿ ಪು.ಕೆ., ತಾ: ಬಾಗಲಕೋಟ ಮತ್ತು ಇನ್ನೊಬ್ಬರು.

ವಿರುದ್ಧ –

ಎದುರುದಾರರು/ಪ್ರತಿವಾದಿ ನಂ.3 ರಿಂದ 5 :

1. ಶ್ರೀಮತಿ ಸಕ್ಕವ್ವ ಗಂಡ ವಿಠಲ ಯಲಗೂರ @ ಯಲಗೂರಿಯವರ, ವಯಾ:35 ವರ್ಷ ಉ: ಮನೆಗೆಲಸ, ಸಾ:ಯಂಕಂಚಿ ಪು.ಕೆ., ತಾ: ಬಾಗಲಕೋಟ.

2. ಕುಮಾರಿ ಸ್ಫೂರ್ತಿ ತಂದೆ ವಿಠಲ ಯಲಗೂರ @ ಯಲಗೂರಿಯವರ, ವಯಾ: 13 ವರ್ಷ ಅಲ್ಪವಯಿ ಉ: ವಿದ್ಯಾರ್ಥಿನಿ, ಸಾ: ಯಂಕಂಚಿ (ಪು.ಕೆ.), ತಾ: ಬಾಗಲಕೋಟ.

3. ಕುಮಾರಿ ಸ್ಪಂದನಾ ತಂದೆ ವಿಠಲ ಯಲಗೂರ @ ಯಲಗೂರಿಯವರ, ವಯಾ: 9 ವರ್ಷ, ಅಲ್ಪವಯಿ ಉ: ವಿದ್ಯಾರ್ಥಿನಿ, ಸಾ: ಯಂಕಂಚಿ (ಪು.ಕೆ.), ತಾ: ಬಾಗಲಕೋಟ. (ಪ್ರತಿವಾದಿ ನಂ.4 ಮತ್ತು 5 ರವರು ಅಲ್ಪವಯಿಗಳಿದ್ದು ಅವರ ಅ.ಪಾ.ಕ. ತಾಯಿ ಪ್ರತಿವಾದಿ ನಂ.3 ರವರು ಇರುತ್ತಾರೆ).

ದಿವಾಣಿ ಪ್ರಕ್ರೀಯಾ ಸಂಹಿತೆ ಆದೇಶ 5 ನಿಯಮ 20(2)(ಎ) ರಡಿಯಲ್ಲಿ ಹೊರಡಿಸುವ ಜಾಹೀರು ಪ್ರಕರಣೆ

ಇದರಲ್ಲಿ ಅರ್ಜಿದಾರ/ವಾದಿಯ ಪರ ವಕೀಲರು ಹೊರಡಿಸುವ ಜಾಹೀರು ಪ್ರಕಟಣೆ ಏನೆಂದರೆ ಅರ್ಜಿದಾರರು/ವಾದಿಯರು ಅಸಲು ದಾವಾ ನಂ 329/2022ರಲ್ಲಿ ಆದ ಹುಕುಂನಾಮೆಯ ಪ್ರಕಾರ ಅಂತಿಮ ಹುಕುಂನಾಮೆಗಾಗಿ ಪ್ರತಿವಾದಿಯರ ಮೇಲೆ ಈ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಸದರಿ ಅರ್ಜಿಯಲ್ಲಿ ಎದುರುದಾರ ನಂ.3ರಿಂದ5 ರವರ ಹಾಜರಾತಿಗಾಗಿ ಜಾಹೀರು ಪ್ರಕಟಣೆ ಮಾಡಲು ಅನುಮತಿ ಕೋರಿ ಮಧ್ಯಂತರ ಅರ್ಜಿ ನಂ.1ನ್ನು ಸಲ್ಲಿಸಿದ್ದು, ಸದರಿ ಅರ್ಜಿಯ ಮೇಲೆ ಆದ ಆದೇಶದ ಪ್ರಕಾರ ಎದುರುದಾರ ನಂ.3 ರಿಂದ 5 ರವರ ಹಾಜರಾತಿಗಾಗಿ ಮೆ: ಕೋರ್ಟಿನವರು ದಿನಾಂಕ 18/07/2026ರಂದು ನೇಮಿಸಿದ್ದು ಇರುತ್ತದೆ. ಸದರಿ ದಿನಾಂಕದಂದು ಎದುರುದಾರ ನಂ.3 ರಿಂದ 5 ರವರಾಗಲೀ ಅಥವಾ ಅವರ ಪರವಾಗಿ ಅವರ ಪ್ರತಿನಿಧಿಯಾಗಲೀ ಹಾಜರಾಗತಕ್ಕದ್ದು. ಒಂದು ವೇಳೆ ಹಾಜರಾಗದೇ ಇದ್ದ ಪಕ್ಷದಲ್ಲಿ ಮುಂದಿನ ಆದೇಶವನ್ನು ಹೊರಡಿಸಲಾಗುವುದು ಅಂತಾ ಹೊರಡಿಸಿದ ಜಾಹೀರು ಪ್ರಕಟಣೆ.

ಬಾಗಲಕೋಟ
ದಿನಾಂಕ :26-02-2026

ನ್ಯಾಯಾಲಯದ ಆಜ್ಞೆಯ ಮೇರೆಗೆ
ಸಹಿ/-ಹಿರಿಯ – ಶಿರಸ್ತೇದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ, ಬಾಗಲಕೋಟ
ಸಹಿ/- ಅರ್ಜಿದಾರರ ಪರ ವಕೀಲರು
ಆರ್.ಎಸ್.ಬರಗುಂಡಿ

ಅಸಲು ದಾವಾ :-10/2022
ಮಾನ್ಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್. ಎಫ್.ಸಿ. ನ್ಯಾಯಾಲಯ ಕುಂದಗೋಳ ಇವರ ನ್ಯಾಯಾಲಯದಲ್ಲಿ

ವಾದಿಯರು : ಶ್ರೀಮತಿ ಗಿರಿಜವ್ವ ಕಾಳೆ ಮತ್ತು ಇನ್ನೊಬ್ಬರು.

ವಿರುದ್ಧ

ಪ್ರತಿವಾದಿಯರು : ಕೃಷ್ಣವ್ವ ಕಾಳೆ ಮತ್ತು ಇತರರು

ಆದೇಶ 5, ನಿಯಮ 20 (1) (1ಎ) ರ ಅಡಿ
ಸಾರ್ವಜನಿಕ ನೋಟಿಸ್

ಮೇಲ್ಕಂಡ ಪ್ರಕರಣದಲ್ಲಿ ಪ್ರಸ್ತಾಪಿತ 16 ನೇ ಪ್ರತಿವಾದಿ ಶ್ರೀಮತಿ ಸರೋಜಾ ಕೋಂ ರಾ[illegible] ಸೋಮಕ್ಕನವರ ವಯಸ್ಸು 40 ಉದ್ಯೋಗ ಮನೆಗೆಲಸ ಸಾ: ಅಂಬೇಡ್ಕರ ಓಣಿ ಅಣ್ಣಿಗೇರಿ ತಾಲೂಕು: ಅಣ್ಣಿಗೇರಿ ಆದ ನಿಮ್ಮನ್ನು ಮೇಲ್ಕಂಡ ಪ್ರಕರಣದಲ್ಲಿ 16 ನೇ ಪ್ರತಿವಾದಿತರಿಂಯ ಸೇರಿಸಲು ಅಂತರಿಕ ಅರ್ಜಿಯನ್ನು ಸಲಿಸಿದ್ದು ಸದರಿ ಅರ್ಜಿಯ ವಿಚಾರಣೆಯನ್ನು ದಿನಾಂಕ: 26/03/ 2026 ರಂದು ಮುಂಜಾನೆ 10:30 ಕ್ಕೆ ನೇಮಿಸಿದ್ದು, ಮೇಲ್ಕಂಡ ವಿಷಯಕ್ಕೆ ಯಾವುದೆ ತಕರಾರು ಇದ್ದಲ್ಲಿ ಸದರಿ ದಿನಾಂಕದಂದು ಸಲ್ಲಿಸಬೇಕು. ತಪ್ಪಿದಲ್ಲಿ ಸೂಕ್ತ ಆದೇಶ ಹೊರಡಿಸಲಾಗುವುದು ತಿಳಿಯಿರಿ.

ಈ ಹೊತ್ತು ದಿನಾಂಕ: 12/03/2026 ರಂದು ನಮ್ಮ ಸಹಿ ಮಾಡಿ ಕೋರ್ಟಿನ ಮೊಹರು ಹಾಕಿ ಕೊಡಲ್ಪಟ್ಟಿತ್ತು.

ಸಹಿ/-
ಕೋರ್ಟಿನ ಆಜ್ಞೆಯ ಮೇರಿಗೆ
ಮಾನ್ಯ ದಿವಾಣಿ ನ್ಯಾಯಾಧೀಶರು ಕುಂದಗೋಳ
ಸಹಿ ಶಿರಸ್ತೆದಾರ
ಶ್ರೀ ಯು ಎಮ್ ಪಾಟೀಲ
ವಾದಿಯರ ಪರ ವಕೀಲರು, ಕುಂದಗೋಳ

ವೇಮಗಲ್ -ನರಸಾಪುರ ಯೋಜನಾ ಪ್ರಾಧಿಕಾರ
ಎ-1 ಬ್ಲಾಕ್, ಪುರಹಳ್ಳಿ ಶ್ರೀನಿವಾಸ ಬಿಲ್ಡಿಂಗ್, ನರಸಾಪುರ ರಸ್ತೆ, ವೇಮಗಲ್-563157, ಕೋಲಾರ ತಾಲ್ಲೂಕು
ಇ-ಮೇಲ್: vemagalnarasapura@gmail.com,

ಸಂಖ್ಯೆ:ವೇನಯೋಪ್ರಾ/ವೇ/ಟೆಂಡರ್/2025-26/460 ದಿನಾಂಕ:09.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ವೇಮಗಲ್-ನರಸಾಪುರ ಯೋಜನಾ ಪ್ರಾಧಿಕಾರ, ಸದಸ್ಯ ಕಾರ್ಯದರ್ಶಿ, ವೇಮಗಲ್ ಕಚೇರಿ, ಎ-1 ಬ್ಲಾಕ್, ಪುರಹಳ್ಳಿ ಶ್ರೀನಿವಾಸ್ ಬಿಲ್ಡಿಂಗ್, ನರಸಾಪುರ ರಸ್ತೆ, ವೇಮಗಲ್-563157, ಕೋಲಾರ ತಾಲ್ಲೂಕು, ಕಚೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಬೆರಳಚ್ಚುಗಾರರು-01 ಹುದ್ದೆ ಮತ್ತು ಗ್ರೂಪ್-"ಡಿ"-01 ಹುದ್ದೆಯನ್ನು ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುವ ಸಂಬಂಧ ಅನುಭವ ಹೊಂದಿರುವ, ಆರ್ಥಿಕ/ವೃತ್ತಿ/ಸ್ವಯಂಸೇವಾ ಸಂಸ್ಥೆಗಳು/ಏಜೆನ್ಸಿಗಳಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಸಂಗ್ರಹಣಾ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. **ದಿನಾಂಕ: 13.03.2026 ರಂದು ಇ-ಸಂಗ್ರಹಣಾ ಕೋಶದಲ್ಲಿ ಟೆಂಡರನ್ನು ಪ್ರಕಟಿಸಲಾಗಿದೆ.** ಟೆಂಡರ್ ಸಲ್ಲಿಸಲು ಪ್ರಾರಂಭದ **ದಿನಾಂಕ: 17.03.2026 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:24.03.2026 ರ ಅಪರಾಹ್ನ 5.30 ಗಂಟೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 27.03.2026 ಪೂರ್ವಾಹ್ನ 11.30 ಗಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 02.04.2026 ಪೂರ್ವಾಹ್ನ 11.30 ಗಂಟೆಗೆ.** ಟೆಂಡರ್ ಆಹ್ವಾನಿಸುವ ಸೂಚನಾ ಪತ್ರ, ನಿಯಮ ಮತ್ತು ಷರತ್ತುಗಳು, ಇತ್ಯಾದಿ, ಇವುಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾ ಕೋಶದ ವೆಬ್‌ಪೋರ್ಟಲ್ **https://eproc.karnataka.gov.in** ಇಲ್ಲಿ ಪಡೆದುಕೊಂಡು ಟೆಂಡರ್ ಸಲ್ಲಿಸಬಹುದಾಗಿದೆ.

ಸಹಿ/-ಸದಸ್ಯ ಕಾರ್ಯದರ್ಶಿ, ವೇಮಗಲ್-ನರಸಾಪುರ ಯೋಜನಾ ಪ್ರಾಧಿಕಾರ, ವೇಮಗಲ್ ಕಚೇರಿ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:534/ಕೆಎಸ್‌ಎಂಸಿಎ/2025-26

ಕಿರುಸುದ್ದಿ

ಲೋಕಾಯುಕ್ತ ಬಲೆಗೆ ರಾಮನಗರದ ಗ್ರಾಮಾಡಳಿತಾಧಿಕಾರಿ

ಜೋಯಿಡಾ: ಆಸ್ತಿ ಬದಲಾವಣೆಗಾಗಿ ಲಂಚ ಪಡೆಯುತ್ತಿದ್ದ ವೇಳೆ ಗ್ರಾಮಾಡಳಿತಾಧಿಕಾರಿ ಲೋಕಾಯುಕ್ತ ಬಲೆಗೆ ಬಿದ್ದಿರುವ ಘಟನೆ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ರಾಮನಗರದಲ್ಲಿ ನಡೆದಿದೆ. ರಾಮನಗರದ ಗ್ರಾಮ ಆಡಳಿತಾಧಿಕಾರಿ ಸಂತೋಷ್ ಮ್ಯಾಗೇರಿ ಲೋಕಾಯುಕ್ತ ಬಲೆಗೆ ಬಿದ್ದ ಅಧಿಕಾರಿಯಾಗಿದ್ದಾರೆ. ದಾಖಲಾತಿ ಬದಲಾವಣೆ ಮಾಡುವುದಕ್ಕಾಗಿ ರಾಮನಗರದ ಗುರ್ಜರ್ ಎಂಬುವವರಿಂದ 18 ಸಾವಿರ ರೂಪಾಯಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಬಳಿಕ ಮಾತುಕತೆಯ ನಂತರ 13 ಸಾವಿರ ರೂಪಾಯಿ ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಅವರನ್ನು ವಶಕ್ಕೆ ಪಡೆದಿದ್ದಾರೆ. ಲೋಕಾಯುಕ್ತ ಸಿಪಿಐ ವಿನಾಯಕ್ ಬಿಲ್ಲವ ಅವರ ನೇತೃತ್ವದ ತಂಡ ಈ ಕಾರ್ಯಾಚರಣೆ ನಡೆಸಿದ್ದು, ಸಂತೋಷ್ ಮ್ಯಾಗೇರಿ ಅವರನ್ನು ಲೋಕಾಯುಕ್ತ ಅಧಿಕಾರಿಗಳು ವಶಕ್ಕೆ ಪಡೆದುಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.



ಕಾರು ಪಲ್ಟಿ: ಇಬ್ಬರು ಸಾವು

ಬಸವನಬಾಗೇವಾಡಿ: ಕಾಗವಾಡದಿಂದ ಶ್ರೀಶೈಲಕ್ಕೆ ಹೋಗುತ್ತಿದ್ದ ಕಾರು ಪಟ್ಟಣದ ಬಸವನಹಟ್ಟಿ ಕ್ರಾಸ್ ಹತ್ತಿರ ಬಿಜ್ಜಳ ರಾಜ್ಯ ಹೆದ್ದಾರಿಯಲ್ಲಿ ಪಲ್ಟಿ ಆಗಿ ಬಿದ್ದು ಕಾರಿನಲ್ಲಿದ್ದ ನಾಲ್ವರಲ್ಲಿ ಇಬ್ಬರು ಮೃತಪಟ್ಟು ಇಬ್ಬರು ಗಾಯಗೊಂಡಿದ್ದಾರೆ. ಚಂದ್ರವ್ವ ಧರೆಪ್ಪ ಟಕ್ಕೆನ್ನವರ(70), ರಾಮಪ್ಪ ಗಂಗಣ್ಣ ಅವರಾದಿ(65)ಮೃತ ದುರ್ದೈವಿಗಳು. ಈ ಕುರಿತು ಬಸವನಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಾಮನ ರಾಮಚಂದ್ರಸಾ ಭಾಂಡಗೆ ಇನ್ನಿಲ್ಲ

ಹುಬ್ಬಳ್ಳಿ: ಇಲ್ಲಿನ ದ ಟೈಮ್ಸ್ ಆಫ್ ಇಂಡಿಯಾದ ಫೋಟೊ ಪತ್ರಕರ್ತ ಹಾಗೂ ಕೇಶ್ವಾಪುರದ ವಾಮನ ಫೋಟೊಗ್ರಾಫಿಕ್ಸ್ ಮಾಲೀಕ ವಾಮನ ರಾಮಚಂದ್ರಸಾ ಭಾಂಡಗೆ(58) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಒಬ್ಬ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಬಿಟ್ಟು ಅಗಲಿದ್ದಾರೆ. ಫೆಬ್ರವರಿ 10ರಂದು ಹುಬ್ಬಳ್ಳಿಯ ಕೊಪ್ಪಿಕರ ರಸ್ತೆಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ಭಾಂಡಗೆ, ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. ಮೃತರಿಗೆ ಪತ್ರಕರ್ತರು, ಛಾಯಾಗ್ರಾಹಕರು ಸೇರಿದಂತೆ ಅನೇಕರು ಸಂತಾಪ ವ್ಯಕ್ತಪಡಿಸಿದ್ದಾರೆ.



ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	5811	6016
ಕಡಲೆಕಾಳು	1599	5351
ತೆಂಗಿನಕಾಯಿ	18000	19000
ಒಣ ಮೆಣಸಿನಕಾಯಿ	45000	46000
ಹೆಸರುಕಾಳು	719	5111
ಜೋಳ	2001	4201
ಮೆಕ್ಕೆಜೋಳ	1311	1850
ಮಡಿಕೆ (ಮಟಕಿ)	9121	13041
ಸಾಸುವೆ	5216	5216
ಈರುಳ್ಳಿ	500	2300
ಆಲೂಗಡ್ಡೆ	1300	1800
ರಾಗಿ	2166	2166
ಕುಸುಬೆ	5076	5076
ಸೋಯಾಬಿನ್	5270	5579
ತೊಗರಿ	2229	4559
ಗೋಧಿ	2069	2189

ಕದಂಬರ ಆಳ್ವಿಕೆ ಕಾಲದ ಅವಶೇಷಗಳಿಗೆ ಬೇಕಿದೆ ರಕ್ಷಣೆ
ಗುಡ್ನಾಪುರದ ರಾಣಿ ನಿವಾಸ ಕಡೆಗಣನೆ

ಸುಧೀರ ನಾಯರ್

ದಿಗಂತ ವಿಶೇಷ

ಬನವಾಸಿ: ಕನ್ನಡದ ಪ್ರಥಮ ರಾಜಧಾನಿ ಬನವಾಸಿಯ ಕದಂಬೋತ್ಸವ ಆಚರಣೆಗೆ ಪ್ರೇರಣೆಯಾಗಿದ್ದ ಗುಡ್ನಾಪುರದ ರಾಣಿ ನಿವಾಸ ಸೌಲಭ್ಯವಿಲ್ಲದೆ ಸೊರಗಿದೆ. ಇಲ್ಲಿನ ಅವಶೇಷಗಳು ಸೂಕ್ತ ರಕ್ಷಣೆಯಿಲ್ಲದೆ ಮಣ್ಣಲ್ಲಿ ಮಣ್ಣಾಗುತ್ತಿವೆ.

ಬನವಾಸಿಗೆ ಸಮೀಪದ ಗುಡ್ನಾಪುರದಲ್ಲಿ ಕದಂಬರ ಆಳ್ವಿಕೆ ಕಾಲದ ರಾಣಿ ನಿವಾಸದ ಹಲವು ಅವಶೇಷಗಳಿವೆ. ಕದಂಬ ವಂಶದ ಮಹಾರಾಜರು ವಸಂತ ಕಾಲದಲ್ಲಿ ತಮ್ಮ ಕುಟುಂಬ ಸಹಿತ ಇಲ್ಲಿಗೆ ಆಗಮಿಸಿ ತಂಗುತ್ತಿದ್ದ ಈ ಸ್ಥಳವು ಐತಿಹಾಸಿಕ ಹಿನ್ನಲೆ ಹೊಂದಿದೆ. ಪ್ರಸ್ತುತ ಇಲ್ಲಿರುವ ಅವಶೇಷಗಳು ರಾಣಿಯ ಅರಮನೆಯ ವೈಭವಕ್ಕೆ ಸಾಕ್ಷಿಯಾಗಿವೆ. ಆದರೆ ನಿರ್ವಹಣೆ ಕೊರತೆ ಈ ವೈಭವ ಕಳೆಗುಂದಲು ಕಾರಣವಾಗಿದೆ. ಶಿಥಿಲ ಸ್ಥಿತಿಯಲ್ಲಿರುವ ರಾಣಿ ನಿವಾಸದ ಕಟ್ಟಡದ ಒಳಗೆ ಜೀರ್ಣ ಸ್ಥಿತಿಯಲ್ಲಿರುವ ವೀರಭದ್ರ, ಗಣಪತಿ ಮೂರ್ತಿ, ಜೈನ ತೀರ್ಥಂಕರರ ಮೂರ್ತಿ ಕಾಣಬಹುದಾಗಿದೆ. ಹೊರ ಆವರಣದಲ್ಲಿ ಕೇವಲ ತಂತಿ ಬೇಲಿ, ತಲೆಯ ಮೇಲೊಂದು ತಗಡಿನ ಶೀಟ್‌ನ ರಕ್ಷಣೆಯಲ್ಲಿ ರಾಜಾ ರವಿ ಮರ್ವನ ಕಾಲದ ಗುಡ್ನಾಪುರ ಶಾಸನದ ಕಂಬ ನಿಂತಿದೆ. ಸಂಸ್ಕೃತ ಭಾಷೆಯ 27 ಸಾಲುಗಳ ಬರಹ ಹೊಂದಿರುವ ಗುಡ್ನಾಪುರ ಶಾಸನ ಕದಂಬ ರಾಜವಂಶರ ಮಹತ್ವದ ದಾಖಲೆಯಾಗಿದೆ. 20 ಅಡಿ ಎತ್ತರ ಶಾಸನದಲ್ಲಿ ಕದಂಬರು 5ನೇ ಶತಮಾನದಲ್ಲಿ ವಸಂತೋತ್ಸವ ಆಚರಿಸುವ ಉಲ್ಲೇಖವಿದೆ.

ರಾಜನಿಗೆ ಸಾಧ್ಯವಾಗದಿದ್ದರೆ ಪ್ರಜೆಗಳು ಪ್ರತಿ ವರ್ಷ ವಸಂತೋತ್ಸವ ಆಚರಿಸಬೇಕು ಎಂದು ಈ ಶಾಸನದಲ್ಲಿ ಬರೆಯಲಾಗಿದೆ. ಶಾಸನದ ಉಲ್ಲೇಖ ಆಧರಿಸಿ ಅನೇಕ ಪ್ರಮುಖರು ನಡೆಸಿದ ನಿರಂತರ ಪರಿಶ್ರಮದ ಫಲವಾಗಿ 1996ರಿಂದ ಬನವಾಸಿಯಲ್ಲಿ ಕದಂಬೋತ್ಸವ ಎನ್ನುವ ಐತಿಹಾಸಿಕ ಹಬ್ಬ ಆಚರಣೆಗೆ ಚಾಲನೆ ದೊರೆತಿದೆ. ಆದರೆ, ಕದಂಬೋತ್ಸವಕ್ಕೆ ಮೂಲ ಸರಕಾಗಿರುವ ಗುಡ್ನಾಪುರದ ರಾಣಿ ನಿವಾಸ ಕಡೆಗಣನೆಯಾಗಿದೆ. ಕದಂಬರ ಪ್ರತೀಕವಾಗಿರುವ ಈ ಕಟ್ಟಡಗಳ ರಕ್ಷಣೆಗೆ ಪುರಾತತ್ವ ಇಲಾಖೆ ನಿರ್ಲಕ್ಷ್ಯ ವಹಿಸಿದೆ ಎಂಬುದು ಸ್ಥಳೀಯರ ದೂರು.

1972ರಲ್ಲಿ ಹಿರಿಯ ಸಾಹಿತಿ ದಿವಂಗತ ಬಿ.ಎಚ್.ಶ್ರೀಧರ ಮತ್ತು ಅಭಿಶಂಕರರ ಪರಿಶ್ರಮದ ಭಾಗವಾಗಿ ಗುಡ್ನಾಪುರದಲ್ಲಿ ಈ ಅವಶೇಷಗಳು ಬೆಳಕಿಗೆ ಬಂದಿವೆ. ಅಂದಿನಿಂದ ಇಂದಿನವರೆಗೆ ಇದರ ಅಭಿವೃದ್ಧಿ ವ್ಯವಸ್ಥಿತವಾಗಿ ನಡೆದಿಲ್ಲ. ವಾರ್ಷಿಕವಾಗಿ ರಾಣಿ ನಿವಾಸಕ್ಕೆ ಭೇಟಿ ನೀಡುವ ಸಾವಿರಾರು ಪ್ರವಾಸಿಗರಿಗೆ ತಂಗಲು ವ್ಯವಸ್ಥೆಯಿಲ್ಲ. ರಾಣಿ ನಿವಾಸದ ಸಮಗ್ರ ಮಾಹಿತಿ ಒಳಗೊಂಡ ನಾಮಫಲಕಗಳೂ ಇಲ್ಲವಾಗಿದೆ. ಸೂಕ್ತ ಆವರಣ ಗೋಡೆಯ ವ್ಯವಸ್ಥೆ ಇಲ್ಲದೇ ಜಾನುವಾರುಗಳು ಎಗ್ಗಿಲ್ಲದೆ ಈ ರಾಣಿ ನಿವಾಸದ ಆವರಣದಲ್ಲಿ ಓಡಾಡುತ್ತವೆ. ಅವಶೇಷಗಳನ್ನು ಮೆಟ್ಟಿ ಪುಡಿ ಮಾಡುತ್ತಿವೆ. ತಕ್ಷಣ ಈ ಅವ್ಯವಸ್ಥೆ ನಿಲ್ಲಬೇಕು. ಮೇಲುಸ್ತುವಾರಿ ಜವಾಬ್ದಾರಿ ಹೊತ್ತ ಪ್ರಾಚ್ಯವಸ್ತು ಇಲಾಖೆ ರಾಣಿ ನಿವಾಸ ಒಳಗೊಂಡು ಇಲ್ಲಿರುವ ಪಳೆಯುಳಿಕೆಗಳ ರಕ್ಷಣೆಗೆ ಕ್ರಮವಹಿಸಬೇಕು ಎಂದು ಭೂ ನ್ಯಾಯ ಮಂಡಳಿಯ ಸದಸ್ಯ ರವಿ ನಾಯ್ಕ್ ಒತ್ತಾಯಿಸಿದ್ದಾರೆ.



> ಬನವಾಸಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಗುಡ್ನಾಪುರವನ್ನು ಸೇರಿಸಬೇಕು. ಅಲ್ಲದೇ ಪುರಾತತ್ವ ಇಲಾಖೆಯು ಗುಡ್ನಾಪುರದಲ್ಲಿ ಇನ್ನಷ್ಟು ಉತ್ಖನನ ನಡೆಸಿ ರಾಣಿ ನಿವಾಸ ಕಟ್ಟಡದ ಅವಶೇಷ ರಕ್ಷಣೆ ಮಾಡಬೇಕು. ಕಟ್ಟಡದ ಅವಶೇಷಗಳು ಹಾಳಾಗಿ ಹೋಗದಂತೆ ಎಚ್ಚರಿಕೆ ವಹಿಸಬೇಕು. ಪ್ರವಾಸಿಗರ ಸಂಖ್ಯೆ ಹೆಚ್ಚಾಗುವಂತೆ ಹಾಗೂ ಪ್ರವಾಸಿಗರಿಗೆ ಅನುಕೂಲ ಕಲ್ಪಿಸುವಂತೆ ಗುಡ್ನಾಪುರದ ರಾಣಿ ನಿವಾಸವನ್ನು ಅಭಿವೃದ್ಧಿ ಪಡಿಸಬೇಕು.
> ■ ಸುಧಾಕರ ನಾಯ್ಕ, ಜಿಲ್ಲಾಧ್ಯಕ್ಷರು, ಮಾನವ ಹಕ್ಕುಗಳ ಅಯೋಗ ಉಕ


> ಗುಡ್ನಾಪುರದ ರಾಣಿ ನಿವಾಸದ ಅಭಿವೃದ್ಧಿಗೆ ಬನವಾಸಿ ಅಭಿವೃದ್ಧಿ ಪ್ರಾಧಿಕಾರ ಆದ್ಯತೆ ನೀಡಬೇಕು. ರಾಣಿ ನಿವಾಸದ ಸಂರಕ್ಷಣೆ ಮಾಡುವಂತೆ ಪ್ರಾಚ್ಯವಸ್ತು ಇಲಾಖೆಯ ಅಧಿಕಾರಿಗಳಿಗೆ ಸೂಚಿಸುವೆ.
> ■ ವಿಶ್ವೇಶ್ವರ ಹೆಗಡೆ ಕಾಗೇರಿ ಸಂಸದ

ಹವಾಮಾನ ಆಧಾರಿತ ಬೆಳೆ ವಿಮೆ ಜಮೆ ಆರಂಭ: ಕಾಗೇರಿ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಅಡಿಕೆ ಹಾಗೂ ಕಾಳುಮೆಣಸು ಬೆಳೆಗಾರರಿಗೆ ಇಂದಿನಿಂದ ಒಂದು ಆಶಾದಾಯಕ ಸುದ್ದಿ ಲಭಿಸಿದೆ. ಜಿಲ್ಲೆಯ ರೈತರು ದೀರ್ಘಕಾಲದಿಂದ ನಿರೀಕ್ಷಿಸುತ್ತಿದ್ದ ಹವಾಮಾನ ಆಧಾರಿತ ಬೆಳೆ ವಿಮೆಯ ಮೊತ್ತವು ಇಂದಿನಿಂದ ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ಜಮೆಯಾಗಲು ಪ್ರಾರಂಭವಾಗಿದೆ. ಮೊದಲ ಹಂತವಾಗಿ ಇಂದು ಸುಮಾರು 14 ಕೋಟಿ ರೂಪಾಯಿಗಳಷ್ಟು ಬೃಹತ್ ಮೊತ್ತವು ಅರ್ಹ ರೈತರ ಖಾತೆಗಳನ್ನು ತಲುಪಿದ್ದು, ಈ ಪ್ರಕ್ರಿಯೆಯು ಇಂದಿನಿಂದ ಸತತವಾಗಿ ಮುಂದುವರಿಯಲಿದೆ.

ಜಿಲ್ಲೆಯ ಬೆಳೆಗಾರರು ಈಗಾಗಲೇ ಎಲೆ ಚುಕ್ಕಿ ರೋಗದ ಬಾಧೆ ಮತ್ತು ಇಳುವರಿ ಕುಂಠಿತಗೊಂಡ ಕಾರಣದಿಂದ ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದರು. ಸಕಾಲದಲ್ಲಿ ಬರಬೇಕಿದ್ದ ವಿಮಾ ಮೊತ್ತವು ತಾಂತ್ರಿಕ ಕಾರಣಗಳಿಂದ ವಿಳಂಬವಾಗಿದ್ದರಿಂದ ರೈತರು ಕಂಗಾಲಾಗಿದ್ದರು. ಆದರೆ ಈಗ ವಿಮೆ ವಿತರಣೆ ಆರಂಭವಾಗಿರುವುದು ಜಿಲ್ಲೆಯ ಕೃಷಿಕರಲ್ಲಿ ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಮಾಡಿದೆ.

ಈ ಬಗ್ಗೆ ಪ್ರಕಟನೆ ನೀಡಿರುವ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ರೈತರ ಈ ಸಂಕಷ್ಟಕ್ಕೆ ಸ್ಪಂದಿಸಿ, ಬೆಳೆ ವಿಮೆಯನ್ನು ಶೀಘ್ರವಾಗಿ ಕೊಡಿಸಲು ಶ್ರಮಿಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ, ಕೇಂದ್ರ ಕೃಷಿ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಹಾಗೂ ಈ ಪ್ರಕ್ರಿಯೆಯಲ್ಲಿ ಸಹಕರಿಸಿದ ರಾಜ್ಯದ ಎಲ್ಲಾ ಅಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುವುದಾಗಿ ತಿಳಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಪ್ರತಿಯೊಬ್ಬ ಅರ್ಹ ರೈತರಿಗೂ ಈ ವಿಮೆಯ ಸೌಲಭ್ಯ ಹಂತ ಹಂತವಾಗಿ ತಲುಪಲಿದ್ದು, ಸಂಕಷ್ಟದ ಸಮಯದಲ್ಲಿ ಇದು ರೈತರಿಗೆ ದೊಡ್ಡ ಆಸರೆಯಾಗಲಿದೆ ಎಂದು ಕಾಗೇರಿ ಹೇಳಿದ್ದಾರೆ.



ದ್ವಿತೀಯ ಪಿಯು ವಿದ್ಯಾರ್ಥಿನಿ ನೇಣಿಗೆ ಶರಣು

ಯಾದಗಿರಿ: ದ್ವಿತೀಯ ಪಿಯುಸಿ ಓದುತ್ತಿದ್ದ ವಿದ್ಯಾರ್ಥಿನಿಯೊಬ್ಬಳು ಹಾಸ್ಟೆಲ್ ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಶುಕ್ರವಾರ ಜಿಲ್ಲೆಯ ಗುರಮಠಕಲ್ ಪಟ್ಟಣದಲ್ಲಿ ನಡೆದಿದೆ. ಪಟ್ಟಣದ ಬಿಸಿಎಂ ಬಾಲಕಿಯರ ವಸತಿ ನಿಲಯದಲ್ಲಿ ವಿದ್ಯಾರ್ಥಿನಿ ಸ್ವಾತಿರಡ್ಡಿ (19) ಕಿಟಕಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಮಗಳ ಸಾವಿನಿಂದ ಪಾಲಕರ ಆಕ್ರಂದನ ಮುಗಿಲು ಮುಟ್ಟಿತ್ತು. ಕಳೆದ ನಾಲ್ಕು ತಿಂಗಳ ಹಿಂದಷ್ಟೇ ಜಿಲ್ಲೆಯ ವಡಿಗೇರಾ ಪಟ್ಟಣದ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ವಿದ್ಯಾರ್ಥಿಯೊಬ್ಬ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ. ಈ ಘಟನೆ ಜನಮಾನಸದಲ್ಲಿ ಮಾಸುವ ಮುನ್ನವೇ ಮತ್ತೊಂದು ಪ್ರಕರಣ ನಡೆದಿದೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಚರ್ಮ ಸಾಗಿಸುತ್ತಿದ್ದ ಲಾರಿ ವಶ

ಧಾರವಾಡ: ಜಾನುವಾರುಗಳ ಚರ್ಮ ಸಾಗಿಸುತ್ತಿದ್ದ ಆಂಧ್ರಪ್ರದೇಶ ಲಾರಿಯನ್ನು ಭಜರಂಗದಳ ಕಾರ್ಯಕರ್ತರು ಹಿಡಿದು, ಗ್ರಾಮೀಣ ಪೊಲೀಸರಿಗೆ ಒಪ್ಪಿಸಿದ ಘಟನೆ ಹಾರೋಬೆಳವಡಿ ಹತ್ತಿರ ಶುಕ್ರವಾರ ನಡೆದಿದೆ. ಕಸಾಯಿಖಾನೆಯಿಂದ ಜಾನುವಾರುಗಳ ಚರ್ಮ ಕೋಲ್ಕತ್ತಕ್ಕೆ ಸಾಗಿಸುವ ಖಚಿತ ಮಾಹಿತಿ ಮೇರೆಗೆ ಭಜರಂಗದಳ, ಹಿಂದುಪರ ಸಂಘಟನೆಗಳ ಕಾರ್ಯಕರ್ತರು ಲಾರಿಯನ್ನು ಹಿಡಿದು ತಕ್ಷಣವೇ ಪೊಲೀಸರಿಗೆ ಒಪ್ಪಿಸಿದ್ದಾರೆ.

ನಗರದ ಕಸಾಯಿಖಾನೆಯಲ್ಲಿ ಜಾನುವಾರು ವಧೆ ಮಾಡುವ ಕುರಿತು ಹಿಂದುಪರ ಸಂಘಟನೆಗಳು, ಭಜರಂಗದಳದ ಕಾರ್ಯಕರ್ತರು ಆರೋಪಿಸುತ್ತಲೇ ಬಂದರೂ, ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆಕ್ರೋಶಗೊಂಡರು. ಕಸಾಯಿಖಾನೆ ಸುತ್ತಲೂ ಸಿಸಿಟಿವಿ ಕ್ಯಾಮೆರಾ ಅಳವಡಿಸಿದರೂ, ಈಗ ಲಾರಿಯಲ್ಲಿ ಚರ್ಮ ಹೇಗೆ ಬಂತು? ಅಧಿಕಾರಿಗಳ ಕುಮ್ಮಕ್ಕಿನಿಂದ ಈ ರೀತಿ ಜಾನುವಾರಗಳ ವಧೆ ನಡೆಯುತ್ತಿದೆ ಎಂದು ಆರೋಪವೂ ಮಾಡಿದರು. ಲಾರಿಯಲ್ಲಿ ಚರ್ಮ ಮತ್ತು ಮಾಂಸ ಸಾಗಿಸುವುದು ಖಾತ್ರಿಯಾದ ಹಿನ್ನಲೆಯಲ್ಲಿ ಗ್ರಾಮೀಣ ಠಾಣೆಯಲ್ಲಿ ದೂರು ದಾಖಲು ಕೂಡ ಆಗಿದೆ. ಭಜರಂಗಳದ ಸಿದ್ದು ಹಿರೇಮಠ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.



ಸನ್ನಡತೆ ಆಧಾರದ ಮೇಲೆ ಇಬ್ಬರು ಖೈದಿಗಳ ಬಿಡುಗಡೆ

ಕಲಬುರಗಿ: ಕರ್ನಾಟಕ ಸರ್ಕಾರದ ಆದೇಶದಂತೆ ಹಾಗೂ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಪೊಲೀಸ್ ಮಹಾನಿರ್ದೇಶಕರ ನಿರ್ದೇಶನದ ಮೇರೆಗೆ, ಕೇಂದ್ರ ಕಾರಾಗೃಹದಲ್ಲಿದ್ದ ಸುಭಾಷ ಸುಬ್ಬಣ್ಣ ಹಾಗೂ ಜಯಮ್ಮ ಪದ್ಮಾ ಅವರನ್ನು ಸನ್ನಡತೆಯ ಆಧಾರದ ಮೇಲೆ ಶುಕ್ರವಾರ ಬೆಳಗ್ಗೆ ಕಾರಾಗೃಹದಿಂದ ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕಾರಾಗೃಹದ ಮುಖ್ಯ ಅಧೀಕ್ಷಕ ಕೆ. ಸುರೇಶ್ , ಸಂಸ್ಥೆಯ ಅಧೀಕ್ಷಕ ರಾಕೇಶ್ ಕಾಂಬ್ಳೆ, ಸಹಾಯಕ ಅಧೀಕ್ಷಕರಾದ ಸುರೇಶ್ ಬಿ, ಚನ್ನಪ್ಪ ಯಟಗಾಲ್, ಜೈಲರ್‌ಗಳಾದ ಸಾಗರ್ ಪಾಟೀಲ್, ಶ್ರೀಮಂತಗೌಡ ಪಾಟೀಲ್, ಶಿಕ್ಷಕರಾದ ನಾಗರಾಜ ಮೂಲಗೆ ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ರೇಣುಕಾ ಯಲ್ಲಮ್ಮ ಹುಂಡಿ ಎಣಿಕೆ
3.07 ಕೋಟಿ ರೂಪಾಯಿ ಮೌಲ್ಯದ ಕಾಣಿಕೆ ಸಂಗ್ರಹ

ಬೆಳಗಾವಿ : ಉತ್ತರ ಕರ್ನಾಟಕದ ಶಕ್ತಿಪೀಠ ಎಂದೇ ಖ್ಯಾತಿ ಪಡೆದಿರುವ ಸವದತ್ತಿ ರೇಣುಕಾ ಯಲ್ಲಮ್ಮ ದೇವಸ್ಥಾನದಲ್ಲಿ ಈ ಬಾರಿ ದಾಖಲೆ ಪ್ರಮಾಣದ ಕಾಣಿಕೆ ಸಂಗ್ರಹವಾಗಿದೆ. ಕಳೆದ ನಾಲ್ಕು ದಿನಗಳಿಂದ ನಡೆದ ಹುಂಡಿ ಎಣಿಕೆ ಕಾರ್ಯ ಗುರುವಾರ ಮುಕ್ತಾಯಗೊಂಡಿದ್ದು, ಒಟ್ಟು 3.07 ಕೋಟಿ ರೂಪಾಯಿ ಮೌಲ್ಯದ ಕಾಣಿಕೆ ಸಂಗ್ರಹವಾಗಿದೆ ಎಂದು ದೇವಸ್ಥಾನದ ಆಡಳಿತ ಮಂಡಳಿ ತಿಳಿಸಿದೆ.

ಒಟ್ಟು ನಗದು: 2,78,49,000 (2.78 ಕೋಟಿ ರೂ.) ಚಿನ್ನ: 100 ಗ್ರಾಂ ತೂಕದ ಚಿನ್ನಾಭರಣ (ಮಾರುಕಟ್ಟೆ ಮೌಲ್ಯ ಅಂದಾಜು 16.16 ಲಕ್ಷ) ಬೆಳ್ಳಿ: 4 ಕೆಜಿ 547 ಗ್ರಾಂ ತೂಕದ ಬೆಳ್ಳಿ ಆಭರಣ (ಮಾರುಕಟ್ಟೆ ಮೌಲ್ಯ ಅಂದಾಜು 12.35 ಲಕ್ಷ) ಮಾರ್ಚ್ 9 ರಿಂದ ಮಾರ್ಚ್ 12ರ ಅವಧಿಯಲ್ಲಿ ಸತತವಾಗಿ ಹುಂಡಿ ಎಣಿಕೆ ಕಾರ್ಯ ನಡೆದಿದೆ. ಕಳೆದ ವಾರವೂ ಹುಂಡಿ ಎಣಿಕೆ ನಡೆದಿತ್ತು, ಆದರೆ ಈ ವಾರದ ಎಣಿಕೆಯಲ್ಲಿ ದಾಖಲೆ ಮಟ್ಟದ ಕಾಣಿಕೆ ಬಂದಿರುವುದು ವಿಶೇಷ.



ವಿದ್ಯಾರ್ಥಿನಿ ಆತ್ಮಹತ್ಯೆ

ಬೀದರ: ಜಿಲ್ಲೆಯ ಬೆಮ್ಮಳಖೇಡಾ ಗ್ರಾಮದ ಪಿಎಂಶ್ರೀ ಆದರ್ಶ ವಿದ್ಯಾಲಯದಲ್ಲಿ ವಿದ್ಯಾರ್ಥಿನಿ ಕಟ್ಟಡದ ಮೇಲಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಘಟನೆ ಬುಧವಾರ ನಡೆದಿದೆ. ಮದಿಹಾ ಫರ್ಹಾ (15) ಮೃತ ವಿದ್ಯಾರ್ಥಿನಿ. 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಳು. ಶಾಲಾ ಕಟ್ಟಡದ ಮೂರನೇ ಮಹಡಿಯಿಂದ ಮದಿಹಾ ಫರ್ಹಾ ಕೆಳಗೆ ಬಿದ್ದಿದ್ದು, ತಕ್ಷಣವೇ ಆಕೆಯನ್ನು ಚಿಕಿತ್ಸೆಗಾಗಿ ಬೀದರ್ ನ ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಆಕೆ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ರೈಲಿನಿಂದ ಬಿದ್ದು ವೃದ್ಧ ಸಾವು

ಭಟ್ಕಳ : ಮಂಗಳೂರು ಆಸ್ಪತ್ರೆಗೆ ಚಿಕಿತ್ಸೆಗಾಗಿ ತೆರಳುತ್ತಿದ್ದ ವೇಳೆ ರೈಲಿನಿಂದ ಕೆಳಗೆ ಬಿದ್ದು ವೃದ್ಧನೊಬ್ಬ ಮೃತಪಟ್ಟ ಘಟನೆ ಶಿರಾಲಿಯ ಚಿತ್ರಾಪುರ ರೈಲ್ವೆ ಹಳಿಯಲ್ಲಿ ನಡೆದಿದೆ.

ಮೃತರನ್ನು ಕಾರವಾರ ತಾಲೂಕಿನ ಅಮದಳ್ಳಿ ಟೋಲ್ ನಾಕಾ ಸಮೀಪದ ನಿವಾಸಿ ಬಾಬು ಪಾಂಡುರಂಗ ಪಡ್ತಿ (70) ಎಂದು ಗುರುತಿಸಲಾಗಿದೆ. ಈ ಕುರಿತು ಪುತ್ರ ಅಕ್ಷಯ ಪಡ್ತಿ ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಹೊಸ ದಿಗಂತ
ಶನಿವಾರ
14 ಮಾರ್ಚ್ 2026, ಹುಬ್ಬಳ್ಳಿ



ಆರ್‌ಎಸ್‌ಎಸ್: ಅಖಿಲ ಭಾರತೀಯ ಪ್ರತಿನಿಧಿ ಸಭಾ ಪ್ರಾರಂಭ

ಸಮಾಲ್ಖಾ: ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ದ ವಾರ್ಷಿಕ ಅಖಿಲ ಭಾರತೀಯ ಪ್ರತಿನಿಧಿ ಸಭಾ ಹರಿಯಾಣದಸಮಾಲ್ಖಾದಲ್ಲಿರುವಮಾಧವಸೃಷ್ಟಿಆವರಣದಲ್ಲಿ ಶುಕ್ರವಾರ ಆರಂಭಗೊಂಡಿತು. ಭಾನುವಾರದವರೆಗೆ ನಡೆಯಲಿದೆ.

ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಭಾರತ ಮಾತೆಯ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿದರು. ಬಳಿಕ ಹೊಸಬಾಳೆ ಅವರು ಸಂಘದ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಪ್ರಸ್ತುತ ಪಡಿಸಿದರು.

ಈ ಅಖಿಲ ಭಾರತೀಯ ಪ್ರತಿನಿಧಿ ಸಭಾವು ಪ್ರತಿವರ್ಷವೂ ನಡೆಯುತ್ತದೆ. ಈ ವರ್ಷ ಸಂಘ ಮತ್ತು ಸಂಘಪ್ರೇರಿತ 32 ಸಂಘಟನೆಗಳ ಅಖಿಲ ಭಾರತ ಮಟ್ಟದ ಹಾಗೂ ಪ್ರಾಂತ ಮಟ್ಟದ ಅಧಿಕಾರಿಗಳು ಸೇರಿದಂತೆ ಸಂಘದ ಎಲ್ಲಾ 45 ಪ್ರಾಂತಗಳಿಂದ 1,487 ಕಾರ್ಯಕರ್ತರು ಅಪೇಕ್ಷಿತರಿದ್ದಾರೆ. ಮೂರು ದಿನಗಳ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ಹೆಚ್ಚು ಸಮಯ ಸಂಘಕಾರ್ಯದ ವಿಮರ್ಶೆ ಹಾಗೂ ಯೋಜನೆಗಳಿಗೆ ಮೀಸಲಿಡಲಾಗುತ್ತದೆ.

ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ ಸಮರ್ಪಣೆ: ರಾಷ್ಟ್ರಕ್ಕೆ ಮತ್ತು ಸಮಾಜಕ್ಕೆ ಕೊಡುಗೆಯನ್ನು ನೀಡಿ ಅಗಲಿದ ನಾಡಿನ ಪ್ರಮುಖರಿಗೆ, ಆರ್‌ಎಸ್‌ಎಸ್ ಹಿರಿಯ ಕಾರ್ಯಕರ್ತರಿಗೆ ಪ್ರತಿವರ್ಷ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಗುತ್ತದೆ. ಈ ಬಾರಿ ವಿದರ್ಭದ ಸದ್ಗುರುದಾಸ ಮಹಾರಾಜ್, ಕೇಂದ್ರದ ಮಾಜಿ ಗೃಹಮಂತ್ರಿ ಶಿವರಾಜ್ ಪಾಟೀಲ್, ಪುರಾತತ್ವ ಇಲಾಖೆಯ ಅಧ್ಯಕ್ಷರಾಗಿದ್ದ ಪದ್ಮಭೂಷಣ ಕೆ.ಎನ್. ದೀಕ್ಷಿತ್, ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್, ನಟ ಧರ್ಮೇಂದ್ರ, ತಮಿಳು ಚಿತ್ರ ನಿರ್ಮಾಪಕ ಎ.ವಿ.ಎನ್. ಸರವಣನ್, ಕೇರಳದ ಸಿನೆಮಾ ನಟ ಶ್ರೀನಿವಾಸನ್, ಕಮ್ಯುನಿಸ್ಟ್ ನಾಯಕ ಆರ್. ನಲ್ಲಕಣ್ಣು, ಮಿಜೋರಾಂನ ಮಾಜಿ ರಾಜ್ಯಪಾಲ ಸ್ವರಾಜ್ ಕೌಶಲ್, ಒಡಿಶಾದ ಭಾಷಾತಜ್ಞೆ ಮಾಲತಿ ಮುರ್ಮು, ಅಸ್ಸಾಂನ ಕಲಾವಿದ ಸಮರ್ ಹಜಾರಿಕಾ, ಹಿರಿಯ ಪತ್ರಕರ್ತ ಪ್ರಫುಲ್ಲ ಗೋವಿಂದ ಬರುವಾ, ಬಂಗಾಲದ ಸಾಹಿತಿ ಮಣಿಶಂಕರ್ ಮುಖರ್ಜಿ ಸೇರಿದಂತೆ ಅನೇಕ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಅಗಲಿದ ಕರ್ನಾಟಕದ ಗಣ್ಯರಿಗೆ ಶ್ರದ್ಧಾಂಜಲಿ: ಕರ್ನಾಟಕದಲ್ಲಿಗಣನೀಯಸೇವೆಸಲ್ಲಿಸಿಅಗಲಿರುವಗಣ್ಯರಿಗೂ ಪ್ರತಿನಿಧಿ ಸಭಾದಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಪರಿಸರ ವಿಜ್ಞಾನಿ ಡಾ. ಮಾಧವ ಗಾಡ್ಗೀಲ್, ವೃಕ್ಷಮಾತೆ ಸಾಲುಮರದ ತಿಮ್ಮಕ್ಕ, ಸ್ವಾತಂತ್ರ್ಯ ಹೋರಾಟಗಾರ ಮತ್ತು ರಾಜಕಾರಣಿ ಭೀಮಣ್ಣ ಖಂಡ್ರೆ, ಶಿಕ್ಷಣತಜ್ಞ ಮತ್ತು ಉದ್ಯಮಿ ಡಾ.ಎನ್. ವಿನಯ ಹೆಗ್ಡೆ, ಹಿಂದೂಸ್ತಾನಿ ಗಾಯಕ ಅಶೋಕ ಹುಗ್ಗಣ್ಣವರ್, ಹಿರಿಯ ರಾಜಕಾರಣಿ ಮತ್ತು ಅಖಿಲ ಭಾರತ ವೀರಶೈವ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹಾಗೂ ಹುಬ್ಬಳ್ಳಿಯ ಉದ್ಯಮಿ ಭರತ್ ಖಿಮ್ಜಿ ಅವರಿಗೆ ಗೌರವ ಸಲ್ಲಿಸಲಾಯಿತು.





ದೇಶವ್ಯಾಪಿ 55,683 ಸ್ಥಾನಗಳಲ್ಲಿ ನಿತ್ಯ ಶಾಖೆ

ಸಮಾಲ್ಖಾ: ಸಮಾಜದ ರಚನಾತ್ಮಕ ಶಕ್ತಿಗಳನ್ನು ಒಟ್ಟುಗೂಡಿಸುವುದು ಮತ್ತು ರಾಷ್ಟ್ರ ನಿರ್ಮಾಣದ ಕೆಲಸದಲ್ಲಿ ಮುಂದುವರಿಯುವುದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಉದ್ದೇಶವಾಗಿದೆ. ಸಂಘವು ಪ್ರಪಂಚದಾದ್ಯಂತ ಎಲ್ಲರಿಗೂ ಶಾಂತಿ ಮತ್ತು ಕ್ಷೇಮವನ್ನು ಬಯಸುತ್ತದೆ ಎಂದು ಸಂಘದ ಸಹಸರಕಾರ್ಯವಾಹ ಸಿ.ಆರ್. ಮುಕುಂದ ಹೇಳಿದರು.

ಶುಕ್ರವಾರ ಅಖಿಲ ಭಾರತೀಯ ಪ್ರತಿನಿಧಿ ಸಭಾದ ಉದ್ಘಾಟನೆಯ ನಂತರ ಸುದ್ದಿಗೋಷ್ಠಿ ನಡೆಸಿದ ಅವರು, ಶತಾಬ್ದಿ ವರ್ಷವಾದ್ದರಿಂದ ಈ ಬಾರಿಯ ಅಖಿಲ ಭಾರತೀಯ ಪ್ರತಿನಿಧಿ ಸಭೆಯು ಮಹತ್ವಪೂರ್ಣವಾದದ್ದು. ಇಡೀ ದೇಶದಲ್ಲಿ ಸಂಘದ ಕಾರ್ಯಕರ್ತರು ಮತ್ತು ಸ್ವಯಂಸೇವಕರು ಸಂಘಕಾರ್ಯದ ವಿಸ್ತಾರ ಮತ್ತು ಸಮಾಜದ ಸಂಪರ್ಕ ಮತ್ತು ಜಾಗರಣದಲ್ಲಿ ಭಾಗಿಯಾಗಿದ್ದರು. ಅದರ ಸಂಪೂರ್ಣ ಮಾಹಿತಿಯನ್ನು ಪಡೆಯುವುದಕ್ಕೆ ಅವರಲ್ಲಿ ಕೆಲವರು ಈ ಪ್ರತಿನಿಧಿ ಸಭೆಯಲ್ಲಿ ಭಾಗಿಯಾಗುತ್ತಿದ್ದಾರೆ. ಸುಮಾರು 1400ಕ್ಕೂ ಅಧಿಕ ಮಂದಿ ಈ ಸಭೆಗೆ ಅಪೇಕ್ಷಿತರಿದ್ದಾರೆ ಎಂದರು.

ದೇಶಾದ್ಯಂತ ಒಟ್ಟು 55,683 ಸ್ಥಾನಗಳಲ್ಲಿ 88,949 ಶಾಖೆಗಳು ನಡೆಯುತ್ತಿವೆ. ಕಳೆದ ಒಂದು ವರ್ಷದಲ್ಲಿ 5,820 ಶಾಖೆಗಳು ಹೆಚ್ಚಾಗಿವೆ. ದೇಶವ್ಯಾಪಿ 32,606 ಸಾಪ್ತಾಹಿಕ (ಮಿಲನ್) ಶಾಖೆಗಳು ಜರುಗುತ್ತಿವೆ, ಕಳೆದ ವರ್ಷಕ್ಕಿಂತ 459 ಮಿಲನ್‌ಗಳು ಹೆಚ್ಚಾಗಿವೆ. ಪ್ರಸ್ತುತ ದೇಶಾದ್ಯಂತ ತಿಂಗಳಿಗೊಮ್ಮೆ ನಡೆಯುವ ಮಂಡಳಿಗಳು ಒಟ್ಟು 13,211 ಇವೆ. ಸಂಘದ ದೈನಂದಿನ ಶಾಖೆ, ಸಾಪ್ತಾಹಿಕ ಮಿಲನ್ ಮತ್ತು ಸಂಘ ಮಂಡಳಿಗಳನ್ನು ಸೇರಿಸಿದರೆ ದೇಶದಲ್ಲಿ ಒಟ್ಟು 1,34,766 ಶಾಖೆಗಳು ನಡೆಯುತ್ತಿವೆ ಮಾಹಿತಿ ನೀಡಿದರು.

ದೇಶದಲ್ಲಿ ಸಂಘಕಾರ್ಯವು ಸ್ಥಿರವಾಗಿ ಬೆಳೆಯುತ್ತಿದೆ, ಕಳೆದ ವರ್ಷದಲ್ಲಿ ಹಲವಾರು ಹೊಸ ಸ್ಥಳಗಳಲ್ಲಿ ಹೊಸ ಶಾಖೆಗಳು ಪ್ರಾರಂಭವಾಗಿವೆ. ಸಾಮಾಜಿಕ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರುವ ಉದ್ದೇಶದೊಂದಿಗೆ ಮುಂಬರುವ ವರ್ಷಗಳಲ್ಲಿ ಹಳ್ಳಿಗಳು ಮತ್ತು ಸಣ್ಣ ಪಟ್ಟಣಗಳಲ್ಲಿ ಹೆಚ್ಚು ಹೆಚ್ಚು ಶಾಖೆಗಳನ್ನು ಪ್ರಾರಂಭಿಸುವ ಗುರಿಯನ್ನು ಸಂಘ ಹೊಂದಿದೆ ಎಂದು ಅವರು ಹೇಳಿದರು.

ನಕ್ಸಲ್ ಸಮಸ್ಯೆ ಪರಿಹಾರ

ದೇಶದಲ್ಲಿದ್ದ ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ಪರಿಸ್ಥಿತಿ ಸಹಜವಾಗುತ್ತಿದ್ದು, ಅಲ್ಲಿ ಶಾಂತಿ ಮತ್ತು ಅಭಿವೃದ್ಧಿಯನ್ನು ತರಲು ಸರ್ಕಾರ ಮಾಡುತ್ತಿರುವ ಪ್ರಯತ್ನಗಳನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಸ್ವಾಗತಿಸಿದೆ. ಮಣಿಪುರದಲ್ಲಿ ಇದುವರೆಗೂ ಬಿಗಡಾಯಿಸಿದ್ದ ಪರಿಸ್ಥಿತಿ ಈಗ ಸುಧಾರಿಸುತ್ತಿದೆ. ರಾಜಕೀಯ ಸ್ಥಿರತೆಯ ಜೊತೆಗೆ ಅದಕ್ಕಿಂತಲೂ ಮಿಗಿಲು ಅಲ್ಲಿನ ಸಮಾಜದ ಸಂಪೂರ್ಣ ಬುಡಕಟ್ಟು ಜನಾಂಗಗಳ ಪ್ರಮುಖರು ಒಟ್ಟಾಗಿ ಪರಿಹಾರ ಕಂಡುಕೊಳ್ಳಲು ಮುಂದಾಗಿದ್ದಾರೆ. ಈ ಪ್ರಯತ್ನಗಳಲ್ಲಿ ಸಂಘದ ಸ್ವಯಂಸೇವಕರು ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಮುಕುಂದ ಅವರು ಹೇಳಿದರು.

ಮಣಿಪುರದ ಮೈಥೇಯಿ, ಕುಕಿ, ನಾಗ ಸೇರಿದಂತೆ ಎಲ್ಲಾ ಬುಡಕಟ್ಟು ಜನಾಂಗಗಳೊಡನೆ ಸಂಘದ ಸಂಪರ್ಕವಿದೆ. ಆ ಸಮುದಾಯುಗಳಲ್ಲಿ ಸ್ವಯಂಸೇವಕ, ಕಾರ್ಯಕರ್ತರು ಇದ್ದಾರೆ. ಅಲ್ಲಿನ ಸಂಘದ ಅಸ್ತಿತ್ವವನ್ನು ಆಧಾರವನ್ನಾಗಿಸಿಕೊಂಡು ಕೇವಲ ಈಗ ಸಮಸ್ಯೆಗಳು ಉಂಟಾದಾಗ ಮಾತ್ರವಲ್ಲದೇ ಉಳಿದ ಸಂದರ್ಭಗಳಲ್ಲೂ ಎಲ್ಲರ ನಡುವೆ ಉತ್ತಮ ಬಾಂಧವ್ಯ ಮೂಡುವಂತೆ ಮಾಡುವ ಪ್ರಯತ್ನಗಳಾಗಿತ್ತು ಮತ್ತು ಅದು ಜಾರಿಯಲ್ಲಿತ್ತು. ಸಂಘದ ನಮ್ಮ ಕಾರ್ಯಕರ್ತರು ಅಲ್ಲಿನ ಬುಡಕಟ್ಟು ಬಂಧುಗಳ ಪ್ರಮುಖರ ನಡುವೆ ಮಾತುಕತೆ ನಡೆಸಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ನಾವೆಲ್ಲರೂ ಭಾರತ ಮಾತೆಯ ಮಕ್ಕಳು ಎನ್ನುವ ಭಾವ ಮೂಡಿಸುವಲ್ಲಿ ಶ್ರಮವಹಿಸಿದರು. ಭಾರತೀಯ ಸಮಾಜದ, ಸ್ವಧರ್ಮದ ಸಂರಕ್ಷಣೆ ಮಾಡುವುದಕ್ಕೆ ನಾವೆಲ್ಲರೂ ಒಂದಾಗಿರಬೇಕು ಎಂಬ ಭಾವ ನಿರ್ಮಾಣ ಮಾಡುವುದು ನಮ್ಮ ಪ್ರಯತ್ನವಾಗಿತ್ತು. ರಾಜಕೀಯ ಸ್ಥಿರತೆ ತರುವ ಪ್ರಯತ್ನ ಸರ್ಕಾರ ಮಾಡಿತು. ನಾವು ಎಲ್ಲರನ್ನು ಒಂದುಗೂಡಿಸುವ ಪ್ರಯತ್ನ ಮಾಡಿದೆವು. ಕಳೆದ ಎರಡು ವರ್ಷಗಳಲ್ಲಿ ನಮ್ಮ ಪ್ರಯತ್ನ ಉತ್ತಮ ಪರಿಣಾಮವನ್ನುಂಟುಮಾಡಿದೆ ಎಂದರು.

ನಮ್ಮ ನೆರೆಯ ದೇಶ ಬಾಂಗ್ಲಾದಲ್ಲಿ ಹಿಂದುಗಳಿಗೆ ಕಠಿಣ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರಗಳು ಹಿಂದುಗಳ ಮಾನ ಸಂರಕ್ಷಣೆ, ಹಕ್ಕು ಮತ್ತು ಆಸಕ್ತಿಗಳ ಸಂರಕ್ಷಿಸುವುದಕ್ಕೆ ಪ್ರಯತ್ನಮಾಡಬೇಕೆಂದು ಸಂಘ ಆಗ್ರಹಿಸುತ್ತದೆ ಎಂದು ಮುಕುಂದ ಸಿ.ಆರ್. ಹೇಳಿದರು.

ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್, ಸಹ ಪ್ರಚಾರ ಪ್ರಮುಖರಾದ ನರೇಂದ್ರ, ಠಾಕೂರ್ ಮತ್ತು ಪ್ರದೀಪ್ ಜೋಶಿ ಸುದ್ದಿಗೋಷ್ಠಿಯಲ್ಲಿದ್ದರು.

ಸಂಘ ಶತಾಬ್ದಿ ಕಾರ್ಯಕ್ರಮಗಳು

ಸಮಾಲ್ಖಾ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ವರ್ಷದ ಕಾರ್ಯಕ್ರಮಗಳನ್ನು ದೇಶಾದ್ಯಂತ ಆಯೋಜಿಸಲಾಗುತ್ತಿದೆ. ಸಮಾಜದ ಸಜ್ಜನ ಶಕ್ತಿಯ ಬೆಂಬಲ ಮತ್ತು ಭಾಗವಹಿಸುವಿಕೆಯು ಸ್ವಯಂಸೇವಕರನ್ನು ಬಹಳವಾಗಿ ಪ್ರೋತ್ಸಾಹಿಸಿದೆ ಎಂದು ಸಂಘದ ಸಹಸರಕಾರ್ಯವಾಹ ಮುಕುಂದ ಸಿ.ಆರ್. ಹೇಳಿದರು.

ಕಳೆದ ವರ್ಷ ಅಕ್ಟೋಬರ್ 2ರ ವಿಜಯದಶಮಿಯಲ್ಲಿ ನಾಗ್ಪುರದಲ್ಲಿ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರ ಭಾಷಣದೊಂದಿಗೆ ಶತಾಬ್ದಿ ವರ್ಷದ ಕಾರ್ಯಕ್ರಮಗಳು ಪ್ರಾರಂಭಗೊಂಡವು. ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಭಾಗವಹಿಸಿದರು. ಅದಕ್ಕಿಂತ ಒಂದು ದಿನ ಮೊದಲು ಸಂಘ ಶತಾಬ್ದಿಯ ಹಿನ್ನೆಲೆಯಲ್ಲಿ ದಿಲ್ಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ನಾಣ್ಯ ಹಾಗೂ ಅಂಚೆಚೀಟಿಯನ್ನು ಬಿಡುಗಡೆ ಮಾಡಿದರು ಎಂದು ತಿಳಿಸಿದರು.

ಸಂಘ ಶತಾಬ್ದಿ ವರ್ಷದಲ್ಲಿ ಎರಡು ರೀತಿಯ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಮೊದಲನೆಯದ್ದು ಶಾಖೆಗಳ ಮೂಲಕ ಸಂಘಟನಾತ್ಮಕ ವಿಸ್ತಾರ; ಎರಡನೆಯದ್ದು ಸಮಾಜದ ಸಂಪರ್ಕಕ್ಕಾಗಿ, ಸಮಾಜದಲ್ಲಿ ಸದ್ಭಾವ ನಿರ್ಮಾಣಕ್ಕಾಗಿ, ಎಲ್ಲಾ ಸಜ್ಜನ ಶಕ್ತಿಯನ್ನು ಜೊತೆಯಲ್ಲಿರಿಸಿಕೊಂಡು ಸಮಾಜದ ಸಂಘಟನೆ, ಪರಿವರ್ತನೆ ಮತ್ತು ಜಾಗರಣದ ಕಾರ್ಯವನ್ನು ಮಾಡುವುದಾಗಿದೆ ಎಂದು ಹೇಳಿದರು.

ಪ್ರಮುಖ ನಾಗರಿಕ ಗೋಷ್ಠಿ ಮತ್ತು ಸದ್ಭಾವಗೋಷ್ಠಿ : ಪ್ರತಿ ಸ್ಥಾನದ ಪ್ರಮುಖ ನಾಗರಿಕರನ್ನು ತಲುಪುವ ದೃಷ್ಟಿಯಿಂದ ಪ್ರಮುಖ ನಾಗರಿಕ ಗೋಷ್ಠಿ; ಸಮಾಜದಲ್ಲಿ ಸದ್ಭಾವನೆಯನ್ನು ಮೂಡಿಸುವ ಸಲುವಾಗಿ ಸ್ಥಾನೀಯ ಸ್ತರದಲ್ಲಿ ಜಾತಿ ಸಮುದಾಯಗಳ ಪ್ರಮುಖರು, ಆಧ್ಯಾತ್ಮಿಕ ಸಂಸ್ಥೆಗಳ ಪ್ರಮುಖರು, ಧಾರ್ಮಿಕ ಕೇಂದ್ರಗಳ ಪ್ರಮುಖರು ಸೇರಿದಂತೆ ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುವ ಮೂಲಕ ಸಮಾಜದಲ್ಲಿ ಸುಧಾರಣೆ ತರುವ ಪ್ರಯತ್ನಗಳ ಕುರಿತು ಚರ್ಚೆ ಸದ್ಭಾವನ ಗೋಷ್ಠಿಗಳಲ್ಲಿ ನಡೆಯಲಿದೆ ಎಂದು ವಿವರಿಸಿದರು.

10 ಕೋಟಿ ಗೃಹ ಸಂಪರ್ಕ

ಸಮಾಜದ ಸಂಪರ್ಕಕ್ಕಾಗಿ ಅನೇಕ ಪ್ರಯತ್ನಗಳನ್ನು ಶತಾಬ್ದಿ ಸಂದರ್ಭದಲ್ಲಿ ನಾವು ಮಾಡಿದ್ದೇವೆ. ಪ್ರಮುಖವಾಗಿ ಪ್ರತಿ ಗ್ರಾಮದ ಪ್ರತಿ ಮನೆಯನ್ನೂ ಸಂಪರ್ಕಿಸುವ ಪ್ರಯತ್ನವನ್ನು ನಾವು ಮಾಡಿದ್ದು ಇಲ್ಲಿಯವರೆಗೆ 3.90 ಲಕ್ಷ ಗ್ರಾಮಗಳ 10 ಕೋಟಿ ಮನೆಗಳನ್ನು ನಾವು ತಲುಪಿದ್ದೇವೆ. ಈ ಪ್ರಯತ್ನ ಇನ್ನೂ ಜಾರಿಯಲ್ಲಿದೆ. ಶತಾಬ್ದಿ ವರ್ಷ 2026ರ ಅಕ್ಟೋಬರ್‌ವರೆಗೆ ಇರಲಿದ್ದು ಕೆಲವು ಪ್ರಾಂತಗಳಲ್ಲಿ ಈ ಪ್ರಯತ್ನ ಪೂರ್ಣಗೊಂಡಿದೆ. ಕೆಲವು ಪ್ರಾಂತಗಳಲ್ಲಿ ನಡೆಯುತ್ತಿದೆ, ಇನ್ನು ಮೂರು ಅಥವಾ ನಾಲ್ಕು ತಿಂಗಳಲ್ಲಿ ಪೂರ್ಣಗೊಳ್ಳಲಿದೆ. ಗೃಹಸಂಪರ್ಕದ ಅನುಭವ ಬಹಳ ವಿಶೇಷವಾಗಿತ್ತು. ಸಮಾಜದ ಸರ್ವರನ್ನೂ ತಲುಪುವ ಪ್ರಯತ್ನ ನಮ್ಮದು ಎಂದರು.

ಮುಖ್ಯವಾಗಿ ಪಂಚಪರಿವರ್ತನೆಯ (ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸಾಮಾಜಿಕ ಸಾಮರಸ್ಯ, ಸ್ವದೇಶಿ ಭಾವ ಜಾಗರಣ ಮತ್ತು ನಾಗರಿಕ ಶಿಷ್ಟಾಚಾರ) ವಿಷಯವನ್ನು ವಸತಿ ಅಥವಾ ಮಂಡಲ ಸ್ತರದಲ್ಲಿ ಎಲ್ಲರಿಗೂ ತಲುಪಬೇಕು ಎಂಬ ಪ್ರಯತ್ನವನ್ನು ಮಾಡಲಾಗುತ್ತಿದೆ. ಈ ವಿಷಯದ ಕುರಿತು ಸ್ಥಾನೀಯ ಪ್ರಮುಖರು, ವೈಚಾರಿಕ ವಲಯದ ಪ್ರಮುಖರ ಜೊತೆಗೆ ಚರ್ಚಿಸಿ, ಸಮಾಜದಲ್ಲಿ ಪಂಚಪರಿವರ್ತನೆಗೆ ಪೂರಕ ಮಾನಸಿಕತೆಯ ನಿರ್ಮಾಣಕ್ಕಾಗಿ ಪ್ರಯತ್ನಿಸಲಾಗುತ್ತಿದೆ. ಅದಕ್ಕಾಗಿ ಪ್ರಮುಖ ನಾಗರಿಕ ಗೋಷ್ಠಿ ಮತ್ತು ಸದ್ಭಾವ ಗೋಷ್ಠಿಗಳು ಸಹಕಾರಿ ಆಗಲಿವೆ ಎಂದು ಅಭಿಪ್ರಾಯಪಟ್ಟರು.

ಆರ್‌ಎಸ್‌ಎಸ್‌ನ ಶತಮಾನೋತ್ಸವ ವರ್ಷದ ಕಾರ್ಯಕ್ರಮಗಳು ಅಕ್ಟೋಬರ್ 2026ರವರೆಗೆ ಮುಂದುವರಿಯಲಿದೆ. ಈ ಅವಧಿಯಲ್ಲಿ ವಿವಿಧ ಚಟುವಟಿಕೆಗಳನ್ನು ಯೋಜಿಸಲಾಗಿದೆ ಎಂದು ಮುಕುಂದ ಅವರು ತಿಳಿಸಿದರು.

ಗೃಹ ಸಂಪರ್ಕ ಅಭಿಯಾನ

ಸಂಪರ್ಕಿಸಿದ ಹಳ್ಳಿಗಳು	3,89,465
ಸಂಪರ್ಕಿಸಿದ ಬಸ್ತಿ (ವಸತಿ)	31,143
ಭೇಟಿ ನೀಡಿದ ಮನೆಗಳು	10,02,12,162
ಹಂಚಿದ ಕರಕತ್ರಗಳು	9,11,88,203
ಪುಸ್ತಕ ಮಾರಾಟ	84,13,552

ಹಿಂದು ಸಮ್ಮೇಳನ

ಮಂಡಲ ಸಮ್ಮೇಳನಗಳು	23,143
ಬಸ್ತಿ (ವಸತಿ) ಸಮ್ಮೇಳನಗಳು	13,905
ಮಹಿಳಾ ಭಾಗವಹಿಸುವಿಕೆ	1,55,95,124
ಪುರುಷರ ಭಾಗವಹಿಸುವಿಕೆ	1,93,40,087
ಒಟ್ಟು ಭಾಗವಹಿಸುವಿಕೆ	3,49,35,211

ಕಾರ್ಯವಿಸ್ತಾರ 2026

ಸ್ಥಾನಗಳು	55,683
ಶಾಖೆಗಳು	88,949
ಮಿಲನ್‌ಗಳು	32,606
ಮಂಡಳಿಗಳು	13,211
ಒಟ್ಟು	1,34,766

ವಿಜಯದಶಮಿ ಅಂಕಿ-ಅಂಶ

ವಿಜಯದಶಮಿ ಉತ್ಸವ

ಒಟ್ಟು ಉತ್ಸವ	62,555
ತರುಣರ ಭಾಗವಹಿಸುವಿಕೆ	27,08,186
ಬಾಲಕರ ಭಾಗವಹಿಸುವಿಕೆ	5,36,955
ಒಟ್ಟು ಭಾಗವಹಿಸುವಿಕೆ	32,45,141

ವಿಜಯದಶಮಿ ಸಂಚಲನ

ಸಂಚಲನ ಸ್ಥಳ	22,656
ತರುಣರ ಭಾಗವಹಿಸುವಿಕೆ	21,62,155
ಬಾಲಕರ ಭಾಗವಹಿಸುವಿಕೆ	3,83,663
ಒಟ್ಟು ಭಾಗವಹಿಸುವಿಕೆ	25,45,818





37,000 ಹಿಂದು ಸಮ್ಮೇಳನಗಳು

ದೇಶದಲ್ಲಿ ಶತಾಬ್ದಿ ವರ್ಷದ ನಿಮಿತ್ತ ಇಲ್ಲಿಯವರೆಗೆ 37,048 ಹಿಂದು ಸಮ್ಮೇಳನಗಳು ನಡೆದಿವೆ. ಇನ್ನೂ ಕೆಲವು ಕಡೆಗಳಲ್ಲಿ ನಡೆಯಲಿವೆ. ನಗರ ಪ್ರದೇಶ, ಗ್ರಾಮೀಣ ಪ್ರದೇಶ, ಬುಡಕಟ್ಟು ಪ್ರದೇಶಗಳು, ದೂರದ ಪ್ರದೇಶಗಳ ಸಹಿತ ಎಲ್ಲಾ ಕಡೆಗಳಲ್ಲಿ ಹಿಂದು ಸಮ್ಮೇಳನಗಳು ಜರುಗಿವೆ. ಅರುಣಾಚಲ ಪ್ರದೇಶದಲ್ಲಿ ದೂರದ ಪ್ರದೇಶವೊಂದರಲ್ಲಿ ಸಂಘದ ಸಹಸರಕಾರ್ಯವಾಹ ಅರುಣ್ ಕುಮಾರ್ ಅವರು ಭಾಗವಹಿಸಿದ್ದ ಹಿಂದು ಸಮ್ಮೇಳನದಲ್ಲಿ ಪಾಲ್ಗೊಂಡವರು – ಇದು ನಂಬಲಾಗುತ್ತಿಲ್ಲ. ಈ ಹಿಂದೆ ಯಾವತ್ತೂ ಹೀಗೆ ಸಮಾಜದ ಎಲ್ಲಾ ಬಂಧುಗಳು ದೊಡ್ಡ ಸಂಖ್ಯೆಯಲ್ಲಿ ಆಗಮಿಸಿ ದೇಶ, ಸಮಾಜದ ಬಗ್ಗೆ ಯೋಚಿಸುವ ಕೆಲಸ ಆಗಿರಲಿಲ್ಲ ಎಂದು ಸಂಭ್ರಮಿಸಿದ್ದಾರೆ ಎಂದು ತಿಳಿಸಿದರು.

ಸ್ವಯಂಸೇವಕರಿಗೆ ಅಪೂರ್ವ ಸ್ವಾಗತ

ಕೇರಳದಲ್ಲಿ ನಾವು ಎಲ್ಲರ ಮನೆಗಳಿಗೆ ಭೇಟಿ ನೀಡಿದ್ದೇವೆ. ಅದರಲ್ಲಿ ಕಮ್ಯುನಿಸ್ಟ್ ಸಿದ್ಧಾಂತದ ಜನರ ಮನೆಗಳೂ ಸೇರಿದ್ದವು. ಮುಸ್ಲಿಂ, ಕ್ರಿಶ್ಚಿಯನ್ ಸಮುದಾಯದವರ ಮನೆಗಳಿಗೂ ನಾವು ಭೇಟಿ ಕೊಟ್ಟಿದ್ದೇವೆ. ಬಹುತೇಕ ಸ್ಥಳಗಳಲ್ಲಿ ನಮಗೆ ಒಳ್ಳೆಯ ಸ್ವಾಗತ ಸಿಕ್ಕಿದೆ. ಕೇರಳದ ಸಣ್ಣದೊಂದು ಪ್ರದೇಶದಲ್ಲಿ ನಮ್ಮ ಸ್ವಯಂಸೇವಕರು 55,000 ಮುಸ್ಲಿಂ ಮನೆಗಳು ಮತ್ತು 54,000 ಕ್ರಿಶ್ಚಿಯನ್ ಮನೆಗಳಿಗೆ ಭೇಟಿ ಕೊಟ್ಟಿದ್ದಾರೆ. ಎಲ್ಲೆಡೆ ಪ್ರೀತಿಯಿಂದ ಸ್ವಾಗತಿಸಿದ್ದಾರೆ. ರಾಷ್ಟ್ರೀಯ ವಿಚಾರಗಳು, ಪಂಚ ಪರಿವರ್ತನೆಯ ವಿಷಯವಾಗಿ ನಾವು ಅವರಲ್ಲಿ ಚರ್ಚಿಸಿದ್ದು, ಎಲ್ಲರೂ ಅದನ್ನು ಸ್ವಾಗತಿಸಿದರು. ಹೀಗೆ ವಿಚಾರ, ಪೂಜಾ ಪದ್ಧತಿ, ವನವಾಸಿ, ಬುಡಕಟ್ಟು ಜನಾಂಗಗಳೂ ಸೇರಿದಂತೆ ಎಲ್ಲಾ ರೀತಿಯ ಜನರ ಮನೆಗಳ ಸಂಪರ್ಕವು ಉತ್ತಮ ರೀತಿಯಲ್ಲಿ ನಡೆದಿದೆ ಎಂದು ಮುಕುಂದ ಅವರು ಪ್ರಶಂಸಿಸಿದರು.



ನಾಲ್ಕು ಮಹಾನಗರಗಳಲ್ಲಿ ಸಂವಾದ ಕಾರ್ಯಕ್ರಮ

ದೇಶದ ನಾಲ್ಕು ಪ್ರಮುಖ ಮಹಾನಗರಗಳಲ್ಲಿ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರ ಉಪನ್ಯಾಸಮಾಲೆ ಮತ್ತು ಸಂವಾದ ಕಾರ್ಯಕ್ರಮಗಳು ಜರುಗಿದವು. ದಿಲ್ಲಿ, ಬೆಂಗಳೂರು, ಕೊಲ್ಕತ ಮತ್ತು ಮುಂಬೈನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಅದರ ಜೊತೆಗೆ ಸರಸಂಘಚಾಲಕರು ರಾಷ್ಟ್ರದ ಎಲ್ಲಾ ರಾಜ್ಯಗಳ ರಾಜಧಾನಿಗೆ ಭೇಟಿ ನೀಡಿ ಸಂವಾದದಲ್ಲಿ ಪಾಲ್ಗೊಂಡರು. ಈ ಕಾರ್ಯಕ್ರಮಗಳಲ್ಲಿ ಸರಸಂಘಚಾಲಕರ ಭಾಗವಹಿಸುವಿಕೆ ಮತ್ತು ಮಾರ್ಗದರ್ಶನ ಉತ್ತಮ ಪರಿಣಾಮವನ್ನು ಬೀರಿದೆ. ಎಲ್ಲಾ ಸಂವಾದಗಳಲ್ಲಿ ಹಲವು ರೀತಿಯ ಪ್ರಶ್ನೆಗಳಿಗೆ ಸರಸಂಘಚಾಲಕರು ನಮಗೆಲ್ಲರಿಗೂ ಮಾರ್ಗದರ್ಶನ ನೀಡುವಂತಹ ಉತ್ತರಗಳನ್ನು ನೀಡಿದ್ದಾರೆ. ಕೇವಲ ನಾಲ್ಕು ಮಹಾನಗರಗಳಲ್ಲಿ ನಡೆದ ಉಪನ್ಯಾಸಮಾಲೆ ಕಾರ್ಯಕ್ರಮಗಳಲ್ಲಿ ಸರಸಂಘಚಾಲಕರು ನಾಗರಿಕರೊಂದಿಗೆ ನೇರವಾಗಿ ಸಂವಹನ ನಡೆಸಿದ್ದಾರೆ. ಸಾವಿರಕ್ಕೂ ಹೆಚ್ಚು ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ ಮತ್ತು 20 ತಾಸಿಗೂ ಅಧಿಕ ಸಮಯವನ್ನು ಪ್ರಶ್ನೋತ್ತರಕ್ಕಾಗಿಯೇ ನೀಡಿದ್ದಾರೆ.

ಕಿರುಸುದ್ದಿ

ಇಂಧನ ಭದ್ರತೆ ಸುಭದ್ರ



ಗದಗ: ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆ ಹಾಗೂ ಹಾರ್ಮುಜ್ ಜಲಸಂಧಿ ಮುಚ್ಚಲ್ಪಟ್ಟಿರುವ ಸವಾಲಿನ ನಡುವೆಯೂ ಭಾರತದ ಇಂಧನ ಭದ್ರತೆ ಅತ್ಯಂತ ಸುಭದ್ರವಾಗಿದೆ ಎಂದು ಜಿಲ್ಲಾ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಂತೋಷ ಅಕ್ಕಿ ಹೇಳಿದರು.

ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ವೈಯಕ್ತಿಕವಾಗಿ ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದು, ಭಾರತೀಯ ಗ್ರಾಹಕರ ಹಿತಾಸಕ್ತಿ ಕಾಪಾಡಲು ಅವರ ದೂರದೃಷ್ಟಿಯ ರಾಜತಾಂತ್ರಿಕ ಕ್ರಮಗಳು ಯಶಸ್ವಿಯಾಗಿವೆ. ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಅವರ ಸಮರ್ಥ ನಾಯಕತ್ವದಲ್ಲಿ ಭಾರತವು ತನ್ನ ತೈಲ ಸಾಗಣೆಯ ನೌಕೆಗಳಿಗೆ ಸುರಕ್ಷಿತ ಮಾರ್ಗವನ್ನು ಕಲ್ಪಿಸಿದೆ. ಈಗಾಗಲೇ ಭಾರತದ ಶೇ.70ರಷ್ಟು ಕಚ್ಚಾ ತೈಲ ಆಮದು ಹಾರ್ಮುಜ್ ಜಲಸಂಧಿಯ ಹೊರಗಿನ ಪರ್ಯಾಯ ಮಾರ್ಗಗಳ ಮೂಲಕ ತಲುಪುತ್ತಿದೆ. ಇದು ನಮ್ಮ ಸರ್ಕಾರದ ದೀರ್ಘಕಾಲದ ಕಾರ್ಯತಂತ್ರದ ವಿಜಯವಾಗಿದೆ ಎಂದಿದ್ದಾರೆ.

ಮಹಿಳಾ ದಿನಾಚರಣೆ ಇಂದು

ಮುಂಡರಗಿ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ತಾಲೂಕು ಘಟಕ, ಕದಳಿ ಮಹಿಳಾ ವೇದಿಕೆ ಮುಂಡರಗಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕದಳಿಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವು ಮಾ.14ರಂದು ಸಂಜೆ 4.30ಕ್ಕೆ ಅಂಬಾಭವಾನಿ ಕಲ್ಯಾಣ ಮಂಟಪದಲ್ಲಿ ಜರುಗಲಿದೆ.

ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎ.ಬಳಿಗಾರ ವಹಿಸುವರು. ಉದ್ಘಾಟನೆಯನ್ನು ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಕದಳಿ ಮಹಿಳಾ ವೇದಿಕೆಯ ಜಿಲ್ಲಾ ಅಧ್ಯಕ್ಷೆ ಸುಧಾ ಹುಚ್ಚಣ್ಣವರ ಭಾಗವಹಿಸುವರು. ಈ ವರ್ಷದ ಕದಳಿಶ್ರೀ ಪ್ರಶಸ್ತಿಗೆ ಮುಂಡರಗಿಯ ಚೈತನ್ಯ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನಿರ್ದೇಶಕಿ ವೀಣಾ ಪಾಟೀಲ ಭಾಜನರಾಗಿದ್ದಾರೆ. ಕದಳಿ ಮಹಿಳಾ ವೇದಿಕೆ ತಾಲೂಕು ಘಟಕದ ಅಧ್ಯಕ್ಷೆ ಶೀಲಾ ಬಾಗೇವಾಡಿ, ಶಸಾಪ ಅಧ್ಯಕ್ಷ ಡಾ. ಸಂತೋಷ ಹಿರೇಮಠ, ಶೋಭಾ ಮೇಟಿ, ಅಶೋಕ ಸಿದ್ದಿಂಗ್ ಉಪಸ್ಥಿತರಿರುವರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಕಾರಿಣಿ ಸದಸ್ಯರಾದ ಸಂತೋಷ ಮುರಡಿ, ಮಹಾಲಿಂಗಯ್ಯ ಹಿರೇಮಠ ಮತ್ತು ತಾಲೂಕು ಕಾನಿಪಸ ಅಧ್ಯಕ್ಷ ಶಿವಮೂರ್ತಿ ಹೊಂಬಳಗಟ್ಟಿ, ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಪಾಟೀಲ, ಗದಗ ಜಿಲ್ಲಾ ಕನ್ನಡ ಜಾಗೃತಿ ಸಮಿತಿಯ ಸದಸ್ಯ ಮತ್ತು ಹಾಳಕೇರಿ ಅವರನ್ನು ಸನ್ಮಾನಿಸಲಾಗುವುದು.

ದತ್ತಿ ಉಪನ್ಯಾಸ ಇಂದು

ಗದಗ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಮಾ.14 ರಂದು ಸಂಜೆ 6.30ಕ್ಕೆ ತೋಂಟದ ಸಿದ್ಧಲಿಂಗ ಶ್ರೀಗಳ ಕನ್ನಡ ಭವನ, ಕಸಾಪ ಕಾರ್ಯಾಲಯದಲ್ಲಿ ಸಹಕಾರಿ ರಂಗದ ಭೀಷ್ಮ ಕೆ.ಎಚ್.ಪಾಟೀಲ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಅಧ್ಯಕ್ಷತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ವಹಿಸುವರು. ಎಂದು ಕಿಶೋರಬಾಬು ನಾಗರಕಟ್ಟಿ, ದತ್ತಪ್ರಸನ್ನ ಪಾಟೀಲ, ಡಿ.ಎಸ್. ಬಾಪುರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.26ಕ್ಕೆ ಜಯಂತ್ಯುತ್ಸವ

ನರಗುಂದ: ಪಟ್ಟಣದ ದಂಡಾಪೂರ ಪಡುಗೊಂಡ ಕೆರೆ ಹತ್ತಿರದ ಶ್ರೀ ರಾಮ ಮಂದಿರದಲ್ಲಿ ಮಾ.26ರಂದು ಶ್ರೀ ರಾಮ ನವಮಿ ಜಯಂತ್ಯುತ್ಸವ ಜರುಗಲಿದೆ. ಶ್ರೀ ರಾಮನವಮಿ ದಿನಂದು ಬೆಳಗ್ಗೆ ಮಹಾಅಭಿಷೇಕ ಜರುಗಿದ ನಂತರ ಯುವ ಸಮೂಹದಿಂದ ಮಧ್ಯಾಹ್ನ 12 ಗಂಟೆಯ ವರೆಗೆ ರಾಮನಾಮ ಜಪ ನಡೆಯಲಿದೆ. ನಂತರ ಶ್ರೀ ರಾಮನ ತೊಟ್ಟಿಲೋತ್ಸವ ಮತ್ತು ಸಂಜೆ ವರೆಗೆ ಮಾತೆಯರಿಂದ ಶ್ರೀ ರಾಮನ ಜಪ ಕಾರ್ಯಕ್ರಮ ಜರುಗುವುದು. ಮಾ.27ರಂದು ಶ್ರೀ ರಾಮಮಂದಿರದಲ್ಲಿ ಮಹಾಪ್ರಸಾದ ನಡೆಯಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಮಾರುಕಟ್ಟೆ ಧಾರಣೆ

ಗದಗ — ಕ್ವಿಂಟಲ್

ಶೇಂಗಾ	5269-8539
ಅಜವಾನ	6200-8300
ಅಲಸಂದಿ	5931-6321
ಕಡಲೆ	1124-5469
ಉದ್ದು	3841-5877
ಹವೀಜ	3669-4469
ಹೆಸರು	1124-8011
ಹುರಳಿ	3708-4356
ಜೋಳ	1619-4357
ಗೋವಿನಜೋಳ	1650-1770
ಮಡಕಿ	10800-10800
ಸಾಸವಿ	4689-4689
ಸಬ್ಬಸಗಿ	6169-6169
ಕುಸಬಿ	2219-5050
ಸೂರ್ಯಕಾಂತಿ	6712-6972
ಗೋಧಿ	1737-5121
ತೊಗರಿ	3814-5944



ಮುಂಡರಗಿ: ತಾಲೂಕಿನ ಬೆಣ್ಣಿಹಳ್ಳಿ ಗ್ರಾಮದಲ್ಲಿ ಶ್ರೀ ಜ.ಅ.ವಿ.ಸಮಿತಿಯ ಶ್ರೀ ಜಗದ್ಗುರು ಶಿಕ್ಷಣ ಮಹಾವಿದ್ಯಾಲಯ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರದಲ್ಲಿ ಚಿಕ್ಕಮಕ್ಕಳ ತಜ್ಞ ಡಾ.ಗೋಣೇಶ ಮೇವುಂಡಿ ಅವರು ಚಿಕ್ಕಮಕ್ಕಳ ಆರೋಗ್ಯ ತಪಾಸಣಾ ಶಿಬಿರವನ್ನು ಉಚಿತವಾಗಿ ನಡೆಸಿಕೊಟ್ಟರು. ಶಿವಕುಮಾರ ಹೆಬ್ಬಳ್ಳಿ, ರಮೇಶ ಮತ್ತು ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಅನ್ನದಾನಸ್ವಾಮಿ ಮತ್ತೂರಮಠ, ಮಲ್ಲಿಕಾರ್ಜುನ ಹಡಪದ, ಪ್ರಕಾಶ ಬಂಡಾರಿ, ಶ್ರೀಕಾಂತ ಎಂ.ಎಲ್., ರಾಜಶೇಖರ ಹುಲ್ಯಾಳ ಮುಂತಾದವರಿದ್ದರು.

ಹಿಂದುಗಳ ಮೇಲೆ ದೌರ್ಜನ್ಯ: ಕಠಿಣ ಕ್ರಮಕ್ಕೆ ಆಗ್ರಹ

ಮುಂಡರಗಿ: ಶಿವಾಜಿ ಜಯಂತಿಯ ಮೆರವಣಿಗೆಯ ಸಂದರ್ಭದಲ್ಲಿ ಹಿಂದುಗಳ ಮೇಲೆ ದೌರ್ಜನ್ಯ ಮಾಡಿರುವ ದುಷ್ಕರ್ಮಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಹಿಂದು ರಾಷ್ಟ್ರ ಸಂಕಲ್ಪ ಸಮಿತಿ ಹಾಗೂ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಅವರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಹಿಂದೂ ರಾಷ್ಟ್ರ ಸಂಕಲ್ಪ ಸಮಿತಿ ಸಂಚಾಲಕ ದೇವಪ್ಪ ಇಟಗಿ ಮಾತನಾಡಿ, ರಾಜ್ಯದಲ್ಲಿ ಹಿಂದುಗಳ ಮೇಲೆ ಅತಿಯಾದ ದೌರ್ಜನ್ಯ ನಡೆಯುತ್ತಿದೆ. ಬಾಗಲಕೋಟೆ ಹಾಗೂ ಕಲಬುರ್ಗಿಯಲ್ಲಿ ಛತ್ರಪತಿ ಶಿವಾಜಿ ಜಯಂತಿಯ ಮೆರವಣಿಗೆ ಸಂದರ್ಭದಲ್ಲಿ ಹಿಂದುಗಳ ಮೇಲೆ ಕಲ್ಲೆಸೆದು ದೌರ್ಜನ್ಯವೆಸಗಿದ ದುಷ್ಕರ್ಮಿಗಳನ್ನು ಕೂಡಲೇ ಬಂಧಿಸಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಮುಂಡರಗಿ ತಾಲೂಕಿನ ಶಿಂಗಟಾಲೂರು ಗ್ರಾಮದಲ್ಲಿ ಮಹಾಶಿವರಾತ್ರಿ ದಿನದಂದು ಹಿಂದು ದೇವರ ಮೂರ್ತಿಗಳನ್ನು ಭಗ್ನಗೊಳಿಸಿರುವುದು ಖಂಡನೀಯ. ಶ್ರೀ ರಾಮಲಿಂಗೇಶ್ವರ, ನಂದಿ, ಹೊನ್ನತ್ತೆಮ್ಮದೇವಿ ದೇವರ ಮೂರ್ತಿ ಮತ್ತು ಬಾಗೇವಾಡಿಯಲ್ಲಿ ಈಶ್ವರ, ನಂದಿ ಮೂರ್ತಿ ಮತ್ತು ಆದ್ರಳ್ಳಿಯಲ್ಲಿ ಮರಿಯಮ್ಮ ದೇವಿ ಮೂರ್ತಿಗಳನ್ನು ಭಗ್ನಗೊಳಿಸಿರುವ ದುಷ್ಕರ್ಮಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ಸರ್ಕಾರದ ಒಂದು ವರ್ಗದ ಓಲೈಕೆಯೇ ಇಂತಹ ದೌರ್ಜನ್ಯಕ್ಕೆ ಕಾರಣವಾಗಿದೆ ಎಂದರು. ಪ್ರಮುಖರಾದ ಶಿವನಗೌಡ ಗೌಡರ, ಶೇಖರಗೌಡ ಪಾಟೀಲ, ಪ್ರಭಾವತಿ ಬೆಳವಣಿಕಿಮಠ, ಅವಿನಾಶ್ ಗೋಟಖಿಂಡಿ, ಮೊದಲಾದವರು ಮಾತನಾಡಿದರು. ಅಶೋಕ ಶಿದ್ದಿಂಗ್, ಈಶ್ವರಪ್ಪ ಬೆಟಗೇರಿ, ನಾಗರಾಜ ಹೊಸಮನಿ, ನಾಗರಾಜ ಮುರಡಿ, ಕೃಷ್ಣಪ್ಪ ಗುಬ್ಬಿ, ಗ್ಯಾನಪ್ಪ ಗುಗ್ಗರಿ, ಪುಂಡಲೀಕ ವಾಡಗನ್, ಹನುಮಂತಪ್ಪ ಅರ್ಕಸಾಲಿ, ರವಿ ಪಾಟೀಲ, ಶೋಭಾ ಜೋಶಿ, ರಾಮಣ್ಣ ಮಾದಣ್ಣವರ, ಬಸವರಾಜ ಹಕ್ಕಂಡಿ, ಗಂಗಾಧರ ಮಹೇಂದ್ರಕರ್ ಇತರರಿದ್ದರು.



ಮುಂಡರಗಿ: ಶಿವಾಜಿ ಜಯಂತಿ ಮೆರವಣಿಗೆಯ ಸಂದರ್ಭದಲ್ಲಿ ಹಿಂದುಗಳ ಮೇಲೆ ದೌರ್ಜನ್ಯ ಮಾಡಿರುವ ದುಷ್ಕರ್ಮಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಹಿಂದು ರಾಷ್ಟ್ರ ಸಂಕಲ್ಪ ಸಮಿತಿ ಹಾಗೂ ಹಿಂದು ಪರ ಸಂಘಟನೆಗಳ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಲಕ್ಷ್ಮೇಶ್ವರ ಸಮುದಾಯ ಅರೋಗ್ಯ ಕೇಂದ್ರದ ಬಗ್ಗೆ ಸಾರ್ವಜನಿಕರ ಹರ್ಷ

ಸಹಜ ಹೆರಿಗೆಯಲ್ಲಿ ದ್ವಿತೀಯ

ಶಿವಲಿಂಗಯ್ಯ ಹೊತಗಿಮಠ

ದಿಗಂತ ವಿಶೇಷ

ಲಕ್ಷ್ಮೇಶ್ವರ: ಜಿಲ್ಲೆಯಲ್ಲಿಯೇ ಸಹಜ ಹೆರಿಗೆಗೆ ಲಕ್ಷ್ಮೇಶ್ವರ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರ 2ನೇ ಸ್ಥಾನದಲ್ಲಿದ್ದು, ತಾಯಿ – ಮಗು ಸುರಕ್ಷತೆಯ ದೃಷ್ಟಿಯಿಂದ ಇಲ್ಲಿನ ನರ್ಸ್‌ಗಳು ಸಹಜ ಹೆರಿಗೆಗೆ ಆದ್ಯತೆ ನೀಡುತ್ತಿರುವುದುಗರ್ಭಿಣಿಯರಿಗೆ ಖುಷಿಯ ವಿಷಯ ಎನ್ನುತ್ತಿದ್ದಾರೆ ಜನರು.

ಈ ಆಸ್ಪತ್ರೆಯಲ್ಲಿ ಮೊದಲು ತಾಯಿ – ಮಗು ಇಬ್ಬರಿಗೆ ತೊಂದರೆ ಆಗಬಾರದು ಎಂಬ ದೃಷ್ಟಿಯಲ್ಲಿ ಶೇ.90ರಷ್ಟು ಸಹಜ ಹೆರಿಗೆಗೆ ಪ್ರಯತ್ನ ಮಾಡಲಾಗುತ್ತಿದೆ. ಅಂದಾಜಿನ ಪ್ರಕಾರ 1 ತಿಂಗಳಿಗೆ 50 ರಿಂದ 60 ಸಹಜ ಹೆರಿಗೆ, 5 ರಿಂದ 8 ಸೀಜರಿನ್, 25 ರಿಂದ 30 ಕೈ ಹೊಲಿಗೆ ಶಸ್ತ್ರಚಿಕಿತ್ಸೆ, (ಸಂತಾನ ಶಸ್ತ್ರಚಿಕಿತ್ಸೆ,) ಈ ಸಮುದಾಯ ಆರೋಗ್ಯ ಕೇಂದ್ರದಿಂದ ನಡೆಸಲಾಗುತ್ತದೆ ಎಂಬುದು ಸಮುದಾಯ ಆರೋಗ್ಯ ಕೇಂದ್ರ ಮಾಹಿತಿ ನೀಡಿದೆ.

ಈ ಆಸ್ಪತ್ರೆಗೆ ಲಕ್ಷ್ಮೇಶ್ವರ ತಾಲೂಕಲ್ಲದೇ ಕುಂದಗೋಳ, ಸವಣೂರ, ಶಿರಹಟ್ಟಿ ಸೇರಿದಂತೆ ಸುತ್ತಮುತ್ತಲಿನ ನೂರಾರು ಗ್ರಾಮದಿಂದ ಗರ್ಭಿಣಿಯರು ಹೆರಿಗೆಗಾಗಿ ಆಗಮಿಸುತ್ತಾರೆ. ಸುರಕ್ಷಿತ ಹೆರಿಗೆಗೆ ಒತ್ತು ನೀಡಿ, ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಸಿಸೇರಿಯನ್ ಮಾಡಲಾಗುತ್ತಿದೆ ಎಂಬುದು ವೈದ್ಯರ ಹೇಳಿಕೆ.

- ಬಾಣಂತಿಯರಿಗೆ ಆಸ್ಪತ್ರೆ ಯಲ್ಲಿ ಊಟದ ವ್ಯವಸ್ಥೆ
- ಬೆಳಗ್ಗೆ ಉಪ್ಪಿಟ್ಟು ಅಥವಾ ಇಡ್ಲಿ, ಮಧ್ಯಾಹ್ನ 2 ಚಪಾತಿ, ತತ್ತಿ, ಪಲ್ಯ, ರಾತ್ರಿ, ಅನ್ನ ಸಾರು, ಶುದ್ಧ ನೀರು, ಬಿಸಿನೀರಿನ ವ್ಯವಸ್ಥೆ, ಔಷಧಿ ಉಚಿತ ವಿತರಣೆ
- ಗರ್ಭಿಣಿಯರಿಗೆ, ಬಾಣಂತಿಯರಿಗೆ ರಕ್ತದ ಹೀನತೆಯಿದ್ದವರಿಗೆ ರಕ್ತ ಶೇಖರಣ ಘಟಕದ ವ್ಯವಸ್ಥೆ

ಕೊರತೆ ನಿವಾರಿಸಿ

ಸಹಜ ಹೆರಿಗೆ ಆದರೆ, 2 ದಿನ ಸೀಜರಿನ್ 7 ದಿನ ಆಸ್ಪತ್ರೆಯಲ್ಲಿ ಇರಬೇಕಾಗುತ್ತದೆ. ಅದಕ್ಕಾಗಿ ಬಾಣಂತಿಯರಿಗೆ ಬೆಡ್‌ಗಳ ಅವಶ್ಯಕತೆವಿದ್ದು, ಸದ್ಯ ಕೇವಲ 4 ಬೆಡ್ ಇದ್ದು 6 ಬೆಡ್‌ಗಳ ಅವಶ್ಯಕತೆಯಿದೆ. ಹೆರಿಗೆ ನಂತರ ಮಗುವಿಗೆ ಆರೋಗ್ಯ ಸಮಸ್ಯೆ ಕಾಡಿದರೆ ಚಿಕ್ಕ ಮಕ್ಕಳ ತಜ್ಞರು ಬೇಕು, ಸ್ಕ್ಯಾನಿಂಗ್ ಅಂತಾ ಸಾಕಷ್ಟು ಹಣಬೇಕು. ಅದಕ್ಕಾಗಿ ಬಡ ಮಧ್ಯಮ ವರ್ಗದ ಜನರು ಹೆಚ್ಚು ಬರುವ ಆಸ್ಪತ್ರೆಗೆ ಅಲ್ಟ್ರಾ ಸೌಂಡ್ ಸ್ಕ್ಯಾನಿಂಗ್ ಬೇಕಿದೆ. ಕೊರತೆ ನೀಗಿಸಿದರೆ ಅನುಕೂಲವಾಗುತ್ತದೆ ಎನ್ನುವುದು ಸಾರ್ವಜನಿಕರ ಆಶಯ.



ಸಮುದಾಯ ಅರೋಗ್ಯ ಕೇಂದ್ರದಲ್ಲಿ ಸಹಜ ಹೆರಿಗೆಗೆ ಹೆಚ್ಚಿನ ಒತ್ತು ನೀಡಲಾಗುವುದು. ಗರ್ಭಿಣಿ, ಬಾಣಂತಿಯರಿಗೆ ವಿಶೇಷ ಕಾಳಜಿ ವಹಿಸಲಾಗುವುದು.
■ ಡಾ. ಶ್ರೀಕಾಂತ ಕಾಟೇವಾಲೆ, ಸಮುದಾಯ ಅರೋಗ್ಯ ಕೇಂದ್ರದ ಆಡಳಿತ ಅಧಿಕಾರಿ

ಸಮುದಾಯ ಆರೋಗ್ಯ ಕೇಂದ್ರದಲ್ಲಿ ಗರ್ಭಿಣಿಯರಿಗೆ ಸುರಕ್ಷಿತ ಸಹಜ ಹೆರಿಗೆಗೆ ಹೆಚ್ಚು ಒತ್ತು ನೀಡಲಾಗಿದೆ .
■ ಸುವರ್ಣ ಹವಾಲ್ದಾರ, ನರ್ಸಿಂಗ್ ಆಫೀಸರ್

ಗರ್ಭಿಣಿಯರಿಗೆ ಆಶಾಗಳ ಪಾತ್ರ ಪ್ರಧಾನ



ಸರ್ಕಾರಿ ಆಸ್ಪತ್ರೆಗಳ ಮೇಲೆ ಜನ ವಿಶ್ವಾಸವಿರಿಸುವಲ್ಲಿ ಆಶಾಗಳ ಪಾತ್ರವೇ ಪ್ರಧಾನವಾದದ್ದು. ಪ್ರತೀ ಹಳ್ಳಿಗಳಲ್ಲೂ ಆಶಾಗಳ ಸೇವಾ ಕಾರ್ಯದಲ್ಲಿ ತೊಡಗಿದ್ದಾರೆ. ಮಹಿಳೆಯೊಬ್ಬರು ಗರ್ಭಿಣಿಯಾದಾಗಿನಿಂದ ಹೆರಿಗೆ ಆದ ಬಳಿಕವೂ ಅವರು ನಿರಂತರವಾಗಿ ಜನರೊಂದಿಗೆ ಸಂಪರ್ಕದಲ್ಲಿ ಇರುತ್ತಾರೆ. ಇವರು ಜನರಲ್ಲಿ ಸರ್ಕಾರಿ ಆಸ್ಪತ್ರೆಗಳ ಕುರಿತು ಉತ್ತಮ ಅಭಿಪ್ರಾಯ ಮೂಡಿಸಿ ಸರ್ಕಾರಿ ವ್ಯವಸ್ಥೆಗೆ ಕರೆತರುತ್ತಾರೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗದಿರಲಿ

ಶಿರಹಟ್ಟಿ: ತಾಲೂಕಿನಲ್ಲಿ ತಾಪಮಾನ ತೀವ್ರವಾಗಿ ಏರುತ್ತಿದ್ದು, ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗದಂತೆ ಅಧಿಕಾರಿಗಳು ಮುಂಜಾಗೃತೆ ವಹಿಸಬೇಕು. ನಿರ್ಲಕ್ಷ್ಯ ತೋರುವವರ ವಿರುದ್ಧ ಮುಲಾಜಿಲ್ಲದೇ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಹಶೀಲ್ದಾರ್ ಕೆ. ರಾಘವೇಂದ್ರ ರಾವ್ ಸೂಚಿಸಿದರು.

ಸ್ಥಳೀಯ ತಹಶೀಲ್ದಾರ್ ಕಚೇರಿಯಲ್ಲಿ ತಾಲೂಕು ಮಟ್ಟದ ವಿಪತ್ತು ನಿರ್ವಹಣಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಬೇಸಿಗೆಯ ಉಷ್ಣತೆ ಧಗಧಗಿಸುತ್ತಿದೆ. ಜನರಿಗೆ ಶುದ್ಧ ಕುಡಿಯುವ ನೀರು ಪೂರೈಸಲು ಮತ್ತು ಜಾನುವಾರುಗಳಿಗೆ ನೀರು, ಮೇವು ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ತಾಲೂಕಿಗೆಎಷ್ಟುಪ್ರಮಾಣಕುಡಿಯುವ ನೀರು ಬೇಕು, ಈಗಿರುವ ನೀರಿನ ಸಂಗ್ರಹ ಎಷ್ಟು, ಮುಂದಿನ 3 ತಿಂಗಳು ಜನರಿಗೆ ನೀರುಪೂರೈಸಲುಸಾಧ್ಯವಾಗುತ್ತದೆಯಾ?. ನೀರಿನ ಸಾಮರ್ಥ್ಯ ಕಡಿಮೆಯಾದರೆ ಪರ್ಯಾಯ ಮಾರ್ಗವನ್ನು ಈಗಿನಿಂದಲೇ ಕಂಡುಕೊಳ್ಳಬೇಕು ಎಂದರು. ತಾಲೂಕಿನಲ್ಲಿ ಎಷ್ಟು ಟನ್‌ಮೇವುಸಂಗ್ರಹವಿದೆ.ಮುಂದಿನ 20 ರಿಂದ 25 ವಾರಗಳು ಜಾನುವರುಗಳ ಸಂಖ್ಯೆಗೆ ಮೇವು ಸಾಕಾಗುವುದೇ ಎಂಬ ಸ್ಪಷ್ಟ ವರದಿ ನೀಡಬೇಕು. ಒಂದು ವೇಳೆ ಮೇವು ಕೊರತೆ ಉಂಟಾಗುವ ಸಾಧ್ಯತೆಗಳು ಇದ್ದರೆ, ಹೆಚ್ಚಿನ ಪ್ರಮಾಣದಲ್ಲಿ ಮೇವು ಹೊಂದಿರುವ ರೈತರನ್ನು ಸಂಪರ್ಕಿಸಿ ಅವರಿಂದ ಉಚಿತವಾಗಿ ಮೇವು ಪಡೆಯಲು ಅಧಿಕಾರಿಗಳು ಮುಂದಾಗಬೇಕು ಎಂದರು.

ದೇಶದ ವಿವಿಧೆಡೆ ಎಲ್‌ಪಿಜಿ ಗ್ಯಾಸ್ ಅಭಾವವಿದೆ. ಅದು ನಮ್ಮಲ್ಲಿಯೂ ಗ್ಯಾಸ್ ಕೊರತೆ ಉಂಟಾಗಬಹುದು ಎಂಬ ಭಯ ಜನರಲ್ಲಿ ಬೇಡ. ತಾಲೂಕಿಗೆ ಅಗತ್ಯ ಇರುವಷ್ಟು ನಿತ್ಯವೂ ಗ್ಯಾಸ್ ಸಿಲಿಂಡರ್ ಗಾಡಿ ಬರುತ್ತಿದೆ. ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್‌ಪಿಜಿ ಏಜೆನ್ಸಿ ಅವರೊಂದಿಗೆ ಅಧಿಕಾರಿಗಳು ನಿರಂತರ ಸಂಪರ್ಕ ಪಡೆದು ನಿತ್ಯವೂ ಒಂದು ಲೋಡ್ ಎಲ್‌ಪಿಜಿ ತಂದು ವಿತರಣೆ ಮಾಡುತ್ತಿದ್ದು, ಜನರು ಭಯ ಪಡುವ ಅಗತ್ಯವಿಲ್ಲ ಎಂದರು.

ಈ ವೇಳೆ ತಾಪಂ ಇಒ ರಾಮಪ್ಪ ದೊಡ್ಡಮನಿ, ಪಪಂ ಮುಖ್ಯಾಧಿಕಾರಿ ಸವಿತಾ ತಾಂಬ್ರೆ, ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು. ಪ್ರತಿ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ತಾಲೂಕು ಮಟ್ಟದ ವಿಪತ್ತು ನಿರ್ವಹಣಾ ಸಭೆ ಇರುತ್ತದೆ. ತಾಲೂಕಿನ ಕುಂದು ಕೊರತೆ ನೀಗಲು ಮತ್ತು ಕುಡಿಯುವ ನೀರು, ಮೇವು ಹಾಗೂ ಇನ್ನಿತರ ಗಂಭೀರ ವಿಷಯದ ಕುರಿತು ಸಮಗ್ರ ವರದಿ ಪಡೆಯಲು ತಿಳಿಸಲಾಯಿತು.



ಆರೋಗ್ಯ ಕೇಂದ್ರದ ಪರಿಸರ ರಕ್ಷಣೆಗೆ ಒತ್ತಾಯ

ಗದಗ: ಕಳೆದ ಹಲವಾರು ವರ್ಷಗಳಿಂದ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ದನ ಕರುಗಳು ಮತ್ತು ಪ್ರವೇಶದ್ವಾರದ ಮುಂದೆಯೇ ತಿಪ್ಪೆಗಳು ರಾರಾಜಿಸುತ್ತಿದೆ. ಆದ್ದರಿಂದ ಆರೋಗ್ಯ ಕೇಂದ್ರದ ಪರಿಸರ ರಕ್ಷಣೆ ಮಾಡಲು ಗ್ರಾಮ ಪಂಚಾಯತಿಯು ಕ್ರಮ ಜರುಗಿಸಬೇಕು ಎಂದು ಆರೋಗ್ಯ ಕೇಂದ್ರ ಸಿಬ್ಬಂದಿ ಒತ್ತಾಯಿಸಿದರು.

ಈ ಕುರಿತು ಗ್ರಾಮ ಪಂಚಾಯತಿಯು ಗ್ರಾಮದ ವಿವಿಧ ಸಮಸ್ಯೆಗಳು ಹಾಗೂ ಅಭಿವೃದ್ಧಿ ಕುರಿತು ಕರೆಯಲಾಗಿದ್ದ ಸರ್ಕಾರಿ ಮತ್ತು ಅರೇ ಸರ್ಕಾರಿ ಅಧಿಕಾರಿಗಳು, ಸಿಬ್ಬಂದಿ ಸಾಮಾನ್ಯ ಸಭೆಯಲ್ಲಿ ಈ ಸಮಸ್ಯೆಯನ್ನು ತಿಳಿಸಿದ ವೈದ್ಯರು ಆವರಣದಲ್ಲಿದನಕುರುಗಳು ನುಗ್ಗುತ್ತವೆ ಇದರಿಂದ ರೋಗಿಗಳು ಸಂಚರಿಸಲು ತೊಂದರೆಯಾಗುತ್ತದೆ. ಪ್ರವೇಶ ದ್ವಾರದ ಮುಂದೆಯೇ ತಿಪ್ಪೆಗಳನ್ನು ತೆಗೆಸುವುದು, ಕುಡಿಯುವ ನೀರಿನ ಸಮಸ್ಯೆ, ಮಹಿಳೆಯರಿಗೆ ಬೇರೆ ರಕ್ತ ತಪಾಸಣೆ ಕೋಣೆ ಕಲ್ಪಿಸುವುದು ಬಗ್ಗೆ ಚರ್ಚಿಸಲಾಯಿತು. ಈ ಬಗ್ಗೆ ಪರಿಶೀಲಿಸಿಕ್ರಮತೆಗೆದುಕೊಳ್ಳಲಾಗುವುದು ಎಂದು ಆಡಳಿತಾಧಿಕಾರಿಗಳು ತಿಳಿಸಿದರು. ಅಂಗನವಾಡಿ 93 ಕೇಂದ್ರವು ಈಗ ಕೆ.ಜಿ ಎಸ್. ಶಾಲೆಯ ಕಟ್ಟಡದಲ್ಲಿ ನಡೆಯುತ್ತಿದೆ. ಜೂನ್ ತಿಂಗಳವರೆಗೂ ಮಾತ್ರ ಅಲ್ಲಿ ಸ್ಥಳಾವಕಾಶವಿದೆ. ಗ್ರಾಮ ಚವಡಿ ಎದುರಿಗೆ ಇರುವ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡಿಕೊಡಬೇಕು ಎಂದು ಕಾರ್ಯಕರ್ತೆಯೋಗಿನಿ ಅಧಿಕಾರಿಗಳಲ್ಲಿ ವಿನಂತಿಸಿಕೊಂಡರು. ಆಡಳಿತಾಧಿಕಾರಿ ಶರಣು ಗೋಗೇರಿ ಮಾತನಾಡಿ, ಕಟ್ಟಡ ನಿರ್ಮಾಣಕ್ಕೆ ಸರ್ಕಾರದ ಅನುದಾನ ಕುರಿತು ಮಹಿಳಾ ಮತ್ತು ಮಕ್ಕಳ ಇಲಾಖೆ ಅಧಿಕಾರಿಯೊಂದಿಗೆ ಚರ್ಚಿಸಲಾಗುವುದು. ಅಲ್ಲಿಯವರೆಗೆ ಗ್ರಾಮ ಚವಡಿಯಲ್ಲಿ ಅಂಗನವಾಡಿ ನಡೆಸಲು ಗ್ರಾಮ ಲೆಕ್ಕಾಧಿಕಾರಿಗಳ ಜೊತೆ ಚರ್ಚಿಸಲಾಗುವುದು ಎಂದು ಭರವಸೆ ನೀಡಿದರು. ಅಂಗನವಾಡಿಯಲ್ಲಿ ಕುಡಿಯುವ ನೀರು, ಸ್ವಚ್ಛತೆ ಬಗ್ಗೆ ಚರ್ಚಿಸಲಾಯಿತು. ಗ್ರಾಮ ಪಂಚಾಯತಿ ಮಟ್ಟದ ಮಹಿಳಾ ಸಂಜೀವಿನಿ ಒಕ್ಕೂಟದ ಚಂದ್ರಕಲಾ ಮಾಡಲಗೇರಿ ಅವರು ತಮ್ಮ ಸಂಘವು ಮಹಿಳೆಯರಿಗೆ ಉದ್ಯೋಗ ಮಾಡಲು ಸಾಲವನ್ನು ಒದಗಿಸಿ ಸ್ವಾವಲಂಬನೆ ಜೀವನ ನಡೆಸಲು ಸಹಕಾರಿಯಾಗಿದೆ. ಸಂಘದ ಕಾರ್ಯ ಚಟುವಟಿಕೆ ನಡೆಸಲು ನಿವೇಶನ ಒದಗಿಸಿ ಕಟ್ಟಡ ನಿರ್ಮಿಸಿಕೊಡಬೇಕು ಎಂದು ಒತ್ತಾಯಿಸಿದರು.

ಪಾರಂಪರೀಕಪ್ರದೇಶಅಭಿವೃದ್ಧಿಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದಲಿಂಗೇಶ್ವರ ಪಾಟೀಲ, ಪಿಡಿಒ ಅಮೀರನಾಯಕ, ಸರಕಾರಿ ಬಾಲಕಿಯರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ವೈ.ಎಚ್. ತೆಕ್ಕಲಕೋಟಿ, ಮಹೇಶ ಮುಸ್ಕಿನಭಾವಿ, ಡಾ.ನಿವೇದಿತಾ ಬಡಿಗೇರ ಇದ್ದರು.



ಪುರಸಭೆ ಕರಡು ಆಯ-ವ್ಯಯ ಮಂಡನೆ: 1643.67 ಲಕ್ಷ ರೂ. ಆದಾಯ ನಿರೀಕ್ಷೆ

ಮುಂಡರಗಿ: ಇಲ್ಲಿಯ ಪುರಸಭೆಯು 2026-27ನೇ ಸಾಲಿನ ಬಜೆಟ್‌ನ ಕರಡು ಆಯ-ವ್ಯಯ ಮಂಡನೆಯಾಗಿದ್ದು, ಪುರಸಭೆಯ ಎಲ್ಲ ಮೂಲಗಳಿಂದ 1643.67 ಲಕ್ಷ ರೂ. ಆದಾಯವನ್ನು ನಿರೀಕ್ಷಿಸಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ ಹೇಳಿದರು.

ಅವರು ಪುರಸಭೆಯು 2026-27ನೇ ಸಾಲಿನ ಬಜೆಟ್‌ನ ಕರಡು ಆಯ-ವ್ಯಯ ಅಂದಾಜು ಪತ್ರಿಕೆಯ ವಿವರಣೆ ನೀಡಿ, ಪುರಸಭೆಯ ಎಲ್ಲ ಮೂಲಗಳಿಂದ ಪ್ರಾರಂಭ ಶುಲ್ಕ 1412.64 ಲಕ್ಷ ರೂ., ರಾಜಸ್ವ ಬಂಡವಾಳ ಹಾಗೂ ಅಸಾಧಾರಣ ಆದಾಯಗಳಿಂದ ನಿರೀಕ್ಷಿಸಿದ ಮೊತ್ತ 3843.16 ಲಕ್ಷ ರೂ., ರಾಜಸ್ವ ಬಂಡವಾಳ ಹಾಗೂ ಅಸಾಧಾರಣ ವೆಚ್ಚಗಳಿಂದ ನಿರೀಕ್ಷಿಸಿದ ಮೊತ್ತ 3612.13 ಲಕ್ಷ ರೂ. ಮತ್ತು 2026-27ನೇ ಸಾಲಿನ ಉಳಿತಾಯ 231.03 ಲಕ್ಷ ರೂ. ಆಗಿದೆ. ತೆರಿಗೆ ಆದಾಯಗಳು ಬಜೆಟ್ ಅಂದಾಜು 2026-27 ರಲ್ಲಿ 372.65 ಲಕ್ಷ ರೂ., ತೆರಿಗೆಯೇತರ ಆದಾಯಗಳು 306.95 ಲಕ್ಷ ರೂ., ಪ್ರಸ್ತುತ ಸಾಲಿನ ಸರ್ಕಾರದಿಂದ ಹಂಚಿಕೆಯಾದ ಹಣ 741 ಲಕ್ಷ ರೂ .,16 ನೇ ಹಣಕಾಸಿನ ಯೋಜನೆಯಲ್ಲಿ 278 ಲಕ್ಷ ರೂ.,ಎಸ್.ಎಫ್.ಸಿ ಸಾಮಾನ್ಯ ಅವತರಣ ಅನುದಾನಗಳ ಹಂಚಿಕೆ 453 ಲಕ್ಷ ರೂ., ಎಸ್.ಎಫ್.ಸಿ ಇತರೆ ಅವತರಣ ಅನುದಾನ 10 ಲಕ್ಷ ರೂ. ಆಗಿದೆ ಎಂದರು.



ಕಳೆದ ಸಾಲಿನ ಬಜೆಟ್ ಮಂಡನೆಯ ಪೂರ್ವಭಾವಿ ಸಭೆಯಲ್ಲಿ ಅನೇಕ ಸಂಘ ಸಂಸ್ಥೆಗಳಿಂದ ಹಾಗೂ ಅನೇಕ ಸಾರ್ವಜನಿಕರಿಂದ ಬಂದಿದ್ದ ಅಭಿವೃದ್ಧಿ ಕಾರ್ಯಗಳ ಚರ್ಚೆ ನಡೆದು ಅದರಲ್ಲಿ ಗದಗ ರಸ್ತೆಗೆ ಹೊಂದಿಕೊಂಡು ಇರುವ ಜಗದ್ಗುರು ಅನ್ನದಾನೀಶ್ವರ ರುದ್ರಭೂಮಿ ಅಭಿವೃದ್ಧಿಗೆ 50 ಲಕ್ಷ ರೂ. ತಗೆದಿರಲಾಗಿತ್ತು. ಆದರೆ ತಾಂತ್ರಿಕ ತೊಂದರೆಗಳಿಂದ ಆ ಹಣವನ್ನು ಬೇರೆ ಕಾಮಗಾರಿಗೆ ಸ್ಥಳಾಂತರಿಸಲಾಗಿತ್ತು. ಆದರೆ ಈಗ ತಾಂತ್ರಿಕ ತೊಂದರೆ ನಿವಾರಣೆ ಆಗಿದೆ. ಈಗ ಅಭಿವೃದ್ಧಿಗೆ 20 ಲಕ್ಷ ರೂ.ಗಳನ್ನು ಕಾಯ್ದಿರಿಸಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಪುರಸಭೆ ಆವರಣದಲ್ಲಿರುವ ಉದ್ಯಾನವನದ ಅಭಿವೃದ್ಧಿ ಬಗ್ಗೆ ಹೆಚ್ಚು ಒತ್ತು ಕೊಡಲಾಗುವುದು. ಅಧಿಕಾರಿಗಳ ಸಭೆ ಕರೆದು ಪೊಲೀಸ್ ಇಲಾಖೆಯಿಂದ ಈ ಉದ್ಯಾನವನವನ್ನು ಪುರಸಭೆಗೆ ಪಡೆದುಕೊಂಡು ಅದನ್ನು ಅಭಿವೃದ್ಧಿ ಮಾಡಲಾಗುವುದು ಎಂದರು. ಬೀದಿ ನಾಯಿಗಳ ಹಾವಳಿಯಿಂದ ಚಿಕ್ಕಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳ ನಿವಾರಣೆಗೆ ಅಗತ್ಯ ಕ್ರಮ ಜರುಗಿಸಬೇಕು. ಪಟ್ಟಣದಲ್ಲಿ ಮಾಂಸ ಮಾರಾಟ ಮಾರುಕಟ್ಟೆಯನ್ನು ಪ್ರತ್ಯೇಕವಾಗಿ ನಿರ್ಮಿಸಲು ಕ್ರಮಜರುಗಿಸಬೇಕು. ಪಟ್ಟಣದ ಮುಖ್ಯ ಸರ್ಕಲ್‌ಗಳಲ್ಲಿ ಸಿಸಿ ಕ್ಯಾಮೆರಾ ಮತ್ತು ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸಬೇಕು ಎಂದರು. ಮ್ಯಾನೇಜರ್ ರಮೇಶ ಗೊಂದಕರ ಉಪಸ್ಥಿತರಿದ್ದರು. ಸಿದ್ದಮ್ಮ ಸ್ವಾಗತಿಸಿದರು. ಅಕೌಂಟಂಟ್ ಆರ್.ಆರ್. ಹಬೀಬ ಪ್ರಾಸ್ತಾವಿಸಿದರು.

ಮಹಿಳೆಯರಿಂದ ಸದೃಢ ರಾಷ್ಟ್ರ ನಿರ್ಮಾಣ ಸಾಧ್ಯ: ಡಾ.ಸುನೀತಾ

ಗಜೇಂದ್ರಗಡ: ಹೆಣ್ಣುಮಕ್ಕಳು ಎಂತಹಾ ಸದೃಢರು ಎಂಬುದನ್ನು ಪ್ರಥಮ ನೊಬೆಲ್ ಪ್ರಶಸ್ತಿ ವಿಜೇತೆ ಮೇಡಂ ಕ್ಯೂರಿಯವರನ್ನು ನೋಡಿ ತಿಳಿದುಕೊಳ್ಳಬೇಕು. ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿ ಸಾಧಿಸಿದ್ದಾರೆ ಎಂಬುದೇ ಸಾಕ್ಷಿ. ಹಾಗಾಗಿ ಮಹಿಳೆಯರು ದುರ್ಬಲರಲ್ಲ ಅವಕಾಶ ಸಿಕ್ಕರೆ ಒಂದು ಸದೃಢ ರಾಷ್ಟ್ರವನ್ನು ಕಟ್ಟುವಲ್ಲಿ ಸಹಕಾರಿಯಾಗುತ್ತಾರೆ ಎಂದು ಬಿಎಸ್‌ಎಸ್ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಸುನಿತಾ ಎನ್. ಹೇಳಿದರು.

ಸ್ಥಳೀಯ ಎಸ್‌ಎಮ್ ಭೂಮರಡ್ಡಿ ಪದವಿ ಮಹಾವಿದ್ಯಾಲಯದಲ್ಲಿ ಮಹಿಳಾ ವೇದಿಕೆಯ ವತಿಯಿಂದ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಎಸ್‌ಎಮ್ ಭೂಮರಡ್ಡಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಜಿ.ಬಿ.ಗುಡಿಮನಿ ಮಾತನಾಡಿ, ಹೆಣ್ಣು ಮಕ್ಕಳಿಗೆ ಅತ್ಯುತ್ತಮ ಶಿಕ್ಷಣ ದೊರೆಯಬೇಕು. ಅವರಿಂದ ಒಂದು ಸುಂದರವಾದ ಕುಟುಂಬ ಮತ್ತು ಸಾಮಾಜ ನಿರ್ಮಾಣವಾಗುತ್ತದೆ ಎಂದರು. ಡಾ.ಎಸ್.ಎನ್. ಶಿವರಡ್ಡಿ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಉಪನ್ಯಾಸಕ ಬಿ.ವಿ. ಮುನವಳ್ಳಿ ಅವರು ಕಾರ್ಯಕ್ರಮದ ಔಚಿತ್ಯದ ಕುರಿತು ಮಾತನಾಡಿದರು. ಡಾ.ಎಸ್.ಎಚ್. ಪವಾರ್ ಪ್ರಾಸ್ತಾವಿಸಿದರು. ಕವಿತಾ ಎಸ್. ಬಂಡಿ ಸ್ವಾಗತಿಸಿದರು. ಪ್ರೇಮಾ ಚುಂಚಾ ಶಿಲ್ಪಾ ಚವಣ ನಿರೂಪಿಸಿದರು. ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿನಿಯರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಎಲ್.ಕೆ. ವದ್ನಾಳ, ಎಲ್.ಕೆ. ಹಿರೇಮಠ ಎಸ್.ಕೆ. ಕಟ್ಟಿಮನಿ, ಕವಿತಾ ಎಸ್. ಬಂಡಿ, ಎಸ್.ವಿ. ಪತ್ತಾರ, ಆರ್.ಎನ್. ಹದ್ಲಿ , ಹರೀಶ್ ಪವಾರ್, ಮರ್ತುಜಾ ಮಳಗಾವಿ, ಯು.ಎಸ್. ತಿಮ್ಮನಗೌಡರ್, ಸಂಗಮೇಶ ಬೆಟಗೇರಿ, ಸುರೇಶ್ ರಜಪೂತ, ಪ್ರತಾಪ್ ರಜಪೂತ ಹಾಗೂ ಇತರರಿದ್ದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸುಸೂತ್ರವಾಗಿ ನಡೆಯಲಿ: ತಹಶೀಲ್ದಾರ್

ಲಕ್ಷ್ಮೇಶ್ವರ: ಮಾ.18ರಿಂದ ಏಪ್ರಿಲ್ 2ರ ವರೆಗೆ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಯಾವುದೇ ಲೋಪಗಳಾಗಂತೆ ಸ್ನೇಹಮಯಿ ವಾತಾವರಣದಲ್ಲಿ ಪರೀಕ್ಷೆ ನಡೆಸುವುದು ಅಗತ್ಯವಾಗಿದೆ ಎಂದು ತಹಶೀಲ್ದಾರ್ ಧನಂಜಯ ಎಂ. ಹೇಳಿದರು.

ಅವರು ಪಟ್ಟಣದ ತಹಶೀಲ್ದಾರ್ ಕಚೇರಿ ಕಾರ್ಯಾಲಯದಲ್ಲಿ ಶುಕ್ರವಾರ ನಡೆದ ಪರೀಕ್ಷಾ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ತಾಲೂಕಿನಲ್ಲಿ ಯಾವುದೇ ಅಡೆತಡೆ ಇಲ್ಲದೆ ಸುಸೂತ್ರವಾಗಿ ಪರೀಕ್ಷೆ ನಡೆಯುವ ಉದ್ದೇಶದಿಂದ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ವಿದ್ಯಾರ್ಥಿಗಳು ಪರೀಕ್ಷೆ ಬರೆಯುವ ಕೇಂದ್ರದ ಹತ್ತಿರ ಬಸ್ ನಿಲುಗಡೆ ಮಾಡುವ ಮೂಲಕ ಹೆಚ್ಚಿನ ಅನುಕೂಲ ಮಾಡಿಕೊಡುವುದು ಸೇರಿದಂತೆ ವಿವಿಧ ಇಲಾಖೆಯ ಸಿಬ್ಬಂದಿ ಹೆಚ್ಚಿನ ಕಾಳಜಿಯಿಂದ ಕೆಲಸ ಮಾಡುವುದು ಅಗತ್ಯವಾಗಿದೆ. ಎಲ್ಲ ಕೇಂದ್ರಗಳಲ್ಲಿ ಸಿಸಿ ಕ್ಯಾಮೆರಾ ಕಡ್ಡಾಯವಾಗಿದ್ದು ಎಲ್ಲರೂ ವಿಶೇಷ ಆಸಕ್ತಿಯಿಂದ ಕಾರ್ಯನಿರ್ವಹಿಸಿ ಎಂದು ಹೇಳಿದ ಅವರು, ಗ್ರಾಮೀಣ ಭಾಗದಲ್ಲಿರುವ ಕೇಂದ್ರಗಳಿಗೆ ಬಸ್ ಸೌಲಭ್ಯ ದೊರಕಿಸಲು ಇಲಾಖೆಗೆ ತಿಳಿಸಲಾಗಿದೆ. ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ವಿದ್ಯಾರ್ಥಿಗಳು ಪ್ರವೇಶ ಪತ್ರ ತೋರಿಸಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು.



ಪ್ರೌಢ ವಿಭಾಗ ಶಿಕ್ಷಣ ಸಂಯೋಜಕ ಆರ್.ಬಿ.ಜೋಶಿ ಮಾತನಾಡಿ, ಲಕ್ಷ್ಮೇಶ್ವರ ತಾಲೂಕಿನಲ್ಲಿ ಒಟ್ಟು 6 ಪರೀಕ್ಷಾ ಕೇಂದ್ರಗಳಿದ್ದು, ಲಕ್ಷ್ಮೇಶ್ವರ ಪುರಸಭೆ ಉಮಾ ವಿದ್ಯಾಲಯ, ಪಿಎಸ್‌ಬಿಡಿ ಬಾಲಕಿಯರ ಪ್ರೌಢ ಶಾಲೆ, ಬಿಸಿಎನ್ ಕನ್ನಡ ಮಾಧ್ಯಮ ಪ್ರೌಢ ಶಾಲೆ, ಸರ್ಕಾರಿ ಪ್ರೌಢ ಶಾಲೆ ಪುಟಗಾಂವ್‌ಬಡ್ನಿ, ಎಸ್‌ಎಸ್‌ಕೆ ಪ್ರೌಢ ಶಾಲೆ ಶಿಗ್ಲಿ ಹಾಗೂ ಸರ್ಕಾರಿ ಪ್ರೌಢ ಶಾಲೆ ಬಾಲೆಹೊಸೂರು ಸೇರಿದಂತೆ ಒಟ್ಟು ಆರು ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ ಎಂದರು.

ಸಾರಿಗೆ ಘಟಕ ವ್ಯವಸ್ಥಾಪಕಿ ಸವಿತಾ ಆದಿ, ಎಎಸ್‌ಐ ವಿ.ಸಿ.ದೊಡ್ಡಮನಿ, ಪುರಸಭೆ ವ್ಯವಸ್ಥಾಪಕಿ ಮಂಜುಳಾ ಹೂಗಾರ, ಆರೋಗ್ಯ ಇಲಾಖೆಯ ಕೃಷ್ಣಕುಮಾರ ಕುಲಕರ್ಣಿ, ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳಾದ ಜೆ.ಡಿ.ಲಮಾಣಿ, ಬಿ.ಸಿ.ಪಟ್ಟೇದ, ಕೆ.ವಾಯ್. ಮೇಲಿನಮನಿ,ಬಿ.ಎನ್. ಗಾಯಕವಾಡ, ಎಸ್.ವಿ.ಪಾಟೀಲ, ಎನ್.ಕೆ.ಹತ್ತಿಕಾಳ, ಎಂ.ಬಿ.ಸಂಗನಪೇಟ, ಕೆ.ರವಿ, ಡಾ.ಜಯಶ್ರೀ ಕೋಲಕಾರ, ಎಲ್.ಎಸ್.ಅರಳಹಳ್ಳಿ, ಎಂ.ಎಚ್.ಬೆಟಗಟ್ಟಿ ಇದ್ದರು.

ಹಿರೇಮಲ್ಲಾಪುರ ಜಮೀನು ಖರೀದಿಗೆ ವಿರೋಧ

ಲಕ್ಷ್ಮೇಶ್ವರ: ಹಿರೇಮಲ್ಲಾಪುರ ಗ್ರಾಮದಲ್ಲಿ ಎಥೆನಾಲ್ ಕಾರ್ಖಾನೆಯವರು ಹಾಗೂ ಅವರ ಸಂಬಂಧಿಕರ ಹೆಸರಿನಲ್ಲಿ 50ಎಕರೆ ಜಮೀನು ಖರೀದಿಗೆ ಮುಂದಾಗಿದ್ದು, ಈ ಖರೀದಿ ಕಾರ್ಖಾನೆಗೋ ಅಥವಾ ತಮ್ಮ ಸ್ವಂತ ಉಳುಮೆ ಮಾಡಲು ಖರೀದಿಸುತ್ತಿದ್ದಾರೋ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಜಯಕರ್ನಾಟಕ ಸಂಘಟನೆ ತಾಲೂಕು ಅಧ್ಯಕ್ಷ ಇಸ್ಮಾಯಿಲ್ ಆಡೂರ, ಪ್ರಧಾನ ಕಾರ್ಯದರ್ಶಿ ಹಾಲಪ್ಪ ಬಂಡಾರಿ ಹಾಗೂ ತಾಲೂಕು ಸಂಚಾಲಕ ರಮೇಶ ಹಂಗನಕಟ್ಟಿ ಆಗ್ರಹಿಸಿದರು.

ಅವರು ತಹಶೀಲ್ದಾರ್ ಧನಂಜಯ ಎಂ. ಅವರಿಗೆ ಮನವಿ ಸಲ್ಲಿಸಿ ಮಾತನಾಡಿ, ಗ್ರಾಮದ ಹತ್ತಿರ 36ಎಕರೆಯಲ್ಲಿ ಕಾರ್ಖಾನೆ ನಿರ್ಮಾಣ ಆಗುತ್ತಿದ್ದು, ವಿರೋಧದ ನಡುವೆ ಕಾರ್ಖಾನೆ ನಿರ್ಮಿಸಲು ಹೊರಟಿದ್ದಾರೆ. ಕಾರ್ಖಾನೆ ಪ್ರಾರಂಭಗೊಂಡರೆ ಪರಿಸರ ಮಾಲಿನ್ಯದಿಂದ ಗ್ರಾಮದ ಜನರಿಗೆ ರೋಗದ ಭೀತಿ ಕಾಡುತ್ತಿದೆ. ಹತ್ತಿರ ಸರ್ಕಾರಿ ಶಾಲೆಯುದ್ದು, ಗ್ರಾಮದ ಜಮೀನುಗಳಿಗೂ ಹಾನಿಯಾಗಲಿದೆ. ಮತ್ತೆ 50ಎಕರೆ ಜಮೀನು ಖರೀದಿ ಮಾಡಲಿಕ್ಕೆ ಹೊರಟಿದ್ದು ಜಮೀನಿನ ಖಾತೆ ಬದಲಾವಣೆ ಮಾಡಬಾರದು ಎಂದು ಆಗ್ರಹಿಸಿದರು. ತಾಲೂಕು ಗೌರವಾಧ್ಯಕ್ಷ ಇಶಾಕಭಾಷಾ ಹರಪನಹಳ್ಳಿ, ನಾಗರಾಜ ಉಪ್ಪಾರ, ಯಲ್ಲಪ್ಪ ಹಂಜಗಿ, ಬಸವರಾಜ ಮೆಲ್ಮುರಿ, ಶಾಹಿದ ಉಳ್ಳಟ್ಟಿ, ಅಬ್ದುಲ ಕರೀಂ, ಎ.ಎಂ. ಕೊಪ್ಪಳ, ಮಂಜುನಾಥ ಶಿರಹಟ್ಟಿ, ಬಸಣ್ಣ ಮೂಕಿ, ಮೈನು ಮೊಮೀನ್, ಜಗದೀಶ ತಳವಾರ, ಮಲ್ಲೂ ಕಡಕೋಳ, ಹನುಮಂತಪ್ಪ ಬೆಟಗೇರಿ, ಮಾದೇವಪ್ಪ ತಳವಾರ, ಹನುಮಂತ ಕಿಳ್ಳಿಕ್ಯಾತರ ಇತರರಿದ್ದರು.



ಬೇಸಿಗೆಯಲ್ಲಿ ಆರೋಗ್ಯದ ಕಾಳಜಿ ಅವಶ್ಯ

ಗದಗ: ಬಿಸಿಲಿನ ಪ್ರಖರತೆ ಮತ್ತು ತೀವ್ರತೆ ಸಂದರ್ಭದಲ್ಲಿ ಸಾರ್ವಜನಿಕರು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಎಲ್ಲಾ ಸಾರ್ವಜನಿಕರಿಗೆ ಸಲಹೆಗಳನ್ನು ನೀಡಿದ್ದು, ಬೇಸಿಗೆ ಸಮಯದಲ್ಲಿ ಹೆಚ್ಚು ನೀರನ್ನು ಕುಡಿಯಬೇಕು. ಮಜ್ಜಿಗೆ ಅಥವಾ ಎಳನೀರು, ಹಣ್ಣಿನ ರಸವನ್ನು ಹೆಚ್ಚಾಗಿ ಸೇವಿಸಬೇಕು. ನೀರಿನ ಅಂಶ ಹೆಚ್ಚಾಗಿರುವ ತರಕಾರಿಗಳು, ಹಣ್ಣುಗಳನ್ನು ಸೇವಿಸುವುದು ಉತ್ತಮ. ಸಡಿಲವಾದ ತೆಳು ಬಣ್ಣದ ಹತ್ತಿಯ ಬಟ್ಟೆಯನ್ನು ಧರಿಸಬೇಕು ಹಾಗೂ ಗಾಳಿಯಾಡುವ ಪಾದರಕ್ಷೆ ಧರಿಸಬೇಕು ಎಂದಿದ್ದಾರೆ.

ಹೊರಗಡೆ ತೆರಳುವ ವೇಳೆ ತಂಪು ಕನ್ನಡಕ, ಛತ್ರಿ, ಟವೆಲ್ ಅಥವಾ ಬಿಸಿಲಿನಿಂದ ಕಾಪಾಡಿಕೊಳ್ಳುವ ಸಾಮಾನ್ಯ ಕ್ರಮಗಳನ್ನು ಪಾಲಿಸಬೇಕು. ರೇಡಿಯೊ, ದೂರದರ್ಶನ ಹಾಗೂ ದಿನಪತ್ರಿಕೆಗಳಲ್ಲಿ ಬಿಸಿಯಾದ ಗಾಳಿ ಅಥವಾ ಶಾಖ ತರಂಗ (ಹೀಟ್ ವೇವ್) ದ ಬಗ್ಗೆ ನೀಡುವ ಮಾಹಿತಿ ಅನುಸಾರ ದೈನಂದಿನ ಚಟುವಟಿಕೆಗಳನ್ನು ಯೋಜಿಸಿಕೊಳ್ಳಬೇಕು. ಬಿಸಿಲಿನಲ್ಲಿ ಹೊರಗಡೆ ಕಾರ್ಯನಿರ್ವಹಿಸುವವರು (ಜಮೀನು ಕೆಲಸ, ರಸ್ತೆ ಕಾಮಗಾರಿ ಮುಂತಾದವು) ಆದಷ್ಟು ಬೆಳಗ್ಗೆ 11 ಗಂಟೆಯ ಒಳಗೆ ಮತ್ತು ಸಂಜೆ 4 ಗಂಟೆ ನಂತರ ಕೈಗೊಳ್ಳುವುದು ಉತ್ತಮ. ಈ ಅವಧಿಯಲ್ಲಿ ಶ್ರಮದಾಯಕ ಕೆಲಸಗಳಿಂದ ವಿಶ್ರಾಂತಿ ಪಡೆಯಬೇಕು. ಬಿಸಿಲಿನಲ್ಲಿ ನಡೆಯುವಾಗ ಕಡ್ಡಾಯವಾಗಿ ಚಪ್ಪಲಿ ಧರಿಸಿ. ಕಾರ್ಬೋನೇಟೆಡ್ ಪಾನೀಯ ಹಾಗೂ ಮದ್ಯಪಾನದಿಂದ ದೂರವಿರಿ. ತೊದಲು ಮಾತು ಅಥವಾ ಅರ್ಥ ರಹಿತವಾಗಿ ಬಡಬಡಿಸಿದಲ್ಲಿ ಕೂಡಲೇ ನೆರಳಿನ ಪ್ರದೇಶಕ್ಕೆ ಹೋಗಬೇಕು. ಕೆಳಗೆ ಮಲಗಿಸಿ ಕಾಲುಗಳನ್ನು ಮೇಲಕ್ಕೆ ಎತ್ತಿ ವಿಶ್ರಾಂತಿ ಪಡೆಯಿರಿ. ಬಿಸಿಗಾಳಿ ಮತ್ತು ಅತಿಯಾದ ತಾಪಮಾನದಿಂದ ಆರೋಗ್ಯ ಸಮಸ್ಯೆಗಳು ಉಂಟಾದಲ್ಲಿ ಸಮೀಪದ ಆರೋಗ್ಯ ಕೇಂದ್ರ ಸಂಪರ್ಕಿಸಿ ಅಥವಾ 108/102ಕ್ಕೆ ಸಂಪರ್ಕಿಸಬೇಕು ಎಂದಿದ್ದಾರೆ.



ಜಿಲ್ಲೆಯಾದ್ಯಂತ ಪ್ರಸ್ತುತ ಮಾರ್ಚ ತಿಂಗಳಿನಿಂದ ಬಿಸಿಲಿನ ಪ್ರಖರತೆ ಮತ್ತು ತೀವ್ರತೆ ಕಂಡುಬಂದ ಹಿನ್ನಲೆಯಲ್ಲಿ ಸಾರ್ವಜನಿಕರು, ಗರ್ಭಿಣಿಯರು, ಬಾಣಂತಿಯರು, ಮಕ್ಕಳು ಹಾಗೂ ವಯೋವೃದ್ಧರು ತಮ್ಮ ಆರೋಗ್ಯದ ರಕ್ಷಣೆಗೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಿ.
■ ಡಾ.ಎಸ್.ಎಸ್. ನೀಲಗುಂದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

ಬಿಸಿಲಿನ ಪ್ರಮಾಣ ಹೆಚ್ಚಾಗಿದೆ. ನಗರದ ವಿವಿಧ ಕಡೆ ನೀರಿನ ವ್ಯವಸ್ಥೆ ಮಾಡಬೇಕು. ನಗರಸಭೆ ಹಾಗೂ ಜಿಲ್ಲಾಡಳಿತದಿಂದ ನೆರಳಿನ ಪರದೆ ಮಾಡುವ ವ್ಯವಸ್ಥೆ ಮಾಡಬೇಕು.
■ ರಾಜೇಶ, ಸಾರ್ವಜನಿಕ

ಮುಖ್ಯಮಂತ್ರಿ,ಡಿಸಿಎಂ ಸೇರಿ ಹಲವು ಸಚಿವರು ಭಾಗಿ | ಕಾರ್ಯಕ್ರಮಕ್ಕೆ 1ಲಕ್ಷ ಜನ ಸೇರುವ ನಿರೀಕ್ಷೆ

ಮೆಡಿಕಲ್ ಕಾಲೇಜ್ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ಇಂದು

ಬಾಗಲಕೋಟೆ: ಬಾಗಲಕೋಟೆ ಜನರ ಬಹುದಿನಗಳ ಕನಸು ಹಾಗೂ ದಿ.ಮಾಜಿ ಶಾಸಕ ಎಚ್.ವೈ.ಮೇಟಿಯವರು ಇಚ್ಛಾಶಕ್ತಿಯ ಫಲವಾಗಿ ನನಸಾಗುತ್ತಿರುವ ಮೆಡಿಕಲ್ ಕಾಲೇಜ್ ಕಟ್ಟಡದ ಅಡಿಗಲ್ಲು ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಆಗಮಿಸುತ್ತಿದ್ದು, ಮೆಡಿಕಲ್ ಕಾಲೇಜ್ ಕಟ್ಟಡ ನಿರ್ಮಾಣಕ್ಕೆ ಈಗಾಗಲೇ ಟೆಂಡರ್ ಕೂಡ ಆಗಿದ್ದು, 450 ಕೋಟಿ ರೂ. ಅನುದಾನ ಕೂಡ ತೆಗೆದಿಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೆಡಿಕಲ್ ಕಾಲೇಜ್ ನಿರ್ಮಾಣಕ್ಕೆ ಅಡಿಗಲ್ಲು ಸಮಾರಂಭ ನಡೆಯಲಿದ್ದು, ಒಂದು ಲಕ್ಷ ಜನ ಸೇರುವ ನಿರೀಕ್ಷೆ ಇದೆ. ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದಲ್ಲಿ ಭೂಮಿಯನ್ನು ಕಳೆದುಕೊಂಡ ರೈತರಿಗೆ ಪರಿಹಾರದ ಚೆಕ್ ಕೂಡ ಇದೇ ಸಂದರ್ಭದಲ್ಲಿ ನಡೆಯಲಿದೆ. ಉಪಮುಖ್ಯಮಂತ್ರಿ ಡಿ.ಕೆ.



ಶಿವಕುಮಾರ, ಮುಖ್ಯಮಂತ್ರಿಯವರು ಈ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ. ಇದರ ಜತೆಗೆ ಇನ್ನೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ಕೂಡ ಇದೇ ಸಮಾರಂಭದಲ್ಲಿ ನಡೆಯಲಿದೆ ಎಂದರು.

ಹಿಂದಿನ ಸರ್ಕಾರದವರು ಕೃಷ್ಣಾ ಮೇಲ್ದಂಡೆ ಯೋಜನೆಗೆ ಯಾವುದೇ ಕೆಲಸ ಮಾಡಲಿಲ್ಲ ಜನರ ದಾರಿಯನ್ನು ತಪ್ಪಿಸಿದರು. ಇನ್ನೂ ಜಿಲ್ಲೆಯವರೆ ನೀರಾವರಿ ಮಂತ್ರಿ ಇದ್ದರೂ ಈ ಯೋಜನೆಗೆ ಅವರು ಕೊಡುಗೆ ಏನೂ ಇಲ್ಲ, ಈಗ ನಮ್ಮ ಸರ್ಕಾರ ನುಡಿದಂತೆ ನಡೆದಿದ್ದೇವೆ ಎಂದರು.

ಕೇಂದ್ರ ಸರ್ಕಾರದಿಂದ ಗೆಜೆಟ್ ನೋಟಿಫಿಕೇಶನ್ ಬರುವುದನ್ನು ಕಾಯುತ್ತಿದ್ದೇವೆ. ನಾವು ಎಲ್ಲವೂ ಪರಿಹಾರ ನೀಡಲು ದುಡ್ಡು ತೆಗೆದಿಟ್ಟಾಗ ಗಜೆಟ್ ನೋಟಿಫಿಕೇಶನ್‌ದಲ್ಲಿ ಏರುಪೇರಾದರೆ ಸಮಸ್ಯೆಯಾಗಲಿದೆ ಎಂದು ಸ್ವಾಧೀನ ಮಾಡಿಕೊಂಡು ರೈತರಿಗೆ ಪರಿಹಾರವನ್ನು ನೀಡುವ ಕೆಲಸಮಾಡುತ್ತಿದ್ದೇವೆ ಎಂದು ಹೇಳಿದರು. ಛತ್ರಪತಿ ಶಿವಾಜಿ ಹಾಗೂ ಬಸವೇಶ್ವರ ಮೂರ್ತಿ ಪ್ರತಿಷ್ಠಾಪನೆಗೆ ಮೂರ್ತಿ ಪ್ರತಿಷ್ಠಾಪನೆಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.ಇದರಲ್ಲಿಯಾವುದೇರಾಜಕೀಯ ಇಲ್ಲ, ವಿರೋಧ ಪಕ್ಷದವರು ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಾರೆ. ಮೂರ್ತಿ ಪ್ರತಿಷ್ಠಾಪನೆಗೆ 80 ಲಕ್ಷ ರೂ. ನೀಡಬೇಕು ಎಂಬುದು ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿ ಹಾಗೂ ದುಡ್ಡು ಬಿಡುಗಡೆ ಕಾರ್ಯದರ್ಶಿಯವರಿಗೆ ಆದೇಶ ಮಾಡಿದ್ದರ ಕುರಿತು ಮಾಹಿತಿ ಇದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ. ಸಿಇಓ ಶಶಿಧರ ಕುರೇರ,ಬಿಟಿಡಿಎ ಸಿಇ ಉಪಸ್ಥಿತರಿದ್ದರು.

ಬಜೆಟ್‌ನಲ್ಲಿ 3450 ಕೋಟಿ ಮೀಸಲು

ಪ್ರತಿವರ್ಷ 10 ರಿಂದ 15 ಸಾವಿರ ಎಕರೆ ಭೂ ಸ್ವಾಧೀನ ಮಾಡಿಕೊಂಡು ರೈತರಿಗೆ ಪರಿಹಾರ ನೀಡುವ ಕೆಲಸ ಮಾಡಲಾಗುವುದು ಈ ಸದ್ಯಕ್ಕೆ 8 ಸಾವಿರ ಎಕರೆ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವ ಸಿದ್ಧತೆ ಮಾಡಿಕೊಳ್ಳಲಾಗಿದೆ. ನೀರಾವರಿಗೆ 40 ಲಕ್ಷ ರೂ., ಒಣಬೇಸಾಯಕ್ಕೆ 30 ಲಕ್ಷ ರೂ.ಪರಿಹಾರ ನೀಡಲು ಚಾಲನೆ ನೀಡಲಾಗುವುದು. ಯುಕೆಪಿ ಯೋಜನೆಗೆ ಪ್ರಸಕ್ತ ಬಜೆಟ್‌ದಲ್ಲಿ 3450 ಕೋಟಿ ರೂ.ತೆಗೆದಿಡಲಾಗಿದೆ. ಇನ್ನೂ ಹೆಚ್ಚುವರಿಯಾಗಿ ಅನುದಾನ ಮುಖ್ಯಮಂತ್ರಿಗಳು ನೀಡಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಯುನಿಟ್ 3ರಲ್ಲಿ ನಡೆಯುತ್ತಿರುವ ಕಾಮಗಾರಿ 2735.69 ಕೋಟಿಯಾಗಿದ್ದು, ಈಗಾಗಲೇ 1027.86 ಕೋಟಿ ರೂ. ಗುತ್ತಿಗೆದಾರರಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.ಬಿಟಿಡಿಎದಲ್ಲಿ ಭ್ರಷ್ಟಾಚಾರ ಮಾಡುವ ಅಧಿಕಾರಿಗಳನ್ನು ಎತ್ತಂಗಡಿ ಮಾಡಲಾಗುವುದು. ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಮುಲಾಜಿಲ್ಲದೇ ಕ್ರಮ ವಹಿಸಲಾಗುವುದು. ಈ ಖಾತಾ ಸಮಸ್ಯೆ ಕೂಡ ಶೀಘ್ರ ಪರಿಹಾರ ಕಂಡುಕೊಳ್ಳಲಾಗುವುದು.

■ ಆರ್.ಬಿ.ತಿಮ್ಮಾಪುರ, ಜಿಲ್ಲಾ ಉಸ್ತುವಾರಿ ಸಚಿವ



ಇಂದು ಕ್ರೀಡಾ ಸಂಕೀರ್ಣ ಲೋಕಾರ್ಪಣೆ

ಧಾರವಾಡ: ಖಾಸಗಿ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ಅನುದಾನದಡಿ ರೂ. 50 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ಕ್ರೀಡಾ ಸಂಕೀರ್ಣ ಹಾಗೂ ಅಂತಾರಾಷ್ಟ್ರೀಯ ಈಜುಕೊಳ ಲೋಕಾರ್ಪಣೆ ಕಾರ್ಯಕ್ರಮ ಮಾ.14ರಂದು ಮಧ್ಯಾಹ್ನ 3.30ಕ್ಕೆ ಜರುಗಲಿದೆ.

ರೈಲ್ವೆ ವಿಕಾಸ್ ನಿಗಮ, ಜಿಲ್ಲಾಡಳಿತ, ಜಿಪಂ, ಹು-ಧಾ ಮಹಾನಗರ ಪಾಲಿಕೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಕೇಂದ್ರ ಕ್ರೀಡಾ ಇಲಾಖೆ ಸಚಿವ ಡಾ.ಮನ್ಸುಖ್ ಮಾಂಡವೀಯ ಉದ್ಘಾಟಿಸಲಿದ್ದಾರೆ.

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಈಜುಕೋಳ ಲೋಕಾರ್ಪಣೆ ಮಾಡಲಿದ್ದು, ಶಾಸಕ ಅರವಿಂದ ಬೆಲ್ಲದ ಅಧ್ಯಕ್ಷತೆ ವಹಿಸುವರು. ವಿಪ ಸಭಾಪತಿ ಬಸವರಾಜ ಹೊರಟ್ಟಿ, ಕೇಂದ್ರ ಸಚಿವ ವಿ.ಸೋಮಣ್ಣ, ಉಸ್ತುವಾರಿ ಸಚಿವ ಸಂತೋಷ ಲಾಡ್ ಹಾಗೂ ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಾನಕಿ ಕೆ.ಎಂ., ಉಸ್ತುವಾರಿ ಕಾರ್ಯದರ್ಶಿ ಡಾ.ರಾಮ್ ಪ್ರಸಾತ್ ಮನೋಹರ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಎನ್‌ಎಂಡಿಸಿ ಮತ್ತು ಒಎನ್‌ಜಿಸಿ ಕಂಪನಿಗಳ ಕಾರ್ಪೋರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ ಮೂಲಕ ಸುಮಾರು 50 ಕೋಟಿ ರೂ. ವೆಚ್ಚದಲ್ಲಿ 1.6 ಎಕರೆ ವಿಶಾಲ ಜಾಗದಲ್ಲಿ ಸಂಕೀರ್ಣ ನಿರ್ಮಾಣವಾಗಿದೆ. ಜಿ+3 ಮಹಡಿಗಳ ಸಂಕೀರ್ಣ ಇದಾಗಿದ್ದು, ಕಾರು ಮತ್ತು ಬೈಕ್‌ಗಳಿಗೆ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ವೀಕ್ಷಕರಿಗೆ ಗ್ಯಾಲರಿ ಸೇರಿದಂತೆ ಇನ್ನಿತರೆ ಸೌಲಭ್ಯಗಳಾದ ಶೌಚಾಲಯ ವ್ಯವಸ್ಥೆ, ಕ್ರೀಡಾಪಟುಗಳಿಗೆ ಡಾರ್ಮಿಟರಿ ಹೀಗೆ ವಿವಿಧ ಕ್ರೀಡೆಗಳಿಗೆ ವ್ಯವಸ್ಥೆ ಇರಲಿದೆ.

ನೆಲಮಹಡಿಯಲ್ಲಿ ಕಾರ್ಯಾಲಯ, ಶೂಟಿಂಗ್ ಆರ್ಚರಿ, ಇದ್ದು ಇದರೊಂದಿಗೆ ಕಾರ್, ಬೈಕ್‌ಗಳಿಗೆ ಪ್ರತ್ಯೇಕ ಪಾರ್ಕಿಂಗ್, ಕ್ಯಾಂಟಿನ್ ವ್ಯವಸ್ಥೆ ಇರಲಿದೆ.

ರೈಲ್ ವಿಕಾಸ್ ನಿಗಮ್ ಲಿಮಿಟೆಡ್ (RVNL) ಭಾರತೀಯ ರೈಲ್ವೆಯ ಪ್ರಮುಖ ಯೋಜನೆಗಳನ್ನು ಜಾರಿಗೊಳಿಸುವ ಒಂದು ಸಾರ್ವಜನಿಕ ವಲಯದ ಉದ್ದಿಮೆಯಾಗಿದ್ದು, ಈ ಸಂಸ್ಥೆಯು ನಿರ್ಮಾಣದ ಜವಾಬ್ದಾರಿ ನೀಡಲಾಗಿತ್ತು. ಆರ್.ವಿ.ಎನ್.ಎಲ್. ಸ್ವರ್ಣಾ ಗ್ರೂಪ್ ಆಫ್ ಕಂಪನೀಸ್ ಮೂಲಕ ಈ ಈಜುಕೊಳವನ್ನು ನಿರ್ಮಿಸಿದೆ.

ಅನೇಕ ಸೌಲಭ್ಯ

ಸಂಕೀರ್ಣದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಈಜುಕೊಳ, ಒಳಾಂಗಣ ಕ್ರೀಡೆಗಳಿಗೆ ವಿಶಾಲ ಜಾಗ ಸೇರಿದಂತೆ ಸಕಲ ಸೌಲಭ್ಯ ಕಲ್ಪಿಸಲಾಗಿದೆ. ಬಹುತೇಕ ಕಟ್ಟಡವನ್ನು ಹೊಸ ತಂತ್ರಜ್ಞಾನ ಬಳಸಿ ಸ್ಟೀಲ್ ರಚನೆಯೊಂದಿಗೆ ನಿರ್ಮಿಸಲಾಗಿದೆ. ಕ್ರೀಡೆಗಳಿಗೆ ಮೀಸಲಾಗಿ ಸುಸಜ್ಜಿತ ಗ್ಯಾಲರಿ, ಕ್ರೀಡಾಪಟುಗಳಿಗೆ ಪ್ರತ್ಯೇಕ ಕೊಠಡಿ ಸೇರಿ ಅನೇಕ ಸೌಲಭ್ಯ ಕಲ್ಪಿಸಲಾಗಿದೆ.

ಮಿಸ್ ನಿಪ್ಪಾಣಿ, ಶ್ರೀಮತಿ ನಿಪ್ಪಾಣಿ ಕಿರೀಟ: ಐಶ್ವರ್ಯಾ, ಲಬ್ಧಿ ಶಾಗೆ ಪ್ರಶಸ್ತಿ

ಚಿಕ್ಕೋಡಿ: ಜೊಲ್ಲೆ ಗ್ರೂಪ್, ನಿಪ್ಪಾಣಿಯ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೊಸೈಟಿ ಸಹಯೋಗದಲ್ಲಿ ಕೃಷಿ ಉತ್ಸವ ಮೇಳದ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ಮಿಸ್ ನಿಪ್ಪಾಣಿ ಪ್ರಶಸ್ತಿಯನ್ನು ಐಶ್ವರ್ಯಾ ಖಾಂಡ್ಕೆ ಹಾಗೂಶ್ರೀಮತಿನಿಪ್ಪಾಣಿಪ್ರಶಸ್ತಿಯನ್ನು ಲಬ್ಧಿ ಶಾ ಪಡೆದರು. ಇವರಿಗೆ ತಲಾ 21 ಸಾವಿರ ರೂ. ಬಹುಮಾನ ನೀಡಿ ಗೌರವಿಸಲಾಯಿತು.

ಶ್ರೀಮತಿ ನಿಪ್ಪಾಣಿಯಲ್ಲಿ ಅನುರಾಧಾ ಮೇಸ್ತ್ರಿ ಮತ್ತು ರಾಜಶ್ರೀ ಪಾಟೀಲ ಎರಡನೇ ಮತ್ತು ಮೂರನೇ ಸ್ಥಾನ ಪಡೆದರು. ಮಿಸ್ ನಿಪ್ಪಾಣಿಯಲ್ಲಿ ರೋಹಿಣಿ ಪಾಟೀಲ ಮತ್ತು ಮಾನ್ಸಿ ಸದಾವರ್ತೆ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನಗಳನ್ನು ಗೆದ್ದರು. ಅವರಿಗೆ ಕ್ರಮವಾಗಿ 15 ಮತ್ತು 10 ಸಾವಿರ ರೂ. ಬಹುಮಾನಗಳನ್ನು ನೀಡಲಾಯಿತು.



ಕೃಷಿ ಉತ್ಸವ ಸಂದರ್ಭದಲ್ಲಿ ಪುರುಷರ ಕ್ರೀಡಾ ಸ್ಪರ್ಧೆಯನ್ನು ನಡೆಸಲಾಯಿತು. ಚಾಣಕ್ಯ ಮರ್ದಾನಿ ಸಾಂಸ್ಕೃತಿಕ ಸೇವಾ ಸಂಘದ (ಕೊಲ್ಹಾಪುರ) ಆಟಗಾರರು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದರು. ಅವರಿಗೆ 15 ಸಾವಿರ ರೂಪಾಯಿಗಳ ಬಹುಮಾನ ನೀಡಲಾಯಿತು. ಶ್ರೀರಾಮ್ ಗುರುಕುಲಂ (ಕಾಸರ್ವಾಡಿ), ಶಿವಶಂಭು ಮರ್ದಾನಿ ಆಖಾಡ (ನವ್ಲಿಹಾಳ), ಸಂಯುಕ್ತ ಜುನಾ ಬುಧ್ವರ್ ಪೇತ್ ಮರ್ದಾನಿ ಆಖಾಡ (ಕೊಲ್ಹಾಪುರ), ಶಾಂತಿಧೂತ್ ಮರ್ದಾನಿ ಆಖಾಡ (ಕೊಲ್ಹಾಪುರ) ಕ್ರಮವಾಗಿ ಎರಡನೇ, ಮೂರನೇ, ನಾಲ್ಕನೇ ಮತ್ತು ಐದನೇ ಸ್ಥಾನಗಳನ್ನು ಶುಕ್ರವಾರ 11 ಗಂಟೆಗೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಕೃಷಿ ಪಂಡಿತ್ ಸುರೇಶ್ ದೇಸಾಯಿ ಅವರು '' ಆಧುನಿಕ ಕಬ್ಬಿನ ಕೃಷಿ'' ವಿಷಯದ ಕುರಿತು ಉಪನ್ಯಾಸ ನೀಡಿದರು. ನಂತರ ನಾಯಿ ಶೋ ಸ್ಪರ್ಧೆಗಳನ್ನು ನಡೆಸಲಾಯಿತು. ದೇಶೀಯ ಮತ್ತು ವಿದೇಶಿ ನಾಯಿಗಳನ್ನು ಸಹಸ್ರಸರು ಜನರು ವೀಕ್ಷಿಸಿದರು.ನಂತರ ಅಭಂಗ್‌ಗಳನ್ನು ಆಧರಿಸಿದ ಸಂಗೀತ ಅನ್ವೇಷಣಾ ಕಾರ್ಯಕ್ರಮವಾದ ಅಭಂಗ್ ರಿಪೋಸ್ಟ್ ನಡೆಯಿತು. ದಿನವಿಡೀ, ಕೃಷಿ ಉತ್ಸವದಲ್ಲಿ ಪರಿಚಯಿಸಲಾದ ಹೊಸ ಉಪಕರಣಗಳು, ಕೃಷಿ ಉತ್ಪನ್ನಗಳು ಮತ್ತು ಮಳಿಗೆಗಳನ್ನು ನೋಡಲು ರೈತರು ಮತ್ತು ನಾಗರಿಕರು ನೆರೆದಿದ್ದರು.ಈ ಸಂದರ್ಭದಲ್ಲಿ, ಮಿಸ್ ನಿಪ್ಪಾಣಿ ಮತ್ತು ಶ್ರೀಮತಿ ನಿಪ್ಪಾಣಿ ಹಾಗೂ ಮರ್ದಾನಿ ಖೇಲ್ ಸ್ಪರ್ಧೆಯ ವಿಜೇತರಿಗೆ ಮಾಜಿ ಸಂಸದ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ, ಶಾಸಕಿ ಶಶಿಕಲಾ ಜೊಲ್ಲೆ, ಬಸವಪ್ರಸಾದ ಜೊಲ್ಲೆ, ಜ್ಯೋತಿಪ್ರಸಾದ ಜೊಲ್ಲೆ ಮತ್ತು ಗಣ್ಯರು ಬಹುಮಾನಗಳನ್ನು ನೀಡಿದರು.

ಗುಂಡು ಕಲ್ಲು ಎತ್ತುವ ಸ್ಪರ್ಧೆ

ಮಾ. 14ರಂದು ಎಂ. ಪಣಿಶಯನ್ ಅವರ ಸಮ್ಮುಖದಲ್ಲಿ ಕೃಷಿ ಹಣಕಾಸು ವಿಷಯದ ಕುರಿತು ವಿಚಾರ ಸಂಕಿರಣ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಗುಂಡು ಕಲ್ಲುಗಳನ್ನು ಎತ್ತುವ ಸ್ಪರ್ಧೆ ನಡೆಯಲಿದೆ.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಉಪ ವಿಭಾಗದ ವ್ಯಾಪ್ತಿಯಲ್ಲಿ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಮಾ.14ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 6 ಗಂಟೆಯವರಿಗೆ ಕೆರವಡಿ ಫೀಡರಿನ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿನಾದ ಯುಗಾದಿ ಸಾಹಿತ್ಯ ಸಂಭ್ರಮ 2026

ಭಟ್ಕಳ: ಉಕ -ನಿನಾದ ಕಲ್ಚರಲ್ ಅಕಾಡೆಮಿ ಭಟ್ಕಳ ಅವರು ಹೊಸ ವರ್ಷದ ಆರಂಭ ಯುಗಾದಿಯಂದು ಉತ್ಥಾನ ಕಲಾ ಭವನದಲ್ಲಿ ವಿಶೇಷವಾಗಿ ಯುಗಾದಿ ಸಾಹಿತ್ಯ ಸಂಭ್ರಮ 2026 ಎಂಬ ಕಾರ್ಯಕ್ರಮ ಆಯೋಜಿಸುತ್ತಿದ್ದು ಆಸಕ್ತ ಪ್ರತಿಭಾನ್ವಿತ ಕವಿಗಳಿಗಾಗಿ ಅವರ ಸ್ವರಚಿತ ಕವನ ವಾಚಿಸಲು ಕವಿ ಕಾವ್ಯ ಸಿಂಚನದಲ್ಲಿ ಅವಕಾಶ ನೀಡಲಾಗುತ್ತಿದೆ. ಯಾವುದೇ ಭಾಗದ ಕವಿಗಳು ಭಾಗವಹಿಸಬಹುದಾಗಿದ್ದು,ಭಾಗವಹಿಸುವ ಕವಿಗಳು ಮುಂಚಿತವಾಗಿ ತಮ್ಮ ಕವನದೊಂದಿಗೆ ಸಂಪರ್ಕಿಸಲು ಕೋರಿದೆ.ಸಂಪರ್ಕಕ್ಕೆ ಕೊನೆಯ ದಿನ ಮಾ. 15 ಭಾಗವಹಿಸುವ ಕವಿಗಳಿಗೆ ಆಮಂತ್ರಣ ವಾಟ್ಸಾಪ್ ಮೂಲಕ ಕಳಿಸಲಾಗುವುದು.ಹೆಚ್ಚಿನ ಮಾಹಿತಿಗಾಗಿ ಪ್ರಧಾನ ಸಂಚಾಲಕರು-ರೇಷ್ಮಾ ಉಮೇಶ , ಉಮೇಶ ಮುಂಡಳ್ಳಿ 9945840552 ಸಂಪರ್ಕಿಸುವುದು.

ನಿರುಪಯುಕ್ತ ದ್ವಿಚಕ್ರ ವಾಹನಗಳ ತೆರವು



ದಾಂಡೇಲಿ: ನಗರದ ಸ್ವಚ್ಛತೆ ಹಾಗೂ ಸುಗಮ ವಾಹನ ಸಂಚಾರದ ಹಿತ ದೃಷ್ಟಿಯಿಂದ ನಗರದ ರಸ್ತೆ ಬದಿಗಳಲ್ಲಿ ಹಾಗೂ ಪುಟ್ಪಾತ್‌ನಲ್ಲಿ ನಿಲ್ಲಿಸಿಟ್ಟಿರುವ ನಿರುಪಯುಕ್ತ ವಾಹನಗಳ ತೆರವು ಕಾರ್ಯಾಚರಣೆಯಲ್ಲಿ ನಗರದ ಅಂಬೇವಾಡಿಯ ಮುಖ್ಯರಸ್ತೆಯ ಪುಟ್ಪಾತ್‌ನಲ್ಲಿ ನಿಲ್ಲಿಸಿಟ್ಟಿದ್ದ 15 ನಿರುಪಯುಕ್ತ ದ್ವಿಚಕ್ರ ವಾಹನಗಳನ್ನು ನಗರಸಭೆ ತೆರರವುಗೊಳಿಸಿದೆ.ನಗರಸಭೆಯ ಪೌರಾಯುಕ್ತ ವಿವೇಕ ಬನ್ನೆ ಅವರ ಮಾರ್ಗದರ್ಶನದಡಿ ಆರೋಗ್ಯ ನಿರೀಕ್ಷಕ ವಿಲಾಸ್ ಅವರ ನೇತೃತ್ವದೊಂದಿಗೆ ಪೌರಕಾರ್ಮಿಕರ ಸಹಕಾರದಲ್ಲಿ ಈ ನಿರುಪಯುಕ್ತ ದ್ವಿಚಕ್ರ ವಾಹನಗಳನ್ನು ತೆರವುಗೊಳಿಸಲಾಯಿತು. ಪೌರಾಯುಕ್ತರಾಗಿ ವಿವೇಕ್ ಬನ್ನೆ ಅವರು ಅಧಿಕಾರ ವಹಿಸಿಕೊಂಡಾಗಿನಿಂದ ನಗರದ ಸ್ವಚ್ಛತೆಗೆ ವಿಶೇಷ ಆದ್ಯತೆಯನ್ನು ನೀಡಲಾಗುತ್ತಿದೆ. ನಗರದ ಮುಖ್ಯ ರಸ್ತೆಗಳಾದ ಜೆ.ಎನ್ ರಸ್ತೆ ಮತ್ತು ಬರ್ಚಿ ರಸ್ತೆಯ ಬದಿಗಳಲ್ಲಿ ಬೆಳೆದು ನಿಂತಿದ್ದ ಗಿಡಗಂಟಿಗಳನ್ನು ಸ್ವಚ್ಛಗೊಳಿಸುವ ಕಾರ್ಯವನ್ನು ನಗರಸಭೆ ಯಶಸ್ವಿಯಾಗಿ ಮಾಡುವ ಮೂಲಕ ಗಮನ ಸೆಳೆದಿದೆ. ನಗರಸಭೆಯ ಈ ಸ್ವಚ್ಛತಾ ಕಾರ್ಯಕ್ಕೆ ನಗರದ ಸಾರ್ವಜನಿಕರು ಕೂಡ ಕೈ ಜೋಡಿಸಿದಾಗ ಸ್ವಚ್ಛ ನಗರ ನಿರ್ಮಾಣ ಸಾಧ್ಯವಾಗಲಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61899	72699
ಬಿಳಿಗೋಟು	28400	42699
ಕೆಂಪುಗೋಟು	22698	38298
ಬೆಟ್ಟೆ	41298	50205
ರಾಶಿ	50005	55218
ಚಾಲಿ	43218	47501
ಬಿ.ಕಾಳುಮೆಣಸು	85199	88199

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	59999	63339
ರಾಶಿ	40016	58630
ಬೆಟ್ಟೆ	35899	50219
ಕೆಂಪುಗೋಟು	23009	39399
ಬಿಳಿಗೋಟು	16000	42811
ಚಾಲಿ	38011	47599
ಚಾಲಿ ಹೊಸದು	48889	49899
ಕೋಕಾ	12909	33299
ಕಾಳುಮೆಣಸು	50000	67711



ದಾಂಡೇಲಿ: ನಗರದ ತಾಯಿ ಮತ್ತು ಮಕ್ಕಳ ಆರೈಕೆ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಗರ್ಭಿಣಿ ಮಹಿಳೆಗೆ ತುರ್ತು ರಕ್ತದ ಅವಶ್ಯಕತೆ ಇರುವುದರ ಬಗ್ಗೆ ಮಾಹಿತಿಯನ್ನು ತಿಳಿದ ದಾಂಡೇಲಿ ನಗರ ಠಾಣೆಯ ಪಿಎಸ್‌ಐ ಕಿರಣ್ ಪಾಟೀಲ್ ಅವರು ತಕ್ಷಣವೇ ತಾಯಿ ಮತ್ತು ಮಕ್ಕಳ ಆರೈಕೆ ಆಸ್ಪತ್ರೆಗೆ ಭೇಟಿ ನೀಡಿ ರಕ್ತ ನೀಡುವ ಮೂಲಕ ಮಾನವೀಯತೆಯನ್ನು ಮೆರೆದ ಘಟನೆ ನಡೆದಿದೆ.

ಮಾ.16ರಂದು ವಿಶ್ವ ಗ್ರಾಹಕರ ದಿನಾಚರಣೆ

ಕಾರವಾರ: ಜಿಲ್ಲಾಡಳಿತ, ಜಿಪಂ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಕಾರವಾರ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಆಹಾರ ಸುರಕ್ಷತೆ ಇಲಾಖೆ, ಕರ್ನಾಟಕ ಆಹಾರ ನಿಗಮ, ಹಾಗೂ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಕಾರವಾರರವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಗ್ರಾಹಕರ ದಿನಾಚರಣೆಯನ್ನು ಮಾ.16ರಂದು ಬೆಳಗ್ಗೆ 11.45 ಗಂಟೆಗೆ ಕಾರವಾರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಉದ್ಘಾಟಿಸಲ್ಲಿದ್ದು, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಮಾರುತಿ ವಡ್ಡರ ಅಧ್ಯಕ್ಷತೆ ವಹಿಸಲಿದ್ದಾರೆ.ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿವ್ಯಶ್ರೀ ಸಿ.ಎಂ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ ಶಶಿ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯೆ ನೈನಾ ಅಶೋಕ ಕಾಮಟೆ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಸಂತೋಷ ಭಾಗವತ್, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ. ವಿ.ಜಿ.ಗಣೇಶ ಮತ್ತಿತರರು ಭಾಗವಹಿಸಲಿದ್ದಾರೆ ಹಾಗೂ ಜಿಲ್ಲಾ ಅಗ್ರಣಿ ಬ್ಯಾಂಕ್ ವ್ಯವಸ್ಥಾಪಕ ರಾಜಪ್ಪಾ ಗೌಳಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಹೇಮಲತಾ ಕೆ, ವಿಶೇಷ ಉಪನ್ಯಾಸ ನೀಡಲಿದ್ದಾರೆ.



ಭಟ್ಕಳ: ಇಲ್ಲಿನ ನಿವೃತ್ತ ಸರ್ಕಾರಿ ನೌಕರರ ಸಂಘದ ವಾರ್ಷಿಕ ಮಹಾಭೆಯನ್ನು ಅರ್ಬನ್ ಬ್ಯಾಂಕಿನ ಅಧ್ಯಕ್ಷೆ ಮೆಹಬೂಬಿ ಪಟೇಲ್ ಉದ್ಘಾಟಿಸಿದರು. ಸಂಘದ ಸದಸ್ಯರಲ್ಲಿ 75 ವರ್ಷ ಮೇಲ್ಪಟ್ಟ ಎಂಟು ಮಂದಿ ನಿವೃತ್ತ ನೌಕರರಿಗೆ ಸನ್ಮಾನಿಸಿ ಗೌರವಿಸಲಾಯಿತು ಈ ವೇಳೆ ವಿ.ಡಿ.ಆಚಾರ್ಯ, ನೌಕರರ ಸಂಘ ಅಧ್ಯಕ್ಷ ಎಂ.ಎನ್.ನಾಯ್ಕ, ನಿವೃತ್ತ ಅಧಿಕಾರಿ ಎ.ಎನ್.ಶೆಟ್ಟಿಯವರು ಉಪಸ್ಥಿತರಿದ್ದರು.

ಕಾರ್ಯಕಾರಿಣಿ ಸಭೆ | ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ ಹೇಳಿಕೆ

ಕೇಂದ್ರ ಸರ್ಕಾರದ ಕಾರ್ಯ ಶ್ಲಾಘನೀಯ

ಅಂಕೋಲಾ: ಜಾಗತಿಕ ಪರಿಸ್ಥಿತಿ ಸರಿ ಇಲ್ಲದ ಸಂದರ್ಭದಲ್ಲೂ ದೇಶದ ಜನರ ಹಿತ ಕಾಪಾಡುವಲ್ಲಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಯಶಸ್ವಿಯಾಗಿದ್ದು, ಜಗತ್ತಿನ ಬಹುತೇಕ ರಾಷ್ಟ್ರಗಳು ಭಾರತದೊಂದಿಗೆ ಬಾಂಧವ್ಯ ಬಯಸುತ್ತಿವೆ ದೇಶ ಸರ್ವ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡುತ್ತಿದ್ದು, ಜನತೆಯ ಭರವಸೆಯನ್ನು ಮೋದಿ ಸರ್ಕಾರ ಉಳಿಸಿಕೊಂಡಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ ಹೇಳಿದರು.

ಭಾರತೀಯಜನತಾ ಪಕ್ಷದಅಂಕೋಲಾಮಂಡಲದ ವತಿಯಿಂದ ಪಟ್ಟಣದ ಕ್ಷತ್ರೀಯ ಕೋಮಾರಪಂಥ ಸಮಾಜ ಸಭಾಭವನದಲ್ಲಿ ಆಯೋಜಿಸಲಾಗಿದ್ದ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಮಾತನಾಡಿದ ಅವರು ನರೇಂದ್ರ ಮೋದಿಯವರ ಸಮರ್ಥ ನಾಯಕತ್ವದಲ್ಲಿ ಭಾರತ ಜಗತ್ತಿನ ಇತರ ರಾಷ್ಟ್ರಗಳ ವಿಶ್ವಾಸಕ್ಕೆ ಪಾತ್ರವಾಗಿದ್ದು ಜಗತ್ತಿನಲ್ಲಿ ಯುದ್ಧದಂತ ಕಠಿಣ ಪರಿಸ್ಥಿತಿ ಇರುವಾಗಲೂ ದೇಶದ ಜನ ನೆಮ್ಮದಿಯಿಂದ ಇರಲು ಸಾಧ್ಯವಾಗಿದೆ ಎಂದರು. ವಿಕಸಿತ ಭಾರತದ ಗುರಿಯೊಂದಿಗೆ ಗ್ರಾಮೀಣ ಪ್ರದೇಶಗಳ ಆರ್ಥಿಕ ಸಬಲೀಕರಣಕ್ಕೆ ಜಾರಿಗೆ ತಂದಿರುವ ಪ್ರತಿಯೊಂದು ಯೋಜನೆಗಳು ಮನೆ ಮನೆಗಳಿಗೆ ತಲುಪಬೇಕಿದ್ದು, ಆ ದಿಶೆಯಲ್ಲಿ ಪಕ್ಷದ ಕಾರ್ಯಕರ್ತರು ನಿರಂತರವಾಗಿ ಕೆಲಸ ಮಾಡಬೇಕಿದೆ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ದೃಷ್ಟಿಯಿಂದ ಒಗ್ಗಟ್ಟಿನಿಂದ ಕೆಲಸ ಮಾಡಬೇಕಿದ್ದು, ಭಾರತೀಯ ಜನತಾ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಪರಿಶ್ರಮದಿಂದ ಪ್ರಾಮಾಣಿಕ ಪ್ರಯತ್ನ ನಡೆಸಬೇಕಿದೆ. ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಗಳನ್ನು ಸೂಕ್ತವಾಗಿ ನಿರ್ವಹಿಸಬೇಕಿದೆ ಎಂದ ಅವರು

ಚುನಾವಣಾ ಪೂರ್ವದಲ್ಲಿ ನಡೆಯುವ ಸಭೆಗಳಲ್ಲಿ ಎಲ್ಲರೂ ಪಾಲ್ಗೊಂಡು ಪಕ್ಷಸಂಘಟನೆ ಬಲಪಡಿಸಬೇಕು ಎಂದು ಕರೆ ನೀಡಿದರು. ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದ ಗಾಂವಕರ, ಉಪಾಧ್ಯಕ್ಷೆ ಆರತಿ ಗೌಡ, ಸಹ ಸಂಚಾಲಕ ರಾಘವೇಂದ್ರ ಭಟ್ಟ, ಜಿಲ್ಲಾ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಾಜೇಂದ್ರ ನಾಯ್ಕ, ತಾಲೂಕು ಪ್ರಧಾನ ಕಾರ್ಯದರ್ಶಿ ಚಂದ್ರಕಾಂತ ನಾಯ್ಕ, ಶ್ರೀಧರ ನಾಯ್ಕ, ಪುರಸಭೆ ಮಾಜಿ ಅಧ್ಯಕ್ಷ ಸೂರಜ ನಾಯ್ಕ, ಮಂಡಲ ಪ್ರಭಾರಿ ಸುಬ್ರಾಯ ದೇವಾಡಿಗ ಉಪಸ್ಥಿತರಿದ್ದರು.



> ಸ್ಥಳೀಯ ಸಂಸ್ಥೆಯ ಚುನಾವಣೆಗಳು ಎದುರಾಗಲಿದ್ದು, ಪಕ್ಷದ ಕಾರ್ಯಕರ್ತರು ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ ಅವರ ನೇತೃತ್ವದಲ್ಲಿ ಪಕ್ಷದ ಬಲವರ್ಧನೆಗೆ ಕೊಡುಗೆ ನೀಡಬೇಕು.
> ■ ಸಂಜಯ ನಾಯ್ಕ,ಅಂಕೋಲಾ ಮಂಡಲ ಮಾಜಿ ಅಧ್ಯಕ್ಷ

ಹಿರಿಯರನ್ನು ಗೌರವಿಸಿ

ಭಟ್ಕಳ: ಇಲ್ಲಿನ ನಿವೃತ್ತ ಸರ್ಕಾರಿ ನೌಕರರ ಸಂಘದ ವಾರ್ಷಿಕ ಮಹಾಭೆಯನ್ನು ಅರ್ಬನ್ ಬ್ಯಾಂಕಿನ ಅಧ್ಯಕ್ಷೆ ಮೆಹಬೂಬಿ ಪಟೇಲ್ ಉದ್ಘಾಟಿಸಿದರು.ನಂತರ ಮಾತನಾಡಿದ ಅವರು ನಿವೃತ್ತ ನೌಕರರ ಸಂಘವನ್ನು ಮತ್ತಷ್ಟು ಪ್ರಭಲಗೊಳಿಸಬೇಕು. ಇಂತಹ ಕಾರ್ಯಕ್ರಮ ವರ್ಷಂಪ್ರತಿ ನಿವೃತ್ತ ನೌಕರರಿಂದ ನಡೆಯಬೇಕು. ವಯಸ್ಸಾದವರಿಗೆ ಪ್ರೋತ್ಸಾಹಿಸಿ ಗೌರವಿಸ ಬೇಕೆಂದರು. ವಿ.ಡಿ.ಆಚಾರ್ಯ ಅವರು ವಾರ್ಷಿಕ ಮಹಾಸಭೆಯ ಅಧ್ಯಕ್ಷತೆವಹಿಸಿದ್ದರು. ಮುಖ್ಯ ಅತಿಥಿಯಾಗಿದ್ದ ತಾಲೂಕು ನೌಕರರ ಸಂಘ ಅಧ್ಯಕ್ಷ ಎಂ.ಎನ್.ನಾಯ್ಕ, ನಿವೃತ್ತ ಅಧಿಕಾರಿ ಎ.ಎನ್.ಶೆಟ್ಟಿಯವರು ಉಪಸ್ಥಿತರಿದ್ದರು. ಸಂಘದ ಸದಸ್ಯರಲ್ಲಿ 75 ವರ್ಷ ಮೇಲ್ಪಟ್ಟ ಎಂಟು ಮಂದಿ ನಿವೃತ್ತ ನೌಕರರಿಗೆ ಸನ್ಮಾನಿಸಿ ಗೌರವಿಸಲಾಯಿತು. ನೂತನ ಆಡಳಿತ ಸಮಿತಿಯ ಪದಾಧಿಕಾರಿಗಳನ್ನು ಈ ತಿಂಗಳು ಕೊನೆಯೊಳಗಾಗಿ ಸೇರಿ ಆಯ್ಕೆ ಮಾಡಲು ತೀರ್ಮಾನಿಸಲಾಯಿತು. ರೋಹಿಣಿ ವೆರ್ಣೇಕರ ಪ್ರಾರ್ಥಿಸಿದರು. ನಿವೃತ್ತ ತಹಶೀಲ್ದಾರ್ ಎ.ಎ.ಘನಿ ಸ್ವಾಗತಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಆರ್.ನಾಯ್ಕ ಅವರು ವರದಿ ವಾಚಿಸಿದರು. ನಿವೃತ್ತ ಸಹಾಯಕ ಕೃಷಿ ಅಧಿಕಾರಿ ಜಿ.ಎನ್.ನಾಯ್ಕ ಅವರು ನಿರೂಪಿಸಿದರು. ಎಂ.ಡಿ.ನಾಯ್ಕ ವಂದಿಸಿದರು.

ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ಮಾಹಿತಿ


ಉ.ಕ.ದಲ್ಲಿ ಅಡುಗೆ ಅನಿಲ ಸಮಸ್ಯೆ ಇಲ್ಲ

ಕಾರವಾರ: ಜಿಲ್ಲಾಡಳಿತವು ಸರ್ಕಾರವು ತೈಲ ಕಂಪನಿ ಅಧಿಕಾರಿಗಳೊಂದಿಗೆ (IOC BPCHPC) ಸಭೆ ನಡೆಸಿ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಲಭ್ಯತೆ ಬಗ್ಗೆ ಮಾಹಿತಿ ಪಡೆದು ಸಮಸ್ಯೆ ಇಲ್ಲದ ಬಗ್ಗೆ ತೈಲ ಕಂಪನಿ ಅಧಿಕಾರಿಗಳಿಂದ ಖಾತ್ರಿಪಡಿಸಿಕೊಂಡಿದೆ ಹಾಗೂ ಜಿಲ್ಲೆಯಲ್ಲಿ ಪ್ರಸ್ತುತ ಲಭ್ಯವಿರುವ ದೇಶೀಯ ಎಲ್‌ಪಿಜಿ ದಾಸ್ತಾನು ಗೃಹಬಳಕೆ ಗ್ರಾಹಕರಿಗೆ ಅಗತ್ಯವಿರುವ ಬಗ್ಗೆ ತೈಲ ಕಂಪನಿಗಳು ಮಾಹಿತಿ ನೀಡಿದ್ದು, ಜಿಲ್ಲೆಯ ಎಲ್ಲಾ ಗ್ರಾಹಕರು ಎಲ್‌ಜಿ ಸರಬರಾಜಿನ ಬಗ್ಗೆ ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ ಎಂದು ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ತಿಳಿಸಿದ್ದಾರೆ.

ಗ್ರಾಹಕರು ಆತಂಕದಲ್ಲಿ ತುರ್ತು ಮತ್ತು ಅನಗತ್ಯ ಬುಕಿಂಗ್ ಮಾಡದೆ, ಮಾರುಕಟ್ಟೆಯಲ್ಲಿ ಕೃತಕ ಬೇಡಿಕೆ ಸೃಷ್ಟಿಯಾಗದಂತೆ ಸಮರ್ಪಕವಾಗಿ ಬಳಕೆ ಮಾಡಲು ಸಮತೋಲನ ಕಾಪಾಡಲು ತಿಳಿಸಿದೆ. ಅಗತ್ಯ ಸೇವೆಗಳನ್ನು ಒದಗಿಸುವ ಸಾರ್ವಜನಿಕ ಸಂಸ್ಥೆಗಳಾದ ಸರ್ಕಾರಿ ಆಸ್ಪತ್ರೆಗಳು, ವಿದ್ಯಾರ್ಥಿನಿಲಯಗಳು, ಅಂಗನವಾಡಿ, ಶಾಲೆ, ಕಾಲೇಜು, ಕಾರಾಗೃಹ ಇತ್ಯಾದಿ ಸಂಸ್ಥೆಗಳಿಗೆ ಯಾವುದೇ ಅಡಚಣೆಯಾಗದಂತೆ ಎಲ್‌ಪಿಜಿ ಸೌಲಭ್ಯವನ್ನು ಒದಗಿಸುವಂತೆ ತೈಲಕಂಪನಿಗಳಿಗೆ ಸೂಚನೆಯನ್ನು ನೀಡಲಾಗಿದೆ ಎಂದು ಅವರು ತಿಳಿಸಿದರು.

ಅನಧಿಕೃತವಾಗಿ ಗ್ಯಾಸ್ ಸಿಲಿಂಡರ್‌ಗಳ ಅಕ್ರಮ ದಾಸ್ತಾನು, ಸಾಗಾಣಿಕೆ, ರಿಫಿಲಿಂಗ್ ಪ್ರಕರಣ ಗಳು ಕಂಡುಬಂದಲ್ಲಿ Essential Commodities Act 1955 and Petroleum Products (Maintenance of Production Storage and Supply) Order 1999 and LPG Control Order 20002000 ರಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು.

ಈ ಸಂಬಂಧ ಆಯಾ ತಾಲೂಕಿನ ತಹಶೀಲ್ದಾರರವರಿಗೆ ಈ ಬಗ್ಗೆ ಕ್ರಮವಹಿಸಲು ಅಗತ್ಯ ಸೂಚನೆಗಳನ್ನು ನೀಡಲಾಗಿದೆ. ಕಾಳಸಂತೆಕೋರರ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ಜರುಗಿಸಲು ಸಹ ನಿರ್ದೇಶನ ನೀಡಲಾಗಿದೆ ಎಂದವರು ತಿಳಿಸಿದ್ದಾರೆ.



ಸಮಸ್ಯೆ ಇದ್ದರೆ ಸಂಪರ್ಕಿಸಿ:
ಎಲ್‌ಪಿಜಿ ಕುರಿತು ಯಾವುದೇ ಸಮಸ್ಯೆಗಳು ಕಂಡುಬಂದಲ್ಲಿ ಜಿಲ್ಲಾಧಿಕಾರಿಗಳ ಕಂಟ್ರೋಲ್ ರೂಮ್ ಸಂಖ್ಯೆ 08382 229857 ಅಥವಾ ಪೊಲೀಸ್ ಕಂಟ್ರೋಲ್ ರೂಮ್ ಸಂಖ್ಯೆ 9480805200 ಗಳನ್ನು ಸಂಪರ್ಕಿಸುವಂತೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಆರೋಪಿ ಗಡಿಪಾರು ಮಾಡಲು ಒತ್ತಾಯ



ಮುಂಡಗೋಡ: ತಾಲೂಕಿನ ಕೊಳಗಿ ಅರಣ್ಯದಲ್ಲಿ ಶಿವಕ್ಕಾ ಪಾಟೀಲ ಇವರ ಹತ್ಯೆ ಮಾಡಿದ ಆರೋಪಿ ಕೃಷ್ಣಪ್ಪ ಎಂಬಾತನ ಮೇಲೆ ಕಾನೂನಿನ ಕಠಿಣ ಕ್ರಮ ಜರುಗಿಸಿ ಗಡಿಪಾರು ಮಾಡಬೇಕೆಂದು ತಾಲೂಕಿನ ಮೇದಾರ ಸಮಾಜದವರು ಪ್ರತಿಭಟನೆ ನಡೆಸಿ ಪೊಲೀಸ್ ಠಾಣೆಯ ಸಿಪಿಐ ರಂಗನಾಥ ನೀಲಮ್ಮನವರ ಅವರಿಗೆ ಶುಕ್ರವಾರ ಮನವಿ ಸಲ್ಲಿಸಿದರು. ಪಟ್ಟಣದ ಪ್ರವಾಸಿ ಮಂದಿರದಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸಿಪಿಐ ರಂಗನಾಥ ನೀಲಮ್ಮನವರಿಗೆ ಮನವಿ ಸಲ್ಲಿಸಿದರು.ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಈ ಘಟನೆಯನ್ನು ನಾವು ಖಂಡಿಸುತ್ತೇವೆ. ಆರೋಪಿ ನಮ್ಮ ಗ್ರಾಮದವನಲ್ಲ, ಹೆಂಡತಿಯ ಮನೆಗೆ ಬಂದು ವಾಸವಿದ್ದನು. ಈ ಕೃತ್ಯಯಿಂದ ಜನರು ಭಯಭೀತರಾಗಿದ್ದಾರೆ. ಆರೋಪಿಯೂ ಜಾಮೀನನ ಮೇಲೆ ಹೊರಗೆ ಬಂದು ಮಳಗಿಯಲ್ಲಿಯೇ ವಾಸವಾದರೇ ಹೇಗೆ ಎಂಬ ಭಯ ಕಾಡುತ್ತಿದೆ. ಈ ಘಟನೆಯಿಂದ ಭಯದ ವಾತವಾರಣ ಸೃಷ್ಟಿಯಾಗಿದೆ. ಹೀಗಾಗಿ ಆರೋಪಿಗೆ ಜಾಮೀನು ನೀಡದಂತೆ ನೋಡಿಕೊಳ್ಳಬೇಕು ಆತನಿಗೆ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿದರು.ಸಿಪಿಐ ರಂಗನಾಥ ನೀಲಮ್ಮನವರ ಮನವಿ ಸ್ವೀಕರಿಸಿ ಮಾತನಾಡಿ, ಈಗಾಗಲೇ ಆರೋಪಿಯನ್ನು ಬಂಧಿಸಿದ್ದೇವೆ. ಕಾನೂನು ರೀತಿಯಲ್ಲಿ ಶಿಕ್ಷೆಯಾಗುತ್ತದೆ. ನಮ್ಮ ಪ್ರಕಾರ ಜಾತಿಯ ವಿರುದ್ಧವಾಗಿ ಯಾರು ಮಾತನಾಡುತ್ತಿಲ್ಲ. ಜಾತಿಯ ವಿರುದ್ಧ ಯಾರು ಮಾತನಾಡಿದ್ದಾರೋ ಅವರನ್ನು ಕರಿಸಿ ವಿಚಾರಿಸುತ್ತೇವೆ. ಎಲ್ಲರೂ ಶಾಂತಿಯುತವಾಗಿ ಇರಬೇಕು ಎಂದರು. ಈ ವೇಳೆ ಸಮಾಜದ ಅಧ್ಯಕ್ಷ ಪರಮೇಶ್ವರ ಇಡಗೋಡ, ಪರಶುರಾಮ ಮೇದಾರ, ಮಂಜುನಾಥ ಮೇದಾರ, ಚಂದ್ರು ಇಡಗೋಡ, ಘನಶ್ಯಾಮ ಪಾಟೀಲ, ಸುರೇಶ ಪಾಟೀಲ ಮತ್ತು ಹನುಮಂತ ಇಡಗೋಡ ಮತ್ತಿತರರಿದ್ದರು.



ಯಲ್ಲಾಪುರ : ಟಿಎಂಎಸ್ ಆಡಳಿತಾಧಿಕಾರಿ ವಜಾಗೊಳಿಸುವಂತೆ ಶುಕ್ರವಾರ ಮುಂದುವರೆದ ಭಾಗವಾಗಿ ಟಿಎಂಎಸ್ ಮುಂಭಾಗ ಹಿರಿಯ ಸಹಕಾರಿ ಮಾಜಿ ಅಧ್ಯಕ್ಷ ಎನ್.ಕೆ.ಭಟ್ ಅಗ್ಗಾಶಿ ಕುಂಬ್ರಿ, ನೇತೃತ್ವದಲ್ಲಿ ಹೋರಾಟ ಸಮಿತಿಯ ಪ್ರಮುಖರು ಉಪವಾಸ ಸತ್ಯಾಗ್ರಹ ಹಮ್ಮಿಕೊಂಡಿದ್ದರು ಸಂಜೆ ಎನ್.ಕೆ.ಭಟ್ ಅಗ್ಗಾಶಿಕುಂಬ್ರಿ ಆರೋಗ್ಯದಲ್ಲಿ ಏರುಪೇರಾಗಿದ್ದು ಸ್ಥಳದಲ್ಲೇ ಚಿಕಿತ್ಸೆ ನೀಡಲಾಗಿದೆದೆ.

ಪಕ್ಷ ಸಂಘಟನೆ ಬಲವರ್ಧನೆ ಚುರುಕುಗೊಳ್ಳಲಿ : ರೂಪಾಲಿ ನಾಯ್ಕ

ಅಂಕೋಲಾ: ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಸಮರ್ಪಕವಾಗಿ ಎದುರಿಸುವ ದಿಶೆಯಲ್ಲಿ ಪಕ್ಷ ಸಂಘಟನೆ ಮತ್ತು ಬಲವರ್ಧನೆ ಚುರುಕುಗೊಳ್ಳಬೇಕಿದೆ ಎಂದು ಭಾರತೀಯ ಜನತಾ ಪಕ್ಷದ ರಾಜ್ಯ ಉಪಾಧ್ಯಕ್ಷೆ ರೂಪಾಲಿ ನಾಯ್ಕ ಹೇಳಿದರು.

ಅಂಕೋಲಾ ಮಂಡಲದ ಮೊಗಟಾ ಗ್ರಾಪಂ ವ್ಯಾಪ್ತಿಯ ಬ್ರಹ್ಮೂರಿನಲ್ಲಿ ಕಾರ್ಯಕರ್ತರ ಸಭೆ ನಡೆಸಿ ಮಾತನಾಡಿದ ಅವರು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕಿದೆ ಗ್ರಾಮೀಣ ಪ್ರದೇಶಗಳಲ್ಲಿ ಭಾರತೀಯ ಜನತಾ ಪಕ್ಷದ ಅವಧಿಯಲ್ಲಿ ನಡೆಸಲಾಗಿರುವ ಅಭಿವೃದ್ಧಿ ಕೆಲಸಗಳು, ಮೂಲಭೂತ ಸೌಕರ್ಯಗಳ ಒದಗಿಸುವಿಕೆ ಕುರಿತಂತೆ ಜನರಿಗೆ ಮನವರಿಕೆ ಮಾಡುವ ಕೆಲಸ ಆಗಲಿ ಎಂದು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ಕೇಂದ್ರ ಸರ್ಕಾರ ಹಲವಾರು ಜನಪರ ಯೋಜನೆಗಳನ್ನು ರೂಪಿಸಿದ್ದು, ಸರ್ಕಾರದ ಯೋಜನೆಗಳ ಕುರಿತು ಜನರಿಗೆ ತಿಳಿಸಿ ಅದನ್ನು ಅವರಿಗೆ ತಲುಪಿಸುವ ಕಾರ್ಯ ಪಕ್ಷದ ಸ್ಥಳೀಯ ಪ್ರಮುಖರು, ಕಾರ್ಯಕರ್ತರು ನಿರ್ವಹಿಸಬೇಕಿದೆ. ಜಿಪಂ, ತಾಪಂ ಮತ್ತು ಗ್ರಾಪಂ ಗಳಿಗೆ ನಡೆಯುವ ಚುನಾವಣೆಗಳಲ್ಲಿ ಪಕ್ಷದ ಮತ್ತು ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಅತಿ ಹೆಚ್ಚಿನ ಸ್ಥಾನಗಳಲ್ಲಿ ಗೆಲುವು ಸಾಧಿಸಲು ಕಾರ್ಯಕರ್ತರ ಪಾತ್ರ ಅತಿ ಮುಖ್ಯ ಎಂದು ಅವರು ಹೇಳಿದರು.ಬಿಜೆಪಿ ಮಂಡಲ ಪ್ರಬಾರಿ ಅಧ್ಯಕ್ಷ ಸಂಜಯ ನಾಯ್ಕ, ವಕ್ತಾರ ಜಗದೀಶ ನಾಯಕ ಮೊಗಟ, ಕಾರ್ಯದರ್ಶಿ ಶ್ರೀಧರ ನಾಯ್ಕ, ಪ್ರಮುಖರುಗಳಾದ ಜಯಾ ನಾಯ್ಕ, ನಾರಾಯಣ ಹೆಗಡೆ, ಮಂಕಾಳ ಗೌಡ, ದೇವಾನಂದ ನಾಯಕ, ವಿಘ್ನೇಶ್ವರ ದೇಶ ಭಂಡಾರಿ ಸೇರಿದಂತೆ ಬಿಜೆಪಿ ಪ್ರಮುಖರು ಉಪಸ್ಥಿತರಿದ್ದರು.



ಆಟೋ ಗ್ಯಾಸ್ ದರ ಹೆಚ್ಚಳ: ಚಾಲಕರ ಪರದಾಟ

ಶಿರಸಿ: ಮಧ್ಯಪ್ರಾಚ್ಯ ರಾಷ್ಟ್ರಗಳಾದ ಇರಾಕ್ ಮತ್ತು ಇಸ್ರೇಲ್ ನಡುವಿನ ಸುದೀರ್ಘ ಸಂಘರ್ಷದ ಪರಿಣಾಮವಾಗಿ ಜಾಗತಿಕ ತೈಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಇದರ ನೇರ ಬಿಸಿ ವಾಣಿಜ್ಯ ನಗರಿ ಶಿರಸಿಯ ಆಟೋ ಚಾಲಕರಿಗೆ ತಟ್ಟಿದೆ. ನಗರದಲ್ಲಿ ಆಟೋ ಗ್ಯಾಸ್ ದರವು ಏಕಾಏಕಿ ಭಾರಿ ಏರಿಕೆ ಕಂಡಿದ್ದು, ಇಂಧನ ಪೂರೈಕೆಯೂ ಅಸ್ತವ್ಯಸ್ತಗೊಂಡಿರುವುದು ಚಾಲಕರನ್ನು ಸಂಕಷ್ಟಕ್ಕೆ ದೂಡಿದೆ.

ಕಳೆದ ಒಂದು ವಾರದ ಹಿಂದೆಯಷ್ಟೇ ಪ್ರತಿ ಲೀಟರ್ ಆಟೋ ಗ್ಯಾಸ್ ದರವನ್ನು 5 ರೂ. ಹೆಚ್ಚಿಸಲಾಗಿತ್ತು. ಆದರೆ, ಈಗ ಮತ್ತೆ 9 ರೂ. ಏರಿಕೆ ಮಾಡುವ ಮೂಲಕ ಲೀಟರ್‌ಗೆ 72.66 ರೂ. ನಿಗದಿಪಡಿಸಲಾಗಿದೆ. ಶಿರಸಿ ನಗರದ ನೂರಾರು ಆಟೋಗಳು ಸಂಪೂರ್ಣವಾಗಿ ಎಲ್‌ಪಿಜಿ ಅವಲಂಬಿತವಾಗಿದ್ದು, ಏಕಾಏಕಿ ದರ ಏರಿಕೆಯು ಬಾಡಿಗೆ ನಂಬಿ ಜೀವನ ಸಾಗಿಸುತ್ತಿರುವ ಚಾಲಕರ ಜಂಗಾಬಲವನ್ನೇ ಅಡಗಿಸಿದೆ. ಸಾಲ ಮಾಡಿ ಆಟೋ ಖರೀದಿಸಿರುವ ಚಾಲಕರಿಗೆ ದೈನಂದಿನ ಕಂತು ಪಾವತಿಸುವುದೇ ಸವಾಲಾಗಿ ಪರಿಣಮಿಸಿದೆ.

ನಗರದ ಯಲ್ಲಾಪುರ ರಸ್ತೆಯಲ್ಲಿರುವ ಡೆವಲಪ್‌ಮೆಂಟ್ ಸೊಸೈಟಿಯ ಗ್ಯಾಸ್ ಪಂಪ್‌ನಲ್ಲಿ ಸ್ಟಾಕ್ ಇಲ್ಲ ಎಂಬ ನಾಮಫಲಕ ಹಾಕಲಾಗಿದ್ದು, ಗ್ಯಾಸ್ ಸಿಗದೆ ಚಾಲಕರು ನಿರಾಸೆಯಿಂದ ಮರಳುವಂತಾಯಿತು. ಇನ್ನು ಹುಬ್ಬಳ್ಳಿ ರಸ್ತೆಯ ಪಂಪ್‌ಗೆ ಇಂಧನ ಸರಬರಾಜು ಬಂದ ಹಿನ್ನೆಲೆಯಲ್ಲಿ ನೂರಾರು ಆಟೋಗಳು ದೀರ್ಘ ಸರತಿ ಸಾಲಿನಲ್ಲಿ ನಿಂತಿದ್ದ ದೃಶ್ಯ ಕಂಡುಬಂತು. ಸದ್ಯಕ್ಕೆ ಮನೆ ಮತ್ತು ಹೋಟೆಲ್‌ಗಳ ಸಿಲಿಂಡರ್ ಪೂರೈಕೆಯಲ್ಲಿ ದೊಡ್ಡ ವ್ಯತ್ಯಯವಾಗಿಲ್ಲದಿದ್ದರೂ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಯುದ್ಧ ಮುಂದುವರಿದರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಆತಂಕವಿದೆ. ಸರ್ಕಾರವು ತಕ್ಷಣವೇ ಮಧ್ಯಪ್ರವೇಶಿಸಿ ತೈಲ ಕಂಪನಿಗಳೊಂದಿಗೆ ಮಾತುಕತೆ ನಡೆಸಿ ದರ ನಿಯಂತ್ರಣಕ್ಕೆ ಹಾಗೂ ಇಂಧನ ಪೂರೈಕೆಯನ್ನು ಸುಗಮಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಆಟೋ ಚಾಲಕರ ಸಂಘಟನೆಗಳು ಒತ್ತಾಯಿಸಿವೆ.



ಸಚಿವ ಮಂಕಾಳ ವೈದ್ಯ ಕ್ಷಮೆಯಾಚಿಸಲು ನಾಯ್ಕ ಆಗ್ರಹ

ಕಾರವಾರ: ಉಸ್ತುವಾರಿ ಸಚಿವ ಮಂಕಾಳ ವೈದ್ಯರಿಗೆ ಸಚಿವ ಹುದ್ದೆ ನಿಭಾಯಿಸುವ ಅರ್ಹತೆ, ಸಾಮರ್ಥವೇ ಇಲ್ಲದಾಗಿದೆ ಎಂದು ಭಟ್ಕಳ ಸಾಮಜಿಕ ಕಾರ್ಯಕರ್ತ ಮಾಸ್ತಪ್ಪ ನಾಯ್ಕ ಹೇಳಿದರು.

ಅವರು ಕಾರವಾರದಲ್ಲಿ ಪತ್ರಿಕಾ ಭವನದಲ್ಲಿ ಪತ್ರಿಕಾಗೊಷ್ಟಿಯಲ್ಲಿ ಮಾತನಾಡಿ, ಕಾರವಾರ ಜಿಪಂದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಕಾರವಾರ ಶಾಸಕ ಸತೀಶ ಸೈಲ್ ಅವರು ವೈದ್ಯರುಗಳ ಸಮಸ್ಯೆ ಹಾಗೂ ಔಷಧಿಯ ಲಭ್ಯತೆಯ ವಿಷಯ ಪ್ರಸ್ತಾಪಿಸಿದಾಗ ಸಚಿವರು ಜವಾಬ್ದಾರಿಯಿಂದ ಸರಿಯಾದ ಮಾಹಿತಿ ಮತ್ತು ಸ್ಪಷ್ಟನೆಯನ್ನು ನೀಡಬೇಕಿತ್ತು. ಶಾಸಕ ಸತೀಶ ಸೈಲ್ ಸಮಸ್ಯೆ ಬಗ್ಗೆ ಸಚಿವರ ಮುಂದೆ ಪ್ರಸ್ತಾಪಿಸಿದಾಗ ಸಚಿವರು ಹೇಳಿದ ಮಾತಿನಿಂದ ಕಾರವಾರ ಶಾಸಕ ಸತೀಶ ಸೈಲ್ ಸಭೆಯಿಂದ ಹೊರನಡೆದರು. ಈ ಹಂತದಲ್ಲಿ ಅಧಿಕಾರಿಗಳಿಂದ ಸರಿಯಾದ ಮಾಹಿತಿ ಪಡೆದು ಶಾಸಕರಿಗೆ ಸ್ಪಷ್ಟನೆಯನ್ನು ನೀಡಬೇಕಿತ್ತು. ಆದರೆ ಸಚಿವ ಮಂಕಾಳ ವೈದ್ಯರು ಅದನ್ನು ಮಾಡಲಿಲ್ಲ.



ಜಿಲ್ಲಾಮಟ್ಟದ ಸಭೆಯಲ್ಲಿ ಒಂದು ಉಸ್ತುವಾರಿ ಸಚಿವರಾಗಿ ಸಭೆಯಲ್ಲಿ ಜವಾಬ್ದಾರಿಯನ್ನು ನಿಭಾಯಿಸುವದು ಅವರ ಜವಾಬ್ದಾರಿಯಾಗಿತ್ತು. ಶಾಸಕರಾಗಿ ಕೇಳಿದ ಪ್ರಶ್ನೆಗೆ ಸಮಂಜಸ ಉತ್ತರ ಸಚಿವರಿಂದ ಬರಲಿಲ್ಲ. ಹಾಗಾಗಿ ಶಾಸಕ ಸತೀಶ ಸೈಲ್ ಅವರು ಸಭೆಯಿಂದ ಹೊರನಡೆದು ತಾನು ಅಂಗೂಟಾ ಛಾಪ ಅಲ್ಲ ಎಂದು ಪ್ರಸ್ತಾಪಿಸುವಂತಾಯಿತು.

ಕೆಡಿಪಿ ಸಭೆಯಲ್ಲಿ ಉಸ್ತುವಾರಿ ಸಚಿವರಾಗಿ ತನ್ನ ಹುದ್ದೆಯನ್ನು ನಿಭಾಯಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವದು ಕಂಡು ಬಂದಿತು. ಹಾಗಾ ಗಿ ಅವರಿಗೆ ಹುದ್ದೆಯನ್ನು ನಿಭಾಯಿಸುವ ಸಾಮರ್ಥ್ಯ, ಅರ್ಹತೆ ಇಲ್ಲದಂತಾಗಿದ್ದು, ಮಂಕಾಳ ವೈದ್ಯರು ಒಬ್ಬ ದಗಲ್ ಬಾಜಿ ವ್ಯಕ್ತಿಯಾಗಿದ್ದಾರೆ ಎಂದು ಮಾಸ್ತಪ್ಪ ನಾಯ್ಕ ಅಪಾದಿಸಿದರು.

ಶರಾವತಿ ಪಂಪ ಸ್ಟೋರೇಜ ವಿಷಯಕ್ಕೆ ಸಂಬಂಧಿಸಿದಂತೆ ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ ಅವರು ಮಾತನಾಡಿಲ್ಲದ ಕುರಿತು ಸಚಿವ ಮಂಕಾಳು ವೈದ್ಯ ಹೇಳಿದ್ದರು. ಇಲ್ಲಿಯೂ ಕೂಡ ಅವರು ತಪ್ಪು ಎದ್ದು ಕಾಣುತ್ತಿತ್ತು. ಈ ವಿಷಯವಾಗಿ ಸಾರ್ವಜನಿಕ ಸಭೆಯಲ್ಲಿ ಮಂಕಾಳ ವೈದ್ಯರು ಹೇಳಿದ್ದರು.ಸುಳ್ಳು ಹೇಳಿರುವದನ್ನು ಒಪ್ಪಿಕೊಂಡು ಬಹಿರಂಗವಾಗಿ ಕ್ಷಮೆ ಯಾಚಿಸಬೇಕು ಎಂದು ಮಾಸ್ತಪ್ಪ ನಾಯ್ಕ ಆಗ್ರಹಿಸಿದರು.

ಕೂಡಲೇ ನೀರು ಪೂರೈಸಿ: ನಾಗೇಂದ್ರ, ಜಿವೋಜಿ

ಹಳಿಯಾಳ: ಕ್ಷೇತ್ರದಾದ್ಯಂತ ಪಾದಯಾತ್ರೆ ಹಮ್ಮಿಕೊಂಡು ಕಂಡುಕೊಂಡ ಸತ್ಯ ವಾಸ್ತವತೆಗಿಂತಲೂ ಭೀಕರವಾಗಿದೆ. ಇಪ್ಪತ್ತು ಕಿ.ಮೀ. ದೂರದಲ್ಲಿಯೇ ಸರ್ವ ಋತು ಹರಿಯುವ ಕಾಳಿ ನದಿ ಇದ್ದರೂ ಕುಡಿಯುವ ನೀರಿಗೆ ತಾಲೂಕಿನ ಜನತೆ ಕಣ್ಣೀರು ಹಾಕುತ್ತಿದ್ದಾರೆ. ಕೂಡಲೇ ನೀರು ಹರಿಸದೇ ಇದ್ದಲ್ಲಿ ಮಾ.16ರಂದು ಸಹಸ್ರಾರು ಸಂಖ್ಯೆಯಲ್ಲಿ ರೈತರಿಂದ ಹಳಿಯಾಳ ಬಂದ್ ಮಾಡುವ ಕರೆ ನೀಡುವುದಾಗಿ ಕಬ್ಬು ಬೆಳೆಗಾರರ ಹಿತಸಂರಕ್ಷಣಾ ಸಮಿತಿ ಅಧ್ಯಕ್ಷ ನಾಗೇಂದ್ರ ಜಿವೋಜಿ ಹೇಳಿದರು.

ಅವರು ಪಟ್ಟಣದ ಮರಾಠಾ ಭವನದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ, ತಾಲೂಕಿನಲ್ಲಿ 113 ಹಳ್ಳಿಗಳಿದ್ದು ಅವುಗಳು 116 ಕೆರೆಗಳನ್ನು ಹೊಂದಿದ್ದು ಕಾಳಿ ನದಿಯ ನೀರನ್ನು ಕೆರೆಗಳಿಗೆ ತುಂಬಿಸುವ ಯೋಜನೆಯಡಿ ಕೇವಲ 46 ಕೆರೆಗಳಿದ್ದು 19 ಬಾಂದಾರಗಳಿವೆ. ಇನ್ನುಳಿದ 70ಕ್ಕೂ ಹೆಚ್ಚಿನ ಕೆರೆಗಳಿಗೆ ನೀರು ಇಲ್ಲದಿದ್ದರೆ ನೀರಾವರಿಗೆ ಒತ್ತು ಹೇಗೆ ಸಿಗಲು ಸಾಧ್ಯ? ಎಂದು ಪ್ರಶ್ನಿಸಿ ಸಕ್ಕರೆ ಕಾರ್ಖಾನೆ ಕಾಮಧೇನು ಇದ್ದ ಹಾಗೆ ಮತ್ತು ರೈತ ಹಿತಕ್ಕಾಗಿ ತಂದಿದ್ದೇನೆ ಎಂದು ಹೇಳುವ ಶಾಸಕರುಗೆ, ಆ ಕಾರ್ಖಾನೆಗೆ ಕಬ್ಬು ಬೆಳೆಯಲು ನೀರು ಬೇಕು ಎನ್ನುವ ಆಲೋಚನೆಯೂ ಬರಲಿಲ್ಲವೆ ಎಂದು ಪ್ರಶ್ನಿಸಿದರು.ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಸಂದೀಪ ಕುಮಾರ ಬೊಬಾಟಿ ಮಾತನಾಡಿ, ಕಾಳಿ ನದಿ ನೀರನ್ನು ಕೆರೆಗಳಿಗೆ ತುಂಬುವ ಯೋಜನೆಯ ಅನುಷ್ಠಾನದಲ್ಲಿಯ ವಿಳಂಬದ ತಂತ್ರ ರೈತರಿಗೆ ತಿಳಿದಿದ್ದು ಶಾಸಕರು ಮೊದಲು ನೀರು ಹರಿಸುವ ಕಾರ್ಯ ಮಾಡಲಿ. ಈಗಾಗಲೇ ನೀರಿನ ಅಭಾವ ಮಿತಿ ಮೀರಿದ್ದು, ಅಳ್ನಾವರ ಪಟ್ಟಣಕ್ಕೆ ರೂಪಿಸಿದ್ದ ನೀರು ಯೋಜನೆಯು ಹದಿನೇಳು ಹಳ್ಳಿಗಳ ಮೂಲಕ ಹಾದು ಹೋಗಿದ್ದು ಡಿಪಿಆರ್ ಪ್ರಕಾರ ಆ ಹಳ್ಳಿಗಳಿಗೂ ನೀರಿನ ಸಂಪರ್ಕ ಸಿಗಬೇಕಾಗಿತ್ತು ಆದರೆ ಯಾಕೆ ದೊರೆಯಲಿಲ್ಲ? ಎಂದರು.

ತಾಲೂಕಾಧ್ಯಕ್ಷ ಶಂಕರ ಕಾಜಗಾರ ಹಾಗೂ ಎಂ.ವಿ. ಘಾಡಿ, ರಾಮದಾಸ ಬೆಳಗಾಂವಕರ, ಸಾತುರಿ ಗೋಡಿಮನಿ, ಸುರೇಶ ಶಿವಣ್ಣವರ ಇತರರಿದ್ದರು.



ಐಐಎಸ್‌ಸಿ ಬೆಂಗಳೂರಿಗೆ ವಿದ್ಯಾರ್ಥಿಗಳ ಭೇಟಿ



ಹಳಿಯಾಳ: ಕೆಎಲ್‌ಎಸ್ ವಿಡಿಐಟಿ ಹಳಿಯಾಳದ ಪ್ರಥಮ ವರ್ಷದ 72 ವಿದ್ಯಾರ್ಥಿಗಳು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಬೆಂಗಳೂರಿಗೆ ಭೇಟಿ ನೀಡಿದ್ದರು.

ಐಐಎಸ್‌ಸಿ ಪ್ರತಿ ವರ್ಷ ತನ್ನ ಸಂಶೋಧನೆಗಳನ್ನು ಸಾರ್ವಜನಿಕರಿಗೆ ಪರಿಚಯಿಸಲು 'ಓಪನ್ ಡೇ' ಆಯೋಜಿಸುತ್ತದೆ. ಇದರಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಭೇಟಿ ನೀಡಿ ವೈಜ್ಞಾನಿಕ ಆವಿಷ್ಕಾರಗಳನ್ನು ವೀಕ್ಷಿಸುತ್ತಾರೆ.

ಐಐಎಸ್‌ಸಿ ಮುಕ್ತ ದಿನದ ಪ್ರಯುಕ್ತ ವಿದ್ಯಾರ್ಥಿಗಳು ಭಾರತೀಯ ವಿಜ್ಞಾನ ಸಂಸ್ಥೆಯ ವಿವಿಧ ವಿಭಾಗಗಳಿಗೆ ಭೇಟಿ ನೀಡಿ ನೂತನ ಆವಿಷ್ಕಾರ ಕುರಿತಾಗಿ ತಿಳಿದುಕೊಂಡರು. ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕೆ ಬಳಸಿ ನಡೆಸಲಾಗುತ್ತಿರುವ ವಿನೂತನ ಆವಿಷ್ಕಾರ ತಿಳಿದುಕೊಳ್ಳುತ್ತ, ಎಲೆಕ್ಟ್ರಿಕಲ್, ಸಂವಹನ, ಯಾಂತ್ರಿಕ ಕ್ಷೇತ್ರದಲ್ಲಿ ಬಳಸಲಾಗುತ್ತಿರುವ ತಂತ್ರಜ್ಞಾನ ಕುರಿತಾಗಿ ಮಾಹಿತಿ ಹೊಂದಿದರು. ವಿಡಿಐಟಿ ವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ.ಸ್ನೇಹಾ ಕುಲಕರ್ಣಿ ಈ ಕಾರ್ಯಕ್ರಮ ಆಯೋಜಿಸಿದ್ದರು. ಡಾ.ವಿನೋದ್ ನಾಯಕ್ ಹಾಗೂ ಡಾ.ಮಲ್ಲಿಕಾರ್ಜುನ ಪಾಟೀಲ್ ಸಂಯೋಜಿಸಿದ್ದರು. ತಾಂತ್ರಿಕ ಕ್ಷೇತ್ರದಲ್ಲಿ ಆಗುತ್ತಿರುವ ನೂತನ ಬದಲಾವಣೆಗಳ ಕುರಿತಾಗಿ ವಿದ್ಯಾರ್ಥಿಗಳಿಗೆ ಅರಿವು ಹೊಂದಲು ಈ ಭೇಟಿ ಸಹಕಾರಿಯಾಗಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಿಳಿಸಿದ್ದಾರೆ.

ಕಿರುಸುದ್ದಿ

ನಾಳೆ ವಿದ್ಯುತ್ ವ್ಯತ್ಯಯ

ಹಾವೇರಿ: ಶಿಗ್ಗಾಂವ 33/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ವಿವಿಧ ಮಾರ್ಗಗಳ ನಿರ್ವಹಣೆ ಕಾಮಗಾರಿ ಹಿನ್ನಲೆಯಲ್ಲಿ ಮಾ.15 ರಂದು ಬೆಳಗ್ಗೆ 10ರಿಂದ ಸಂಜೆ 6ಗಂಟೆವರೆಗೆ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿವೆ. ಬಸವನಕಟ್ಟಿ, ಕೆಎಸ್‌ಆರ್‌ಪಿ, ಜೆಕ್ಕಿನಕಟ್ಟಿ ಐಪಿ, ಕೋರ್ಟ್, ಟೋಲ್‌ಗೇಟ್, ಟೆಕ್ಸ್ಟೈಲ್ ಪಾರ್ಕ ಮಾರ್ಗದಲ್ಲಿ ಎನ್.ಎಚ್.4ರಿಂದ ಸವಣೂರ ರಸ್ತೆ (ಕಿತ್ತೂರು ರಾಣಿ ಚನ್ನಮ್ಮರವರ ಪುತ್ಥಳಿ) ವರೆಗೆ ನಿರ್ವಹಣೆ ಕಾಮಗಾರಿ ಇರುವುದರಿಂದ ಈ ಮಾರ್ಗದ ವ್ಯಾಪ್ತಿಗೆ ಬರುವ ಜೆಕ್ಕಿನಕಟ್ಟಿ, ಜೆಕ್ಕಿನಕಟ್ಟಿ ತಾಂಡಾ, ಶಿವಪುರ, ಶಿವಪುರ ತಾಂಡಾ, ಕೋಣನಕೇರಿ, ಭದ್ರಾಪುರ, ಮುಳಕೇರಿ, ಬಸವನಕಟ್ಟಿ, ಗೌಳೇರದಡ್ಡಿ ಗ್ರಾಮ, ಎಪಿಎಂಸಿ, ರಾಜೀವನಗರ, ಕೆಎಸ್‌ಐಡಿ, ಕೆಎಸ್‌ಆರ್‌ಪಿ ಬೆಟಾಲಿಯನ್, ನಾಗನೂರ ಕೇರಿ ರಸ್ತೆ, ಬಸವೇಶ್ವರ ನಗರ ಕೋರ್ಟ್ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಶಿಗ್ಗಾಂವ ಹೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀರು ಸರಬರಾಜಿನಲ್ಲಿ ವ್ಯತ್ಯಯ

ಹಾವೇರಿ: ಕಂಚಾರಗಟ್ಟಿ ಜಾಕ್‌ವೆಲ್‌ದಲ್ಲಿ ಪಂಪ್ ದುರಸ್ತಿ ಇರುವುದರಿಂದ ಹಾಗೂ ಹೊಸ ಮ್ಯಾನಿಫೋಲ್ಡ್ ಪೈಪ್ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಮಾ.14 ರಿಂದ 16ರವರೆಗೆ ತುಂಗಭದ್ರಾ ನದಿಯಿಂದ ಬರುವ ನೀರು ಸ್ಥಗಿತವಾಗಲಿದೆ. ಬೇಸಿಗೆ ಕಾಲವಾಗಿದ್ದರಿಂದ ಸಾರ್ವಜನಿಕರು ನೀರನ್ನು ಕುದಿಸಿ, ಆರಿಸಿ ಕುಡಿಯಬೇಕು ಎಂದು ಹಾವೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.22ರಂದು ಹೂಳು ಎತ್ತುವ ಕಾರ್ಯಕ್ರಮ

ಶಿಗ್ಗಾವಿ: ತಾಲೂಕಿನ ತಡಸ ಗ್ರಾಮದ 14 ಎಕರೆ ವಿಸ್ತೀರ್ಣದ ವಿರುವ ಕಂಚಾರಕಟ್ಟೆ ಕೆರೆಯನ್ನು ಉಚಿತವಾಗಿ ಹೂಳು ಎತ್ತುವ ಕಾರ್ಯಕ್ರಮವನ್ನು ಭಾರತ ಸೇವಾ ಸಂಸ್ಥೆ ವತಿಯಿಂದ ಮಾ.22ರಿಂದ ಹಮ್ಮಿಕೊಳ್ಳಲಾಗಿದೆ ಎಂದು ಭಾರತ ಸೇವಾ ಸಂಸ್ಥೆ ಅಧ್ಯಕ್ಷ ಶ್ರೀಕಾಂತ ದುಂಡಿಗೌಡ್ರ ಹೇಳಿದರು. ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉದ್ಘಾಟನಾ ಕಾರ್ಯಕ್ರಮಕ್ಕೆ ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾಲಿ ಸಂಸದರಾದ ಬಸವರಾಜ ಬೊಮ್ಮಾಯಿ, ಚಲನಚಿತ್ರ ನಟ ಅನಿರುದ್ಧ ವಿಷ್ಣುವರ್ಧನ ಮತ್ತು ಸಮಾಜ ಸೇವಕ ಮಹೇಂದ್ರ ಸಿಂಘಿಯವರು ಭಾಗವಹಿಸಲಿದ್ದಾರೆ ಎಂದರು. ಈಗಾಗಲೇ ನಮ್ಮ ಭಾರತ ಸೇವಾ ಸಂಸ್ಥೆಯಿಂದ ಅನೇಕ ಸಮಾಜಮುಖಿ ಚಿಂತನೆಗಳೊಂದಿಗೆ ಹಲವಾರು ಸಾಮಾಜಿಕ ಕಾರ್ಯಕ್ರಮಗಳನ್ನು ಮಾಡುತ್ತ ಬಂದಿದ್ದೇವೆ, ಅದೇ ರೀತಿ ಅತ್ಯಂತ ಫಲವತ್ತ ಮಣ್ಣನ್ನು ತಮ್ಮ ಕೃಷಿ ಭೂಮಿಗೆ ಬಳಸಿ ಹೆಚ್ಚಿನ ಇಳುವರಿ ಪಡೆಯುವಂತೆ ಆಗಬೇಕು ಎನ್ನುವ ಉದ್ದೇಶದ ಜೊತೆಗೆ ಪರಿಸರ ಸಂರಕ್ಷಣೆ ಭಾಗವಾದ ನೀರಿನ ಶೇಖರಣೆ ಹೆಚ್ಚಿಸುವುದು, ಅಂತರ್ಜಲದ ಬಲವರ್ಧನೆ ಗೋಸ್ಕರವಾಗಿ ಕೆರೆ ಹೂಳು ಎತ್ತುವಲ್ಲಿ ಪ್ರಮುಖ ಪಾತ್ರ ವಹಿಸುತ್ತ ಸುತ್ತಮುತ್ತಲಿನ ರೈತರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು. ನೀರಿನ ಶೇಖರಣೆ ಹೆಚ್ಚಾಗುವುದರಿಂದ ಸುತ್ತಮುತ್ತಲಿನ ನೀರಿಲ್ಲದ ಬತ್ತಿ ಹೋದ ಕೊಳವೆ ಬಾವಿಗೆ ಮತ್ತೆ ಚಾಲನೆ ದೊರೆಯುವಂತೆ ಮಾಡುವುದು ನಮ್ಮ ಈ ಕಾರ್ಯಕ್ರಮದ ಸದುದ್ದೇಶವಾಗಿದೆ ಎಂದರು.



ವ್ಯಕ್ತಿ ಕಾಣೆ

ಹಾವೇರಿ : ಶಹರದ ಹೊಸನಗರದ ನಿವಾಸಿ 27ವರ್ಷದ ಸುಭಾಸ ದಶರಥ ಗೋಸಾವಿ 2026 ಫೆಬ್ರವರಿ 15 ರಂದು ಮನೆಯಿಂದ ಹೋದವನು ಮರಳಿ ಬಾರದೆ ಕಾಣೆಯಾಗಿರುವುದಾಗಿ ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಕಾಣೆಯಾದ ವ್ಯಕ್ತಿಯ 5.5 ಅಡಿ ಎತ್ತರ, ತೆಳ್ಳನೆಯ ಮೈಕಟ್ಟು, ಕೋಲುಮುಖ, ಗೋದಿ ಮೈ ಬಣ್ಣ, ನೀಟಾದ ಮೂಗು ಹೊಂದಿದ್ದು, ಕೆಂಪುಬಣ್ಣದ ಅಂಗಿಡಿ, ಕಪ್ಪು ಬಣ್ಣದ ಪ್ಯಾಂಟ ಧರಿಸಿದ್ದಾನೆ. ಈ ವ್ಯಕ್ತಿಯ ಗುರುತು ಪತ್ತೆಯಾದಲ್ಲಿ ಹಾವೇರಿ ಶಹರ ಠಾಣೆ ಸಂಪರ್ಕಿಸಬಹುದೆಂದು ಹಾವೇರಿ ಶಹರ ಪೊಲೀಸ್ ಠಾಣೆ ಆರಕ್ಷಕ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಗಂಗಮ್ಮ ಕುಮ್ಮೂರ

ಹಾವೇರಿ: ತಾಲೂಕಿನ ಚಿಕ್ಕಲಿಂಗದಹಳ್ಳಿ ಗ್ರಾಮದ ಗಂಗಮ್ಮ ಸಣ್ಣಪ್ಪ ಕುಮ್ಮೂರ (87) ನಿಧನರಾದರು. ಮೃತರಿಗೆ ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವಿದೆ.





ಗುತ್ತಲ : ಸಮೀಪದ ನೆಗಳೂರ ಗ್ರಾಮದ ಸಂಸ್ಥಾನ ಹಿರೇಮಠದಲ್ಲಿ ಬುಧವಾರ ಜರುಗಿದ ಪೂರ್ವಸಿದ್ಧತಾ ಸಭೆಯಲ್ಲಿ ಶಾಸಕ ರುದ್ರಪ್ಪ ಲಮಾಣಿ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿದರು. ಶ್ರೀಮಠದ ಗುರುಶಾಂತೇಶ್ವರ ಸ್ವಾಮೀಜಿ, ಭಕ್ತಾಧಿಗಳಿದ್ದರು.

ಅಭಿಯಾನದ ಸದುಪಯೋಗ ಪಡೆದುಕೊಳ್ಳಿ

ಗುತ್ತಲ: ಹೆಣ್ಣುಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರವು ಎಚ್‌ಪಿವಿ ಎಂಬ ಲಸಿಕೆಯ ಅಭಿಯಾನವನ್ನು ಕೈಗೊಂಡಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಾಲೂಕು ವೈದ್ಯಾಧಿಕಾರಿ ಡಾ. ಪ್ರಭಾಕರ ಕುಂದೂರ ಹೇಳಿದರು. ಪಟ್ಟಣದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಡೆದ ಎಚ್‌ಪಿವಿ ಲಸಿಕಾ ಅಭಿಯಾನದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಈ ಲಸಿಕೆಯನ್ನು 14ವರ್ಷದ ಹೆಣ್ಣು ಮಗುವಿಗೆ ಹಾಕಲಾಗುವುದು. ಎಚ್‌ಪಿವಿ ಎಂಬ ವೈರಸ್ ಕೆಲವು ಗಂಭೀರ ಕಾಯಿಲೆಗಳಿಗೆ ಕಾರಣವಾಗಿದ್ದು, ವಿಶೇಷವಾಗಿ ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ಉಂಟಾಗುವ ಪ್ರಮುಖ ಕಾರಣಗಳಲ್ಲಿ ಎಚ್‌ಪಿವಿ ಸೋಂಕು ಒಂದಾಗಿದೆ ಈ ವೈರಸ್‌ನಿಂದ ರಕ್ಷಣೆ ಪಡೆಯಲು ಲಸಿಕೆ ನೀಡಲಾಗುತ್ತದೆ ಎಂದರು. ಲಸಿಕೆ ಹಾಕುವುದರಿಂದ ಗರ್ಭಕಂಠದ ಕ್ಯಾನ್ಸರ್, ಗರ್ಭಕಂಠದ ಬಾಯಿಯ ಸೋಂಕುಗಳು ಕೆಲವು ರೀತಿಯ ಗಂಟಲು ಮತ್ತು ಜನನಾಂಗ ಕ್ಯಾನ್ಸರ್, ಜನನಾಂಗದ ನರಹುಲಿಗಳ ವಿರುದ್ಧ ರಕ್ಷಣೆ ಸಿಗುತ್ತದೆ. ಇದನ್ನು ಮಗುವಿಗೆ ಒಂದು ಡೋಸ್ ಮಾತ್ರ ನೀಡಲಾಗುವುದು. ಯಾವುದೇ ಅಡ್ಡ ಪರಿಣಾಮ ಇರುವುದಿಲ್ಲ ಎಂದು ಅವರು ವಿವರಿಸಿದರು. ಗುತ್ತಲ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಮಹೇಶ ಹಾವನೂರ, ಡಾ.ವಿದ್ಯಾ ಅನಂತರಡ್ಡಿ, ಡಾ.ದೀಪ್ತಿ ಮಮದಾಪುರ, ಡಾ.ವಿನಾಯಕ ಕವಳಾಸ್ತ ಹಿರೇಮಠ, ಪಪಂ ಉಪಾಧ್ಯಕ್ಷ ಪರಶುರಾಮ ಯಲಗಚ್ಚ, ಸ್ಥಾಯಿ ಸಮಿತಿ ಅಧ್ಯಕ್ಷ ಪ್ರದೀಪ ಸಾಲಗೇರಿ, ಜನ ಸಮಿತಿ ಸದಸ್ಯ ಶಿವಯೋಗಿ ಹಾಲಗಿ, ರಬಿಜ್ಜ ಜ್ಯನ್, ರೇಖಾ ನಾಯ್ಕ, ಹನುಮಂತ ಆಗಸಿಬಾಗಿಲು ಸೇರಿದಂತೆ ಆಶಾ ಕಾರ್ಯಕರ್ತೆಯರು, ಸಿಬ್ಬಂದಿ ಮತ್ತು ಮಕ್ಕಳು ಹಾಗೂ ತಾಯಂದಿರು ಇದ್ದರು.



ಗುತ್ತಲ: ಪಟ್ಟಣದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಡೆದ ಎಚ್‌ಪಿವಿ ಲಸಿಕಾ ಅಭಿಯಾನವನ್ನು ತಾಲೂಕು ವೈದ್ಯಾಧಿಕಾರಿ ಡಾ. ಪ್ರಭಾಕರ ಕುಂದೂರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಗುತ್ತಲ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಮಹೇಶ ಹಾವನೂರ, ಡಾ.ವಿದ್ಯಾ ಅನಂತರಡ್ಡಿ, ಡಾ.ದೀಪ್ತಿ ಮಮದಾಪುರ, ಡಾ.ವಿನಾಯಕ ಕವಳಾಸ್ತ ಹಿರೇಮಠ, ಪಪಂ ಉಪಾಧ್ಯಕ್ಷ ಪರಶುರಾಮ ಯಲಗಚ್ಚ ಇದ್ದರು.

ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅಭಯ

ಜಿಲ್ಲೆಯಲ್ಲಿ ಎಲ್‌ಪಿಜಿ ಸಮಸ್ಯೆ ಇಲ್ಲ, ಆತಂಕ ಬೇಡ

ಹಾವೇರಿ: ಎಲ್‌ಪಿಜಿ ಸರಬರಾಜಿನ ಬಗ್ಗೆ ಸಾರ್ವಜನಿಕರು ಯಾವುದೇ ರೀತಿಯ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ಜಿಲ್ಲೆಯಲ್ಲಿ ಎಲ್.ಪಿ.ಜಿ ಸಮಸ್ಯೆ ಇರುವುದಿಲ್ಲ ಎಂದು ಡಿಸಿ ಡಾ.ವಿಜಯಮಹಾಂತೇಶ ದಾನಮ್ಮನವರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಗೃಹಬಳಕೆ ಸಿಲಿಂಡರ್‌ಗಳ ಬಗ್ಗೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಜಿಲ್ಲೆಯ ಗ್ಯಾಸ್ ಏಜೆನ್ಸಿ ಮಾಲೀಕರ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲಾಡಳಿತವು ತೈಲ ಕಂಪನಿಯ ಅಧಿಕಾರಿಗಳೊಂದಿಗೆ (IOC, BPC, HPC) ಸಭೆ ನಡೆಸಿ ಗೃಹ ಬಳಕೆಯ ಎಲ್‌ಪಿಜಿ ಸಿಲೆಂಡರ್‌ಗಳ ಲಭ್ಯತೆ ಬಗ್ಗೆ ಮಾಹಿತಿ ಪಡೆದುಕೊಂಡಿದ್ದು, ಸಮಸ್ಯೆ ಇಲ್ಲದಿರುವ ಬಗ್ಗೆ, ತೈಲ ಕಂಪನಿಯ ಅಧಿಕಾರಿಗಳಿಂದ ಖಾತ್ರಿ ಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ 4,56,725 ಗ್ರಾಹಕರಿದ್ದು, ಈ ಪೈಕಿ ಐಒಸಿ-67,837, ಬಿಪಿಸಿ-37936 ಎಚ್‌ಪಿಸಿ-3,50,952 ಗ್ರಾಹಕರಿದ್ದು, ಪ್ರಸ್ತುತ ದೇಶೀಯ ಎಲ್‌ಪಿಜಿ ದಾಸ್ತಾನು ಇದ್ದು, ಜಿಲ್ಲೆಯ ಗ್ರಾಹಕರಿಗೆ ಎಲ್‌ಪಿಜಿ ಸರಬರಾಜಿನ ಬಗ್ಗೆ ಯಾವುದೇ ರೀತಿಯ ಆತಂಕ ಇಲ್ಲ, ಗ್ರಾಹಕರು ಆತಂಕದಲ್ಲಿ ತುರ್ತು ಅನಗತ್ಯ ಬುಕ್ಕಿಂಗ್ ಮಾಡದೇ, ಕೃತಕ ಬೇಡಿಕೆ ಸೃಷ್ಟಿಯಾಗದಂತೆ ಸಮರ್ಪಕವಾಗಿ ಬಳಕೆ ಮಾಡಲು ಹಾಗೂ ಸಮತೋಲನ ಕಾಪಾಡಲು ಕೋರಲಾಗಿದೆ.

ಗೃಹಬಳಕೆಯ ಸಿಲಿಂಡರ್ ಬುಕ್ಕಿಂಗ್‌ಗೆ ನಗರ ಪ್ರದೇಶದಲ್ಲಿ 25 ದಿನಕ್ಕೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ 45 ದಿನಗಳವರೆಗೆ ಕಂಪನಿ ಅವಕಾಶ ನೀಡಿದೆ. ಪ್ರಸ್ತುತ ಕೊಲ್ಲಿ ರಾಷ್ಟದ ಯುದ್ಧದ ಪರಿಣಾಮವಾಗಿ ಉದ್ಭವಿಸಿರುವ ಎಲ್‌ಪಿಜಿ ಸರಬರಾಜು ಬಗ್ಗೆ ಸಮರ್ಪಕವಾಗಿ ಪರಿಹಾರ ಕಂಡುಕೊಳ್ಳುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಅತ್ಯಂತ ಮಹತ್ವದ ಕ್ರಮ ಕೈಗೊಂಡಿದೆ. ಗ್ರಾಹಕರಿಗೆ ಏಜೆನ್ಸಿಯಲ್ಲಿ ನೇರವಾಗಿ ಬುಕ್ಕಿಂಗ್ ಮಾಡಲು ಅವಕಾಶವಿಲ್ಲ. ಪರ್ಯಾಯವಾಗಿ ಐಒಸಿ, ಬಿಪಿಸಿ ಮತ್ತು ಎಚ್‌ಪಿ ಕಂಪನಿಗಳಲ್ಲಿ ಗ್ರಾಹಕರು ಈ ಕೆಳಗಿನಂತೆ ಬುಕ್ಕಿಂಗ್ ಮಾಡಬಹುದಾಗಿದೆ. ಸಾಮಾನ್ಯವಾಗಿ Miss call (Registered Mobil Number) ಮೂಲಕ ಬುಕಿಂಗ್ ಮಾಡುತ್ತಿದ್ದು ಪರ್ಯಾಯವಾಗಿ Company app (HP Pay, Indian Oil One App, Hello BPC), Company portal, Whats app, IVRS, BBPS, SMS ಪ್ಯಾಟ್ ಫಾರಂಗಳನ್ನು ಬಳಸಬಹುದಾಗಿದೆ.

ಎಲ್‌ಪಿಜಿ ಸಿಲೆಂಡರ್‌ಗಳ ಬಗ್ಗೆ ಸಮಸ್ಯೆ ಕಂಡು ಬಂದಲ್ಲಿ ತಹಶೀಲ್ದಾರ ಕಚೇರಿಗಳಲ್ಲಿ ಕಂಟ್ರೋಲ್ ರೂಮ್‌ಗಳನ್ನು ತೆರೆಯಲಾಗಿದ್ದು, ಈ ಕಂಟ್ರೋಲ್ ರೂಮ್ ದೂರವಾಣಿಗೆ ಕರೆ ಮಾಡಬಹುದಾಗಿದೆ. ಸಿಲೆಂಡರ್‌ಗಳನ್ನು ಸಾಗಾಣಿಕೆ ಮಾಡುವ ವಾಹನಗಳು ಮತ್ತು ಸಿಬ್ಬಂಧದಿಗಳ ಕರ್ತವ್ಯಕ್ಕೆ ಅಡ್ಡಿಪಡಿಸುವಂತಹ ಪ್ರಕರಣಗಳು ಕಂಡುಬಂದಲ್ಲಿ ಕಾನೂನು ಪ್ರಕಾರ ಕ್ರಮ ಜರುಗಿಸಲಾಗುತ್ತದೆ ಎಂದು ಎಚ್ಚರಿಸಿದರು. ಸಭೆಯಲ್ಲಿ ಆಹಾರ ಇಲಾಖೆ ಉಪನಿರ್ದೇಶಕ ಮಂಜುನಾಥ ಡಿ.ಜೆ., ಡಿಎಸ್‌ಡಬ್ಲ್ಯೂ, ಎಸ್ಸೆಇ, ಎಸ್ಟಿ, ಬಿಸಿಎಂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಅಕ್ಷರ ದಾಸೋಹ ಅಧಿಕಾರಿಗಳು, ಜಿಲ್ಲೆಯ ಗ್ಯಾಸ್ ಏಜೆನ್ಸಿ ಮಾಲೀಕರು, ಸೇಲ್ಸ್ ಅಧಿಕಾರಿಗಳು ಇತರರಿದ್ದರು ಹಾಗೂ ಜಿಲ್ಲೆಯ ತಹಶೀಲ್ದಾರರು ವಿಡಿಯೋ ಕಾನ್ಫರೆನ್ಸ್ ಮೂಲಕ ಹಾಜರಾಗಿದ್ದರು.



ಸಂಪರ್ಕಿಸಿ

ಕೆಳಕಂಡ ಆಹಾರ ನಿರೀಕ್ಷಕರು ಶಿರಸ್ತೇದಾರರಾದ ಮಾಲತೇಶ ಮೇಗಳಮನಿ, ಬ್ಯಾಡಗಿ 8310709346, ರಾಧಾ ರಾವಳ, ಬ್ಯಾಡಗಿ-9739507496, ಮಾರುತಿ ಚೋಟಣ್ಣನವರ ಹಾನಗಲ್ಲ-9448637558, ಎಂ.ಎಫ್. ಬಿಂಗಿ, ಹಾನಗಲ್-9741820763, ಎಂ.ಎಸ್. ಪಾಟೀಲ, ಹಾವೇರಿ 9900331685, ಶಿವರಾಜ ಕಟಗಿ ಹಾವೇರಿ 9844218717, ಎಸ್.ಆರ್. ಅಪ್ಪಿನಕೊಪ್ಪ, ಹಿರೇಕೆರೂರ-7975775467, ಚನಬಸವ ಕಾಯಕದ, ಹಿರೇಕೆರೂರ-7795435693, ಯು. ಎನ್. ಸೂರಣಗಿ, ರಾಣೇಬೆನ್ನೂರು -9916071835, ಎಂ.ಸಿ. ಮೋಟಗಿ ರಾಣೇಬೆನ್ನೂರು- 9731767468, ನಟರಾಜ ನಂದಿಹಳ್ಳಿ, ರಾಣೇಬೆನ್ನೂರು -8197388997, ಸ್ವಿವನ್ ಅಂಗಡಿ, ರಾಣೆಬೆನ್ನೂರು-9620019132, ಡಿ.ಎಂ. ಪಾಟೀಲ, ಸವಣೂರು-9986786466, ಶಾಂತಕುಮಾರ ಯತ್ನಳ್ಳಿ, ಶಿಗ್ಗಾಂವ -9448267693, ಚಂದ್ರಶೇಖರ ಹೆದ್ದಳ್ಳಿ, ರಟ್ಟಿಹಳ್ಳಿ-9901791444, ಹಾಗೂ ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರ ದೂರವಾಣಿ ಸಂಖ್ಯೆ 08375-249077 ಸಂಪರ್ಕಿಸಬಹುದು.

ವಿವಿಧ ಕಾಮಗಾರಿಗಳಿಗೆ ಶಾಸಕ ಮಾನೆ ಭೂಮಿಪೂಜೆ

ಹಾನಗಲ್ಲ: ಗ್ರಾಮೀಣ ಪ್ರದೇಶದ ಅಭಿವೃದ್ಧಿಯೇ ರಾಜ್ಯದ ಅಭಿವೃದ್ಧಿಗೆ ಆಧಾರವಾಗಿದೆ. ಸಮರ್ಪಕ ರಸ್ತೆ, ಕುಡಿಯುವ ನೀರು, ವಿದ್ಯುತ್, ಶಿಕ್ಷಣ ಸೇರಿದಂತೆ ಮೂಲಭೂತ ಸೌಲಭ್ಯ ಹೆಚ್ಚಿಸಲು ಗಮನ ಕೇಂದ್ರೀಕರಿಸಲಾಗಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಕೂಸನೂರು ಗ್ರಾಪಂ ವ್ಯಾಪ್ತಿಯಲ್ಲಿ ಒಟ್ಟು 91 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು ಮನೆ, ಮನೆಗೆ ಗಂಗೆ ಯೋಜನೆ ಕಾರ್ಯಗತಗೊಳಿಸಲಾಗುತ್ತಿದೆ.

ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಸುಧಾರಣೆಗೆ ಒತ್ತು ನೀಡಲಾಗಿದೆ ಎಂದು ವಿವರಿಸಿದ ಅವರು ಸಮರ್ಪಕ ಪೂರೈಕೆಗೆ ವಿದ್ಯುತ್ ಲಭ್ಯವಿದ್ದರೂ ಸಹ ವಿದ್ಯುತ್ ಗ್ರಿಡ್, ಲೈನ್ ವ್ಯವಸ್ಥೆ ಸಮರ್ಪಕವಿಲ್ಲದ ಕಾರಣ ಸಮಸ್ಯೆ ಉಂಟಾಗುತ್ತಿದ್ದು, ವಿದ್ಯುತ್ ಗ್ರಿಡ್‌ಗಳನ್ನು ಮೇಲ್ದರ್ಜೆಗೇರಿಸಲು ಕಾಳಜಿ ವಹಿಸಲಾಗಿದೆ. ಒಟ್ಟಾರೆ ಸರ್ವತೋಮುಖ ಅಭಿವೃದ್ಧಿಯ ಜೊತೆಗೆ ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಜನಕಲ್ಯಾಣಕ್ಕೂ ಆದ್ಯತೆ ನೀಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೂಸನೂರು ಗ್ರಾಮದಲ್ಲಿ 51 ಲಕ್ಷ ರೂ., ಕನ್ನೇಶ್ವರ ಮತ್ತು ವಾಸನ ಗ್ರಾಮದಲ್ಲಿ ತಲಾ 20 ಲಕ್ಷರೂ. ವೆಚ್ಚದಲ್ಲಿ ರಸ್ತೆಗಳ ಅಭಿವೃದ್ಧಿ, ಸಿಸಿರಸ್ತೆ, ಚರಂಡಿ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಭಾಷಾಸಾಬ ಕೋಟಿ, ಹನುಮಂತಪ್ಪ ಆಲೂರ, ಅಲ್ತಾಹಿರ್ ಕಳವಿ, ಮಂಜು ಆಲದಕಟ್ಟಿ, ಕುಮಾರ ಗದ್ದಿ, ಶಿವಪುತ್ರಪ್ಪ ಅಕ್ಕಿವಳ್ಳಿ, ವಿರುಪಾಕ್ಷಪ್ಪ ಸುರಳೇಶ್ವರ, ಪರಸಣ್ಣ ಮುದಿಯಣ್ಣನವರ, ಚನ್ನಬಸಪ್ಪ ಬಂಕೊಳ್ಳಿ, ಲಕ್ಷಣ ಹರಿಜನ, ಯಮುನೇಶಪ್ಪ ಈಳಿಗೇರ, ವಸಂತ ವೆಂಕಟಾಪೂರ, ನಿಜಗುಣಿ ಮಳೆಣ್ಣನವರ, ಜಯಮ್ಮ ಮಳೆಣ್ಣನವರ, ಉಮೇಶ ತಳವಾರ, ಅಜ್ಜಪ್ಪ ಕಲ್ಲಾದಿ, ರಾಮಚಂದ್ರಣ್ಣ ತಳವಾರ, ಅಡಿವೆಪ್ಪ ಕಲ್ಲಾದಿ ಇದ್ದರು.

> ಈ ಬಾರಿ ಗ್ರಾಮೀಣ ಪ್ರದೇಶಗಳಲ್ಲಿನ ರಸ್ತೆಗಳ ಅಭಿವೃದ್ಧಿ, ಸಿಸಿ ರಸ್ತೆ ನಿರ್ಮಾಣಕ್ಕೆ ಹೆಚ್ಚು ಅನುದಾನ ದೊರಕಿಸಲಾಗಿದೆ. ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗದಂತೆ ಬಹು ಗ್ರಾಮ ನದಿ ನೀರು ಸರಬರಾಜು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.
> ■ ಶ್ರೀನಿವಾಸ ಮಾನೆ, ಶಾಸಕ



ಸಂಗೀತ ಕ್ಷೇತ್ರಕ್ಕೆ ಪುಟ್ಟರಾಜರ ಕೊಡುಗೆ ಅಪಾರ

ಹಾವೇರಿ: ಪಂಡಿತ ಡಾ.ಪುಟ್ಟರಾಜ ಗವಾಯಿಗಳು ಭೌತಿಕವಾಗಿ ನಮ್ಮೊಂದಿಗೆ ಇಲ್ಲವೆನ್ನುವ ವಾಸ್ತವದ ಮಧ್ಯೆಯೂ ಸ್ಮೃತಿಪಟಲದಲ್ಲಿ ಅವರ ಬದುಕಿನ ಶೃತಿ-ಲಯಗಳು ಗುಣಗುಡುತ್ತವೆ. ವೀರೇಶ್ವರ ಪುಣ್ಯಾಶ್ರಮದ ಮೂಲಕ ತಮ್ಮನ್ನು ಜನಸೇವೆಗೆ ಅರ್ಪಿಸಿಕೊಂಡವರು ಎಂದು ಜಗದೀಶ ಚಕ್ರಸಾಲಿ ಹೇಳಿದರು.

ತಾಲೂಕಿನ ಕರ್ಜಗಿ ಗ್ರಾಮದ ಸರ್ಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಪಂಡಿತ ಪುಟ್ಟರಾಜ ಗವಾಯಿಗಳ ಜನ್ಮ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಗೆ ಪುಟ್ಟರಾಜರ ಕುರಿತು ಹಮ್ಮಿಕೊಂಡಿದ್ದ ಪ್ರಬಂಧ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಭಾಷಣ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದರು.

ಪಂಡಿತ ಪುಟ್ಟರಾಜ ಗವಾಯಿಗಳ ಅಭಿಮಾನಿ ಬಳಗದ ಅಧ್ಯಕ್ಷರಾದ ಜಿ.ಎಂ. ಓಂಕಾರಣ್ಣನವರ ಮಾತನಾಡಿ, ಪಂಡಿತ ಪುಟ್ಟರಾಜರು ಸಂಗೀತ, ಸಾಹಿತ್ಯವನ್ನು ತಮ್ಮ ಎರಡು ಕಣ್ಣುಗಳಂತೆ ಬಳಸಿಕೊಂಡರು, ತ್ರಿಭಾಷಾ ಪಂಡಿತರು, ಅಂಧತ್ವದ ಕತ್ತಲೆಯಲ್ಲಿ ಸಂಗೀತ-ಸಾಹಿತ್ಯದ ಬೆಳದಿಂಗಳು ಹರಡಿದವರು. ಬಡ ಅಂಧ-ಅನಾಥರ ಬಾಳಿಗೆ ಕಣ್ಮಣಿಯಾದವರು ಎಂದು ಸ್ಮರಿಸಿದರು. ಅಧ್ಯಕ್ಷತೆ ವಹಿಸಿದ್ದ ಜಯಶ್ರೀ ಕೊರಗರ್ ಮಾತನಾಡಿ, ಪಂಚಾಕ್ಷರಿ ಗವಾಯಿಗಳು ಕಂಡ ಕನಸಿನ ಹಂದರಕ್ಕೆ, ನನಸಿನ ಹೂಬಳ್ಳಿ ಹಬ್ಬಿಸಿದವರು. ಸಾವಿರಾರು ಮಕ್ಕಳಿಗೆ ತಮ್ಮ ವೀರೇಶ್ವರ ಪುಣ್ಯಾಶ್ರಮದಲ್ಲಿ ಆಶ್ರಯ ನೀಡಿ ಅವರ ಬಾಳಿಗೆ ಬೆಳಕು ನೀಡಿದವರು ಪುಟ್ಟರಾಜರು ಎಂದು ಹೇಳಿದರು.

ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದ ಇರ್ಫಾನ ಬಾಲೇಹೊಸೂರ, ಸುಬ್ರಹ್ಮಣ್ಯ ಕುನ್ನೂರ, ವೀರೇಶ ಸುಣಗಾರ, ಆದಿತ್ಯ ಸುಣಗಾರ, ಪ್ರಮೋದ ವಾಳದ, ಆಕಾಶ ಬಳ್ಳಾರಿ, ಚಂದನ ಮೊಗರೆ, ಚಂದನ ಬಿದರಗಡ್ಡಿ, ವರುಣ ಬಡಿಗೇರ, ಫಕ್ಕೀರೇಶ್ ಅಣ್ಣಿ, ಅಹ್ಮದರಝಾ ನದಾಫ ಮುಂತಾದ ಮಕ್ಕಳಿಗೆ ಫಲಕ, ಪದಕ, ಪ್ರಶಸ್ತಿ ಹಾಗೂ ಬಹುಮಾನ ನೀಡಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಫಕ್ಕೀರೇಶ ಸುಣಗಾರ, ಫಕ್ಕೀರೇಶ ಕಲಿವಾಳ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಪ್ರಾರ್ಥನೆಯನ್ನು ಶಾಲಾ ಮಕ್ಕಳು ಮಾಡಿದರು. ಗೀತಾ ಕ್ವಾಟಿ ಸ್ವಾಗತಿಸಿದರು, ಶಿಕ್ಷಕಿ ಸರೋಜಾ ಅಗಡಿ ನಿರ್ವಹಿಸಿದರು.



ಧಾರ್ಮಿಕತೆಯ ಸನ್ಮಾರ್ಗದಲ್ಲಿ ಸಾಗಿ: ಶ್ರೀಗಳು

ರಾಣೇಬೆನ್ನೂರ: ಸತ್ಕಾರ್ಯಗಳಿಗೆ ದಾನ, ಧರ್ಮ ಮಾಡಬೇಕು ಇದರಿಂದ ಸಂಪತ್ತು ವೃದ್ಧಿಯಾಗುತ್ತದೆ. ಪರೋಪಕಾರದಂತಹ ಗುಣಗಳನ್ನು ಜೀವನದಲ್ಲಿ ರೂಢಿಸಿಕೊಂಡು, ಧಾರ್ಮಿಕತೆಯ ಸನ್ಮಾರ್ಗದಲ್ಲಿ ಸಾಗಬೇಕು. ಎಲ್ಲವನ್ನೂ ಸಹಿಸಿಕೊಂಡವನು ದೇವರಾಗುತ್ತಾನೆ. ಅಂತಹ ಗುಣಗಳನ್ನು ಶ್ರೀ ಸಿದ್ಧಾರೂಢರು ಹೊಂದಿದ ಪರಿಣಾಮವೇ ಅವರು ದೇವರಾದರು. ಅಂತಹ ಸಿದ್ಧಾರೂಢರ ಜೀವನದ ಚರಿತ್ರೆಯನ್ನು ಮಕ್ಕಳಿಗೆ ಪರಿಚಯಿಸಿ ಮಕ್ಕಳಲ್ಲಿಯೂ ಧಾರ್ಮಿಕತೆಯ ಮನೋಭಾವನೆಯನ್ನು ರೂಢಿಸಿದಾಗ ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯ ಎಂದು ಇಂಚಲದ ಸಾಧು ಸಂಸ್ಥಾನ ಮಠದ ಡಾ. ಶಿವಾನಂದಭಾರತಿ ಮಹಾಸ್ವಾಮಿಜಿ ಹೇಳಿದರು.

ತಾಲೂಕಿನ ಸುಕ್ಷೇತ್ರ ಖಂಡೇರಾಯನಹಳ್ಳಿಯ ಶ್ರೀ ಸಿದ್ಧಾರೂಢ ಮಠದಲ್ಲಿ 32ನೇ ವೇದಾಂತ ಪರಿಷತ್ತು, ಯಾತ್ರಿ ನಿವಾಸದ ಉದ್ಘಾಟನೆ, ನೂತನವಾಗಿ ನಿರ್ಮಾಣಗೊಂಡಿರುವ ರಥದ ರಥೋತ್ಸವ, ಸರ್ವಧರ್ಮ ಸಾಮೂಹಿಕ ವಿವಾಹ, ಡಾ. ಶಿವಾನಂದಭಾರತಿ ಮಹಾಸ್ವಾಮಿಗಳ 86ನೇ ವರ್ಷದ ಜಯಂತ್ಯೋತ್ಸವದ ಅಂಗವಾಗಿ ನಡೆದ ಸಮಾರಂಭದಲ್ಲಿ ಆಶೀರ್ವಚನ ನೀಡಿ, ಜ್ಯಾತ್ಯಾತೀತ ತತ್ವ ಸಿದ್ಧಾಂತದಲ್ಲಿ ಸರ್ವರೂ ಬೆಳೆಯಬೇಕು. ಪ್ರತಿಯೊಬ್ಬರ ಹೃದಯದಲ್ಲಿ ದೇವರನ್ನು ಕಾಣಬೇಕು ಎಂದು ಸಮಾಜಕ್ಕೆ ಸನ್ಮಾರ್ಗದ ದಾರಿಯನ್ನು ತೋರಿಸಿದವರು ಶ್ರೀಗುರು ಸಿದ್ಧಾರೂಢರು. ಅವರ ಆದರ್ಶಗಳನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ಸಾಗಿದಾಗ ನೆಮ್ಮದಿಯ ಬದುಕು ಕಾಣಲು ಸಾಧ್ಯ ಎಂದರು. ಹದಡಿಯ ಚಂದ್ರಗಿರಿಮಠದ ಮುರುಳೀಧರ ಸ್ವಾಮೀಜಿ ಮಾತನಾಡಿದರು. ಉಪಸಭಾಪತಿ ರುದ್ರಪ್ಪ ಲಮಾಣಿ, ಸೋಮಣ್ಣ ಬೇವಿನಮರದ ಮಾತನಾಡಿದರು. ಶ್ರೀಮಠದ ಪೀಠಾಧಿಪತಿ ಗುರುನಾಗರಾಜಾನಂದ ಸ್ವಾಮೀಜಿ, ಹಂಪಿ ಹೇಮಕೂಟ ಡಾ. ವಿದ್ಯಾನಂದಭಾರತಿ ಶ್ರೀಗಳು, ದಾವಣಗೇರಿಯ ಜಡಿಮಠದ ಡಾ. ಶಿವಾನಂದ ಶ್ರೀಗಳು, ಇಂಚಲದ ಪೂರ್ಣಾನಂದ ಶ್ರೀಗಳು, ಹುಬ್ಬಳ್ಳಿ ಸಚ್ಚಿದಾನಂದಶ್ರೀಗಳು, ಹಡಗಿನಾಳದ ಮಲ್ಲೇಶ ಶರಣರು, ಮಲ್ಲಾಪುರ ಗಾಳೇಶ್ವರಮಠ ಚಿದಾನಂದಶ್ರೀಗಳು, ಚಿತ್ರದುರ್ಗ ದ ಬಸವ ಸೇವಾಲಾಲ ಶ್ರೀಗಳು, ಕಬೀರಾನಂದ ಆಶ್ರಮದ ಶಿಲಿಂಗಾ ನಂದ ಶ್ರೀಗಳು, ದುರಿತ ಕರ್ಮವ ಗೊಲ್ಲದಿರು ಪುಣ್ಯವನೇ ಮಾಡು ವಿಷಯ ಕುರಿತು ವೇದಾಂತ ಉಪದೇಶ ನೀಡಿದರು. ಈ ವೇಳೆ 8 ಜೋಡಿ ನವದಾಂಪತ್ಯಕ್ಕೆ ಪಾದಾರ್ಪಣೆ ಮಾಡಿದರು. ಮಂಜನಗೌಡ ಪಾಟೀಲ, ಪ್ರಕಾಶ ಚನ್ನಗೌಡ್ರ, ಶ್ರೀಮಠದ ಅಧ್ಯಕ್ಷ ಫಕ್ಕೀರಪ್ಪ ಗೌಡ್ರ, ಧರ್ಮದರ್ಶಿಗಳಾದ ಜನಾರ್ಧನ ಕಡೂರ, ಗುಡ್ಡಪ್ಪ ಹೆಡಿಯಾಲ, ಶಿವಣ್ಣ ಬಣಕಾರ, ಅರುಣಸ್ವಾಮಿ ಹಿರೇಮಠ, ಡಾಕೇಶ ಲಮಾಣಿ, ನಾಗಪ್ಪ ದೊಡ್ಮನಿ ಮತ್ತಿತರರು ಇದ್ದರು.



ಮಾ.24ಕ್ಕೆ ದುರ್ಗಾದೇವಿ, ವೀರಭದ್ರೇಶ್ವರ ಜಾತ್ರಾ ಮಹೋತ್ಸವ

ಬ್ಯಾಡಗಿ: ಪಟ್ಟಣದ ಗಾಂಧಿ ನಗರದಲ್ಲಿರುವ ದುರ್ಗಾದೇವಿ ಹಾಗೂ ವೀರಭದ್ರೇಶ್ವರ ದೇವಸ್ಥಾನದ ಪ್ರಥಮ ವರ್ಷದ ಜಾತ್ರಾ ಮಹೋತ್ಸವ ಮಾ.24ರಂದು ನಡೆಯಲಿದೆ. ಅಂದು ಬೆಳಗ್ಗೆ ಪ್ರಾತಃಕಾಲ 5ಗಂಟೆಗೆ ವೀರಭದ್ರೇಶ್ವರನಿಗೆ ರುದ್ರಾಭಿಷೇಕ. ಮತ್ತು ಬೆಳಗ್ಗೆ 8 ಗಂಟೆಗೆ ಸಕಲ ವಾದ್ಯ ವೈಭವಗಳೊಂದಿಗೆ ಗುಗ್ಗಳ ಕಾರ್ಯಕ್ರಮ. ಮಧ್ಯಾಹ್ನ 12.30 ಕ್ಕೆ ಅನ್ನ ಸಂತಾರ್ಪಣೆ ಮತ್ತು ಸಂಜೆ 5 ಗಂಟೆಗೆ ದುರ್ಗಾದೇವಿ ಮೆರವಣಿಗೆ ಸಕಲ ವಾದ್ಯ ವೈಭವಗಳೊಂದಿಗೆ ಬಹು ವಿಜೃಂಭಣೆಯಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಂತರ ದೇವಸ್ಥಾನ ತಲಪುವುದು. ಪಟ್ಟಣದ ಎಲ್ಲ ಸದ್ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿ ತನು ಮನದಿಂದ ಸೇವೆ ಸಲ್ಲಿಸಿ ವೀರಭದ್ರೇಶ್ವರ ಹಾಗೂ ದುರ್ಗಾದೇವಿಯ ಕೃಪೆಗೆ ಪಾತ್ರರಾಗ ಬೇಕೆಂದು ಸಮಿತಿಯ ಸದಸ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮಹಾತ್ಮರನ್ನು ಸ್ಮರಿಸುವುದು ನಮ್ಮೆಲರ ಭಾಗ್ಯ: ಶ್ರೀಗಳು

ಶಿಗ್ಗಾವಿ: ಸತತ 9 ದಿನಗಳ ಕಾಲ ತಡರಾತ್ರಿವರೆಗೂ ಕುಳಿತು ಜ್ಞಾನದ ಪ್ರವಚನ ಕೇಳಿದ ಶಿಗ್ಗಾವಿಯ ಭಕ್ತರು ಇಂದಿನ ಕಾಲಕ್ಕೆ ಮಾದರಿಯಾಗಿದ್ದಾರೆ ಎಂದು ಧಾರವಾಡ ಮುರುಘಾಮಠದ ಡಾ. ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಪಟ್ಟಣದ ವಿರಕ್ತಮಠದಲ್ಲಿ ದಿ. ಸಂಗನಬಸವ ಶ್ರೀಗಳು ಮತ್ತು ದಿ. ಬಸವಲಿಂಗ ಶ್ರೀಗಳ ಪುಣ್ಯ ಸ್ಮರಣೆ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ 9 ದಿನಗಳ ಶರಣ ಸಂಸ್ಕೃತಿ ಉತ್ಸವ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಸಾಮೂಹಿಕ ವಿವಾಹದಂತಹ ಸಾಮಾಜಿಕ ಕಾರ್ಯಗಳ ಮೂಲಕ ಶ್ರೀಗಳು ಈ ಮಠವನ್ನು ಎಲ್ಲರೂ ಹೆಮ್ಮೆ ಪಡುವಂತಹ ಮಾದರಿ ಕೇಂದ್ರವನ್ನಾಗಿ ಮಾಡಿದ್ದಾರೆ ಎಂದರು. ಬಟಕುರ್ಕಿಯ ಬಸವಲಿಂಗ ಶ್ರೀಗಳು ಮಾತನಾಡಿ, ಮಹನೀಯರು ತಮಗಾಗಿ ಬದುಕದೇ ಸಮಾಜಕ್ಕಾಗಿ ಬದುಕಿದವರು. ಅಂತಹ ಮಹಾತ್ಮರನ್ನು ಸ್ಮರಿಸುವುದು ನಮ್ಮೆಲ್ಲರ ಭಾಗ್ಯ ಎಂದು ಹೇಳಿದರು. ಹಾವೇರಿ ಹೊಸಮಠದ ಬಸವ ಶಾಂತಲಿಂಗ ಶ್ರೀಗಳು, ಗೋಕಾಕ ಶೂನ್ಯಸಂಪಾದನಮಠದ ಮುರಘೇಂದ್ರ ಶ್ರೀಗಳು, ಪ್ರವಚನ ಕಾರರಾದ ಸದ್ಗುರು ಸಮರ್ಥ ಡಾ.ಎ.ಸಿ.ವಾಲಿ ಮಹಾ ರಾಜರು ಮಾತನಾಡಿದರು.

ಸಂಗನಬಸವ ಶ್ರೀಗಳು ಸಾನಿಧ್ಯ ವಹಿಸಿದ್ದರು. ಬಸವಲಿಂಗ ದೇವರು, ಶಿವಾನಂದ ಮ್ಯಾಗೇರಿ, ಶಶಿಕಾಂತ ರಾಠೋಡ, ಸಿ.ಡಿ. ಯತ್ತಿನಹಳ್ಳಿ, ನಾಗಪ್ಪ ಬೆಂತೂರ, ವಿಶ್ವನಾಥ ಬಂಡಿವಡ್ಡರ, ಬಸವರಾಜ ಹಡಪದ, ಸುಧಾಕರ ದೈವಜ್ಞ ಶಂಭು ಕೇರಿ, ರಮೇಶ ಹರಿಜನ, ಮಾಲತೇಶ ನಾಯ್ಕೋಡಿ, ಡಾ. ಮಲ್ಲೇಶಪ್ಪ ಹರಿಜನ, ಕರಿಯಪ್ಪ ಕಟ್ಟಿಮನಿ, ಈರಣ್ಣ ಅಂಕಲಕೋಟಿ, ಮಾರುತಿ ಕುಂದಗೋಳ, ರವಿ ಕಡಕೋಳ, ಬಸಯ್ಯ ಹಿರೇಮಠ, ಬಸವರಾಜ ಶಿಗ್ಗಾವಿ, ಶರೀಫ ಮಾಕಪ್ಪನವರ, ವೀರೇಶ ಹಿರೇಮಠ, ಹೇಮಂತ ಭಜಂತ್ರಿ, ಪ್ರಭುಗೌಡ ತೆಂಬದಮನಿ, ಶಿವಾನಂದ ಬೆಳಗಲಿ ಸೇರಿದಂತೆ ಭಕ್ತರು ಇದ್ದರು.




ಇಂದಿನಿಂದ ಕಲ್ಲೇದೇವರಲ್ಲಿ ಜಂಗಿ ಕುಸ್ತಿ

ಬ್ಯಾಡಗಿ : ತಾಲೂಕಿನ ಕಲ್ಲೇದೇವರ ಗ್ರಾಮದಲ್ಲಿ ಕಲ್ಮೇಶ್ವರ ಜಾತ್ರಾ ನಿಮಿತ್ಯ ಪ್ರತಿ ವರ್ಷದಂತೆ ಪ್ರಸಕ್ತ ವರ್ಷವೂ ದಿ.ಬಸಪ್ಪ ಪುಟ್ಟಪ್ಪ ಕರಿಯಪ್ಪನವರ ಸ್ಮರಣಾರ್ಥ ಭಾರಿ ಜಂಗೀ ಬಯಲು ಕುಸ್ತಿ ಸ್ಪರ್ಧೆ ಆಯೋಜಿಸಲಾಗಿದೆ.

ಮಾ. 14ರಿಂದ 16ರವರೆಗೆ ಮೂರು ದಿನಗಳ ಕಾಲ ತುರುಸಿನ ಕುಸ್ತಿ ಸೆಣಸಾಟ ನಡೆಯಲಿವೆ. ಮಣ್ಣಿನ ಕುಸ್ತಿ ಆಖಾಡವನ್ನು ಅತ್ಯುತ್ತಮ ವಾಗಿ ಸಿದ್ಧಪಡಿಸಿದ್ದು, ಸುತ್ತಮುತ್ತಲ ತಾಲೂಕು ಸೇರಿದಂತೆ ದೂರದ ಬೆಳಗಾವಿ, ಧಾರವಾಡ ಹಾಗೂ ದಾವಣಗೇರೆ ಜಿಲ್ಲೆಗಳಿಂದಲೂ ಕುಸ್ತಿಪಟುಗಳು ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ.

ಪ್ರತಿ ಕುಸ್ತಿ ಸೆಣಸಾಟದಲ್ಲಿ ಗೆದ್ದವರಿಗೂ ನಗದು ಬಹುಮಾನ ನೀಡಲಾಗುತ್ತದೆ. ಅಲ್ಲದೆ ಮೊದಲ ಮತ್ತು ಎರಡನೇ ದಿನ ಪ್ರಮುಖ ಸ್ಪರ್ಧೆಯಲ್ಲಿ ಗೆದ್ದವರಿಗೆ ತಲಾ ಒಂದು ಬೆಳ್ಳಿ ಕಡಗ ಹಾಗೂ ಕೊನೆಯ ಮತ್ತು ಮೂರನೇ ದಿನದ ಅಂತಿಮ ಸ್ಪರ್ಧೆಯಲ್ಲಿ ಗೆದ್ದವರಿಗೆ ಬೆಳ್ಳಿಯ ಗದೆಯನ್ನು ಬಹುಮಾನವಾಗಿ ನೀಡಲಾಗುತ್ತದೆ.

ಸ್ಪರ್ಧೆಯಲ್ಲಿ ಭಾಗವಹಿಸುವವರು ವಿವರಗಳಿಗೆ ಈ 9740950569, 9972342698, 9900983670 ಮೊ.ನಂ ಗೆ ಸಂಪರ್ಕಿಸಬಹುದಾಗಿದೆ.



ಪದವಿ ವಿದ್ಯಾರ್ಥಿಗಳ ಪರದಾಟ: ಪಠ್ಯಪುಸ್ತಕಕ್ಕಾಗಿ ಆಗ್ರಹ

ಹಾವೇರಿ: ಹಾವೇರಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಪದವಿ ವಿದ್ಯಾರ್ಥಿಗಳಿಗೆ ಒಂದು ತಿಂಗಳು ಕಳೆದರು ಕನ್ನಡ ಭಾಷೆಯ ಬೇಸ್ ಸೆಮಿಸ್ಟರ್ ಪಠ್ಯಪುಸ್ತಕ ವಿಳಂಬ ನೀತಿಯನ್ನು ಖಂಡಿಸಿ, ಕೂಡಲೇ ಪಠ್ಯಪುಸ್ತಕ ಬಿಡುಗಡೆಗೆ ಆಗ್ರಹಿಸಿ ಎಸ್‌ಎಫ್‌ಐ ಕಾರ್ಯಕರ್ತರು ಗಾಂಧಿಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಎದುರು ಪ್ರತಿಭಟನೆ ನಡೆಸಿ ಪ್ರಾಂಶುಪಾಲರಾದ ಡಾ.ಫರ್ಜಾನಾ ಪಠಾಣ ಅವರ ಮೂಲಕ ವಿವಿ ಕುಲಪತಿಗಳಿಗೆ ಮನವಿ ಸಲ್ಲಿಸಿದರು.

ಮುಖಂಡ ಅರುಣ್ ನಾಗವತ್ ಮಾತನಾಡಿ, ಹಾವೇರಿ ವಿವಿ ವ್ಯಾಪ್ತಿಯಲ್ಲಿ ಬರುವ ಬಿಎ, ಬಿಎಸ್ಸಿ, ಬಿಕಾಂ, ಬಿಬಿಎ, ಬಿಸಿಎ ಪದವಿ ವಿದ್ಯಾರ್ಥಿಗಳ ತರಗತಿಗಳು ಪ್ರಾರಂಭವಾಗಿ ಒಂದು ತಿಂಗಳು ಕಳೆದರೂ ಕನ್ನಡ ಪಠ್ಯಪುಸ್ತಕ ಇಲ್ಲದೆ ವಿದ್ಯಾರ್ಥಿಗಳು ಪರದಾಡುವಂತಾಗಿದೆ. ಪಠ್ಯಪುಸ್ತಕದ ವಿಳಂಬದಿಂದ ಉಪನ್ಯಾಸಕರು ಜನರಲ್ ವಿಷಯಗಳ ಬಗ್ಗೆ ಬೋಧನೆ ಮಾಡುತ್ತಿದ್ದಾರೆ. ವಾರ್ಷಿಕ ವೇಳಾಪಟ್ಟಿ ಪ್ರಕಾರವಾಗಿ ಇನ್ನು ಒಂದು ವಾರದ ನಂತರ ಕಿರು ಪರೀಕ್ಷೆ ಆರಂಭವಾಗಬೇಕಿದೆ, ಆದರೆ ಪಠ್ಯಪುಸ್ತಕದ ಪಿಡಿಎಫ್ ಸಹ ಲಭ್ಯವಿಲ್ಲದೆ ಯಾವ ಪಠ್ಯಕ್ರಮ (ಸಿಲೆಬಸ್) ಓದಬೇಕು ಎಂದು ವಿದ್ಯಾರ್ಥಿಗಳು ಗೊಂದಲದಲ್ಲಿದ್ದಾರೆ. ಕೂಡಲೇ ವಿವಿ ಕುಲಪತಿಗಳು, ಕುಲಸಚಿವರು ಅಧಿಕೃತ ಪಠ್ಯಪುಸ್ತಕ (ಸಿಲೆಬೆಸ್) ಬಿಡುಗಡೆ ಮಾಡಿ ಪಠ್ಯಪುಸ್ತಕ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ತಪ್ಪಿದಲ್ಲಿ ವಿವಿ ಮುಂದೆ ಬೃಹತ್ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸಂಘಟನೆಯ ಮುಖಂಡರಾದ ವೈಷ್ಣವಿ, ಹರ್ಷ ಮೊಗಲಕಟ್ಟಿ, ಗೀರಿಜಾ ಎನ್, ಕವಿತಾ ಗೆಜ್ಜಿಹಳ್ಳಿ, ಭೀಮಣ್ಣ ಕಂಬಳಿ, ಪಲ್ಲವಿ ಗೆಜ್ಜಿಹಳ್ಳಿ, ದಿಳ್ಳೆಪ್ಪ, ಪ್ರೇಮಕುಮಾರ್ ಲಮಾಣಿ, ನಾಗರಾಜ, ಆಕಾಶ್ ಮತ್ತಿತರಿದ್ದರು.



ಕಿರುಸುದ್ದಿ

ಇಂದಿನಿಂದ ಮರಡಿಸಿದ್ಧೇಶ್ವರ ಜಾತ್ರಾ ಮಹೋತ್ಸವ

ಗೋಕಾಕ: ತಾಲೂಕಿನ ಹಣಮಾಪೂರ(ಮಕ್ಕಳಗೇರಿ) ಗ್ರಾಮದ ಪ್ರತಿ ಐದು ವರ್ಷಗಳಿಗೊಮ್ಮೆ ಜರುಗುವ ಶ್ರೀ ಮರಡಿಸಿದ್ಧೇಶ್ವರ ಜಾತ್ರಾ ಮಹೋತ್ಸವ ಮಾ.14ರಿಂದ 16ರವರೆಗೆ ವಿಜೃಂಭಣೆಯಿಂದ ಜರುಗಲಿದೆ. ಮಾ.14ರಂದು ಬೆಳಿಗ್ಗೆ ಹನುಮಂತ ದೇವರಿಗೆ ಅಭಿಷೇಕ ಹಾಗೂ ಪೂಜೆ. ಬೆಳಗ್ಗೆ 10ಕ್ಕೆ ಸ್ವಾಮೀಜಿಗಳನ್ನು ಸ್ವಾಗತಿಸುವದು. ಹನುಮಂತ ದೇವರ ದೇವಸ್ಥಾನದಿಂದ ಮರಡಿಸಿದ್ಧೇಶ್ವರ ದೇವಸ್ಥಾನದ ವರೆಗೆ ಸುಮಂಗಲಿಯರಿಂದ ಕುಂಭಮೇಳದ ಭವ್ಯ ಮೆರವಣಿಗೆ. ಸಂಜೆ 5ಗಂಟೆಗೆ ವಿವಿಧ ಗ್ರಾಮಗಳಿಂದ ಆಗಮಿಸುವ ಪಲ್ಲಕ್ಕಿಗಳನ್ನು ಗ್ರಾಮಕ್ಕೆ ಬರಮಾಡಿಕೊಳ್ಳುವುದು. ರಾತ್ರಿ ಡೊಳ್ಳಿನ ವಾಲಗ ಜರುಗಲಿದೆ. ಮಾ.15ರಂದು ಬೆಳಗ್ಗೆ ಮರಡಿಸಿದ್ಧೇಶ್ವರ ದೇವರ ಅಭಿಷೇಕ ಹಾಗೂ ಎಲ್ಲ ದೇವರಿಗೆ ಉಡಿ ತುಂಬುವುದು, ನೈವೇಧ್ಯ ಸಮರ್ಪಿಸುವುದು. ಬೆಳಗ್ಗೆ 8ಕ್ಕೆ ಜೋಡೆತ್ತಿನ ಚಕ್ಕಡಿ ಶರ್ತು, ಜೋಡು ಕುದುರೆ ಬಂಡಿ ಶರ್ತುಗಳು ಸೇರಿ ವಿವಿಧ ಶರ್ತುಗಳು. ಮಧ್ಯಾಹ್ನ 1240ಕ್ಕೆ ಶ್ರೀಗಳ ಸಾನಿಧ್ಯದಲ್ಲಿ ಸಾಮೂಹಿಕ ವಿವಾಹ ಮತ್ತು ಮಹಾಪ್ರಸಾದ ನಡೆಯಲಿವೆ. ಮಾ.16ರಂದು ಬೆಳಗ್ಗೆ 8ಗಂಟೆಗೆ ಎಲ್ಲ ದೇವತೆಗಳ ಪೂಜೆಯೊಂದಿಗೆ ಭಂಡಾರ ಒಡೆಯುವ ಮೂಲಕ ಜಾತ್ರೆ ಸಂಪನ್ನಗೊಳ್ಳಲಿದೆ ಎಂದು ಜಾತ್ರಾ ಕಮಿಟಿಯ ನಿಂಗಪ್ಪ ತೋಳಿನವರ ತಿಳಿಸಿದ್ದಾರೆ.

ಮಾ.16, 17ರಂದು ಮದ್ಯ ಮಾರಾಟ ನಿಷೇಧ

ಬೆಳಗಾವಿ : ನಗರದ ಮಾಳಮಾರುತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಬಸವನ ಕುಡಚಿ ಗ್ರಾಮದಲ್ಲಿ ಶ್ರೀ ಬಸವೇಶ್ವರ ಜಾತ್ರೆಯ ಪ್ರಯುಕ್ತ ಜಾತ್ರೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳಲು ಬಸವಣ ಕುಡಚಿ ಗ್ರಾಮದ ಹದ್ದಿಯಲ್ಲಿ ಬರುವ ಶಿಂದೊಳ್ಳಿ ಕ್ರಾಸ್ ಮತ್ತು ಬಸವನ ಕುಡಚಿ ಗ್ರಾಮದ ಹತ್ತಿರ ಇರುವ ಸರಾಯಿ ಅಂಗಡಿಯನ್ನು ಮಾ. 16 ಹಾಗೂ 17 ರಂದು ಮದ್ಯ ಮಾರಾಟದ ಅಂಗಡಿಗಳು, ಬಾರ್, ರೆಸ್ಟೋರೆಂಟ್ಗಳು, ಕ್ಲಬ್ಗಳು ಬಂದ್ ಇಡುವಂತೆ ಬೆಳಗಾವಿ ನಗರ ಪೊಲೀಸ್ ಆಯುಕ್ತ ಬೊರಸೆ ಭೂಷಣ್ ಗುಲಾಬರಾವ್ ಆದೇಶ ಹೊರಡಿಸಿರುತ್ತಾರೆ. ಸದರಿ ಆದೇಶವನ್ನು ಉಲ್ಲಂಘನೆ ಮಾಡಿದಲ್ಲಿ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಬೆಳಗಾವಿ ನಗರ ಪೊಲೀಸ್ ಆಯುಕ್ತರು ಬೊರಸೆ ಭೂಷಣ್ ಗುಲಾಬರಾವ್ ಹಾಗೂ ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿಗಳು ಆದೇಶದಲ್ಲಿ ತಿಳಿಸಿರುತ್ತಾರೆ.

ಆಸ್ಮಾ ನದಾಫರಿಗೆ ಪ್ರಶಸ್ತಿ



ರಾಯಬಾಗ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಆಸ್ಮಾ ನದಾಫ ಅವರಿಗೆ ಕರುನಾಡ ಹೆಮ್ಮೆಯ ಕನ್ನಡ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಚನ್ನಪಟ್ಟಣದ ವಿಶ್ವಕನ್ನಡ ವಾಗ್ವಿಲಾಸ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಕ ಟ್ರಸ್ಟ್‌ವತಿಯಿಂದ ಕನ್ನಡ ನಾಡು, ನುಡಿ ಹಾಗೂ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಗಳಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಈ ವರ್ಷದ ಪ್ರಶಸ್ತಿಗೆ ಆಸ್ಮಾ ನದಾಫ ಭಾಜನರಾಗಿದ್ದು, ಗಣ್ಯರ ಸಮ್ಮುಖದಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು .ಆಸ್ಮಾ ನದಾಫ ಅವರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಈ ಗೌರವ ನೀಡಿ ಸನ್ಮಾನಿಸಲಾಗಿದೆ. ಹಿರಿಯ ಸಾಹಿತಿಗಳಾದ ಶಶಿಕಲಾ ವಸ್ತ್ರದ, ಟ್ರಸ್ಟ್ ಅಧ್ಯಕ್ಷ ಮಹಮ್ಮದ ರಫಿ ಸೇರಿದಂತೆ ಇತರರು ಇದ್ದರು.

ಬಸಲಿಂಗಪ್ಪ ಬೆಳವಲ ನಿಧನ



ಯರಗಟ್ಟಿ: ಸಮೀಪದ ಸೊಪ್ಪಡ್ಲ ನಿವಾಸಿ ರೆಡ್ಡಿ ಸಮಾಜದ ಹಿರಿಯರು ಬಸಲಿಂಗಪ್ಪ ಬಾಲಪ್ಪ ಬೆಳವಲ (89) ನಿಧನರಾದರು. ಮೃತರ ಪತ್ನಿ, ಇಬ್ಬರು ಪುತ್ರರು ಸೇರಿ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಬೆಳಗಾವಿ : ಇಲ್ಲಿನ ವಡಗಾವಿ, ಭಾರತ ನಗರ ಕಾಸಭಾಗ, ಹಳೇಬೆಳಗಾವಿ ಈ ಭಾಗದಲ್ಲಿ ಸುಮಾರು 40 ಸಾವಿರಕ್ಕೂ ಹೆಚ್ಚು ನೇಕಾರರು ವಾಸಿಸುತ್ತಿದ್ದು, ಶಹಾಪೂರದಿಂದ ವಡಗಾವಿಯ ಸುಮಾರು ಕಿಲೊ ಮೀಟರ ಮುಖ್ಯ ನಕ್ಷೆಗೆ ಯಾವುದೇ ಹೆಸರು ಇರುವುದಿಲ್ಲ. ಈ ಮುಖ್ಯ ರಸ್ತೆಗೆ ಶ್ರೀ ದೇವರ ದಾಸಿಮಯ್ಯರವರ ರಸ್ತೆ ಎಂದು ನಾಮಕರಣ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ರಸಮಂಜರಿ ಕಾರ್ಯಕ್ರಮ ಇಂದು

ಗೋಕಾಕ: ಚಿನ್ನಿರಾಜ ಮಿತ್ರವೃಂದ(ರಿ) ಬೆಂಗಳೂರು ಸಂಸ್ಥೆಯ 40ನೇ ವಾರ್ಷಿಕೋತ್ಸವ ಅಂಗವಾಗಿ ಸಂಘದ ಕಲಾವಿದರ ಸಹಾಯಾರ್ಥ ಸುಮಧುರ ಸಂಗೀತ ಸ್ಟಾರ ನೈಟ್ ರಸಮಂಜರಿ ಕಾರ್ಯಕ್ರಮವನ್ನು ಮಾ. 14ರಂದು ಸಂಜೆ 6.30ಕ್ಕೆ ಜೆಎಸ್ ಎಸ್ ಕಾಲೇಜು ಬಯಲು ರಂಗ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ರಮೇಶ ಜಾರಕಿಹೊಳಿ, ಉದ್ಘಾಟಕರಾಗಿ ಶಾಸಕ ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ, ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಮಹೇಶ ಕುಮಟಳ್ಳಿ, ಕಾರ್ಮಿಕ ಮುಖಂಡ ಅಂಬಿರಾವ ಪಾಟೀಲ, ತಹಶೀಲ್ದಾರ ಡಾ.ಮೋಹನ ಭಸ್ಮೆ, ಡಿವೈಎಸ್‌ಪಿ ರವಿ ನಾಯಿಕ, ಅತಿಥಿಗಳಾಗಿ ಮುಖಂಡ ಭೀಮಗೌಡ ಪೋಲಿಸಗೌಡರ, ನ್ಯಾಯವಾದಿ ಎಮ್ ವಾಯ್ ಹಾರೂಗೇರಿ, ಮಯೂರ ಶಾಲೆಯ ಕಾರ್ಯದರ್ಶಿ ಸದಾನಂದ ಕಲಾಲ, ಡಾ.ಯು ಬಿ ಆಜರಿ, ಡಾ.ಡಿ ಜಿ ಚೌಗಲಾ, ಬಿಜೆಪಿ ನಗರಾಧ್ಯಕ್ಷ ಭೀಮಶಿ ಭರಮನ್ನವರ, ಸಿಪಿಐ ಸುರೇಶ ಬಾಬು ಆಗಮಿಸಲಿದ್ದಾರೆ. ನಾಡಿನ ಖ್ಯಾತ ಕಲಾವಿದರಾದ 17ನೇ ಸರಿಗಮಪ ರನ್ನರ್ ಅಪ್ ಕಂಬದರಂಗಯ್ಯ, ಕಾಮಿಡಿ ಕಿಲಾಡಿಗಳು ಖ್ಯಾತಿಯ ನಯನಾ, ಜ್ಯೂನಿಯರ್ ವಿಷ್ಣುವರ್ಧನ ಜಯಶ್ರೀ ರಾಜು, ಹಾಸ್ಯ ಕಲಾವಿದ ಶರಣು ಯಮನೂರು, ಗಾಯಕಿ ಐಶ್ವರ್ಯಾ, ನೃತ್ಯಗಾರ್ತಿ ಕಲ್ಪನಾರಾಜು ಆಗಮಿಸಿ ಮನರಂಜನೆ ಕಾರ್ಯಕ್ರಮ ನಡೆಸಿ ಕೊಡಲಿದ್ದು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಜಿಐ ಚಿನ್ನಿರಾಜ ಪ್ರಕಟಣೆಯಲ್ಲಿ ಕೋರಿದ್ದಾರೆ.



ಚನ್ನಮ್ಮನ ಕಿತ್ತೂರ : ಸಮೀಪದ ಬೈಲೂರು ಗ್ರಾಮದ ನಿಷ್ಕಲ ಮಂಟಪದ ಹರ್ಡೇಕರ ಮಂಜಪ್ಪ ಸಭಾಭವನದಲ್ಲಿ ಈಚೆಗೆ ''ಅರಿವೇ ಗುರು'' ಶಿವಾನುಭವ ಕಾರ್ಯಕ್ರಮ ನಡೆಯಿತು. ಧಾರವಾಡ ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ, ನಿಜಗುಣಾನಂದ ಸ್ವಾಮೀಜಿ, ಬಸವಾನಂದ ಸ್ವಾಮೀಜಿ, ಗಂಗಾಧರ ಮುಳಕೂರ, ಪುಲಿಕೇಶಿ ಗಿರಿಯಾಲ, ಡಾ.ಜಗದೀಶ ಹಾರುಗೊಪ್ಪ, ಸಂತೋಷ ತುರಮರಿ, ಮಲ್ಲಪ್ಪ ಬೆಣ್ಣಿ, ರವಿಗೌಡ ಪಾಟೀಲ, ಬಾಳಪ್ಪ ಬೆಣಚಿನಮರಡಿ, ರಾಜು ಸಾಂಬ್ರಾಣಿ, ಬಸವಪ್ರಭು ವಾಲಿ ಹಾಗೂ ಇತರರು ಇದ್ದರು.

ಸಚಿವ ಸತೀಶ್ ಜಾರಕಿಹೊಳಿ ಮಾಹಿತಿ

ಬೆಳಗಾವಿ ಜಿಲ್ಲೆಯಲ್ಲಿ ಸದ್ಯಕ್ಕಿಲ್ಲ ಕುಡಿಯುವ ನೀರಿನ ಸಮಸ್ಯೆ

ಬೆಳಗಾವಿ: ಬೆಳಗಾವಿ ಜಿಲ್ಲೆಯಲ್ಲಿ ಎಲ್ಲಿಯೂ ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಇಲ್ಲಾ.



ಕುಡಿಯುವ ನೀರಿನ ಸಮಸ್ಯೆ ಇದ್ದಲ್ಲಿ ಆಯಾ ಗ್ರಾಪಂ ಮಟ್ಟದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸುತ್ತಾರೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು.

ಜಿಲ್ಲೆಯ ಎಲ್ಲಾ ಗ್ರಾಪಂಗಳಲ್ಲಿ ಸ್ವಂತ ನೀರಿನ ಟ್ಯಾಂಕರ್ಗಳಿದ್ದು ಅವುಗಳಿಂದ ನೀರಿನ ವ್ಯವಸ್ಥೆ ಕಲ್ಪಿಸಲು ಜಿಲ್ಲೆಯ ಎಲ್ಲಾ ತಾಲೂಕಗಳ ತಹಶೀಲ್ದಾರ್‌ಗಳಿಗೆ ಸೂಚನೆ ನೀಡಲಾಗಿದೆ. ನೀರಿನ ಟ್ಯಾಂಕರ್ ಇಲ್ಲದ ಗ್ರಾಪಂಗಳು ಟ್ಯಾಂಕರ್ ಗಳನ್ನು ಖರೀದಿಸಬೇಕು. ಸದ್ಯಕ್ಕೆ ನೀರಿನ ಸಮಸ್ಯೆ ಉದ್ಭವಿಸಿಲ್ಲ. ಏಪ್ರೀಲ್ ನಂತರ ನೀರಿನ ಸಮಸ್ಯೆ ಉದ್ಭವಿಸಬಹುದು ಎಂದರು.

ಬೆಳಗಾವಿ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ಮ್ಯಾಪಿಂಗ್ ಪ್ರಕ್ರಿಯೆ ಪ್ರಸ್ತುತ ಜಾರಿಯಲ್ಲಿದ್ದು, ಜಿಲ್ಲೆಯ 18 ವಿಧಾನಸಭಾ ಕ್ಷೇತ್ರಗಳಲ್ಲಿ ಸುಮಾರು 85% ರಷ್ಟು ಕಾರ್ಯ ಪೂರ್ಣಗೊಂಡಿದೆ. ಸುಮಾರು 92 % ಮತದಾರರ ಪಟ್ಟಿಯ ಮ್ಯಾಪಿಂಗ್ ಕಾರ್ಯ ಮಾಡುವ ಗುರಿ ಮುಟ್ಟಲು ಅಧಿಕಾರಿಗಳಿಗೆ ತಿಳಿಸಿದ್ದಾಗಿ ಹೇಳಿದರು.

ಮಹಾನಗರ ಪಾಲಿಕೆಯ ಸಭೆಯಲ್ಲಿ ಬೆಳಗಾವಿ ದಕ್ಷಿಣ ಮತಕ್ಷೇತ್ರದಲ್ಲಿ ಸುಮಾರು 60 ಸಾವಿರ ಮತದಾರರು ಕಾಣೆಯಾಗಿರುವ ಬಗ್ಗೆ ಕೇಳಿ ಬಂದ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಇನ್ನು ಪ್ರಕ್ರಿಯೆ ನಡೆಯುತ್ತಿದೆ. ಮೂರು ಬಾರಿ ಮನೆಗೆ ಹೋಗಿ ಪರಿಶೀಲಿಸಲಾಗುತ್ತಿದೆ. ಮತದಾರರನ್ನು ಹುಡುಕುವುದು ಅಧಿಕಾರಿಗಳ ಜವಾಬ್ದಾರಿ. ಮುಂದಿನ ವಾರ ಮತ್ತೊಂದು ಸಭೆ ಕರೆಯಲಾಗಿದೆ ಎಂದರು.

ಜಿಲ್ಲಾಡಳಿತ ಕಚೇರಿ ಕಾಮಗಾರಿ ಪರಿಶೀಲನೆ: ಬೆಳಗಾವಿ ಜಿಲ್ಲಾಧಿಕಾರಿ ಕಚೇರಿಯ ಆವರಣದಲ್ಲಿ ನಡೆಯುತ್ತಿರುವ ನೂತನ ಜಿಲ್ಲಾಡಳಿತ ಭವನ ಮತ್ತು ನವೀಕರಣ ಕಾಮಗಾರಿಗಳನ್ನು ಲೋಕೋಪಯೋಗಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರು ಪರಿಶೀಲಿಸಿದರು.

ಸ್ಥಳದಲ್ಲಿದ್ದ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರಿಂದ ಜಿಲ್ಲಾಡಳಿತ ಭವನದ ನವೀಕರಣ ಕಾಮಗಾರಿ ಬಗ್ಗೆ ಮಾಹಿತಿ ಪಡೆದು ಕಾಮಗಾರಿಯನ್ನು ಇನ್ನಷ್ಟು ಚುರುಕುಗೊಳಿಸಲು ಸೂಚಿಸಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಸಿಇಒ ರಾಹುಲ್ ಸಿಂಧೆ, ಬೆಳಗಾವಿ ಪೊಲೀಸ್ ಆಯುಕ್ತ ಭೂಷಣ್ ಗುಲಾಬರಾವ್ ಬೋರಸೆ ಸೇರಿದಂತೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಇತರರು ಇದ್ದರು.

ನಿರಂತರ ವಿದ್ಯುತ್ ಸರಬರಾಜಿಗೆ ಚಾಲನೆ

ಅಡಹಳ್ಳಿ: ಗ್ರಾಮೀಣ ಭಾಗದಲ್ಲಿ ವಿದ್ಯುತ್ ಅಭಾವಸರಿದೂಗಿಸುವ ನಿಟ್ಟಿನಲ್ಲಿ, ರೈತ ಕುಟುಂಬಗಳಿಗೆ ಮತ್ತು ಪರೀಕ್ಷೆ ಸಮಯದಲ್ಲಿ ಶಾಲಾ ಮಕ್ಕಳಿಗೆ ಅಭ್ಯಾಸಕ್ಕೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ನಾಟೆಕಾರ ವಸತಿ ತೋಟದಲ್ಲಿ ನಿರಂತರ ವಿದ್ಯುತ್ ಸರಬರಾಜು ನೀಡಲಾಗಿದೆ ಎಂದು ಯುವ ಧುರೀಣ ಚಿದಾನಂದ ಸವದಿ ಹೇಳಿದರು.

ಅಡಹಳ್ಳಿ ಗ್ರಾಮದ ನಾಟೆಕಾರ ವಸತಿಗೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಐಗಳಿಯ ಉಪವಿಭಾಗದ ಅಡಹಳ್ಳಿ ಗ್ರಾಮದ ನಾಟೆಕಾರ ವಸತಿಗೆ ಸುಮಾರು ಐದು ಲಕ್ಷಗಳ ವೆಚ್ಚದ ನಿರಂತರ ವಿದ್ಯುತ್ ಸರಬರಾಜು ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿ, ಕೃಷಿಗೆ ಸಹಾಯವಾಗುವುದರೊಂದಿಗೆ ಪಂಪ್‌ಸೆಟ್ ಗಳು ನಿರಂತರವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಕೈಗಾರಿಕಾ ಅಭಿವೃದ್ಧಿ ಕಾರ್ಖಾನೆಗಳಲ್ಲಿ ಉತ್ಪಾದನೆ ನಿಲ್ಲದೆ ನಡೆಯುತ್ತದೆ. ಶಿಕ್ಷಣ ಮತ್ತು ಆರೋಗ್ಯ ಶಾಲೆ, ಆಸ್ಪತ್ರೆಗಳಲ್ಲಿ ವಿದ್ಯುತ್ ವ್ಯತ್ಯಯ ಆಗುವುದಿಲ್ಲ. ಡಿಜಿಟಲ್ ಸೇವೆಗಳು ಇಂಟರ್ನೆಟ್ ಸೇವೆಗಳು ಸುಗಮವಾಗಿ ನಡೆಯುತ್ತವೆ ಎಂದವರು ನಾಟೆಕಾರ ವಸತಿ ತೋಟದಲ್ಲಿ ಕುಡಿಯುವ ನೀರೀನ ಅಭಾವದಿಂದಾಗುತ್ತಿರುವ ತೊಂದರೆಯನ್ನು ಹಾಗೂ ಸಿಸಿ ರಸ್ತೆ ಬೇಡಿಕೆಯನ್ನು ತಂದೆಯವರಾದ ಶಾಸಕ ಲಕ್ಷ್ಮಣ ಸವದಿಯವರ ಸಲಹೆ ಮೇರೆಗೆ ಈ ಸವಸ್ಯೆಗಳನ್ನು ಆದಷ್ಟು ಬೇಗ ಬಗೆ ಹರಿಸಲಾಗುವುದು. ಕಾರಣ ನಾಟೆಕಾರ ವಸತಿ ಜನರು ಇವೆಲ್ಲವನ್ನು ಸದುಪಯೋಗ ಪಡೆಸಿಕೊಳ್ಳುವಂತೆ ತಿಳಿಸಿದರು.

ತಾಲೂಕಾ ಮತ್ತು ಐಗಳಿ ಉಪವಿಭಾಗದ ಹೆಸ್ಕಾಂ ಎಇ ಗುರುರಾಜ ಸಂಪಣ್ಣವರ ಮಾತನಾಡಿ, ಬೇಸಿಗೆ ಕಾಲದಲ್ಲಿ ರೈತರಿಗೆ ಮತ್ತು ವಿಧ್ಯಾರ್ಥಿಗಳ ಪರೀಕ್ಷಾ ಸಮಯದಲ್ಲಿ ಯಾವುದೇ ಕಾರಣಕ್ಕೂ ವಿದ್ಯುತ್ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗುವುದು. ಇಲಾಖೆಯಿಂದ ಬರುವ ವಿವಿಧ ಯೋಜನೆಗಳನ್ನು ರೈತರು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಈ ವೇಳೆ ಐಗಳಿ ಹೆಸ್ಕಾಂ ಎಸ್.ಓ ಮಹಾದೇವಪ್ಪ ಯಳವಾರ, ಸಿದ್ರಾಯ ನಾಯಕ, ಬಸವಂತ ಗುಡ್ಡಾಪೂರ, ಸುನೀಲ ನಾಟೇಕಾರ, ವಿಠ್ಠಲ ಹರಿಜನ, ಜಯವಂತ ನಾಟೇಕಾರ, ನಾಮದೇವ ನಾಟೇಕಾರ, ತುಕಾರಾಮ ನಾಟೇಕಾರ, ಬಸಪ್ಪ ಮಹೇಶವಾಡಗಿ, ಬಾಳು ಮಹೇಶವಾಡಗಿ ಸೇರಿದಂತೆ ಅನೇಕರು ಇದ್ದರು.



ಉಪಾಧ್ಯಕ್ಷರಾಗಿ ಸದಾನಂದ ಪಾಟೀಲ ನೇಮಕ



ಬೆಳಗಾವಿ: ಜಿಲ್ಲೆಯ ಖಾನಾಪೂರ ತಾಲೂಕಿನ ಬಿದರಭಾವಿ ಗ್ರಾಮದ ಯುವ ಉದ್ಯಮಿ, ತನ್ನ ಕಿರಿಯ ವಯಸ್ಸಿನಲ್ಲೇ ರಾಜಕೀಯ ವಲಯದಲ್ಲಿ ತನ್ನದೇ ಆದ ಛಾಪು ಮೂಡಿಸಿ, ಖಾನಾಪೂರದ ಲೈಲಾ ಶುಗರ್ಸ್ ದ ಮಹಾಲಕ್ಷ್ಮೀ ಶುಗರ್ಸ್ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಾಗಿ ತಾಲೂಕಿನ ರೈತರಲ್ಲಿ ಉತ್ಸಾಹ ತುಂಬುವ ಕೆಲಸ ಮಾಡಿದ್ದು. ಸಾವಿರಾರು ಟನ್ ಕಬ್ಬು ನುರಿಸುವ ಮೂಲಕ ಕಾರ್ಖಾನೆಗೆ ಜೀವ ತುಂಬುವ ಕೆಲಸ ಮಾಡಿ ತಾಲೂಕಿನಲ್ಲಿ ಬಿಜೆಪಿ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಸಾವಿರಾರು ಕಾರ್ಯಕರ್ತರನ್ನು ತನ್ನ ಸಂಘಟನಾತ್ಮಕ ಚತುರತೆಯಿಂದ ಎಸೆದ ಸದಾನಂದ ಪಾಟೀಲ ಅವರನ್ನು ಬಿಜೆಪಿಯ ಹಿರಿಯ ಮುಖಂಡರು ಗುರುತಿಸಿ ಬಿಜೆಪಿ ಬೆಳಗಾವಿ ಗ್ರಾಮಾಂತರ ಜಿಲ್ಲೆಯ ರೈತ ಮೋರ್ಚಾ ಜಿಲ್ಲಾ ಉಪಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

ಆತ್ಮ ವಿಶ್ವಾಸದಿಂದ ಪರೀಕ್ಷೆ ಎದುರಿಸಿ

ರಾಮದುರ್ಗ: ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಹತ್ವದ ಘಟ್ಟವಾಗಿದ್ದು ಪರೀಕ್ಷೆಯನ್ನು ಆತ್ಮ ವಿಶ್ವಾಸದಿಂದ ಎದುರಿಸಲು ಪ್ರತಿಯೊಬ್ಬರ ಸಹಕಾರ ಅಗತ್ಯವೆಂದು ತಹಶೀಲ್ದಾರ ಪ್ರಕಾಶ ಹೊಳೆಪ್ಪಗೋಳ ಹೇಳಿದರು.

ಶುಕ್ರವಾರ ಪಟ್ಟಣದ ಗುರು ಭವನದಲ್ಲಿ 2026ರ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ಮಾ.18 ರಿಂದ ಆರಭವಾಗುವ ಹಿನ್ನಲೆಯಲ್ಲಿ ತಾಲೂಕಾ ಮಟ್ಟದ ಸಮನ್ವಯ ಸಮಿತಿಯ ಸಭೆ ಆಯೋಜಿಸಿದ್ದ ಪರೀಕ್ಷಾ ಕಾರ್ಯಕ್ಕೆ ನಿಯೋಜನೆ ಗೊಂಡ ಅಧಿಕಾರಿಗಳ ಮತ್ತು ಸಿಬ್ಬಂದಿ ಪೂರ್ವಸಿದ್ದತಾ ಸಭೆಯಲ್ಲಿ ಮಾತನಾಡಿ, ಪರೀಕ್ಷಾರ್ಥಿಗಳು ಭಯಮುಕ್ತ ವಾತಾವರಣ ನಿರ್ಮಾಣ ಮಾಡಬೇಕು. ಎಲ್ಲ ಇಲಾಖೆಗಳ ಸಹಾಯ ಸಹಕಾರ ಅಗತ್ಯವೆಂದು ಹೇಳಿದರ.

ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಐನಾಪೂರ ಮಾತನಾಡಿ, ಪ್ರೌಢ ಶಿಕ್ಷಣ ಇಲಾಖೆಯ ಮಾರ್ಗದರ್ಶಿಗಳ ಪಾಲನೆ ಮಾಡುವುದರ ಜೊತೆಗೆ ಪರೀಕ್ಷಾ ಪಾವಿತ್ರೆ ಕಾಪಾಡುವುದು ಪರೀಕ್ಷಾ ಕಾರ್ಯಕ್ಕೆ ನಿಯೋಜ ನೆಗೊಂಡವರ ಕರ್ತವ್ಯವಾಗಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಂದ್ರ ಕಾಂಬಳೆ ಮಾತನಾಡಿ, ರಾಮದುರ್ಗ ತಾಲೂಕಿನಲ್ಲಿ ಈ ವರ್ಷ 4268 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿದ್ದು 14 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿವೆ. ಪರೀಕ್ಷಾ ಕಾರ್ಯಕ್ಕೆ 280 ಸಿಬ್ಬಂದಿ ನೇಮಕ ಮಾಡಲಾಗಿದೆ. ಪರೀಕ್ಷೆ ಸುಗಮವಾಗಿ ನಡೆಯಲು ಎಲ್ಲ ಇಲಾಖೆಯ ಮುಖ್ಯಸ್ಥರ ಸಹಕಾರ ಪಡೆದುಕೊಳ್ಳಲಾಗುವದು ಎಂದು ತಿಳಿಸಿದರು.

ಪರೀಕ್ಷಾ ಕಾರ್ಯ ನಿರ್ವಹಿಸುವವರ ಪರೀಕ್ಷೆ ದಿನ ಪರೀಕ್ಷಾರ್ಥಿಗಳನ್ನು ನಗುಮುಖದೊಂದಿಗೆ ಸ್ವಾಗತಿಸಿ ಆತ್ಮ ವಿಶ್ವಾಸ ತುಂಬುವ ಕೆಲಸ ಮಾಡಬೇಕು ಹಾಗೂ ಪರೀಕ್ಷೆ ಸಮಯಕ್ಕೆ ಗೊಂದಲ ಸೃಷ್ಟಿ ಮಾಡಲು ಕೆಲವರು ಸುಳ್ಳ ಸುದ್ದಿ ಹರಡಿಸುತ್ತಾರೆ ಅದಕ್ಕೆ ಕಿವಿಗೊಡದೆ ಸುಗಮ ಪರೀಕ್ಷೆ ನಡೆಸಬೇಕೆಂದು ಹೇಳಿದರು.

ಸಭೆಯಲ್ಲಿ ಭಾಗವಹಿಸಿದ್ದ ಹೆಸ್ಕಾಂ ಎಇಇ ಕರಡಿ, ಪಿಎಸ್‌ಐ ಸವಿತಾ ಮುನ್ಯಾಳ, ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷೆ ಎಸ್. ವೈ. ಸನ್ನಿ, ಬಿಆರ್‌ಸಿ ಚಾಯಪ್ಪಗೋಳ, ಸಹಶಿಕ್ಷಕರ ಸಂಘದ ಎಂ. ಎಸ್. ಜಂಗವಾಡ, ಕೆಎಸ್ ಆರ್‌ಟಿಸಿ ಘಟಕ ವ್ಯವಸ್ಥಾಪಕರು ಇದ್ದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಹಿರೇಮಠ ಸ್ವಾಗತಿಸಿ, ಶಿಕ್ಷಣ ಸಂಯೋಜಕ ಶ್ರೀಕಾಂತ ಕರಲಿಂಗಪ್ಪನವರ ನಿರೂಪಿಸಿ, ವಂದಿಸಿದರು.



ಮಾ.16 ರಿಂದ ಚನ್ನವೃಷಬೇಂದ್ರ ಅಜ್ಜನವರ ಜಾತ್ರೋತ್ಸವ

ನೇಸರಗಿ: ಇಲ್ಲಿನ ಪ್ರತಿಷ್ಠಿತ ಚನ್ನವೃಷಬೇಂದ್ರ ದೇವರಕೊಂಡ ಅಜ್ಜನವರ ಲೀಲಾಮಠ ಜಾತ್ರಾ ಮಹೋತ್ಸವವು ಮಾ.16ರಿಂದ ಪ್ರಾರಂಭವಾಗಿ ಮಾ.21ರವರೆಗೆ ನೆರವೇರಲಿದ್ದು, ಜಾತ್ರೆಯ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಇಂಚಲ ಸಾಧು ಸಂಸ್ಥಾನ ಮಠದ ಡಾ. ಶಿವಾನಂದ ಭಾರತಿ ಶ್ರೀಗಳು ವಹಿಸುವರು, ಸಾನಿಧ್ಯವನ್ನು ನೇಸರಗಿ- ಮಲ್ಲಾಪೂರ ಗಾಳೇಶ್ವರ ಮಠದ ಚಿದಾನಂದ ಶ್ರೀಗಳು ವಹಿಸುವರು. ಮಾ. 16 ರಂದು ಬೆಳಿಗ್ಗೆ ಮೂರ್ತಿಗೆ ರುದ್ರಾಭಿಷೇಕ, ಪೂಜಾ ಸಮಾರಂಭ, 3 ಘಂಟೆಗೆ ಸಕಲ ವಾದ್ಯ ಮೇಳದೊಂದಿಗೆ ಗ್ರಾಮದ ಮುತ್ತೈದೆಯರಿಂದ ಕುಂಭಮೇಳ, ಪಲ್ಲಕ್ಕಿ ಉತ್ಸವ ಜರುಗುವದು, ಗ್ರಾಮದೇವಿಗೆ ಉಡಿ ತುಂಬುವದು ಸಂಜೆ 5 ಘಂಟೆಗೆ ಕಳಸರೋಹಣ ನೆರವೇರಲಿದೆ.



ಮಾ.16 ರಿಂದ 21 ರವರೆಗೆ ಪ್ರತಿದಿನ ನಾಡಿನ ಪೂಜ್ಯರಿಂದ ಆದ್ಯಾತ್ಮ ಪ್ರವಚನ, ಮಹಾಪ್ರಸಾದ ನೆರವೇರಲಿದೆ. ಮಾ.20ರಂದು ಸಂಜೆ 4ಕ್ಕೆ ಮಹಾರಥೋತ್ಸವ ನಡೆಯಲಿದೆ. ಮಾ. 21ರಂದು ಕಳಸ ಇಳಿಸುವುದು, ಲಕ್ಷ ದೀಪೋತ್ಸವ, ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲರಿಂದ ನೂತನ ಕಟ್ಟಡ ಉದ್ಘಾಟನೆ, ಮಹಾಪ್ರಸಾದ ಜರುಗುವದು. ಪ್ರತಿದಿನ ಗ್ರಾಮದ ಭಜನಾ ಮಂಡಳಗಳಿಂದ ಭಜನೆ ಜರುಗುವದು. ಈ ಜಾತ್ರಾ ಮಹೋತ್ಸವಕ್ಕೆ ಆದ್ಯಾತ್ಮ ಪ್ರವಚನಕ್ಕೆ ಹುಣಶ್ಯಾಳ ಪಿಜಿ ಕೈವಲ್ಯಾಶ್ರಮದ ನಿಜಗುಣ ಶ್ರೀಗಳು, ಅವರೊಳ್ಳಿಯ ಚನ್ನಬಸವ ದೇವರು, ದತ್ತವಾಡದ ಹೃಷಕೇಶಾನಂದ ಮಹಾರಾಜರು, ತೊಂಡಿಕಟ್ಟಿಯ ಅಭಿನವ ವೆಂಕಟೇಶ್ವರ ಶ್ರೀಗಳು, ಯರಗೋಪ್ಪದ ಶಿವಪ್ಪಜ್ಜನವರು, ಸವಟಗಿಯ ಲಿಂಗಯ್ಯ ಸ್ವಾಮಿಗಳು, ಮದನಬಾವಿಯ ಮಾತೋಶ್ರೀ ಶಿವದೇವಿ ತಾಯಿ,ಹಾರುಗೋಪ್ಪದ ಮಾತೋಶ್ರೀ ಶಿವಯೋಗಿಣಿ ತಾಯಿ ಭಾಗವಹಿಸಲಿದ್ದಾರೆ.

ಟ್ರ್ಯಾಕ್ಟರ ಮಾಲೀಕರ ಸಂಘ ನೇಸರಗಿ ಆಶ್ರಯದಲ್ಲಿ ಮಾ.16ರಂದು ಮದ್ಯಾಹ್ನ 12.30ಕ್ಕೆ ಟ್ರ್ಯಾಕ್ಟರ ರಿವರ್ಸ್ ಸ್ಪರ್ಧೆ ಏರ್ಪಡಿಸಲಾಗಿದೆ. ಮಾ.17, 18 ರಂದು ಖಾಲಿ ಗಾಡಾ ಚಕ್ಕಡಿ ಓಡಿಸುವ ಶರ್ಯತ್ತು ಏರ್ಪಡಿಸಲಾಗಿದೆ. ಮೊದಲನೇ ಬಹುಮಾನ ರೂ. 25,000, ಎರಡನೇ ಬಹುಮಾನ ರೂ. 20,000, ಮೂರನೇ ಬಹುಮಾನ ರೂ. 18,000 ಹೀಗೆ 12 ಜೋಡಿ ಎತ್ತುಗಳಿಗೆ ಬಹುಮಾನ ನೀಡಲಾಗುವುದು ಎಂದು ಶ್ರೀ ಚನ್ನವೃಷಬೇಂದ್ರ ಅಜ್ಜನವರ ಜಾತ್ರಾ ಕಮಿಟಿ ಸದಸ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಗದ್ಗುರು ರೇಣುಕಾಚಾರ್ಯರ ಜಯಂತಿ ನಾಳೆ

ಚನ್ನಮ್ಮನ ಕಿತ್ತೂರು: ಪಟ್ಟಣದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಮಾ. 15 ರಂದು ಆಚರಿಸಲಾಗುವುದು.

ಪಟ್ಟಣದ ರಾಷ್ಟ್ರೀಯ ಹೆದ್ದಾರಿ ಪಕ್ಕದ ಚನ್ನಮ್ಮಾಜಿಯ ವರ್ತುಳದಿಂದ ಬೆಳಿಗ್ಗೆ 9 ಗಂಟೆಗೆ ರೇಣುಕಾಚಾರ್ಯರ ಭಾವಚಿತ್ರ ಜೊತೆಗೆ ಜ್ಯೋತಿಯ ಮೆರವಣಿಗೆಯು 101 ಕುಂಭ ಹೊತ್ತ ಮಹಿಳೆಯರ ಹಾಗೂ ಹಲವಾರು ಭಕ್ತರ ಸಮ್ಮುಖದಲ್ಲಿ ವಿವಿಧ ವಾದ್ಯಗಳ ಮೂಲಕ ಪಟ್ಟಣದ ಮುಖ್ಯ ರಸ್ತೆಯ ಮೂಲಕ ವೀರಭದ್ರೇಶ್ವರ ದೇವಸ್ಥಾನದವರೆಗೆ ಮೆರವಣಿಗೆಯು ಸಾಗುವುದು.



ಮದ್ಯಾಹ್ನ 12 ಗಂಟೆಗೆ ವೀರಭದ್ರೇಶ್ವರ ದೇವಸ್ಥಾನದಲ್ಲಿ ವಿವಿಧ ಕಾರ್ಯಕ್ರಮಗಳ ಜೊತೆಗೆ ಸಾಧಕರಿಗೆ ಸನ್ಮಾನ ಕಾರ್ಯಕ್ರಮ, ದಿವ್ಯ ಸಾನಿಧ್ಯವನ್ನು ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳರಾಯೋಗಿಂದ್ರ ಸ್ವಾಮೀಜಿ, ಹಿಡಕಲ್‌ದ ಅಡವಿಸಿದ್ದೇಶ್ವರ ಮಠದ ಪ್ರಭು ಅಡವಿಸಿದ್ದೇಶ್ವರ ಸ್ವಾಮೀಜಿಗಳು ವಹಿಸಿಕೊಳ್ಳುವರು. ಮುಖ್ಯ ಅತಿಥಿಗಳಾಗಿ ಗಂದಿಗವಾಡದ ಮೃತ್ಯುಂಜಯ ಸ್ವಾಮೀಜಿ ಆಗಮಿಸುವರು. ಈ ಕಾರ್ಯಕ್ರಮಕ್ಕೆ ನಾಡಿನ ಎಲ್ಲ ಜನರು ಆಗಮಿಸಬೇಕೆಂದು ಸಂಘಟಿಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊನ್ನಿದಿಬ್ಬ ಗ್ರಾಮದಿಂದ ಜ್ಯೋತಿಯ ಆಗಮನ

ತಾಲೂಕಿನ ಹೊನ್ನಿದಿಬ್ಬ ಗ್ರಾಮದಲ್ಲಿರುವ ರೇಣುಕಾಚಾರ್ಯರ ದೇವಸ್ಥಾನದಿಂದ ಭಕ್ತರ ಮೂಲಕ ರೇಣುಕಾಚಾರ್ಯರ ಜ್ಯೋತಿಯ ಮಾ. 14 ರಂದು ಬೆಳಗ್ಗೆ 11 ಘಂಟೆಗೆ ಹೊರಟು ಮಾರ್ಗ ಮಧ್ಯ ಉಗರಖೋಡ, ಬಸಾಪೂರ, ಶೀಗಿಹಳ್ಳಿ ಕೆಎ ಗ್ರಾಮಗಳಲ್ಲಿ ಸಂಚರಿಸಿ ಕಿತ್ತೂರು ಪಟ್ಟಣ ಪ್ರವೇಶ ಮಾಡಿ ಪಟ್ಟಣದಲ್ಲಿ ಸಂಚರಿಸಿ ವೀರಭದ್ರೇಶ್ವರ ದೇವಸ್ಥಾನ ತಲುಪುವುದು.

ಕೆರೆ ನಿರ್ಮಾಣ ಸ್ಥಳಕ್ಕೆ ಅಧಿಕಾರಿಗಳ ಭೇಟಿ

ತೆಲಸಂಗ: ಕೆರೆ ನಿರ್ಮಾಣದ ಪೂರ್ವಭಾವಿ ಸಿದ್ಧತೆಗಳ ಭಾಗವಾಗಿ ಅಥಣಿ ತಾಲೂಕು ದಂಡಾಧಿಕಾರಿ ಸಿದರಾಯ ಬೋಸಗಿ ಹಾಗೂ ನೀರಾವರಿ ಇಲಾಖೆಯ ಮುಖ್ಯ ಇಂಜಿನಿಯರ್ ಪ್ರವೀಣ ಹುಣಸಿಕಟ್ಟಿ ಅವರು ತೆಲಸಂಗ ಗ್ರಾಮದ ಉದ್ದೇಶಿತ ಕೆರೆ ನಿರ್ಮಾಣದ ಸ್ಥಳಕ್ಕೆ ಭೇಟಿ ನೀಡಿ ತಾಂತ್ರಿಕ ಪರಿಶೀಲನೆ ನಡೆಸಿದರು.



ಸುಮಾರು 68 ಎಕರೆ ಪ್ರದೇಶದಲ್ಲಿ ಬೃಹತ್ ಕೆರೆ ನಿರ್ಮಾಣವಾಗಲಿದ್ದು, ಈ ಕೆರೆಯಿಂದ ಅಂತರ್ಜಲ ಮಟ್ಟ ವೃದ್ಧಿಯಾಗುವುದಲ್ಲದೆ, ಸುತ್ತಮುತ್ತಲ ನೂರಾರು ಎಕರೆ ಪ್ರದೇಶದ ರೈತರಿಗೆ ನೀರಾವರಿ ಸೌಲಭ್ಯ ದೊರೆಯಲಿದ್ದು, ಕೆರೆ ನಿರ್ಮಾಣದ ಪ್ರಕ್ರಿಯೆ ಮತ್ತು ತಾಂತ್ರಿಕ ಸಾಧ್ಯತೆಗಳ ಕುರಿತು ಅಧಿಕಾರಿಗಳು ಸ್ಥಳೀಯ ಮುಖಂಡರೊಂದಿಗೆ ಚರ್ಚಿಸಿದರು.

ಈ ವೇಳೆ ಮಾತನಾಡಿದ ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಅಮೋಘ ಖೊಬ್ರಿ, ರೈತರಿಗೆ ನೀಡಿದ ಭರವಸೆಯಂತೆ ಶಾಸಕ ಲಕ್ಷ್ಮಣ ಸವದಿ ಅವರು ಆಧುನಿಕ ಭಗೀರಥನಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕೆರೆ ನಿರ್ಮಾಣದಿಂದ ತೆಲಸಂಗ ಭಾಗದ ಚಿತ್ರಣವೇ ಬದಲಾಗಲಿದೆ. ಗ್ರಾಮದ ರೈತರ ಮತ್ತು ಸಾರ್ವಜನಿಕರ ಬಹುದಿನಗಳ ಬೇಡಿಕೆಯಾಗಿದ್ದ ಬೃಹತ್ ಕೆರೆ ನಿರ್ಮಾಣದ ಕನಸು ಈಗ ನನಸಾಗುವ ಕಾಲ ಹತ್ತಿರ ಬಂದಿದೆ. ಶಾಸಕ ಲಕ್ಷ್ಮಣ ಸವದಿ ಅವರ ನಿರಂತರ ಪರಿಶ್ರಮ ಮತ್ತು ದೂರದೃಷ್ಟಿಯ ಫಲವಾಗಿ ಗ್ರಾಮದಲ್ಲಿ ಶೀಘ್ರದಲ್ಲೇ ಬೃಹತ್ ಕೆರೆ ನಿರ್ಮಾಣ ಕಾರ್ಯಕ್ಕೆ ಚಾಲನೆ ಸಿಗಲಿದೆ ಎಂದು ತಿಳಿಸಿದರು.

ಈ ವೇಳೆ ಗ್ರಾಮದ ಹಿರಿಯರಾದ ಅರವಿಂದ ಉಂಡೋಡಿ, ಗುರುರಾಜ ಕುಂಬಾರ, ಅಶೋಕ ಉಂಡೋಡಿ, ಶ್ರೀಶೈಲ ಶೆಲ್ಲೆಪ್ಪಗೋಳ, ಮಾಯಪ್ಪಾ ನಿಡೋಣಿ, ಮಸ್ತಾನ ನಧಾಫ್, ಸುನೀಲ ಮಾದರ, ಸಂಜು ಮಾದರ ಸೇರಿದಂತೆ ರೈತರು, ನೀರಾವರಿ ಇಲಾಖೆಯ ಸಿಬ್ಬಂದಿ ಇದ್ದರು.

ಸರ್ವಧರ್ಮ ಸಮಾವೇಶ ಇಂದು

ಕಕಮರಿ: ಸ್ಥಳೀಯ ಶ್ರೀ ಸದ್ಗುರು ಸಮರ್ಥ ರಾಯಲಿಂಗೇಶ್ವರ ಮಹಾಪ್ರಭುಗಳ ಪುಣ್ಯಾರಾಧನೆ ಅಂಗವಾಗಿ ಜ್ಞಾನಯಜ್ಞ ಸಪ್ತಾಹ, ಸರ್ವಧರ್ಮ ಸಮಾವೇಶ ಹಾಗೂ ಸಾಂಸ್ಕೃತಿಕ



ಉತ್ಸವವನ್ನು ಪ.ಪೂ.ಅಭಿನವ ಗುರುಲಿಂಗಜಂಗಮ ಸ್ವಾಮೀಜಿಯವರ ದಿವ್ಯಸಾನಿಧ್ಯದಲ್ಲಿ ಮಾ.14ರಂದು ಬೆಳಗ್ಗೆ 10.30ಕ್ಕೆ ಶ್ರೀ ಸದ್ಗುರು ರಾಯಲಿಂಗೇಶ್ವರ ಕರ್ತೃ ಗದ್ದುಗೆಗೆ ವಿಶೇಷ ಪೂಜೆ ನಡೆಯಲಿದೆ. ನಂತರ ವೀಣೆ ಹಾಗೂ ಸದಾಸಭೋಧ ಪೂಜೆಯೊಂದಿಗೆ ಜ್ಞಾನಯಜ್ಞ ಸಪ್ತಾಹಕ್ಕೆ ಚಾಲನೆ ದೊರೆಯಲಿದೆ. ಸಂಜೆ 4ಕ್ಕೆ ಸದ್ಗುರು ರಾಯಲಿಂಗೇಶ್ವರ ಮಹಾಪ್ರಭುಗಳ ಪಲ್ಲಕಿ ಉತ್ಸವ ಮತ್ತು ರಥೋತ್ಸವ ಗ್ರಾಮದ ಪ್ರನುಖ ಬೀದಿಗಳಲ್ಲಿ ವಿಜೃಂಭಣೆಯಿಂದ ನಡೆಯಲಿದೆ. ಮಾ.15ರಂದು ಬೆಳಗ್ಗೆ 9ಗಂಟೆಗೆ ವಿಮಲ ಬ್ರಹ್ಮ ನಿರೂಪಣೆಯೊಂದಿಗೆ ಪ್ರವಚನ ನಡೆಯಲಿದ್ದು, ದಿವ್ಯಸಾನಿಧ್ಯ ಅಭಿನವ ಗುರುಲಿಂಗಜಂಗಮ ಸ್ವಾಮೀಜಿ ವಹಿಸಲಿದ್ದು, ಸಾನಿಧ್ಯ ಅವರಾದಿಮಠ ಮಲ್ಲಿಕಾರ್ಜುನ ಶರಣರು, ಸಾತಾರಾ ಅಶೋಕ ಮಹಾರಾಜರು, ಹಲಸಂಗಿ ಮುತ್ತಣ್ಣ ಮಹಾರಾಜರು ಪಾಲ್ಗೊಳ್ಳಲಿದ್ದಾರೆ. ನಂತರ ಪುಷ್ಪವೃಷ್ಟಿಯೊಂದಿಗೆ ಜ್ಞಾನಯಜ್ಞ ಸಪ್ತಾಹ ಮಂಗಳಗೊಳ್ಳಲಿದೆ. ನಂತರ ಭಕ್ತರಿಗೆ ಮಹಾಪ್ರಸಾಧ ಜರುಗಲಿದೆ. ಸದ್ಗುರು ರಾಯಲಿಂಗೇಶ್ವರ ಸಂಸ್ಥಾನ ಮಠದ ಪೀಠಾಧ್ಯಕ್ಷ ಅಭಿನವ ಗುರುಲಿಂಗಜಂಗಮ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಪಿಐ ತಂತ್ರಜ್ಞಾನದ ಅರಿವು ಅವಶ್ಯ: ತೇಜಸ್

ಸವದತ್ತಿ: ಪ್ರಸ್ತುತ ತಂತ್ರಜ್ಞಾನ ಯುಗದಲ್ಲಿ ಮಾಹಿತಿ ಆಧಾರ ವ್ಯವಸ್ಥೆ ಹಾಗೂ ವಿವಿಧ ಅಪ್ಲಿಕೇಶನ್‌ಗಳ ನಡುವೆ ಸಂಪರ್ಕ ಸಾಧಿಸಲು ಎ.ಪಿ.ಐ. ತಂತ್ರಜ್ಞಾನ ಅವಶ್ಯ. ಈ ಎಪಿಐ ತಂತ್ರಜ್ಞಾನವು ಎರಡು ಬೇರೆ ಬೇರೆ ತಂತ್ರಾಂಶಗಳ ನಡುವೆ ಸಂವಹನ ನಡೆಸಲು ಸಹಾಯ ಮಾಡುವ ಸೇತುವೆಯಾಗಿದೆ. ಇದನ್ನು ಸಮರ್ಪಕವಾಗಿ ಅರಿತುಕೊಳ್ಳುವುದು ಅಗತ್ಯವಾಗಿದೆ ಎಂದು ಬೆಂಗಳೂರಿನ ತಂತ್ರಾಂಶ ತರಬೇತುದಾರ ಅರ್ಚಿತ್ ತೇಜಸ್ ಹೇಳಿದರು.

ಅವರು ಇಲ್ಲಿನ ಕೆ.ಎಲ್.ಇ ಸಂಸ್ಥೆಯ ಎಸ್.ವಿ.ಎಸ್ ಬೆಳ್ಳುಬ್ಬಿ ಕಾಲೇಜಿನ ಬಿ.ಸಿ.ಎ ವಿಭಾಗವು ಆಯೋಜಿಸಿದ್ದ ಡೇಟಾಬೇಸ್ ಮ್ಯಾನೇಜ್‌ಮೆಂಟ್ ಮತ್ತು ಎ.ಪಿ.ಐ. ಇಂಟಿಗ್ರೇಶನ್ ವಿಷಯದ ಕುರಿತಾದ ಏಳು ದಿನಗಳ ಸರ್ಟಿಫಿಕೇಟ್ ಕೋರ್ಸ್ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿದರು.

ಪ್ರಸ್ತುತ ಸಾಫ್ಟ್‌ವೇರ್ ಮತ್ತು ವೆಬ್ ಅಪ್ಲಿಕೇಶನ್ ಕ್ಷೇತ್ರದಲ್ಲಿ ಡೇಟಾ ನಿರ್ವಹಣೆ ಹಾಗೂ ಎ.ಪಿ.ಐ. ಇಂಟಿಗ್ರೇಶನ್ ಕೌಶಲ್ಯಗಳಿಗೆ ಹೆಚ್ಚಿನ ಬೇಡಿಕೆಯಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಕೈಗಾರಿಕಾ ಅವಶ್ಯಕತೆಗಳಿಗೆ ತಕ್ಕಂತೆ ಸಿದ್ಧಗೊಳಿಸುವ ಉದ್ದೇಶದಿಂದ ಈ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕೋರ್ಸ್‌ನಲ್ಲಿ ಬಿ.ಸಿ.ಎ. 4ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದರು.

ಡಿ.ಬಿ.ಎಂ.ಎಸ್. ಮೂಲಭೂತಾಂಶ ಗಳು, ರಿಲೇಷನಲ್ ಡೇಟಾಬೇಸ್ ಪರಿಕಲ್ಪನೆ, ಎಸ್.ಕ್ಯೂ.ಎಲ್.ಕ್ವೆರಿ ಬರವಣಿಗೆ, ಡೇಟಾಬೇಸ್ ವಿನ್ಯಾಸ, ಕ್ರೂಡ್ ಕಾರ್ಯಾಚರಣೆಗಳು, ರೆಸ್ಟ್ ಎ.ಪಿ.ಐ. ಪರಿಕಲ್ಪನೆ, ಎ.ಪಿ.ಐ. ರಚನೆ ಇಂಟಿಗ್ರೇಶನ್ ವಿಧಾನಗಳ ಕುರಿತು ವಿವರವಾದ ಮಾಹಿತಿ ನೀಡಲಾಯಿತು. ತರಬೇತಿ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಹ್ಯಾಂಡ್ಸ್- ಆನ್ ಸೆಷನ್‌ಗಳ ಮೂಲಕ ಪ್ರಾಯೋಗಿಕ ಜ್ಞಾನ ನೀಡಲಾಗಿದ್ದು, ಮಿನಿ ಪ್ರಾಜೆಕ್ಟ್ ಹಾಗೂ ಲೈವ್ ಡೆಮೋಗಳ ಮೂಲಕ ಕಲಿಕೆಯನ್ನು ಪರಿಣಾಮಕಾರಿಯಾಗಿ ಮಾಡಲಾಯಿತು. ವಿದ್ಯಾರ್ಥಿಗಳು ಸಂವಾದದಲ್ಲಿ ಸಕ್ರಿಯ ವಾಗಿ ಭಾಗವಹಿಸಿ ತಮ್ಮ ಸಂದೇಹಗಳನ್ನು ನಿವಾರಿಸಿಕೊಂಡರು.



ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಡಾ.ಎನ್. ಆರ್.ಸವತಿಕರ, ಬಿ.ಸಿ.ಎ.ವಿಭಾಗದ ಕಿರಣಕುಮಾರ ಲಮಾಣಿ, ಸ್ನೇಹಾ ಗಂಗಲ, ಪ್ರೊ.ಕೆ.ರಾಮರೆಡ್ಡಿ, ಡಾ.ಎ.ಎಫ್.ಬದಾಮಿ, ವಿ.ಎಸ್.ಮೀಶಿ, ಮೋಹನ್.ಬಿ. ಪೃಥ್ವಿ ಪಾಟೀಲ್, ಮತ್ತು ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ವಿದ್ಯಾರ್ಥಿಗಳ ಗಮನಕ್ಕೆ

ಬೆಳಗಾವಿ: 2026ರ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ವಾಕರಸಾಸಂಸ್ಥೆ ನಿಗಮದ ಬಸ್‌ಗಳಲ್ಲಿ ಪರೀಕ್ಷಾ ದಿನಗಳಲ್ಲಿ ಅಂದರೆ, ಮಾ.18 ರಿಂದ ಏ.2 ರವರೆಗೆ ಪರೀಕ್ಷೆಗೆ ಹಾಜರಾಗುವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ತಮ್ಮ ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರದವರೆಗೆ ಹೋಗುವಾಗ ಮತ್ತು ಹಿಂದಿರುಗುವಾಗ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ ವಾಕರಸಾ ಸಂಸ್ಥೆಯ ನಗರ, ಹೊರವಲಯ, ಸಾಮಾನ್ಯ ಹಾಗೂ ವೇಗದೂತ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಎಲ್ಲ ಸಾರ್ವಜನಿಕ ಪ್ರಯಾಣಿಕರು ಸಹಕರಿಸಬೇಕು ಎಂದು ವಾಕರಸಾ ಸಂಸ್ಥೆ ಬೆಳಗಾವಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆ

ಹುಕ್ಕೇರಿ: ತಾಲೂಕಿನ ಕಣಗಲಾ ಗ್ರಾಮದಲ್ಲಿ ವಿದ್ಯುತ್ ನಿರ್ವಹಣಾ ಕಾರ್ಯವನ್ನು ಮಾ.15ರಂದು ಕೈಗೊಳ್ಳಲು ನಿರ್ಧರಿಸಿದ್ದಾರೆ. ಆ ದಿನ ಬೆಳಗ್ಗೆ 9ಗಂಟೆಯಿಂದ ಸಂಜೆ 5 ಗಂಟೆ ವರೆಗೆ ವಿದ್ಯುತ್ ನಿಲುಗಡೆ ಮಾಡಲಿದ್ದಾರೆ. ಸದರಿ ಕೇಂದ್ರದ ಮೇಲೆ ಬರುವ ಕಣಗಲಾ ಕೈಗಾರಿಕಾ ಪ್ರದೇಶದ (ಕೆ.ಆಯ್.ಎ.ಡಿ.ಬಿ), ಎಲ್ಲ ಕೈಗಾರಿಕೆಗಳಿಗೆ ವಿದ್ಯುತ್ ವ್ಯತ್ಯಯವಾಗಲಿದೆ. ಕಾರಣ ಕೈಗಾರಿಕಾ ಉದ್ಯಮಿಗಳು ಸಹಕರಿಸಬೇಕೆಂದು ರೆಸಿಡೆಂಟ್ ಇಂಜನೀಯರ ನೇಮಿನಾಥ ಖೇಮಲಾಪೂರೆ ಕೋರಿದ್ದಾರೆ.

ವಿದ್ಯುತ್ ವ್ಯತ್ಯಯ ನಾಳೆ

ಚನ್ನಮ್ಮನ ಕಿತ್ತೂರು: ಕಿತ್ತೂರಿನ 110 ಕೆವಿ ವಿದ್ಯುತ್ ಉಪಕೇಂದ್ರದಲ್ಲಿ ನಾಲ್ಕನೇ ತ್ರೈಮಾಸಿಕ ನಿರ್ವಹಣಾ ಕೆಲಸ ಕೈಗೊಳ್ಳುವುದರಿಂದ ಮಾ. 15ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕಿತ್ತೂರ ಹೆಸ್ಕಾಂ ಉಪವಿಭಾಗದ ವ್ಯಾಪ್ತಿಗೆ ಒಳಪಡುವ ಕಿತ್ತೂರು ಪಟ್ಟಣ ಪಂಚಾಯತಿ ಹಾಗೂ ಕೈಗಾರಿಕಾ ಪ್ರದೇಶ, ಅಂಬಡಗಟ್ಟಿ, ಅವರಾದಿ, ಬೈಲೂರ, ದೇಗಾಂವ, ಹಿರೇನಂದಿಹಳ್ಳಿ, ಕುಲವಳ್ಳಿ, ಕಲಭಾಂವಿ, ನಿಚ್ಚಣಕಿ, ತಿಗಡೊಳ್ಳಿ, ಉಗರಖೋಡ ಮುಂತಾದ ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಗ್ರಾಮಗಳು ಹಾಗೂ ನೀರಾವರಿ ಪಂಪ್‌ಸೆಟ್‌ಗಳ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಆದ್ದರಿಂದ ಗ್ರಾಹಕರು ಸಹಕರಿಸಬೇಕೆಂದು ಕಿತ್ತೂರಿನ ಹುವಿಸಕಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೂರ್ವಭಾವಿ ಸಭೆ ಇಂದು

ತೆಲಸಂಗ: ಗ್ರಾಮದ ಎಸ್.ಎಂ.ವೈ.ಕೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಳೆಯ ವಿದ್ಯಾರ್ಥಿ ಸಂಘವನ್ನು ಸ್ಥಾಪಿಸಿ, ನೋಂದಣಿ ಮಾಡುವ ಕುರಿತು ಚರ್ಚಿಸಲು ಮಾ.14 ರಂದು ಬೆಳಿಗ್ಗೆ 11 ಗಂಟೆಗೆ ಕಾಲೇಜಿನ ಸಭಾಂಗಣದಲ್ಲಿ ಹಳೆಯ ವಿದ್ಯಾರ್ಥಿಗಳ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ.

ಕಾಲೇಜು ಪ್ರಾರಂಭವಾದಾಗಿನಿಂದ ಈವರೆಗೆ ಸುಮಾರು 15 ಬ್ಯಾಚ್‌ಗಳ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆದು ನಿರ್ಗಮಿಸಿದ್ದಾರೆ. ಇಂದು ಅವರು ಸಮಾಜದ ವಿವಿಧ ಉನ್ನತ ಸ್ತರಗಳಲ್ಲಿ ಸೇವೆ ಸಲ್ಲಿಸುತ್ತಾ ಮಹಾವಿದ್ಯಾಲಯದ ಕೀರ್ತಿಯನ್ನು ಪಸರಿಸುತ್ತಿದ್ದಾರೆ. ಅಂತಹ ಎಲ್ಲ ಹಳೆಯ ವಿದ್ಯಾರ್ಥಿಗಳನ್ನು ಒಂದೇ ವೇದಿಕೆಯಡಿ ತರುವ ಮೂಲಕ ಕಾಲೇಜಿನ ಶ್ರೇಯೋಭಿವೃದ್ಧಿಗೆ ಶ್ರಮಿಸುವುದು ಈ ಸಂಘದ ಮುಖ್ಯ ಉದ್ದೇಶವಾಗಿದೆ. ಕಾಲೇಜಿನ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಸಭೆಯಲ್ಲಿ ಹಳೆಯ ವಿದ್ಯಾರ್ಥಿ ಸಂಘದ ರಚನೆ ಮತ್ತು ಅದರ ನೋಂದಣಿ ಪ್ರಕ್ರಿಯೆಯ ಬಗ್ಗೆ ಸಮಾಲೋಚನೆ ನಡೆಸಲಾಗುವುದು. ಆದ್ದರಿಂದ ಕಾಲೇಜಿನ ಎಲ್ಲ ಹಳೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಈ ಸಭೆಗೆ ಹಾಜರಾಗಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ನೀಡಬೇಕು ಎಂದು ಪ್ರಾಚಾರ್ಯ ಶಿವಕುಮಾರ.ಕೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀರು ವಿಳಂಬ: ಸಹಕರಿಸಲು ಮನವಿ

ರಾಯಬಾಗ: ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಶುದ್ಧವಾದ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದ್ದು, ವಿದ್ಯುತ್ ವ್ಯತ್ಯಯ ಉಂಟಾದಲ್ಲಿ ನೀರು ಸರಬರಾಜು ಮಾಡಲು ವಿಳಂಬವಾಗುತ್ತದೆ. ಸಾರ್ವಜನಿಕರು ಸಹಕರಿಸಬೇಕು. ನೀರು ಅನಾವಶ್ಯಕವಾಗಿ ರಸ್ತೆಗೆ ಬಿಡದೇ, ಮಿತವಾಗಿ ಬಳಸಬೇಕು. ನೀರು ಉಪಯೋಗಿಸಿದ ನಂತರ ನೀರಿನ ತೊಟ್ಟಿ ಮುಚ್ಚಬೇಕು. ಮನೆ ಮುಂದೆ ಇರುವ ಸಾರ್ವಜನಿಕ ನಳದ ತೊಟ್ಟಿಗಳಿಗೆ ಮೋಟಾರ ಅಳವಡಿಸುವುದನ್ನು ನಿಷೇಧಿಸಿದೆ. ವಾರ್ಡುಗಳಲ್ಲಿ ಜಲಕುಂಭಗಳಿಗೆ ಪೈಪಲೈನ್ ಹಾಗೂ ಮೋಟಾರ ಅಳವಡಿಸಬಾರದು. ಇದರಿಂದ ನೀರು ಉಳಿತಾಯ ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ಸಾರ್ವಜನಿಕರು ನೀರನ್ನು ಅಗತ್ಯಕ್ಕೆ ತಕ್ಕಂತೆ ಮಿತವಾಗಿ ಬಳಸಬೇಕೆಂದು ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿ ಸಂಜೀವ ಮಾಂಗ ತಿಳಿಸಿದ್ದಾರೆ.



ಚಿಕ್ಕೋಡಿ: ಮಹಿಳಾ ದಿನಾಚರಣೆ ಅಂಗವಾಗಿ ಇಂದಿರಾನಗರ ಅಂಗನವಾಡಿ ಕೇಂದ್ರ ಕೋಡ್ ನಂಬರ್ 23ರಲ್ಲಿ ವಿವಿಧ ಮನೋರಂಜನೆ ಕಾರ್ಯಕ್ರಮ ನಡೆಯಿತು. ವಾರ್ಡ್ ಮೆಂಬರ್ ನೂರ್ ಜಹಾನ್ ಜಮಾದಾರ್, ಜುಡೊ ಕ್ರೀಡೆಯಲ್ಲಿ ರಾಜಮಟ್ಟದಲ್ಲಿ ಚಿನ್ನದ ಪದಕ ಪಡೆದ ಸುಕೇತಾ ಬೋರಣ್ಣವರ್, ಹೊಸ ದಿಗಂತ ವರದಿಗಾರರು ವಿಮಲಾ ಚಿನಕೇಕರಗೆ ಸನ್ಮಾನಿಸಲಾಯಿತು. ಪರ್ವಿನ್ ಭಗವಾನ, ಮಹದೇವಿ ಕಿಲ್ಲೆದಾರ್, ಶೋಭಾ ಮುರಗಾಲಿ, ಶ್ವೇತಾ ಕಪಲಿ ಖುತುಜಾ ಶಿಂದೇ, ಅಂಗನವಾಡಿ ಕಾರ್ಯಕರ್ತೆ ಶಿವಲೀಲಾ ಬೋರಣ್ಣವರ್ ಇದ್ದರು.

ನಿರಂತರ ವಿದ್ಯುತ್ ಸಂಪರ್ಕ ಉದ್ಘಾಟನೆ

ಹುಕ್ಕೇರಿ: ಗ್ರಾಮಕ್ಕೆ ಕುಡಿಯುವ ನೀರು ಪೂರೈಸುವ 25 ಕೆವ್ಹಿಎ ಟಿಸಿಯನ್ನು ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಇದನ್ನು ಸಮರ್ಪಕವಾಗಿ ಬಳಸಿಕೊಳ್ಳುವಂತೆ ಪಂಚಾಯತ ಸಿಬ್ಬಂದಿ ಮತ್ತು ಮುಖಂಡರಿಗೆ ಡಿಸಿಸಿ ಬ್ಯಾಂಕ ನಿರ್ದೇಶಕ ರಮೇಶ ಕತ್ತಿ ಹೇಳಿದರು. ಶುಕ್ರವಾರ ತಾಲೂಕಿನ ನೇರಲಿ ಗ್ರಾಮದಲ್ಲಿ ನೂತನವಾಗಿ ಅಳವಡಿಸಿದ ಕುಡಿಯುವ ನೀರು ಪೂರೈಕೆ ಟಿಸಿಗೆ ಕಲ್ಪಿಸಿದ ನಿರಂತರ ವಿದ್ಯುತ್ ಸಂಪರ್ಕ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಮುಂಬರುವ ದಿನಗಳಲ್ಲಿ ತೋಟಪಟ್ಟಿ ನಿವಾಸಿಗಳಿಗೂ ಈ ಭಾಗ್ಯ ಒದಗಿಸಲು ಪ್ರಯತ್ನಿಸುತ್ತಿದ್ದೇವೆ ಎಂದರು. ನಿರಂತರ ಜ್ಯೋತಿ ಸಂಪರ್ಕವನ್ನು ಉದ್ಘಾಟಿಸಿ ಮಾತನಾಡಿದ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದಅಧ್ಯಕ್ಷ ಮಹಾವೀರ ನಿಲಜಗಿ ಅವರು ಸದಸ್ಯರು ಮತ್ತುಗ್ರಾಹಕರು ಹಲವಾರು ವರ್ಷಗಳಿಂದ ಮನೆ, ವಾಣಿಜ್ಯ ಮಳಿಗೆಗಳ ವಿದ್ಯುತ್ ಬಿಲ್ ಬಾಕಿಯನ್ನುಆದಷ್ಟು ಬೇಗ ಸಂದಾಯ ಮಾಡುವಂತೆ ವಿನಂತಿಸಿದರು. ಸಂಘದ ಏಳಿಗೆಗೆ ಬಿಲ್ ಸಂದಾಯ ಅವಶ್ಯ. ಆನಿಟ್ಟಿನಲ್ಲಿ ಪ್ರತಿಯೊಬ್ಬರ ಸಹಕಾರಅವಶ್ಯವೆಂದರು. ಗ್ರಾಮಸ್ಥರು ಅತಿಥಿಗಳನ್ನು ಸನ್ಮಾನಿಸಿದರು. ಸಂಘದ ರೆಸಿಡೆಂಟ್ ಇಂಜನೀಯರ ನೇಮಿನಾಥ ಖೇಮಲಾಪೂರೆ, ಗ್ರಾಪಂ ಅಧ್ಯಕ್ಷ ನಿಲೇಶ ಜಾಧವ, ಪಿಕೆಪಿಎಸ್ ಅಧ್ಯಕ್ಷ ರುದ್ರಪ್ಪಾ ಪಾಟೀಲ, ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಬಸವರಾಜ ಪಾಟೀಲ, ಮುಖಂಡರಾದ ಈಶ್ವರ ಖೋತ, ಎಸ್.ಕೆ. ಹುಕ್ಕೇರಿ, ನಾಗೇಶ ಪಾಟೀಲ, ವಿನಾಯಕ ಸಂಕೇಶ್ವರಿ, ಅನೀಲ ಪಾಟೀಲ, ಈರಪ್ಪಾ ಲಬ್ಬಿ, ಎಸ್.ಆರ್.ಪಾಟೀಲ, ಆಕಾಶ ಗುರವ, ಸಂಜಯ ಹೊಸಮನಿ ಇತರರಿದ್ದರು.



ಹುಕ್ಕೇರಿ: ಶುಕ್ರವಾರ ತಾಲೂಕಿನ ನೇರಲಿ ಗ್ರಾಮದಲ್ಲಿ ನೂತನವಾಗಿ ಅಳವಡಿಸಿದ ಕುಡಿಯುವ ನೀರು ಪೂರೈಕೆ ಟಿಸಿಗೆ ಕಲ್ಪಿಸಿದ ನಿರಂತರ ವಿದ್ಯುತ್ ಸಂಪರ್ಕಉದ್ಘಾಟನಾ ಕಾರ್ಯಕ್ರಮ ನಡೆಯಿತು. ಡಿಸಿಸಿ ಬ್ಯಾಂಕ ನಿರ್ದೇಶಕ ರಮೇಶ ಕತ್ತಿ, ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಅಧ್ಯಕ್ಷ ಮಹಾವೀರ ನಿಲಜಗಿ ಸೇರಿದಂತೆ ಇತರರಿದ್ದರು.

ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಸಂಕೀರ್ಣ ನಿರ್ಮಾಣಕ್ಕೆ 1 ಕೋಟಿ ರೂ.ಅನುದಾನ

ಬೆಳಗಾವಿ: ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಸಂಕೀರ್ಣವನ್ನು ನಿರ್ಮಿಸಲಾಗುವುದು. ಇದಕ್ಕೆ ಶಾಸಕರ ಅನುದಾನದಿಂದ 1 ಕೋಟಿ ರೂ.ಗಳ ಅನುದಾನವನ್ನು ನೀಡುವುದಾಗಿ ದಕ್ಷಿಣ ಶಾಸಕ ಅಭಯ್ ಪಾಟೀಲ್ ಘೋಷಿಸಿದರು.

ಬೆಳಗಾವಿಯ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಿಂದ ಮಹಾನಗರ ಪಾಲಿಕೆಯ ವತಿಯಿಂದ ಇಂದಿನಿಂದ ಮೂರು ದಿನಗಳ ಕಾಲ ಆಯೋಜಿಸಿರುವ ಮಹಾಪೌರ ಚಷಕ ಅಂತರ ಮಹಾವಿದ್ಯಾಲಯ ಫುಟ್'ಬಾಲ್ ಪಂದ್ಯಾವಳಿಗೆ ಶುಕ್ರವಾರ ಚಾಲನೆ ದೊರೆಯಿತು. ದಕ್ಷಿಣ ಶಾಸಕ ಅಭಯ್ ಪಾಟೀಲ್ ಮಹಾಪೌರ ಮಂಗೇಶ್ ಪವಾರ್, ಉಪಮಹಾಪೌರ ವಾಣಿ ಜೋಷಿ, ಆಡಳಿತ ಪಕ್ಷದ ನಾಯಕ ಹಣಮಂತ ಕೊಂಗಾಲಿ ಸೇರಿದಂತೆ ಗಣ್ಯರು ದೀಪ ಬೆಳಗಿಸಿ, ಬಲೂನುಗಳನ್ನು ಹಾರಿ ಬಿಟ್ಟು ಪಂದ್ಯಾವಳಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೆಳಗಾವಿಯ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಮಹಾಪೌರ ಟ್ರೋಫಿ ಕ್ರೀಡಾ ಮಹೋತ್ಸವವನ್ನು ಆಯೋಜಿಸಲಾಗಿದೆ. ಬೆಳಗಾವಿ ಮಹಾನಗರ ಪಾಲಿಕೆ ಕೇವಲ ರಸ್ತೆ, ಚರಂಡಿಗಳ ಅಭಿವೃದ್ಧಿಯಷ್ಟೇ ಅಲ್ಲ, ಪ್ರತಿ ವರ್ಷ ಮಹಾಪೌರ ಟ್ರೋಫಿಯನ್ನು ಆಯೋಜಿಸಲಾಗುತ್ತದೆ ಎಂದರು.

ಬೆಳಗಾವಿಯಲ್ಲಿ ಇತ್ತೀಚೆಗೆ ಫುಟ್'ಬಾಲ್ ಕ್ರೇಜ್ ಹೆಚ್ಚಾಗುತ್ತಿದ್ದು, ಇದಕ್ಕೆ ಪ್ರೋತ್ಸಾಹಿಸಲು ಫೂಟ್'ಬಾಲ್ ಮೈದಾನವನ್ನು ನಿರ್ಮಿಸಲು ಶಾಸಕರ ಅನುದಾನದಲ್ಲಿ 1 ಕೋಟಿ ನೀಡುವುದಾಗಿ ಘೋಷಿಸಿದರು.



- ದಕ್ಷಿಣ ಶಾಸಕ ಅಭಯ್ ಪಾಟೀಲ್ ಘೋಷಣೆ
- ಅಂತಾರಾಷ್ಟ್ರೀಯ ಕ್ರೀಡಾ ಸಂಕೀರ್ಣ ಉದ್ಘಾಟನೆ

ಕರ್ನಾಟಕದಲ್ಲೇ ಮೊದಲಬಾರಿ ಯಳ್ಳೂರಿನಲ್ಲಿ 5 ಎಕರೆಯಲ್ಲಿ ಇಂಟರ್ ನ್ಯಾಷನಲ್ ಸ್ಪೋರ್ಟ್ ಕಾಂಪ್ಲೆಕ್ಸ್ ನಿರ್ಮಿಸುವುದಾಗಿ ತಿಳಿಸಿದರು.

ಮಹಾಪೌರ ಮಂಗೇಶ್ ಪವಾರ್ ಅವರು ಬೆಳಗಾವಿಯ ಕ್ರೀಡಾಳುಗಳಿಗೆ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಸಂಕೀರ್ಣ ನಿರ್ಮಿಸುವುದಾಗಿ ಘೋಷಿಸಿದ ಶಾಸಕ ಅಭಯ್ ಪಾಟೀಲ್ ಅವರಿಗೆ ಧನ್ಯವಾದಗಳನ್ನು ತಿಳಿಸಿದರು.

ಮಹಾನಗರ ಪಾಲಿಕೆ ಆಯುಕ್ತ ಕಾರ್ತಿಕ್ ಎಂ., ಯುವಕರು ವಿದ್ಯಾಭ್ಯಾಸದೊಂದಿಗೆ ಕ್ರೀಡಾಕೂಟಗಳ ಮೂಲಕ ಸದೃಢ ಆರೋಗ್ಯವನ್ನು ಹೊಂದಲೂ ಮಹಾನಗರ ಪಾಲಿಕೆಯ ವತಿಯಿಂದ ಮಹಾಪೌರ ಟ್ರೋಫಿಯನ್ನು ಆಯೋಜಿಸಲಾಗುತ್ತದೆ, ಈ ಪಂಧ್ಯವಳಿಯಲ್ಲಿ ವಿವಿಧ ಕಾಲೇಜಿನ ತಂಡಗಳು ಇದರಲ್ಲಿ ಭಾಗವಹಿಸಿವೆ ಎಂದರು ತಿಳಿಸಿದರು.

ಈ ವೇಳೆ ಮಹಾನಗರ ಪಾಲಿಕೆ ಸದಸ್ಯರಾದ ಗಿರೀಶ್ ಧೋಂಗಡಿ, ಶ್ರೇಯಸ್ ನಾಕಾಡಿ, ಆನಂದ ಚವ್ಹಾಣ್, ರಮೇಶ್ ಮೈಲಾಗೋಳ, ಶಾಲಾ ಕಾಲೇಜುಗಳ ವಿಧ್ಯಾರ್ಥಿಗಳು ಸೇರಿದಂತೆ ಹಲವರು ಇದ್ದರು.

ಮತ್ತೇ ಬೀದಿಗಿಳಿದ ರೈತರು ಕಬ್ಬಿನ ಬಾಕಿ ಬಿಲ್ ಪಾವತಿಗೆ ಆಗ್ರಹ

ಬೆಳಗಾವಿ: ಬಾಗಲಕೋಟೆ, ವಿಜಯಪುರ ಹಾಗೂ ಬೆಳಗಾವಿ ಜಿಲ್ಲೆಯ ಕಬ್ಬು ಬೆಳೆಗಾರರು ಬಾಕಿ ಬಿಲ್ ನೀಡುವಂತೆ ಆಗ್ರಹಿಸಿ ರೈತರು ಬೀದಿಗಿಳಿದಿದ್ದು, ಸಕ್ಕರೆ ಕಾರ್ಖಾನೆಗಳಿಂದ ಬರಬೇಕಾದ ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಬಾಕಿ ಹಣಕ್ಕಾಗಿ, ರೈತ ಸಂಘದ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ ನೇತೃತ್ವದಲ್ಲಿ ಬೆಳಗಾವಿಯ ಸಕ್ಕರೆ ಆಯುಕ್ತರ ಕಚೇರಿಗೆ ಮುತ್ತಿಗೆ ಹಾಕಿ ಧರಣಿ ಪ್ರತಿಭಟನೆ ನಡೆಸಿದರು.

ಶುಕ್ರವಾರ ಬೆಳಗಾವಿ ನಗರದಲ್ಲಿರುವ ಎಸ್ ನಿಜಲಿಂಗಪ್ಪ ಸಕ್ಕರೆ ಕಾರ್ಖಾನೆಯ ಕಚೇರಿಯ ಎದುರು ರೈತ ಸಂಘಟನೆಯ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ ನೇತೃತ್ವದಲ್ಲಿ ನೂರಾರು ರೈತರು ಜಮಾಯಿಸಿ ಮೂರು ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳಿಂದ ಬರಬೇಕಾದ ಬರೋಬ್ಬರಿ 1 ಸಾವಿರ ಕೋಟಿ ರೂಪಾಯಿಗೂ ಅಧಿಕ ಬಾಕಿ ಹಣವನ್ನು ತಕ್ಷಣ ಪಾವತಿಸಬೇಕೆಂದು ಧರಣಿ ಪ್ರತಿಭಟನೆಯಲ್ಲಿ ಆಗ್ರಹಿಸಿದರು.

ಪ್ರತಿ ಟನ್ ಕಬ್ಬಿಗೆ 3,300 ರೂಪಾಯಿ ದರ ನಿಗದಿ ಮಾಡಿದ್ದರೂ, ಕಾರ್ಖಾನೆಯ ಮಾಲೀಕರು ಹಣ ಪಾವತಿಸದೆ ರೈತರನ್ನು ಸತಾಯಿಸುತ್ತಿದ್ದಾರೆಎಂದುಪ್ರತಿಭಟನೆಯಲ್ಲಿ ಸಕ್ಕರೆ ಕಾರ್ಖಾನೆಯ ಮಾಲೀಕರ ವಿರುದ್ಧ ಆಕ್ರೋಶ ಹೊರ ಹಾಕಿದರು, ಅಲ್ಲದೇ ರೈತರ ಕಬ್ಬಣ ಬಿಲ್ ಬಾಕಿಯ ಬಗ್ಗೆ ಕೂಡಲೇ ಮಾಹಿತಿ ನೀಡಬೇಕೆಂದು ಪ್ರತಿಭಟನೆಯಲ್ಲಿ ಒತ್ತಾಯಿಸಲಾಯಿತು.

ಸಕ್ಕರೆ ಕಾರ್ಖಾನೆಗಳ ಬಾಕಿ ಬಿಲ್ಲಿನ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿ ಬೆಳಗಾವಿ ಜಿಲ್ಲೆಯ 29 ಸಕ್ಕರೆ ಕಾರ್ಖಾನೆಗಳಲ್ಲಿ 2 ಕಾರ್ಖಾನೆಗಳು ಶೇ. 100 ರಷ್ಟು ಹಣವನ್ನು ನೀಡಿವೆ. ಬಾಕಿ 27 ಸಕ್ಕರೆ ಕಾರ್ಖಾನೆಗಳ 1554 ಕೋಟಿ 47 ಲಕ್ಷ ಬಾಕಿ ಇದೆ ಎಂದರು.

ಕಬ್ಬು ಬೆಳೆಗಾರರ ಬಾಕಿ ಇರುವ ಬಿಲ್ 14 ದಿನದೊಳಗೆ ರೈತರ ಖಾತೆಗೆ ಜಮೆಯಾಗದೆ ಇದ್ದಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟವನ್ನು ಮಾಡಬೇಕಾಗುತ್ತದೆ ಎಂದು ಪ್ರತಿಭಟನೆಯ ಮೂಲಕ ಸಕ್ಕರೆ ಕಾರ್ಖಾನೆಯ ಮಾಲಿಕರಿಗೆ ಎಚ್ಚರಿಕೆ ನೀಡಿದರು.

ಈ ವೇಳೆ ರೈತ ಸಂಘಟನೇಯ ರಾಜ್ಯಾಧ್ಯಕ್ಷರು, ಚುನಪ್ಪ ಪೂಜೇರಿ, ಪ್ರಕಾಶ ನಾಯಕ ರಾಷ್ಟ್ರೀಯ ನಾಯಕರು, ಕಿಶನ ನಂದಿ ರಾಜ್ಯ ಕಾರ್ಯದರ್ಶಿ ಸೇರಿದಂತೆ ನೂರಾರು ರೈತರು ಕಾರ್ಯಕರ್ತರು ಇದ್ದರು.



ಶಿಲಾಶಾಸನ ಪತ್ತೆ ಹಚ್ಚಿದ ಲಕ್ಷ್ಮೀಗೆ ಸನ್ಮಾನ

ಮಲ್ಲಮ್ಮನ ಬೆಳವಡಿ: ಗ್ರಾಮದ ಆದರ್ಶ ಶಿಕ್ಷಣ ಸಂಸ್ಥೆಯಲ್ಲಿ ಅಭ್ಯಾಸ ಮಾಡುತ್ತಿರುವ 11 ವರ್ಷದ ಬಾಲಕಿ ಗ್ರಾಮದ ಲಕ್ಷ್ಮಿ ಪ್ರಕಾಶ್ ಹುಂಬಿ ಇವಳನ್ನು ಆದರ್ಶ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಹಾಗೂ ಶಿಕ್ಷಕರು ಗುರುಮಾತೆಯರು ಸನ್ಮಾನಿಸಿದರು.

ಈ ವೇಳೆ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎ.ಬಿ ಪಾಟೀಲ್ ಮಾತನಾಡಿ, ಲಕ್ಷ್ಮಿ ದೇವರಿಗೆ ಹೋದಾಗ ಹನುಮಂತ ದೇವರ ದೇವಸ್ಥಾನದ ಹೊರಗಡೆ ಇರುವ ಮೂರ್ತಿಯನ್ನು ಇದು ದೇವರ ಮೂರ್ತಿಯಲ್ಲ. ಒಂದು ಐತಿಹಾಸಿಕ ಶಿಲೆ ಎಂಬುದನ್ನು ಕಂಡುಹಿಡಿದಿರುವುದು ನಮ್ಮ ಹೆಮ್ಮೆ. ನಮ್ಮ ಶಾಲೆಯಲ್ಲಿ ಮಕ್ಕಳಿಗೆ ಇತಿಹಾಸದ ಬಗ್ಗೆ ನಮ್ಮ ಶಿಕ್ಷಕ ವೃಂದ ಮಕ್ಕಳಿಗೆ ಅಚ್ಚುಕಟ್ಟಾದ ಪಾಠ ಪಠಿಸುತ್ತಿರುವುದು ಈ ಒಂದು ವಿದ್ಯಾರ್ಥಿನಿಯಿಂದ ನಮಗೆ ಗೊತ್ತಾಗುತ್ತಿದೆ. ವಿದ್ಯಾರ್ಥಿನಿಯ ಸಾಧನೆಯು ನಮ್ಮ ತಾಲೂಕಿಗೆ ಜಿಲ್ಲೆಗೆ ನಮ್ಮ ಶಿಕ್ಷಣ ಸಂಸ್ಥೆಗೆ ಹೆಮ್ಮೆ ಇದೆ ಎಂದು ತಿಳಿಸಿದರು.

ಸಂಸ್ಥೆಯ ಕಾರ್ಯದರ್ಶಿ ಮಂಗಳಾದೇವಿ ಪಾಟೀಲ್ ಮಾತನಾಡಿ, ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪಾಠದ ಜೊತೆಗೆ ಐತಿಹಾಸಿಕ ಪ್ರಜ್ಞೆಯನ್ನು ರೂಢಿಸಿಕೊಳ್ಳಬೇಕು. ಲಕ್ಷ್ಮಿ ನಮ್ಮ ಆದರ್ಶ ಶಿಕ್ಷಣ ಸಂಸ್ಥೆಯ ಹೆಮ್ಮೆಯ ವಿದ್ಯಾರ್ಥಿನಿಯಾಗಿ ಹೊರಹೊಮ್ಮಿರುವುದು ನಮಗೆ ಸಂತೋಷವಾಗಿದೆ ಎಂದರು.

ಶಿಕ್ಷಣ ಸಂಸ್ಥೆಯ ಮುಖ್ಯೋಪಾಧ್ಯಾಯ ಸಂಗಮೇಶ್ ಫಡಕರ್ ಮಾತನಾಡಿದರು.

ಲಕ್ಷ್ಮಿಯ ಸಹೋದರ ಸಚಿನ್ ಹುಂಬಿ ಮಾತನಾಡಿದರು. ಶಿಕ್ಷಕಿಯರಾದ ಶಾಂಭವಿ ದೇಸಾಯಿ ಬಸಮ್ಮ ಕೋಲ್ಕಾರ್, ಶಿಲ್ಪ ಮಂಗಳಗಟ್ಟಿ, ಶ್ರೀದೇವಿ ಪೂಜೇರ್, ಐಶ್ವರ್ಯ ಪಾಟೀಲ್, ಸುಮಾ ಕಬ್ಬೂರ್, ಪ್ರಶಾಂತ ಗಾಳಿ, ರತ್ನ ಕಂಬಾರ, ಲಕ್ಷ್ಮಿ ಕೋಟಿ, ಅನುರಾಧ ಗೌಡ, ಭಾಗ್ಯ ಹುಲಿಮಠ, ತೇಜಸ್ವಿನಿ ಬಡಿಗೇರ್, ರಿಯಾಣ ಶಾನವಾಡ, ವಾಣಿ ಛಬ್ಬಿ, ಬಸಮ್ಮ ಮೊಕಾಶಿ, ನಾಗರತ್ನ ಮಂಗಳಗಟ್ಟಿ, ನಾಗರತ್ನ ಕಂಬಾರ್, ಬಸ್ಸಮ್ಮ ಹುಬ್ಬಳ್ಳಿ, ರೇಣುಕಾ ಭಾಜಿ, ಸುಷ್ಮಾ ಕಂಬಾರ್ ಉಪಸ್ಥಿತರಿದ್ದರು.



ತಂಬಾಕು ಉತ್ಪನ್ನಗಳಿಂದಾಗುವ ದುಷ್ಪರಿಣಾಮ ತರಬೇತಿ ಕಾರ್ಯಾಗಾರ

ಬೆಳಗಾವಿ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಬುಧವಾರ ತಂಬಾಕು ಮಾರಾಟ ಮಾಡುವ ಅಂಗಡಿ ಮಾಲಿಕರಿಗೆ ಕೋಟ್ಪಾ ಕಾಯ್ದೆಯ ಆದೇಶದ ಕುರಿತು ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು.

ಬೆಳಗಾವಿ ಚೌಗಲೇವಾಡಿ ಪ್ರಾಥಮಿಕ ಆರೋಗ್ಯ ಕೇಂದ್ರ ಡಾ. ರಾಜೇಶ್ವರಿ ಪಾಟೀಲ ಮಾತನಾಡಿ, ತಂಬಾಕು ಮುಕ್ತ ಪೀಳಿಗೆಯ ಕಾರ್ಯಕ್ರಮ ಅತಿ ಮುಖ್ಯ. ಕ್ಯಾನ್ಸರ್, ಇತರ ರೋಗಗಳು ಹೆಚ್ಚುತ್ತಿರುವ ವಿಷಯ ತಿಳಿಸಿದರು.

ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಜಿಲ್ಲಾ ಸಲಹೆಗಾರರು ಡಾ.ಶ್ವೇತಾ ಪಾಟೀಲ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ತಂಬಾಕು ಸೇವನೆಯಿಂದಾಗುವ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮಗಳ ಮಾಹಿತಿ ನೀಡಿದರು.

ಅದೇ ರೀತಿ ಕೋಟ್ಪಾ ಕಾಯ್ದೆಯ ಸೆಕ್ಷನ್-4 ರ ಉಲ್ಲಂಘನೆ ಆದಲ್ಲಿ ಒಂದು ಸಾವಿರವರೆಗೂ ದಂಡ ಹಾಗೂ 21 ವಯಸ್ಸಿನ ಕಡಿಮೆ ಇರುವ ಯುವಕರಿಗೆ ಹಾಗೂ ಯುವಕರಿಂದ ಮಾರಾಟ ನಿಷೇಧಿಸುವ ಮಾಹಿತಿಯನ್ನು ತಿಳಿಸುತ್ತಾ, ಹಾಗೂ ಬಿಡಿ ಬಿಡಿಯಾಗಿ ಸಿಗರೇಟ್ ಮಾರಾಟ ಮಾಡುವುದರಿಂದ ಸೆಕ್ಷನ್ 6 (ಬಿ) ಉಲ್ಲಂಘನೆಯಾಗಿದ್ದಲಿ 1000 ರೂ ವರೆಗೂ ದಂಡವನ್ನು ವಿಧಿಸಬಹುದು. ಎಲ್ಲ ಅಂಗಡಿ ಮಾಲಿಕರು ಕಡ್ಡಾಯವಾಗಿ ಮಹಾನಗರ ಪಾಲಿಕೆಯಿಂದ ಪ್ರತ್ಯೇಕವಾಗಿ ಪರವಾನಿಗೆಯನ್ನು ಪಡೆದುಕೊಳ್ಳಬೇಕಾಗಿರುವ ವಿಷಯ ತಿಳಿಸಿದರು.



ಜಿಲ್ಲಾ ಆಸ್ಪತ್ರೆಯಲ್ಲಿರುವ ಜಿಲ್ಲಾ ವ್ಯಸನ ಮುಕ್ತ ಕೇಂದ್ರದಲ್ಲಿ ದೂರೆಯುವ ಸೇವಾ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ತಾಲೂಕಾ ಆರೋಗ್ಯ ಹಿರಿಯ ನಿರೀಕ್ಷಣಾಧಿಕಾರಿಗಳು ಪಾತಳಿ ಕಾರ್ಯಾಕ್ರಮ ನಿರೂಪಿಸಿ ವಂದಿಸಿದರು.

ಕೈ ತೊರೆದು ಬಿಜೆಪಿಗೆ ಸೇರ್ಪಡೆ

ಚಿಕ್ಕೋಡಿ: ಕಾಂಗ್ರೆಸ್ ಕಾರ್ಯಕರ್ತರ ಆಗಮನದಿಂದ ನಿಪ್ಪಾಣಿ ಕ್ಷೇತ್ರದಲ್ಲಿ ಬಿಜೆಪಿ ಪಕ್ಷಕ್ಕೆ ಮತ್ತಷ್ಟು ಬಲ ಬಂದಿದೆ ಎಂದು ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಹೇಳಿದರು.

ಕಾಂಗ್ರೆಸ್‌ನ 20ಕ್ಕೂ ಅಧಿಕ ಕಾರ್ಯಕರ್ತರು ಬಿಜೆಪಿ ಸೇರ್ಪಡೆಯಾದ ಸಂದರ್ಭದಲ್ಲಿ ಅವರು ಮಾತನಾಡಿದರು.

ಗೌರವಾನ್ವಿತ ಪ್ರಧಾನಮಂತ್ರಿಗಳಾದ ಸನ್ಮಾನ್ಯ ನರೇಂದ್ರ ಮೋದಿ ಅವರ ಕೇಂದ್ರ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಹಾಗೂ ನಿಪ್ಪಾಣಿ ಕ್ಷೇತ್ರದಲ್ಲಿ ನಾನು ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ನಿಪ್ಪಾಣಿ ಮತಕ್ಷೇತ್ರದ ಭಿಮಾಪೂರವಾಡಿ ಗ್ರಾಮದ ಸತೀಶ ಕೊಂಡೆಕರ, ವಿಶಾಲ ಸೂರ್ಯವಂಶಿ, ಉದಯ ಬೇಳೆಕರ, ತುಷಾರ ಕೋಂಡೇಕರ, ಕೇದಾರ ಸೂರ್ಯವಂಶಿ, ಕುಬೇರ ಕೊಂಡೆಕರ, ರೋಹನ ಚವ್ಹಾಣ, ಪ್ರಥಮೇಶ ಬೇಳೆಕರ, ಉದಯ ಕೊಂಡೆಕರ, ರಂಜಿತ ಕೊಂಡೆಕರ, ಅಜಿತ ಕೊಂಡೆಕರ, ಗಣೇಶ ಮೊರೆ, ಪ್ರಕಾಶ ಸಾಳುಂಕೆ ಹಾಗೂ ಅವರ ತಂಡದ 20ಕ್ಕಿಂತ ಅಧಿಕ ಕಾಂಗ್ರೆಸ್ ಕಾರ್ಯಕರ್ತರು ಪಕ್ಷ ತೊರೆದು ನಮ್ಮ ಬಿಜೆಪಿ ಪಕ್ಷಕ್ಕೆಸೇರ್ಪಡೆಗೊಂಡಿದ್ದು, ಅವರನ್ನು ಮಾಜಿ ಸಚಿವರು ಹಾಗೂ ನಿಪ್ಪಾಣಿ ಜನಪ್ರಿಯ ಶಾಸಕರಾದ ಶಶಿಕಲಾ ಜೊಲ್ಲೆ ಹಾಗೂ ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆಯವರು ಆತ್ಮೀಯವಾಗಿ ಭಾರತೀಯ ಜನತಾ ಪಕ್ಷಕ್ಕೆ ಬರಮಾಡಿಕೊಂಡರು.



ಈ ಸಂದರ್ಭದಲ್ಲಿ ಬಿಜೆಪಿ ಗ್ರಾಮೀಣ ಅಧ್ಯಕ್ಷ ಬಾಳಾಸಾಹೇಬ ಕದಂ. ಸಿದ್ದು ನರಾಟೆ ಹಾಲಶುಗರ ನಿರ್ದೇಶಕರಾದ ಶ್ರೀಕಾಂತ ಬನ್ನೇ, ಭರತ ನಸಲಾಪುರೆ, ಬಾಳಾಸಾಹೇಬ ಸದಲಗೆ, ಮಿಥುನ ಪಾಟೀಲ, ಅರುಣ ಬಿಲವಾಡೆ, ಬಾಬಾಸಾಹೇಬ ಜಾಧವ, ಅಲಗೊಂಡ ಪಾಟೀಲ, ಭರತ ಘೋಸರವಾಡೆ ರೇಖಾ ಘೋಸರವಾಡೆ ಉಪಸ್ಥಿತರಿದ್ದರು.

ಶಿಕ್ಷಕರ ಸಂಘದಿಂದ ಸರ್ಕಾರಕ್ಕೆ ಮನವಿ


ಯರಗಟ್ಟಿ: ಜನಗಣತಿ ಕಾರ್ಯಕ್ಕೆ ಮಾರಣಾತಿಕ ಕಾಯಿಲೆ ಇರುವ ಶಿಕ್ಷಕರಿಗೆ, ಹೆರಿಗೆ ರಜೆಯಲ್ಲಿರುವ ಶಿಕ್ಷಕಿಯರಿಗೆ ಮತ್ತು ಮುಖ್ಯ ಶಿಕ್ಷಕರಿಗೆ, ಬಿಎಲ್‌ಒ ಶಿಕ್ಷಕರಿಗೆ ವಿನಾಯತಿ ನೀಡಿ ಉಳಿದವರನ್ನು ಜನಗಣತಿ ಕಾರ್ಯಕ್ಕೆ ಬಳಸಿಕೊಳುವಂತೆ ಕರ್ನಾಟಕ ಶಿಕ್ಷಕರ ಸಂಘಗಳ ಪರಿಷತ್ತು ರಾಜ್ಯ ಅಧ್ಯಕ್ಷ ಸಂಗಮೇಶ ಖನ್ನಿನಾಯ್ಕರ ತಹಶೀಲ್ದಾರ ಎಂ. ವ್ಹಿ. ಗುಂಡಪ್ಪಗೋಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿ ತಹಶೀಲ್ದಾರ ಎಂ. ವ್ಹಿ. ಗುಂಡಪ್ಪಗೋಳ ಮಾತನಾಡಿ, ಈ ಜನಗಣತಿ ಕಾರ್ಯಕ್ಕೆ ಅನುಕೂಲ ಇರವ ಶಿಕ್ಷಕರಿಗೆ ಈ ಕೆಲಸಕ್ಕೆ ಆಯ್ಕೆಮಾಡಲಾಗುವುದು. ಮಾರಣಾತಿಕ ಕಾಯಿಲೆ ಇರುವ ಶಿಕ್ಷಕರಿಗೆ, ಹೆರಿಗೆ ರಜೆಯಲ್ಲಿರುವ ಶಿಕ್ಷಕಿಯರಿಗೆ ಮತ್ತು ಮುಖ್ಯ ಶಿಕ್ಷಕರಿಗೆ, ಬಿಎಲ್‌ಒ ಶಿಕ್ಷಕರಿಗೆ ರಿಯಾಯಿತಿ ನೀಡಿ ಖಂಡಿತವಾಗಿ ಸಮಸ್ಯೆಗಳನ್ನು ಪರಿಹರಿಸೋಣ ಮತ್ತು ಎಲ್ಲಾ ಶಿಕ್ಷಕ ಮತ್ತು ಶಿಕ್ಷಕಿಯರಿಗೆ ಅನುಕೂಲ ಮಾಡಲಿಕ್ಕೆ ಪ್ರಯತ್ನ ಮಾಡೋಣ ಎಂದು ಹೇಳಿದರು.

ಈ ವೇಳೆ ಶಿಕ್ಷಕರಾದ ಎಂ. ಎಂ. ಚಿಲದ, ಎಸ್. ಬಿ. ಮಿಕಲಿ, ಪ್ರಧಾನ ಗುರು ಎ. ಎ. ಮಕ್ತುಮನವರ, ಶಿಕ್ಷಣ ಸಂಯೋಜಕ ಎಂ. ಬಿ. ಕಡಕೋಳ, ಸಿಆರ್‌ಪಿಗಳಾದ ವಸಂತ ಬಡಿಗೇರ, ಎಂ. ಎಂ. ಮಲ್ಲಕನ್ನವರ, ಬಿ. ಎಸ್. ಸಿದ್ದಬಸನ್ನವರ, ಸೋಮೇಶ ಪೂಜೇರ, ವಿಜಯ ಮೆಳವಂಕಿ, ಆರ್.ಎ. ಗಂಗೂರ, ಡಿ.ಎಚ್. ಭಜಂತ್ರಿ, ಆರ್. ಕೆ. ಹುಣಶೀಕಟ್ಟಿ, ಅನಿಲ ಭಜಂತ್ರಿ, ಬಿ.ಎಂ. ಸರದಾರ, ಮಲ್ಲಪ್ಪ ಯರಝರ್ವಿ, ವೈ. ಬಿ. ನಂದಿ ಸೇರಿದಂತೆ ಅನೇಕ ಶಿಕ್ಷಕರು ಮುಂತಾದವರು ಉಪಸ್ಥಿತರಿದ್ದರು.



ಕಬ್ಬಿನ ಬೆಳೆಗೆ ಪ್ರತಿ ಎಕರೆಗೆ ರೂ. 4 ಲಕ್ಷ ಸಾಲ ನೀಡಿ



ರಾಯಬಾಗ: ರೈತರಿಗಾಗಿಯೇ ಇರುವ ಬಿಡಿಸಿಸಿ ಬ್ಯಾಂಕಿನಿಂದ ಪ್ರತಿ ಎಕರೆಗೆ ರೂ.4.ಲಕ್ಷ ಸಾಲ ನೀಡಿದರೆ ಮಾತ್ರ ರೈತರು ಆರ್ಥಿಕವಾಗಿ ಸಬಲರಾಗುತ್ತಾರೆ ಎಂದು ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಪ್ರತಾಪರಾವ ಪಾಟೀಲ ಹೇಳಿದರು.

ತಾಲೂಕಿನ ಹಂದಿಗುಂದ ಗ್ರಾಮದ ಶ್ರೀ ಮಲ್ಲಿಕಾರ್ಜುನ ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಕರಷಿ ಸಹಕಾರ ಸಂಘದ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ರೈತರೊಂದಿಗೆ ಸಮಾಲೋಚನ ಕಾರ್ಯಕ್ರಮದಲ್ಲಿ ಮಾತನಾಡಿ, ಈಗ ಬಿಡಿಸಿಸಿ ಬ್ಯಾಂಕ್ ಸದ್ಯ ಪ್ರತಿ ಎಕರೆಗೆ ರೂ. 40 ಸಾವಿರ ಸಾಲ ಕೊಡುತ್ತಿದ್ದು, ಅದು ರೈತರಿಗೆ ಸಾಕಾಗುವುದಿಲ್ಲ. ಈಗ ಬೀಜ, ರಸಗೊಬ್ಬರ, ಕೆಲಸಗಾರರ ಕೂಲಿ ದರಗಳು ಗಗನಕ್ಕೇರಿವೆ. ಹೀಗಾಗಿ ಬೆಳೆ ಕೈಗೆ ಬರುವಷ್ಟರಲ್ಲಿ ರೈತರ ಜೀವ ಬಾಯಿಗೆ ಬಂದಂತಾಗುತ್ತದೆ. ರೈತರು ಆರ್ಥಿಕ ರೇಖೆಯಿಂದ ಮೇಲೆ ಬರಲು ಬರುವ ದಿನಗಳಲ್ಲಿ ಕಬ್ಬಿನ ಬೆಳೆಗೆ ಪ್ರತಿ ಎಕರೆಗೆ ರೂ. 4 ಲಕ್ಷ ಸಾಲ ನೀಡಿದರೆ ರೈತರು ಸಮೃದ್ಧ ಜೀವನ ನಡೆಸಲು ಸಾಧ್ಯ ಎಂದರು.

ಶ್ರೀ ಮಲ್ಲಿಕಾರ್ಜುನ ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಅಧ್ಯಕ್ಷ ಶಿವಪ್ಪ ಮಿರ್ಜಿ ಅಧ್ಯಕ್ಷತೆ ವಹಿಸಿದ್ದರು.

ಸಂಘದ ಉಪಾಧ್ಯಕ್ಷಗಿರಿ ಮಲ್ಲಪ್ಪ ಸುಳ್ಳನವರ, ನಿರ್ದೇಶಕರಾದ ಧರೆಪ್ಪ ಚಿನಗುಂಡಿ, ಪರಪ್ಪ ಬುದ್ನಿ, ಮಲ್ಲಪ್ಪ ಮಿರ್ಜಿ, ರಮೇಶತೇಲಿ, ಮಲ್ಲಪ್ಪ ಇಟ್ನಾಳ, ಶ್ರೀಶಯಲ ಗೊಲಬಾವಿ, ಚಂದ್ರಪ್ಪ ದೇವರವರ, ಗ್ರಾಪಂ ಉಪಾಧ್ಯಕ್ಷ ಸಂಗಪ್ಪ ಮಿರ್ಜಿ, ಮುರುಗೇಶ ರೆಡ್ಡಿ, ಗಿರಿಮಲ್ಲಪ್ಪ ಚಿನಗುಂಡಿ, ಮುರಿಗೆಪ್ಪ ಅಂದಾನಿ, ಸಿದ್ದಪ್ಪ ಉಳ್ಳಾಗಡ್ಡಿ, ಡಾ.ನಿಂಗಪ್ಪ ದಳವಾಯಿ, ಪರಪ್ಪ ಸುಳ್ಳನವರ, ಪರಶುರಾಮ ಚಿನಗುಂಡಿ ಇದ್ದರು.

ಸಮಾಜ ಸೇವೆಯಿಂದ ವ್ಯಕ್ತಿತ್ವ ವಿಕಸನ: ಸುರೇಶ

ಮೂಡಲಗಿ: ವಿದ್ಯಾರ್ಥಿಗಳು ಕೇವಲ ಪಠ್ಯಕ್ಕೆ ಸೀಮಿತವಾಗದೆ ಎನ್‌ಎಸ್‌ಎಸ್ ನಂತಹ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಮಾತ್ರ ನೈಜ ಸಮಾಜದ ಪರಿಚಯವಾಗುತ್ತದೆ. ನಾಯಕತ್ವದ ಗುಣಗಳು ಬೆಳೆಯುತ್ತವೆ ಎಂದು ಕಾಲೇಜಿನ ಪ್ರಾಚಾರ್ಯ ಡಾ. ಸುರೇಶ ಹನಗಂಡಿ ಹೇಳಿದರು.

ಸಮೀಪದ ದತ್ತುಗ್ರಾಮ ಬಳೋಬಾಳದಲ್ಲಿ ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಗುರುವಾರ ಹಮ್ಮಿಕೊಂಡಿದ್ದ 2025-26ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಬಳೋಬಾಳದ ಸರ್ಕಾರಿ ಪ್ರೌಢ ಶಾಲೆಯ ಎಸ್ಡಿಎಂಸಿ ಅಧ್ಯಕ್ಷ ಶ್ರೀಶೈಲ್ ಬೆಳವಿ, ಲಗಮಣ್ಣ ಕಳಸನ್ನವರ, ಬಳೋಬಾಳದ ಸರ್ಕಾರಿ ಪ.ಪೂ. ಕಾಲೇಜಿನ ಕಾರ್ಯಾಧ್ಯಕ್ಷ ಪ್ರಧಾನಿ ಕಳಸನ್ನವರ, ಕಾರ್ಯಕ್ರಮಾಧಿಕಾರಿ ಶಂಕರ ನಿಂಗನೂರ, ಗ್ರಾಮದ ಹಿರಿಯರಾದ ಸುನೀಲ ಈರೇಶನವರ, ಶಿವಪುತ್ರ ಚಿಮ್ಮಡ ಮಾತನಾಡಿದರು. ಈ ವೇಳೆ ಶಿಬಿರದ ಯಶಸ್ವಿಗೆ ಸಹಕಾರ ನೀಡಿದ ಗ್ರಾಮಸ್ಥರನ್ನು ಸನ್ಮಾನಿಸಲಾಯಿತು.

ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ನಿರ್ದೇಶಕ ಸಾತಪ್ಪಖಾನಾಪೂರ, ಸಹಶಿಬಿರಾಧಿಕಾರಿ ಬಿ.ಸಿ.ಮಾಳಿ, ಕಾಲೇಜಿನ ಬೋಧಕ ಸಿಬ್ಬಂದಿಗಳಾದಡಾ.ಎಂ.ಬಿ.ಕುಲಮೂರ, ಡಾ.ಕೆ.ಎಸ್. ಪರವ್ವಗೋಳ, ಬಿ.ಕೆ.ಸೊಂಟನವರ, ಬಿ.ಬಿ.ವಾಲಿ, ಆರ್.ಎಸ್. ಪಂಡಿತ, ವಿಲಾಸ ಕೆಳಗಡೆ, ವಿ.ವೈ.ಕಾಳೆ, ಡಾ.ಆರ್.ಎನ್. ತೋಟಗಿ, ಅಕ್ಷತಾ ಮೇದಾರ, ಎಂ.ಆರ್.ಕರಗಣ್ಣಿ, ಬೋಧಕೇತರ ಸಿಬ್ಬಂದಿ, ಗ್ರಾಮಸ್ಥರು, ಶಿಬಿರಾರ್ಥಿಗಳು ಇದ್ದರು. ಐಶ್ವರ್ಯ ಚಿಪ್ಪಲಕಟ್ಟಿ, ಸಂಗಡಿಗರು ಪ್ರಾರ್ಥಿಸಿ, ಸಾಕ್ಷೀ ಮಕ್ಕಳಗೇರಿ, ಸಂಗಡಿಗರು ಎನ್‌ಎಸ್‌ಎಸ್ ಗೀತೆ ಹಾಡಿದರು. ಸಹಶಿಬಿರಾಧಿಕಾರಿ ಡಿ.ಎಸ್. ಹುಗ್ಗಿ ಸ್ವಾಗತಿಸಿ, ಪ್ರತಿಭಾ ಮಕ್ಕಳಗೇರಿ, ಭಾಗ್ಯ ಹುಕ್ಕೇರಿ ನಿರೂಪಿಸಿ, ಸಹಶಿಬಿರಾಧಿಕಾರಿ ಎಂ.ಬಿ. ಜಾಲಗಾರ ವಂದಿಸಿದರು.



ಕಿರುಸುದ್ದಿ

ಅಖಂಡ ಹರಿನಾಮ ಉತ್ಸವ ಕಾರ್ಯಕ್ರಮ ಇಂದಿನಿಂದ

ಕಲಾದಗಿ: ಗ್ರಾಮದ ವಿಠ್ಠಲ ನಗರದಲ್ಲಿರುವ ಪಾಂಡುರಂಗ ರುಕ್ಮಿನಿ ಮಂದಿರದಲ್ಲಿ ಗೋಂಧಳಿ ಸಮಾಜದವರ ನೇತೃತ್ವದಲ್ಲಿ ಮಾ.14ರಿಂದ 17ರ ವರೆಗೆ ಅಖಂಡ ಹರಿನಾಮ ಉತ್ಸವ ಕಾರ್ಯಕ್ರಮ ಜರುಗಲಿದ್ದು, ಮಾ.14ರಂದು ಬೆಳಗ್ಗೆ 6 ಗಂಟೆಗೆ ಮಂಗಲಧ್ವಜ ಹಾಗೂ ಮಹಾಭಿಷೇಕ, ಜ್ಞಾನೇಶ್ವರಿ ಪೋತಿ ಸ್ಥಾಪನೆ, ನಾಮಜಪ, ಪ್ರವಚನ, ಕೀರ್ತನೆ, ಜ್ಞಾನೇಶ್ವರಿ ಪರಿಪಾಠ ಹಾಗೂ ರಾತ್ರಿ ಭಜನೆ ನಡೆಯುತ್ತದೆ. ಮಾ.15ರಂದು ಕಾಕಡಾರತಿ, ಗಾತಾ ಭಜನ, ಜಾಗರಣೆ, ಸಂಗೀತ ಭಜನೆ ಮಾ.16ರಂದು ಕಾಕಡಾರತಿ, ನಾಮಜಪ, ಮದ್ಯಾಹ್ನ ಮಹಾ ಪ್ರಸಾದ, ಸಂಜೆ ಕೀರ್ತನೆ, ಕಿರಾಪತ ಪ್ರಸಾದ ನಡೆಯಲಿದ್ದು ಮಾ17ರಂದು ಕೊನೆಯ ದಿನದಂದು ಬೆಳಗ್ಗೆ ವಿಶೇಷ ಪೂಜೆ, ಕಾಕಡಾರತಿ ಸಂಜೆ ಜ್ಞಾನೇಶ್ವರಿ ಪಾಲಕಿ ದಿಂಡಿ ಸೋಹಳಾ, ಕಾಲಾ ಕೀರ್ತನೆ ಮತ್ತು ಮಹಾಪ್ರಸಾದ ಜರುಗಲಿದೆ. ಈ ಪಾಂಡುರಂಗ ಅಖಂಡ ಹರಿನಾಮ ಉತ್ಸವದಲ್ಲಿ ಬಹು ಸಂಖ್ಯೆಯಿಂದ ಪಾಲ್ಗೊಳ್ಳಬೇಕೆಂದು ಅಖಂಡ ಹರಿನಾಮ ಉತ್ಸವ ಆಚರಣಾ ಸಮೀತಿಯವರು ಹೇಳಿದ್ದಾರೆ.

ಇಂದು ರಾಜ್ಯ ಸಮ್ಮೇಳನ

ಬಾಗಲಕೋಟೆ: ಕರ್ನಾಟಕ ರಾಜ್ಯ ಔಷಧ ಮತ್ತು ಮಾರಾಟ ಪ್ರತಿನಿಧಿಗಳ ಸಂಘದ 28ನೇ ರಾಜ್ಯ ಸಮ್ಮೇಳನ ಮಾ.14, 15ರಂದು ಬಾಗಲಕೋಟೆ ನಗರದ ನಗರದ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ಮಾರಾಟ ಪ್ರತಿನಿಧಿಗಳ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಗುರುರಾಜ್ ದೇಸಾಯಿ ಹೇಳಿದರು. ನವನಗರದ ಪತ್ರಿಕಾಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನದಲ್ಲಿ ರಾಜ್ಯದ 20 ಜಿಲ್ಲೆಗಳಿಂದ 250 ಚುನಾಯಿತ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಸಮ್ಮೇಳನವನ್ನು ಅಖಿಲ ಭಾರತ ಒಕ್ಕೂಟ ಮತ್ತು ಎಫ್.ಎಂ.ಆರ್.ಎ.ಐನ ಕಾರ್ಯದರ್ಶಿ ಎಸ್.ವಾಸುದೇವನ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ, ಮಾಜಿ ಶಾಸಕ ವೀರಣ್ಣ ಚರಂತಿಮಠ, ಹಿರಿಯ ಮೂಳೆ ಚಿಕಿತ್ಸಕ ಡಾ.ಎಂ.ಎಸ್.ದಡ್ಡೇನವರ, ಆಗಮಿಸುವರು. ಕೆ.ಎಸ್.ಎಂ ಮತ್ತು ಎಸ್.ಆರ್.ಎ ಅಧ್ಯಕ್ಷ ಕೆ.ಎಚ್.ಆನಂದರಾಜು ಅಧ್ಯಕ್ಷತೆ ವಹಿಸುವರು ಎಂದರು. ರಾಜ್ಯದ ಮಾರಾಟ ಪ್ರಚಾರ ನೌಕರರಿಗೆ 8 ಗಂಟೆ ಕೆಲಸ ಘೋಷಣೆ ಮಾಡಬೇಕು. ಮಾರಾಟ ಪ್ರಚಾರ ನೌಕರರ (ಸೇವಾ ಷರತ್ತುಗಳು) ಕಾಯ್ದೆ 1976 ರ ಪರಿಣಾಮಕಾರಿ ಅನುಷ್ಠಾನವನ್ನು ರಕ್ಷಿಸುವುದು ಮತ್ತು ಔಷಧಗಳ ಉದ್ಯೋಗದಾತರಿಂದ ಖಚಿತಪಡಿಸುವುದು. ಮಹಿಳಾ ಮಾರಾಟ ಪ್ರಚಾರ ನೌಕರರಿಗೆ 6 ತಿಂಗಳ ಹೆರಿಗೆ ರಜೆ ಅನುಸರಣೆ ಕಡ್ಡಾಯ ಮಾಡಬೇಕು ಎಂದು ರಾಜ್ಯ ಸರ್ಕಾರವನ್ನು ಸಮ್ಮೇಳನ ಮೂಲಕ ಒತ್ತಾಯಿಸಲಾಗುವುದು ಎಂದರು. ವಿನಾಯಕ ದೇಸಾಯಿ, ಸತೀಶ ಮುಷ್ಠಿಗೇರಿ, ಪ್ರವೀಣ್, ಆನಂದರಾಜು, ಸಂಗಮೇಶ ಇದ್ದರು.

ಇಂದು ಮಹಿಳಾ ದಿನಾಚರಣೆ

ಮಹಾಲಿಂಗಪುರ: ಸ್ಥಳೀಯ ಟೋಣಪಿನಾಥ ಸಮುದಾಯ ಭವನದಲ್ಲಿ ಮಾ.14 ರಂದು ಶನಿವಾರ ಸಂಜೆ 4 ಗಂಟೆಗೆ ತೇರದಾಳ ಮತಕ್ಷೇತ್ರದ ಭಾಜಪ ಮಹಿಳಾ ಮಂಡಲ ವತಿಯಿಂದ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ತೇರದಾಳ ಮತಕ್ಷೇತ್ರದ ಗ್ರಾಮೀಣ ಘಟಕದ ಮಹಿಳಾ ಮೋರ್ಚಾ ಅಧ್ಯಕ್ಷೆ ಸ್ನೇಹಲ್ ಅಂಗಡಿ ಅಧ್ಯಕ್ಷತೆ ವಹಿಸುವರು. ಶಾಸಕ ಸಿದ್ದು ಸವದಿ, ರಾಜ್ಯ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ವಿಜಯಲಕ್ಷ್ಮಿ ತುಂಗಳ, ರಾಜ್ಯ ಕಾರ್ಯಕಾರಿಣಿ ಸದಸ್ಯೆ ಸವಿತಾ ಹೊಸೂರ, ಜಿಲ್ಲಾ ಯುವ ಮೋರ್ಚಾ ನೂತನ ಜಿಲ್ಲಾ ಅಧ್ಯಕ್ಷ ವಿದ್ಯಾಧರ ಸವದಿ, ಜಿಲ್ಲಾಧ್ಯಕ್ಷೆ ಸುಮೇದಾ ಮಾನೆ, ಮುಖ್ಯ ಭಾಷಣಕಾರರಾಗಿ ನ್ಯಾಯವಾದಿ ರೇಖಾ ಪಾಟೀಲ ಮಹಿಳೆಯರ ಮೇಲಿನ ದೌರ್ಜನ್ಯ ಕುರಿತು, ವಿದ್ಯಾ ಸವದಿ ಮಹಿಳಾ ಕ್ರೀಡೆಗಳ ಬಗ್ಗೆ ಮಾತನಾಡುವರು ಸುವರ್ಣಾ ಆಸಂಗಿ ಮತ್ತು ವಿಜಯಲಕ್ಷ್ಮಿ ಕುಳ್ಳೊಳ್ಳಿ ತಿಳಿಸಿದ್ದಾರೆ.

ಸಿಎಂ ಕಾರ್ಯಕ್ರಮಕ್ಕೆ ಪಾಲ್ಗೊಳ್ಳಿ

ಕಲಾದಗಿ: ಬಾಗಲಕೋಟೆ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋದನಾ ಸಂಸ್ಥೆ ಶಂಕು ಸ್ಥಾಪನೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ ಕಾರ್ಯಕ್ರಮ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ-3ರ ಭೂ ಸ್ವಾದೀನಗೊಳ್ಳುವ ಜಮೀನುಗಳಿಗೆ ಒಪ್ಪಂದದ ದರದಂತೆ ಪರಿಹಾರ ವಿತರಣೆಗೆ ಚಾಲನೆ ನೀಡುವ ಕಾರ್ಯಕ್ರಮಕ್ಕೆ ಮಾ.14ರಂದು



ಬಾಗಲಕೋಟೆಯ ನವನಗರಕ್ಕೆ ಆಗಮಿಸುತ್ತಿರುವ ಸಿಎಂ ಸಿದ್ಧರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಸೇರಿದಂತೆ ಉಸ್ತುವಾರಿ ಸಚಿವರು, ಶಾಸಕರು ಆಗಮಿಸುತ್ತಿದ್ದು, ಮುಖಂಡರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖೆಯಲ್ಲಿ ಪಾಲ್ಗೊಳ್ಳಬೇಕೆಂದು ಕಲಾದಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಾ.ಬಸವರಾಜ ಸಂಶಿ ತಿಳಿಸಿದ್ದಾರೆ.



ಮಹಾಲಿಂಗಪುರ: ಸ್ಥಳೀಯ ಬಸವ ನಗರದಲ್ಲಿ ಬುಧವಾರ ಎರಡು ಮನೆಗಳಿಗೆ ಆಕಸ್ಮಿಕ ಬೆಂಕಿ ಬಿದ್ದು, ಬಟ್ಟೆ, ಆಹಾರ ಧಾನ್ಯ, ಹಣ, ದಾಖಲೆಗಳು, ಟಿವಿ, ಗೃಹೋಪಯೋಗಿ ವಸ್ತುಗಳು ಬೆಂಕಿಗಾಹುತಿಯಾಗಿದ್ದವು. ಆದ್ದರಿಂದ ಸ್ಥಳೀಯ ಮುಖಂಡ, ಪುರಸಭಾ ಮಾಜಿ ಉಪಾಧ್ಯಕ್ಷ ಚನ್ನಬಸು ಹುರಕಡ್ಲಿ ಅವರು ಎರಡೂ ಕುಟುಂಬಗಳಿಗೆ ತಲಾ 10,000 ರೂ.ಸಾವಿರ ಹಣ ನೀಡಿ ಸಹಾಯ ಮಾಡಿದ್ದಾರೆ.

ಓದಿನ ಅಭಿರುಚಿ ಬೆಳೆಸಿಕೊಳ್ಳಿ: ನೇಗಿನಾಳ

ರನ್ನ ಬೆಳಗಲಿ: ವಿದ್ಯಾರ್ಥಿಗಳು ಮೊಬೈಲ್ ಗೀಳಿನಿಂದ ಹೊರಬಂದು ಪುಸ್ತಕ ಓದಿನ ಅಭಿರುಚಿ ಬೆಳೆಸಿಕೊಳ್ಳಿ ಎಂದು ಜಮಖಂಡಿ ಬಿಎಲ್‌ಡಿಇ ಕಾಲೇಜಿನ ಪತ್ರಿಕೋದ್ಯಮ ಉಪನ್ಯಾಸಕ ಶಿವಾನಂದ ನೇಗಿನಾಳ ಸಲಹೆ ನೀಡಿದರು. ಪಟ್ಟಣದ ಸಿದ್ಧಾರೂಢ ಸರ್ಕಾರಿ ಪ್ರೌಢ ಶಾಲೆಯಲ್ಲಿ ಆಯೋಜಿಸಿದ್ದ ಮೊಬೈಲ್ ಬಿಡಿ, ಪುಸ್ತಕ ಹಿಡಿ' ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ರಾಜ್ಯದಲ್ಲಿ ಶಾಲಾ ಮಕ್ಕಳಲ್ಲಿ ಹೆಚ್ಚುತ್ತಿರುವ ಮೊಬೈಲ್ ಗೀಳನ್ನು ಕಡಿಮೆ ಮಾಡಲು ರಾಜ್ಯ ಶಿಕ್ಷಣ ಇಲಾಖೆ ಮಹತ್ವದ ಕ್ರಮ ಕೈಗೊಂಡಿದೆ. ಮೊಬೈಲ್ ಬಿಡಿ, ಪುಸ್ತಕ ಹಿಡಿ ಅಭಿಯಾನವನ್ನು ಈಗ ರಾಜ್ಯಾದ್ಯಂತ ಪರಿಣಾಮಕಾರಿಯಾಗಿ ಜಾರಿಗೆ ತರಲು ಇಲಾಖೆ ಸುತ್ತೋಲೆ ಹೊರಡಿಸಿದೆ. ಈ ಅಭಿಯಾನವು ಮಕ್ಕಳನ್ನು ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳಿಂದ ದೂರವಿಟ್ಟು, ಓದು ಮತ್ತು ಪಠ್ಯೇತರ ಚಟುವಟಿಕೆಗಳತ್ತ ಸೆಳೆಯುವ ಉದ್ದೇಶ ಹೊಂದಿದೆ ಎಂದು ತಿಳಿಸಿದರು. ಶಿಕ್ಷಕ ಎಂ.ಬಿ.ಮುರಗೋಡ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಮನಗರದಲ್ಲಿ ಈ ಅಭಿಯಾನ ಯಶಸ್ವಿಯಾಗಲು ಶಿಕ್ಷಕ ಚಿಕ್ಕವೀರಯ್ಯ ಅವರ ಪ್ರಾಮಾಣಿಕ ಪ್ರಯತ್ನವೇ ಕಾರಣವೆಂದು ಹೇಳಬಹುದು. ಇದೀಗ ಇದೇ ಮಾದರಿಯನ್ನು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಜಾರಿಗೆ ತರಲು ಸರ್ಕಾರ ಮುಂದಾಗಿದೆ. ಮಕ್ಕಳ ಭವಿಷ್ಯ ಆರೋಗ್ಯಕರ ಮತ್ತು ಜ್ಞಾನಪೂರ್ಣ ದಾರಿಯಲ್ಲಿ ರೂಪಿಸುವ ಈ ಪ್ರಯತ್ನ ಯಶಸ್ವಿಯಾಗಲಿ ಎಂಬುದು ಎಲ್ಲರ ಆಶಯವಾಗಿದೆ ಎಂದರು. ಬಾಲಕೃಷ್ಣ ಚೋಪಡೆ, ಪಿ.ಕೆ.ಪವಾರ, ಎಂ.ಎ.ಮುಗಳಖೋಡ, ಶ್ರೀಶೈಲ ಕಾಡದೇವರ, ಎಸ್.ಎಂ.ಮೇಗಾಡಿ, ಎಲ್.ವೈ.ಶಾಸ್ತ್ರಿ, ಎಲ್.ಕೆ.ಮಂಟೂರ, ಕಿರಣ ಪವಾರ, ರವಿ ಹಿರೇಕಲ್ಮಠ ಇದ್ದರು.



ರನ್ನ ಬೆಳಗಲಿ: ಪಟ್ಟಣದ ಸಿದ್ಧಾರೂಢ ಸರ್ಕಾರಿ ಪ್ರೌಢ ಶಾಲೆಯಲ್ಲಿ ಆಯೋಜಿಸಿದ್ದ ಮೊಬೈಲ್ ಬಿಡಿ, ಪುಸ್ತಕ ಹಿಡಿ' ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಜಮಖಂಡಿ ಬಿಎಲ್‌ಡಿಇ ಕಾಲೇಜಿನ ಪತ್ರಿಕೋದ್ಯಮ ಉಪನ್ಯಾಸಕ ಶಿವಾನಂದ ನೇಗಿನಾಳ, ಶಿಕ್ಷಕರಾದ ಬಾಲಕೃಷ್ಣ ಚೋಪಡೆ, ಪಿ.ಕೆ.ಪವಾರ, ಎಂ.ಎ.ಮುಗಳಖೋಡ, ಎಲ್.ವೈ.ಶಾಸ್ತ್ರಿ, ಎಲ್.ಕೆ.ಮಂಟೂರ, ಕಿರಣ ಪವಾರ, ರವಿ ಹಿರೇಕಲ್ಮಠ, ಸುಜಾತಾ ಬಿಸ್ಟಣ್ಣವರ ಇದ್ದರು.

ಬಾಗಲಕೋಟೆ ಉಪಚುನಾವಣೆ | ಚುನಾವಣಾ ಪೂರ್ವ ಕಾರ್ಯಾಗಾರ

2028ರ ಸಾರ್ವತ್ರಿಕ ಚುನಾವಣೆಗೆ ಶ್ರೀಕಾರ

ಬಾಗಲಕೋಟೆ: ಹಿಂದೂ ವಿರೋಧಿ ಕಾಂಗ್ರೆಸ್ ಸರ್ಕಾರ ಕಿತ್ತೊಗೆಯಲು ರಾಜ್ಯದ ಜನ ತುದಿಗಾಲಿನ ಮೇಲೆ ನಿಂತಿದ್ದಾರೆ. 2028 ಸಾರ್ವತ್ರಿಕ ಚುನಾವಣೆಗೆ ಬಾಗಲಕೋಟೆ ಉಪ ಚುನಾವಣೆ ಶ್ರೀಕಾರ ಹಾಕಲಿದೆ ಎಂದು ಬಿಜೆಪಿಯ ರಾಜ್ಯ ಕಾರ್ಯದರ್ಶಿ ಹಾಗೂ ಚುನಾವಣಾ ಉಸ್ತುವಾರಿ ಶರಣು ತಳ್ಳಿಕೇರಿ ಹೇಳಿದರು.



ನಗರದ ಬಿವಿವಿ ಸಂಘ ನೂತನ ಸಭಾಭವನದಲ್ಲಿ ಶುಕ್ರವಾರ ಭಾರತೀಯ ಜನತಾ ಪಾರ್ಟಿಯಿಂದ ನಡೆದ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣಾ ಪೂರ್ವಭಾವಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಉಪ ಚುನಾವಣೆ ಗೆಲ್ಲುವ ಮೂಲಕ 2028ಕ್ಕೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದೆ ಬರುತ್ತೆ ಎಂಬ ಸಂದೇಶ ಸಾರೋಣ. ಬಾಗಲಕೋಟೆ ಹಿಂದೂತ್ವದ ಗಟ್ಟಿ ನೆಲವಾಗಿದ್ದು, ಈ ಹಿಂದೂ ವಿರೋಧಿ ಸರ್ಕಾರ ತನ್ನ ಹಗರಣ, ಆಡಳಿತ ವೈಫಲ್ಯ, ಅಭಿವೃದ್ಧಿಯ ಕಾರ್ಯಗಳೆ ಇಲ್ಲದಿರುವ ಕಾಂಗ್ರೆಸ್ ಸರ್ಕಾರ ರಾಜ್ಯದ ಜನತೆಗೆ ಬೇಡವಾಗಿದೆ, ಬಾಗಲಕೋಟೆ ಅಭಿವೃದ್ಧಿ ಕಂಡಿದ್ದು ಶಾಸಕರಾಗಿದ್ದ ಡಾ.ವೀರಣ್ಣ ಚರಂತಿಮಠ ಅವರ ಅವದಿಯಲ್ಲಿ ಯಾರಿಂದ ಅಭಿವೃದ್ಧಿ ಸಾದ್ಯ ಎಂಬ ಸತ್ಯ ಬಾಗಲಕೋಟೆ ಜನತೆ ಗೊತ್ತಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರದಿಂದ ಕೆಳಗೆ ಇಳಿಯುವ ಸಂದರ್ಭದಲ್ಲಿ ಅನುಕಂಪ ಪಡೆಯುವ ಸಲುವಾಗಿ ಕುರಿಕಾಯುವವರು ನೆನೆಪಾಗುತ್ತಾರೆ. ದೇವರಾಜ ಅರಸು ಅವರ ದಾಖಲೆ ಮೀರಿಸಿರುವೆ ಎಂಬ ಅಹಂಕಾರದಲ್ಲಿರುವ ಅವರು ಎರಡು ಸಾರಿ ಮುಖ್ಯಮಂತ್ರಿಯಾದರೂ ಕುರಿಕಾಯುವರಿಗೆ ಕೊಟ್ಟಿರುವ ಸಾಧನೆ ಶೂನ್ಯ, ರಾಜ್ಯದಲ್ಲಿ ಇಲ್ಲಿವರೆಗೂ ಆಕಸ್ಮಿಕ ಸಾವವನ್ನಪ್ಪಿದ 90 ಸಾವಿರ ಕುರಿಗಳಲ್ಲಿ ಬರಿ 30 ಸಾವಿರ ಕುರಿಗಳಿಗೆ ಪರಿಹಾರ ಕೊಟ್ಟಿದ್ದಾರೆ ಇನ್ನೂ 45ಕೋಟಿ ರೂ ಪರಿಹಾರ ಕೊಡುವಂತ ಕೆಲಸ ಸಿದ್ದರಾಮಯ್ಯನವರಿಂದ ಆಗಿಲ್ಲ, ಮೊದಲು ಕುರಿಕಾಯುವವರಿಗೆ ನ್ಯಾಯ ಕೊಡಿ ಎಂದ ಅವರು ಬಾಗಲಕೋಟೆ ರಾಜಕೀಯ ಪುನರ್ಜನ್ಮ ನೀಡಿದ ಬಾಗಿಲಕೋಟೆಗೆ ತಮ್ಮ ಕೊಡುಗೆ ಶೂನ್ಯ ಎಂದರು.

ಬೆಳಗಾವಿ ವಿಭಾಗದ ಪ್ರಭಾರಿ ಸಂಜಯ ಪಾಟೀಲ ಮಾತನಾಡಿ, ಬಾಗಲಕೋಟೆ ಉಪ ಚುನಾವಣೆ ಇದೊಂದು ಧರ್ಮ ಯುದ್ಧ, ಈ ಧರ್ಮಯುದ್ದಲ್ಲಿ ಗೆಲವು ಶತಸಿದ್ದವಾಗಿದೆ, ಹಿಂದೂಗಳಿಗಾಗಿ ಇರುವ ಏಕೈಕ ರಾಷ್ಟ್ರ ಭಾರತ. 60 ವರ್ಷ ದೇಶವನ್ನಾಳಿದ ಕಾಂಗ್ರೆಸ್ ಪಕ್ಷ ಮುಸ್ಲಿಂ ಸಮುದಾಯ ಬರಿ ತನ್ನ ಓಟ ಬ್ಯಾಂಕ ಮಾಡಿಕೋಂಡ್ಡಿದ್ದಾರೆ ಹೊರತು ಅವರಿಗಾಗಿ ನೀಡಿರುವ ಕೋಡುಗೆ ಶೂನ್ಯ, ಇದನ್ನು ಎಲ್ಲರೂ ಅರ್ಥ ಮಾಡಿಕೋಳ್ಳಬೇಕು. ಬಾಗಲಕೋಟೆ ಜನ ಅತ್ಯಂತ ಬುದ್ದಿವಂತರು, ಅಭಿವೃದ್ದಿಪರ, ಬಿಜೆಪಿ ಪರವಾಗಿದ್ದಾರೆ ಎಂದರು. ಬೈಲಹೊಂಗಲ ಮಾಜಿ ಶಾಸಕ ವಿಶ್ವನಾಥ ಪಾಟೀಲ ಮಾತನಾಡಿದರು.

ಚುನಾವಣಾ ಉಸ್ತುವಾರಿ ಅರುಣ ಶಹಾಪುರ ಮಾತನಾಡಿ, ಬಾಗಲಕೋಟೆ ಉಪಚುನಾವಣೆಯಲ್ಲಿ ನಾವು ಗೆದ್ದೆ ಗೆಲ್ಲುತ್ತೆವೆ, ಆ ಸಾಮರ್ಥ ಬಿಜೆಪಿ ಕಾರ್ಯಕರ್ತರಿಗೆ ಇದೆ, ಬಾಗಲಕೋಟೆ ಸರ್ವಾಂಗೀಣ ಅಬಿವೃದ್ಧಿ ಕಾಣಲು ಬಿಜೆಪಿ ಸರಕಾರ ಹಾಗೂ ಶಾಸಕರಾಗಿದ್ದ ಡಾ. ವೀರಣ್ಣ ಚರಂತಿಮಠ ಅವರು ಕಾರಣ, ಬಾಗಲಕೋಟೆ ಜನತಗೆ ತಮ್ಮ ಸುರಕ್ಷತೆ ಹಾಗೂ ಅಭಿವೃದ್ಧಿಯ ಅರಿವು ಇದೆ, ಈಗಾಗಿ ಅವರು ಬಿಜೆಪಿಯನ್ನು ಖಂಡಿತ ಗೆಲ್ಲಿಸುತ್ತಾರೆ, 2028ರ ಚುನಾವಣೆಗೆ ಶ್ರೀಕಾರವೇ ಬಾಗಲಕೋಟೆ ಉಪಚುನಾವಣೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಕಿತ್ತೂರು ಮಾಜಿ ಶಾಸಕ ಮಹಾಂತೇಶ ದೊಡಗೌಡರ, ಡಾ.ಕೆ.ಬಸವರಾಜ ಕ್ಯಾವಟರ್, ಸುಭಾಸ ಪಾಟೀಲ. ಬಸವರಾಜ ಯಂಕಂಚಿ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೊಣ್ಣೂರ, ನಗರಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಮಲ್ಲೇಶ ವೈಜಾಪುರ, ಕಲ್ಲಪ್ಪ ಭಗವತಿ, ಉಮೇಶ ಹಂಚಿನಾಳ ಇದ್ದರು.

ಮಾ.17ರಂದು ಜಿಲ್ಲಾಮಟ್ಟದ ಉದ್ಯೋಗ ಮೇಳ

ಬಾಗಲಕೋಟೆ: ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಮಾ.17ರಂದು ಬೆಳಗ್ಗೆ 9ರಿಂದ ಸಂಜೆ 5ರ ವರೆಗೆ ಜಿಲ್ಲಾಮಟ್ಟದ ಬೃಹತ್ ಉದ್ಯೋಗ ಮೇಳ-2026 ಹಮ್ಮಿಕೊಳ್ಳಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಉದ್ಯೋಗಮೇಳದ ಪ್ರಚಾರ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು ಜಿಲ್ಲೆಯ ಉದ್ಯೋಗಾಕಾಂಕ್ಷಿಗಳಿಗೆ ಸುವರ್ಣಾವಕಾಶ ಒದಗಿಸುವ ಉದ್ದೇಶದಿಂದ ಜಿಪಂ ವತಿಯಿಂದ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ಜಿಲ್ಲಾ ಮಟ್ಟದ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗುತ್ತಿದೆ. ಮೇಳದಲ್ಲಿ ವಿವಿಧ ಕ್ಷೇತ್ರದ 50ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ತಿಳಿಸಿದರು.

ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ, ಮೇಳದಲ್ಲಿ ಉತ್ಪಾದನಾ ವಲಯ, ಬ್ಯಾಂಕಿಂಗ್ ಕ್ಷೇತ್ರ, ಮಾರಾಟ, ಮಾಹಿತಿ ತಂತ್ರಜ್ಞಾನ, ಗಾರ್ಮೆಂಟ್ಸ್, ಸೇವಾ ಹಾಗೂ ಪ್ರವಾಸೋದ್ಯಮ, ಹಣಕಾಸು ಮತ್ತು ನಿರ್ವಹಣಾ ಕ್ಷೇತ್ರ ಸೇರಿದಂತೆ ಹಲವಾರು ವಿಭಾಗಗಳಲ್ಲಿ ಉದ್ಯೋಗ ಅವಕಾಶಗಳಿವೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಪದವಿ ಹಾಗೂ ಸ್ನಾತಕೋತ್ತರ ಪದವೀಧರರಿಗೆ ನೂರಾರು ಅವಕಾಶಗಳು ಸೇರಿದಂತೆ ವಿವಿಧ ವಿದ್ಯಾರ್ಹತೆಗಳಿಗೆ ಉದ್ಯೋಗ ಅವಕಾಶವಿರುತ್ತದೆ ಎಂದರು.

ಕೋಟೆನಾಡಿನ ಯುವಜನತೆಗೆ ಉದ್ಯೋಗ ಅವಕಾಶ ಸಿಗುವ ನಿಟ್ಟಿನಲ್ಲಿ ಬೃಹತ್ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದ್ದು, 18 ವರ್ಷ ಮೇಲ್ಪಟ್ಟ ಯಾವುದೇ ವಿದ್ಯಾರ್ಹತೆಯ ಹೊಂದಿರುವ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ನೇರ ಸಂದರ್ಶನದ ಮೂಲಕ ಉದ್ಯೋಗ ಪಡೆಯಬಹುದು. ಆಸಕ್ತರು ಗೂಗಲ್ ಫಾರ್ಮ್ https://forms.gle/BA4W3Me-kEyscP61H7 ಮೂಲಕ ಪೂರ್ವ ನೋಂದಣಿ ಮಾಡಿಕೊಳ್ಳಬಹುದಾಗಿದೆ. ನೋಂದಣಿ ಮಾಡಿದವರು ಮೇಳದಿನದಂದು ನೇರವಾಗಿ ಹಾಜರಾಗಿ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ. ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಉದ್ಯೋಗ ಪಡೆದುಕೊಳ್ಳಲು ತಿಳಿಸಿದರು. ಹೆಚ್ಚಿನ ಮಾಹಿತಿಗಾಗಿ ಪ್ರಭುದೇವರೆಡ್ಡಿ, ಅನ್ನಪೂರ್ಣ ಭಗವತಿಗೆ ಸಂಪರ್ಕಿಸಬಹುದು. ಜಿಲ್ಲಾಧಿಕಾರಿ ಸಂಗಪ್ಪ, ಯುಕೆಪಿ ಮಹಾವ್ಯವಸ್ಥಾಪಕ ಗಜಾನನ ಬಾಲೆ, ಜಿಲ್ಲಾ ಕೌಶಲ್ಯಾಧಿಕಾರಿ ಹಿರೇಮಠ, ಜಿ.ಪಂ ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.



ದಿ.ಮೇಟಿಯವರ ಪ್ರಯತ್ನದಿಂದ ವೈದ್ಯಕೀಯ ಕಾಲೇಜು ಪ್ರಾರಂಭ

ಬಾಗಲಕೋಟೆ/ಬೀಳಗಿ: ಹಿಂದಿನ ಶಾಸಕರಾದ ದಿ.ಎಚ್.ವೈ.ಮೇಟಿ ಅವರ ಸತತ ಪ್ರಯತ್ನದಿಂದ ಬಾಗಲಕೋಟೆಗೆ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಮುಂಜೂರಾತಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಂದ ಅಡಿಗಲ್ಲು ಸಮಾರಂಭ ನೆರವೇರುತ್ತಿರುವುದು ತುಂಬಾ ಸಂತೋಷದ ಸಂಗತಿ. ಬಾಗಲಕೋಟೆ ಜನತೆಯ ಬಹುದಿನದ ಕನಸು ಈಡೇರಿಸಿದ್ದಕ್ಕಾಗಿ ಮುಖ್ಯಮಂತ್ರಿಗಳಿಗೂ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ ಸಂಪುಟದ ಎಲ್ಲ ಸದಸ್ಯರಿಗೂ ಅಭಿನಂದನೆಗಳು ಹಾಗೂ ಜಿಲ್ಲೆಯ ಜನರ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ವಿಧಾನ ಪರಿಷತ್ ಪ್ರತಿಪಕ್ಷದ ಮಾಜಿ ನಾಯಕ ಹಾಗೂ ಮಾಜಿ ಸಚಿವ ಎಸ್.ಆರ್.ಪಾಟೀಲ ತಿಳಿಸಿದ್ದಾರೆ.



ದಿ.ಎಚ್.ವೈ.ಮೇಟಿ ಅವರ ಪ್ರಯತ್ನದ ಫಲವೇ ಈ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಎಂಬುದರಲ್ಲಿ ಎರಡು ಮಾತಿಲ್ಲ. ಎಚ್.ವೈ.ಮೇಟಿ ಅವರ ಒತ್ತಾಯ ಸತತ ಪ್ರಯತ್ನದಿಂದ ಬಾಗಲಕೋಟೆಗೆ ಸರಕಾರಿ ವೈದ್ಯಕೀಯ ಕಾಲೇಜು ಮಂಜೂರಾತಿ ಆಗಿ ಇಂದು ಅಡಿಗಲ್ಲು ಸಮಾರಂಭವು ಜರುಗಲಿದೆ. ಆದರೆ ಆದಷ್ಟು ರಾಷ್ಟ್ರೀಯ ವೈದ್ಯಕೀಯ ಆಯೋಗದಿಂದ ಅನುಮತಿ ಕೊಡಿಸಿ ವೈದ್ಯಕೀಯ ಮಹಾವಿದ್ಯಾಲಯದ ಕಾರ್ಯಗಳು ಆರಂಭಿಸುವಂತೆ ಕ್ರಮ ಕೈಗೊಳ್ಳುತ್ತೀರಿ ಎಂಬ ವಿಶ್ವಾಸ ನನ್ನದಾಗಿದೆ ಎಂದು ತಿಳಿಸಿದ್ದಾರೆ.

ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದ ಸಂತ್ರಸ್ತ ಕುಟುಂಬಗಳ ಮುಳುಗಡೆ ಜಮೀನುಗಳಿಗೆ ಪರಿಷ್ಕೃತ ದರ ನೀರಾವರಿಯ ಪ್ರತಿ ಎಕರೆಗೆ ರೂ 40 ಲಕ್ಷ ಹಾಗೂ ಕುಷ್ಕಿ ಜಮೀನಿನ ಪ್ರತಿ ಎಕರೆಗೆ ರೂ. 30 ಲಕ್ಷದಂತೆ ಕೊಡಲು ತೀರ್ಮಾನಿಸಿ ಇಂದು ಔಪಚಾರಿಕವಾಗಿ ಕೆಲವೇ ಸಂತ್ರಸ್ತರಿಗೆ ಚೆಕ್ ವಿತರಿಸುತ್ತಿರುವುದು ಇಲ್ಲಿನ ಜನರಿಗೆ ತುಂಬಾ ಸಂತೋಷ ತಂದಿದೆ. ಸಿದ್ದರಾಮಯ್ಯನವರ ನೇತೃತ್ವದ ನಮ್ಮ ಪಕ್ಷದ ಸರ್ಕಾರ ನುಡಿದಂತೆ ನಡೆಯುವ ಸರ್ಕಾರ ಎಂಬುದನ್ನು ಸಾಬೀತು ಮಾಡಿದೆ ಎಂದು ತಿಳಿಸಿದ್ದಾರೆ.

ಹಿಂದಿನ ಬಿಜೆಪಿ ಸರ್ಕಾರ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಪ್ರತಿ ಎಕರೆ ನೀರಾವರಿಗೆ ರೂ. 24 ಹಾಗೂ ಕುಷ್ಕಿ ಜಮೀನಿಗೆ ಪ್ರತಿ ಎಕರೆಗೆ 20 ಲಕ್ಷ ನೀಡಿ 4 ರಿಂದ 5 ಜನ ಸಂತ್ರಸ್ತರಿಗೆ ಚೆಕ್ ವಿತರಿಸಿದಂತೆ ಮಾಡಿ ಇದರಿಂದ ಪಲಾಯನ ಮಾಡಿದ್ದು ನಮ್ಮ ಕಣ್ಣೆದುರಿಗಿನ ಸತ್ಯ.

ಬಿಜೆಪಿ ಸರ್ಕಾರದಂತೆ ಸಿದ್ದರಾಮಯ್ಯನವರ ನೇತೃತ್ವದ ನಮ್ಮ ಸರ್ಕಾರ ಹಾಗೆ ಮಾಡದೆ ಸಂತ್ರಸ್ತರಿಗೆ ಪೂರ್ತಿ ಹಣ ಬಿಡುಗಡೆ ಮಾಡುತ್ತದೆ ಎಂಬ ವಿಶ್ವಾಸ ಭರವಸೆ ನನ್ನದು ಹಾಗೂ ಇಲ್ಲಿನ ಜನರದ್ದು ಇದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ ಎಂದರು.

ಖಾಸಗಿ ಶಾಲಾ ಶಿಕ್ಷಕರ ವಿವಿಧ ಬೇಡಿಕೆ ಈಡೇರಿಸಲು ಮನವಿ

ಮುದೋಳ: ಕಳೆದ 30 ವರ್ಷಗಳಿಂದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕನ್ನಡ ಶಾಲೆಗಳನ್ನು ಉಳಿಸಿ, ಬೆಳೆಸಿಕೊಂಡು ಬರಲಾಗುತ್ತಿದೆ. ಆದರೆ, ದುರದೃಷ್ಟವಶಾತ್ ಈ ಶಾಲೆಗಳಿಗೆ ಯಾವುದೇ ಸರ್ಕಾರಿ ಅನುದಾನ ಲಭ್ಯವಾಗಿಲ್ಲ ಎಂದು ತಾಲೂಕು ಅಧ್ಯಕ್ಷ ಎಂ.ಎಸ್.ಬರಗಿ ಹೇಳಿದರು.

ರಾಜ್ಯಾದ್ಯಂತ ಇರುವ ಎಲ್ಲಾ ಖಾಸಗಿ ಶಾಲಾ-ಕಾಲೇಜುಗಳ ಮುಷ್ಕರ ಹಿನ್ನೆಲೆಯಲ್ಲಿ, ಮುಧೋಳ ಖಾಸಗಿ ಶಾಲಾ ಶಿಕ್ಷಕರ ಸಂಘದ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ತಹಶೀಲ್ದಾರ್ ರಾಯಪ್ಪ ನಾಯಿಕ ಅವರಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯ ಅನುದಾನ ರಹಿತ ಸಂಘಟನೆ ರಾಜ್ಯ ಕಾರ್ಯದರ್ಶಿ ಅರುಣ ಬಿರಾದಾರ ಮಾತನಾಡಿ, ಒಂದು ವರ್ಷದಿಂದ ಶಿಕ್ಷಣ ಸಚಿವರು ಮತ್ತು ಮುಖ್ಯಮಂತ್ರಿಗಳು ಅನುದಾನ ನೀಡುವ ಭರವಸೆ ನೀಡಿದ್ದರೂ, ಈ ಬಾರಿಯ ಬಜೆಟ್ ಘೋಷಣೆಯಲ್ಲಿ ಅನುದಾನದ ಕುರಿತು ಯಾವುದೇ ಪ್ರಸ್ತಾಪವಿಲ್ಲದಿರುವುದು ಶಿಕ್ಷಕರಲ್ಲಿ ತೀವ್ರ ನಿರಾಶೆ ಮೂಡಿಸಿದೆ 1990ರ ನಂತರದ ಶಾಲೆಗಳ ಅನುದಾನಕ್ಕೆ ಆಗ್ರಹಿಸಿ ಮತ್ತು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಎಲ್ಲ ಶಾಲೆಗಳನ್ನು ಬಂದ್ ಮಾಡಿ ಜಿಲ್ಲಾ ಕೇಂದ್ರಗಳಲ್ಲಿ ಶಾಲಾ ಕಾಲೇಜು ಬಂದ್ ಮೂಲಕ ಪ್ರತಿಭಟಿಸಲಾಗುವುದು ಎಂದು ತಿಳಿಸಿದರು.



ಸಂಘದ ಪ್ರಮುಖ ಎಸ್.ವಿ.ಹಿರೇಮಠ ಮಾತನಾಡಿ, 1995ರ ನಂತರ ಪ್ರಾರಂಭವಾದ ಕನ್ನಡ ಮಾತೃಭಾಷಾ ಶಾಲೆಗಳಿಗೆ ತಕ್ಷಣವೇ ಅನುದಾನ ಒದಗಿಸಬೇಕು, ಬಡವರಿಗೆ ಆಸರೆಯಾಗಿರುವ ಶಿಕ್ಷಣ ಹಕ್ಕು ಕಾಯ್ದೆ ಯನ್ನು ಪುನಃ ಜಾರಿಗೆ ತರಬೇಕು ಮತ್ತು ಖಾಸಗಿ ಶಾಲೆಗಳ ಮಾನ್ಯತೆ ನವೀಕರಣ ಪ್ರಕ್ರಿಯೆಯನ್ನು ಸರಳಗೊಳಿಸಬೇಕು ಎಂದು ಪ್ರಮುಖ ಮೂರು ಬೇಡಿಕೆಗಳನ್ನು ಮಂಡಿಸಿ ಆಗ್ರಹಿಸಿದರು.

ಡಾ.ವೆಂಕಟೇಶ ಗುಡೆಪ್ಪನವರ, ಎಂ.ಡಿ.ಮಠಪತಿ, ಶೇಖರ ತೆಗ್ಗಿ, ಅಶೋಕ ಭಜಂತ್ರಿ, ಶಂಕರ ಹೂಗಾರ, ವಿ.ಆರ್.ಬೀರನಗಡ್ಡಿ, ಬಿ.ಸಿ.ವಜ್ರಮಟ್ಟಿ, ವೆಂಕಣ್ಣ ಚೌರಡ್ಡು ಸೇರಿದಂತೆ ಸಂಘದ ಪ್ರಮುಖ ಪದಾಧಿಕಾರಿಗಳು ಮತ್ತು ಶಿಕ್ಷಕರು ಉಪಸ್ಥಿತರಿದ್ದರು.

ಸಿಎಂ ಗೆ ಮನವಿ ಸಲ್ಲಿಸಲು ನಿರ್ಧಾರ

ಬಾಗಲಕೋಟೆ: ಬಾಗಲಕೋಟೆ ವಿವಿಧ ಅಭಿವೃದ್ಧಿ ಕಾಮಗಾರಿಗಳು ಶಿಲಾನ್ಯಾಸ ನೆರವೇರಿಸಲೂ ಆಗಮಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಗೆ ಒಳಮೀಸಲಾತಿ ಜಾರಿಗಾಗಿ ಅಸಡ್ಡೆ ತೋರುತ್ತಿರುವದನ್ನು ಖಂಡಿಸಿ ಮಾದಿಗ ಮಹಾಸಭಾ ಕ್ಷೇಮಾಭಿವೃದ್ಧಿ ಸಂಘ ಜಿಲ್ಲಾ ಮುಖಂಡರು ಮುಖ್ಯಮಂತ್ರಿ ರವರಿಗೆ ಕಪ್ಪು ಬಾವುಟ ಹಾರಿಸಲು ನಿರ್ಧರಿಸಿರುವುದರಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ನಮ್ಮೆಲ್ಲರೊಂದಿಗೆ ಚರ್ಚಿಸಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸುವ ವ್ಯವಸ್ಥೆಯನ್ನು ಕಲ್ಪಿಸುತ್ತಿದ್ದು ಹೋರಾಟಗಾರರು ಸಹಕರಿಸಲು ಕೋರಿದ ಪ್ರಯುಕ್ತ ತಾತ್ಕಾಲಿಕವಾಗಿ ಕಪ್ಪುಬಾವುಟ್ ಪ್ರದರ್ಶನವನ್ನು ಹಿಂಪಡೆದು ನೇರವಾಗಿ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಲಾಗುವುದು ಎಂದು ಮಾದಿಗ ಮಹಾಸಭಾ ಕ್ಷೇಮಾಭಿವೃದ್ಧಿ ಸಂಘ ರಾಜ್ಯ ಅಧ್ಯಕ್ಷ ಮುತ್ತಣ್ಣ ವೈ ಬೆಣ್ಣೂರ ರಾಜ್ಯ ಕಾರ್ಯದರ್ಶಿಗಳಾದ ಲಕ್ಷ್ಮಣ್ ಚಂದರಗಿ,ಶಿವಾನಂದ ಟವಳಿ ಹಾಗೂ ಜಿಲ್ಲಾ ಸಂಚಾಲಕರಾದ ವಿಠ್ಠಲ ಸಗರಮ್ಮನವರ ಜಂಟಿ ಹೇಳಿಕೆಯ ಮುಖಾಂತರ ಪತ್ರಿಕಾ ಪ್ರಕಟಣೆ ನೀಡಿದ್ದಾರೆ.

ಅಗ್ನಿ ಅವಘಡ

ಜಮಖಂಡಿ: ನಗರದ ರಾಮತೀರ್ಥ ಅರಮನೆಯ ಹಿಂಬಾಗದ ಗುಡ್ಡದ ಅರಣ್ಯ ಪ್ರದೇಶದಲ್ಲಿ ಮಧ್ಯರಾತ್ರಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡು ಅಪಾರ ಪ್ರಮಾಣದ ಸಸ್ಯರಾಶಿ ಕುರುಚಲು ಕಂಟಿಗಳು ಬೆಂಕಿಗಾಹುತಿಯಾಗಿವೆ. ಸ್ಥಳಕ್ಕೆ ಧವಿಸಿದ ಅಗ್ನಿ ಶಾಮಕ ದಳ ಮತ್ತು ಅರಣ್ಯ ಇಲಾಖೆಯ ಸಾಹಸದಿಂದ ಬೆಂಕಿ ನಂದಿಸುವಲ್ಲಿ ಸಫಲರಾಗಿದ್ದಾರೆ. ಮಧ್ಯರಾತ್ರಿ ಸುಮಾರಿಗೆ ರಾಮತೀರ್ಥ ಬೆಟ್ಟದಲ್ಲಿ ಬೆಂಕಿ ಹೊತ್ತಿ ಉರಿಯುತ್ತಿರುವುದು ಅಲ್ಲಿ ಗಸ್ತು ತಿರುಗುತ್ತಿದ್ದ ಗ್ರಾಮೀಣ ಪೊಲೀಸ್ ಠಾಣೆಯ ಅಪರಾಧ ವಿಭಾಗದ ಪಿಎಸ್ಐ ಎಂ.ಎ.ವಾಲೀಕಾರ ಹಾಗೂ ಪೊಲೀಸ್ ಸಿಬ್ಬಂದಿ ಆನಂದ ಮಾಳಿ ಅವರ ಮಾಹಿತಿ ಬಂದ ಕ್ಷಣವೇ ಅವರು ಅಗ್ನಿಶಾಮಕ ಇಲಾಖೆ ಹಾಗೂ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಸಹಾಯಕ ಅಗ್ನಿಶಾಮಕ ಸಹಾಯಕ ಠಾಣಾಧಿಕಾರಿ ಎಂ.ಪಿ.ಹೂಗಾರ, ಉಪ ವಲಯ ಅರಣ್ಯಾಧಿಕಾರಿ ವಿನೋದ ಜೈನಾಪುರ ಅವರ ನೇತೃತ್ವದ ತಂಡ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸುವ ಕಾರ್ಯಾಚರಣೆ ಆರಂಭಿಸಿದರು. ಸುಮಾರು 3 ರಿಂದ 4 ಕಿ.ಮೀ ವ್ಯಾಪ್ತಿಗೆ ಬೆಂಕಿ ಪಸರಿಸಿದ್ದು, ಹಲವಾರು ಗಿಡಮರಗಳಿಗೆ ಹಾನಿಯಾಗಿದೆ. ಉಪ ವಲಯ ಅರಣ್ಯಾಧಿಕಾರಿ ಪ್ರವೀಣ ಆದಗೊಂಡ, ಅರಣ್ಯ ವೀಕ್ಷಕ ಸೋಮು ಅಮಾತೆ, ಚಾಲಕ ಸುಭಾಷ್ ವಾರದ ಹಾಗೂ ಅಗ್ನಿಶಾಮಕ ದಳದ ಕೆ.ಬಿ.ಮುಲ್ಲಾ, ಬಸವರಾಜ ರೊಳ್ಳಿ, ಶ್ರವಣಕುಮಾರ ವಾಜಂತ್ರಿ, ಡಿ.ವೈ.ಮೆಳ್ಳಿಗೇರಿ, ಸೋಮಶೇಖರ ಕುಂಬಾರ, ಕುಮಾರ ದೊಡಮನಿ ಇದ್ದರು.

ವಿದ್ಯಾರ್ಥಿಗಳಿಗೆ ಪರೀಕ್ಷೆ ಭಯಬೇಡ



ಗುಳೇದಗುಡ್ಡ: ವಿದ್ಯಾರ್ಥಿಗಳು ಪರೀಕ್ಷೆಯನ್ನು ಸವಾಲಾಗಿ ಸ್ವೀಕರಿಸಿ ಧೈರ್ಯ, ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಬೇಕು. ಪರೀಕ್ಷೆಯ ಬಗ್ಗೆ ಭಯ ಮತ್ತು ಆತಂಕ ಪಡಬಾರದು ಎಂದು ಶಿಕ್ಷಕ, ಸಾಹಿತಿ ರವಿ ಕಂಗಳ ಹೇಳಿದರು.

ಪಟ್ಟಣದ ಸರಸ್ವತಿ ವಿದ್ಯಾ ಸಂಸ್ಥೆಯ ಸಭಾಭವನದಲ್ಲಿ ಹಮ್ಮಿಕೊಂಡಿದ್ದ 7ನೇ ವರ್ಗದ ವಿದ್ಯಾರ್ಥಿಗಳನ್ನು ಮಾಧ್ಯಮಿಕ ಹಂತಕ್ಕೆ ಸ್ವಾಗತ ಹಾಗೂ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಬಿಳ್ಕೊಡುವ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷೆಯ ಸಮಯದಲ್ಲಿ ನಿಯಮಿತ ನಿದ್ರೆ, ಆಹಾರ ಸೇವನೆಮಾಡಿ ಉತ್ತಮ ಆರೋಗ್ಯ ಕಾಪಾಡಿಕೊಂಡು ಬರಬೇಕು ವಿದ್ಯಾರ್ಥಿಗಳಿಗೆ ಸಮಯ ಅತ್ಯಂತ ಅಮೂಲ್ಯವಾಗಿದ್ದು, ಸಮಯವನ್ನು ವ್ಯರ್ಥ ಮಾಡದೇ, ಶ್ರದ್ಧೆ ಮತ್ತು ಏಕಾಗ್ರತೆಯಿಂದ ಓದಿ, ಜೀವನದಲ್ಲಿ ಯಶಸ್ಸು ಸಾಧಿಸಬೇಕೆಂದು ಹೇಳಿದರು.

ಸಂಸ್ಥೆಯ ಉಪಾಧ್ಯಕ್ಷ ಡಾ.ಎಸ್.ವಿ.ಬನ್ನಿ ಮಾತನಾಡಿ, ವಿದ್ಯಾರ್ಥಿಗಳ ಜೀವನ ಹರಿಯುವ ನೀರಿನಂತೆ, ನಿರಂತರ ಚಲನೆಯನ್ನು ರೂಢಿಸಿಕೊಂಡು ಹೊಸದನ್ನು ಕಲಿಯುತ್ತಾ ಮುಂದೆ ಸಾಗಬೇಕು ಎಂದರು. ಸಂಸ್ಥೆಯ ಕಾರ್ಯದರ್ಶಿ ಮಲ್ಲಿಕಾರ್ಜುನ ತಾಂಡೂರ, ಮುಖ್ಯೋಪಾಧ್ಯಾಯ ಎನ್.ವಿ.ದೊಡಮನಿ, ಪರಶುರಾಮ ಬಂತಲ್, ಶಿಕ್ಷಕರಾದ ಮಲ್ಲಿಕಾರ್ಜುನ ಹಿರೇಮಠ, ಜಿ.ಎಂ.ಸಣ್ಣಮನಿ, ಕೆ.ಎಸ್.ರಂಜನಗಿ, ಎಸ್.ಎ.ಶೇಖಾ, ಎಸ್.ಎಸ್.ಶೀಪ್ರಿ, ಎ.ವೈ.ಪಾಟೀಲ, ಕುಮಾರ ರಾಠೋಡ, ಶ್ರೀಕಾಂತ ರಾಠೋಡ, ಆರ್.ಡಿ.ಕಂಠಿ, ಜಿ.ಎಂ.ಏಳಮುಗ್ಗದ ಮತ್ತಿತರರು ಇದ್ದರು.

ಬಿಜೆಪಿ ತೊರೆದು ಎಎಪಿಗೆ ಸೇರ್ಪಡೆ

ಜಮಖಂಡಿ: ರಾಜ್ಯದಲ್ಲಿ ಪ್ರತಿಯೊಂದು ಮತಕ್ಷೇತ್ರದಲ್ಲಿ ಆಮ್ ಆದ್ಮಿ ಪಕ್ಷವನ್ನು ಸಂಘಟಿಸಲಿದ್ದೇವೆ. ಗುರುವಾರ ನಗರದಲ್ಲಿ ನ್ಯಾಯವಾದಿ ಶಿವಾನಂದ ಪಾರಶೆಟ್ಟಿ ವಿದ್ಯುಕ್ತವಾಗಿ ಬಾಜಪ ಪಕ್ಷವನ್ನು ತೊರೆದು ನಮ್ಮ ಪಕ್ಷದ ಸಿದ್ಧಾಂತಕ್ಕೆ ಒಪ್ಪಿ ಸೇರ್ಪಡೆಗೊಂಡಿದ್ದಾರೆ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಅರ್ಜುನ ಹಲಗಿಗೌಡರ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಪಕ್ಷವು ಭ್ರಷ್ಟಾಚಾರ, ಅಪರಾಧ, ಜಾತಿ ಮುಕ್ತವಾಗಿ ಮುನ್ನಡೆಯುತ್ತಿದ್ದು, ಈ ಸಿದ್ಧಾಂತಕ್ಕೆ ಒಪ್ಪಿದವರು ಯಾರಾದರೂ ಇದ್ದರೆ ಸ್ವಯಂ ಪ್ರೇರಿವಾಗಿ ಪಕ್ಷಕ್ಕೆ ಸೇರ್ಪಡೆಯಾಗಬೇಕು. ಇತ್ತೀಚೆಗೆ ನಮ್ಮ ಪಕ್ಷದ ರಾಷ್ಟ್ರಾಧ್ಯಕ್ಷರ ಮೇಲಿದ್ದ ಆರೋಪವೆಲ್ಲವೂ ದೂರಗಿವೆ ಇದರಿಂದ ನಮ್ಮ ಸಂಘಟನೆಗೆ ಮತ್ತಷ್ಟು ಬಲ ಬಂದಿದೆ ಎಂದು ಹೇಳಿದರು.

ಜಿಲ್ಲಾಧ್ಯಕ್ಷ ಆನಂದ ದೇವಾಡಿಗ, ನ್ಯಾಯವಾದಿ ಶಿವಾನಂದ ಪಾರಶೆಟ್ಟಿ ಮಾತನಾಡಿದರು. ಡಾ. ಕೃಷ್ಣಾ ಪೂಜಾರ, ಮಂಜುನಾಥ ಬಂಡಿವಡ್ಡರ, ಮುಧೋಲ ತಾಲೂಕಾಧ್ಯಕ್ಷ ಬಸನಗೌಡ ಸೋಮನಗೌಡರ, ಯಮನೂರ ಬೂದಿಹಾಳ, ಪ್ರಕಾಶ ಇನ್ನಿತರಿದ್ದರು.



ಪುತ್ಥಳಿಗೆ ಅನುದಾನ ಭರವಸೆ: ಸ್ವಾಗತಾರ್ಹ



ಬಾಗಲಕೋಟೆ: ಕರ್ನಾಟಕ ರಾಜ್ಯ ಸರ್ಕಾರವು ಬಾಗಲಕೋಟೆಯಲ್ಲಿ ವಿಶ್ವಗುರು ಬಸವೇಶ್ವರರ ಮತ್ತು ಶಿವಾಜಿ ಮಹಾರಾಜರ ಪುತ್ಥಳಿಗಳನ್ನ ಸ್ಥಾಪಿಸಲು 80 ಲಕ್ಷ ರೂ. ಅನುದಾನ ನೀಡುವುದಾಗಿ ಭರವಸೆ ನೀಡಿದ್ದು ಸಂತೋಷ ತಂದಿದೆ ಎಂದು ಜಿಲ್ಲಾ ಬಣಜಿಗ ಕ್ಷೇಮಾಭಿವೃದ್ಧಿ ಸಂಘ ಸ್ವಾಗತಿಸಿದೆ.

ಬಹುದಿನಗಳ ಬೇಡಿಕೆಯಾಗಿದ್ದ ಇಬ್ಬರು ಮಹಾಪುರುಷರ ಪುತ್ಥಳಿಗಳನ್ನ ಸ್ಥಾಪಿಸುವ ಕಾರ್ಯಕ್ಕೆ ಚುರುಕು ನೀಡಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇದಕ್ಕೆ ಸ್ಪಂದಿಸುವಂತೆ ಮಾಡಿರುವ ಕಾಂಗ್ರೆಸ್ ಮುಖಂಡ ಹೊಳಬಸು ಶೆಟ್ಟರ ಅವರನ್ನು ಬಣಜಿಗ ಸಮಾಜದ ಮುಖಂಡರು ಗೌರವಿಸಿ ಸನ್ಮಾನಿಸಿದರು.

ಜಿಲ್ಲಾ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಕುಮಟಗಿ, ಪ್ರಧಾನ ಕಾರ್ಯದರ್ಶಿ ಮುತ್ತು ಜೋಳದ, ತಾಲೂಕ ಕಾರ್ಯದರ್ಶಿ ವಿಶ್ವನಾಥ ವೈಜಾಪುರ, ಉಪಾಧ್ಯಕ್ಷ ಬಸವರಾಜ ಚಿನಿವಾಲರ, ಆನಂದ ಜಿಗಜಿನ್ನಿ, ನಾಗರಾಜ ಹದ್ಲಿ, ಮುರುಗೇಶ ಶಿವನಗುತ್ತಿ, ಮಲ್ಲಿಕಾರ್ಜುನ ಬಳ್ಳೊಳ್ಳಿ, ನಿಂಗಪ್ಪ ಕೋಟಿ, ಮಹಾಂತೇಶ ಜೋಳದ, ಶಂಕರ ತಪಶೆಟ್ಟಿ, ರಾಜು ಹುಲ್ಯಾಳ, ಈರಣ್ಣ ಹುಂಡೇಕರ ಬಸವರಾಜ ಗೋಗಡಶೆಟ್ಟರು, ಶಿವಾನಂದ ಶೆಟ್ಟರ ಮತ್ತು ಸಮಾಜದ ಹಿರಿಯರು ಉಪಸ್ಥಿತರಿದ್ದರು.

ಶಿವಲಿಂಗೇಶ್ವರ ಜಾತ್ರೆ: ಭಿತ್ತಿಪತ್ರ ಬಿಡುಗಡೆ

ಸಾವಳಗಿ: ಜಮಖಂಡಿ ತಾಲೂಕಿನ ಸುಕ್ಷೇತ್ರ ತುಬಚಿ ಗ್ರಾಮದ ಶಿವಲಿಂಗೇಶ್ವರ ಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಮಾರಂಭದಲ್ಲಿ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವ, ಶಿಲಾಮಂಟಪ ಉದ್ಘಾಟನೆ ಹಾಗೂ ನೂತನ ಗುರುಭವನ ಲೋಕಾರ್ಪಣೆ ಕಾರ್ಯಕ್ರಮದ ವಾಲ್ ಪೋಸ್ಟರ್ ಅನ್ನು ಡಾ.ಅಲ್ಲಮಪ್ರಭು ಶ್ರೀಗಳು ಬಿಡುಗಡೆಗೊಳಿಸಿದರು.

ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಶ್ರೀಗಳು, ಜಾತ್ರೆಗಳು ಕೇವಲ ಸಂಭ್ರಮದ ಆಚರಣೆಯಲ್ಲ. ಅವು ನಮ್ಮ ಸಂಸ್ಕೃತಿ ಮತ್ತು ಸೌಹಾರ್ದತೆಯ ಸಂಕೇತ. ಈ ಬಾರಿ ಜಾತ್ರೆಯ ಜೊತೆಗೆ ಭಕ್ತರ ಬಹುಕಾಲದ ಕನಸಾದ ಶಿಲಾಮಂಟಪ ಹಾಗೂ ಗುರುಭವನದ ಲೋಕಾರ್ಪಣೆ ನೆರವೇರುತ್ತಿರುವುದು ಸಂತಸದ ವಿಷಯ ಎಂದು ತಿಳಿಸಿದರು.

ಜಾತ್ರಾ ಮಹೋತ್ಸವ ಪರಂಪರೆಯಂತೆ ಶಿವಲಿಂಗೇಶ್ವರರ ಅದ್ದೂರಿ ರಥೋತ್ಸವ ಹಾಗೂ ವಿವಿಧ ಧಾರ್ಮಿಕ ವಿಧಿವಿಧಾನಗಳು ಜರುಗಲಿವೆ. ಜಾತ್ರೆಯ ಅಂಗವಾಗಿ ಪ್ರತಿ ದಿನ ಸಂಜೆ ರಾಜ್ಯದ ಪ್ರಸಿದ್ಧ ಕಲಾವಿದರಿಂದ ಭಜನೆ, ಪ್ರವಚನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಮಠದ ಪದಾಧಿಕಾರಿಗಳು, ಯುವಕರು. ಭಕ್ತರು ಉಪಸ್ಥಿತರಿದ್ದರು.



ಕಿರುಸುದ್ದಿ

ಇಂದಿನಿಂದ ಎಂಬಿಪಾ ಪ್ರವಾಸ

• **ವಿಜಯಪುರ:** ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ಮಾ.14, 15ರಂದು ಎರಡು ದಿನಗಳವರೆಗೆ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಮಾ.14ರಂದು ಬೆಳಗ್ಗೆ 10 ಗಂಟೆಗೆ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಶೈಕ್ಷಣಿಕ ಕಾರ್ಯಾಗಾರ ಹಾಗೂ ಉತ್ತಮ ಶಿಕ್ಷಕ, ಶಿಕ್ಷಕಿಯರಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ತುಬಚಿ-ಬಬಲೇಶ್ವರ ಯೋಜನೆಯಡಿ ಬಾಬಾನಗರದಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ಮಂಜೂರಾದ ಹಿನ್ನೆಲೆಯಲ್ಲಿ ತಿಕೋಟಾದ ಸಮಸ್ತ ರೈತರು ಹಮ್ಮಿಕೊಂಡ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಗ್ರಾಮಸ್ಥರ ಮಧ್ಯಾಹ್ನ 1 ಗಂಟೆಗೆ ತಿಕೋಟಾ ತಾಲೂಕಿನ ರಾಂಪುರ ಗ್ರಾಮದಲ್ಲಿ ಎಪಿಎಂಸಿ ಗೋದಾಮು ಕಟ್ಟಡ, ಅಂಗನವಾಡಿ ಕಟ್ಟಡ ಉದ್ಘಾಟನೆ ಹಾಗೂ ಚಂದ್ರಗಿರಿ ಮತ್ತು ಘಟಾಳೇಶ್ವರ ಮಠದ ಕಟ್ಟಡ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಮಾ.15 ರಂದು ಬೆಳಗ್ಗೆ 10.30 ಗಂಟೆಗೆ ಸಾಯಿ ಹೃದಯ ಆಸ್ಪತ್ರೆ ಹತ್ತಿರ ಸಸ್ಯ ರೆಸ್ಟೋರೆಂಟ್ ಉದ್ಘಾಟಿಸಲಿದ್ದಾರೆ. ಬೆಳಗ್ಗೆ 11 ಗಂಟೆಗೆ ರೇಡಿಯೋ ಕೇಂದ್ರದ ಹತ್ತಿರ ವಿಜಯ ಫಂಕ್ಷನ್ ಹಾಲ್ ನಲ್ಲಿ ಕೆಪಿಸಿಸಿ ಪ್ರಚಾರ ಸಮಿತಿ ನೇತೃತ್ವದಲ್ಲಿ ಕಾರ್ಯಕರ್ತರಿಗಾಗಿ ಏರ್ಪಡಿಸಿದ ವಿಶೇಷ ಕಾರ್ಯಾಗಾರದಲ್ಲಿ ಭಾಗವಹಿಸಲಿದ್ದಾರೆ. ನಂತರ ಸಂಜೆ 6 ಗಂಟೆಗೆ ಟಿಪ್ಪು ಸುಲ್ತಾನ್ ವೃತ್ತ ಕೆ.ಸಿ.ಮಾರ್ಕೆಟ್ ನಲ್ಲಿ ರಂಜಾನ್ ಹಬ್ಬದ ನಿಮಿತ್ತ ಇಫ್ತಿಯಾರ ಕೂಟದಲ್ಲಿ ಭಾಗವಹಿಸಲಿದ್ದಾರೆ ಎಂದು ಸಚಿವ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ನೆಮ್ಮದಿ ಬದುಕಿಗೆ ಧರ್ಮ ಪಾಲಿಸಿ



• **ಸಿಂದಗಿ:** ಧರ್ಮೋಪದೇಶವು ಸತ್ಯ, ನೈತಿಕತೆ, ಕರ್ತವ್ಯ ಆಧ್ಯಾತ್ಮಿಕ ಮೌಲ್ಯಗಳನ್ನು ಜೀವನದ ಉನ್ನತ ಗುರಿಗಳನ್ನು ಸಾಧಿಸಲು ಮಾರ್ಗದರ್ಶನ ನೀಡುತ್ತದೆ ಎಂದು ಸಾರಂಗಮಠದ ಪೀಠಾಧಿಪತಿ ಹಾಗೂ ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆಯ ಅಧ್ಯಕ್ಷ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಹೇಳಿದರು.

ತಾಲೂಕಿನ ಬಂದಾಳ ಗ್ರಾಮದ ಹುಡೇದ ಲಕ್ಷ್ಮೀ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡ ನಾಲ್ಕನೇ ವರ್ಷದ ವೀರೇಶ್ವರ ಶರಣರ ಮಹಾಪುರಾಣ ಹಾಗೂ ವೀರೇಶ್ವರ ಶರಣರ ತೊಟ್ಟಿಲು ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದ ಅವರು, ನೆಮ್ಮದಿಯ ಬದುಕಿಗೆ ಧರ್ಮ ಪಾಲನೆ ಮಾಡಲು ಮನುಷ್ಯ ಜನ್ಮ ತಾಳಿದ ಮೇಲೆ ಲಿಂಗ ಧರಿಸುವುದರಿಂದ ಬಾಳಿನ ಭಾಗ್ಯೋದಯವಾಗಿ ಗುರು ಕಾರುಣ್ಯದ ಬೆಳಕು ನೀಡಿ ಪರಿಶುದ್ಧ ಮತ್ತು ಪವಿತ್ರವಾದ ಜೀವನ ರೂಪಿಸುವುದೇ ಗುರುವಿನ ಪರಮ ಧರ್ಮವಾಗಿದೆ ಎಂದರು. ಪುರಾಣ ಪ್ರವಚನಕಾರ ವೀರಯ್ಯ ಶಾಸ್ತ್ರೀಗಳು ಮಾತನಾಡಿದರು. ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ನಿಂಗನಗೌಡ ಬಿರಾದಾರ, ದೇವಸ್ಥಾನದ ಅರ್ಚಕ ನಿಂಗಯ್ಯ ಹಿರೇಮಠ, ವಿಶ್ವನಾಥ ಶರಣಪ್ಪ ಬಿರಾದಾರ ಇದ್ದರು. ಗವಾಯಿಗಳಾದ ಪ್ರಭುಕುಮಾರ ಮದರಿ ಹಾಗೂ ಲಕ್ಷ್ಮೀಕಾಂತ ಕಲಬುರಗಿ ಸಂಗೀತ ಸೇವೆ ನೀಡಿದರು.

ವಿದ್ಯುತ್ ವ್ಯತ್ಯಯ ನಾಳೆ

• **ವಿಜಯಪುರ:** ಬಬಲೇಶ್ವರ ತಾಲೂಕಿನಲ್ಲಿ ಬರುವ ವಿದ್ಯುತ್ ಉಪ ಕೇಂದ್ರಗಳಿಂದ ವಿತರಣೆಯಾಗುವ ಎಲ್ಲ 11 ಕೆವಿ ಮಾರ್ಗಗಳಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ಮಾ.15ರಂದು ಬೆಳಗ್ಗೆ 9 ರಿಂದ ಸಂಜೆ 6 ಗಂಟೆ ವರೆಗೆ ಬಬಲೇಶ್ವರ ತಾಲೂಕಿನ 11 ಕೆ.ವಿ ಪಂಪಸೆಟ್ ಮಾರ್ಗಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಬಬಲೇಶ್ವರ ಹೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಮಲ್ಲಪ್ಪ ಚಲವಾದಿ



• **ಮುದ್ದೇಬಿಹಾಳ:** ಪುರಸಭೆಯ ನಿವೃತ್ತ ಪೌರ ನೌಕರ ಮಲ್ಲಪ್ಪ ಚಲವಾದಿ (65) ಶುಕ್ರವಾರ ನಿಧನರಾದರು. ಪತ್ರಕರ್ತ, ವಿಜಯವಾಣಿ ದಿನಪತ್ರಿಕೆಯ ಗ್ರಾಮೀಣ ವರದಿಗಾರ ಸಿದ್ದು ಚಲವಾದಿ ಅವರ ತಂದೆಯಾಗಿದ್ದರು. ಮೃತರಿಗೆ ಪತ್ನಿ, ಸಿದ್ದು ಸೇರಿ ಇಬ್ಬರು ಪುತ್ರರು, ಇಬ್ಬರು ಪುತ್ರಿ ಇದ್ದಾರೆ.



ಮುದ್ದೇಬಿಹಾಳ: ಸಂತ ಕನಕದಾಸ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ನಡೆಯಿತು. ಹಾವರ್ಗಿ ಪದವಿ ಪೂರ್ವ ಕಾಲೇಜಿನ ಅಧ್ಯಕ್ಷ ಎಸ್.ಎಂ.ನೆರಬೆಂಚಿ, ಮಾದಿನಾಳದ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಎನ್.ಬಿ.ಪಿಂಜಾರ ಭಾಗವಹಿಸಿದ್ದರು. ಸಂಸ್ಥೆಯ ಕಾರ್ಯದರ್ಶಿ ಬಿ.ಎಸ್.ಮೇಟಿ, ಮುಖ್ಯೋಪಾಧ್ಯಾಯ ಬಿ.ಎಸ್.ಪಣೇದಕಟ್ಟಿ, ಪ್ರಾಥಮಿಕ ಶಾಲೆಯ ಎಂ.ಎನ್.ಯರಝರಿ. ಶಿಕ್ಷಕರಾದ ಬಿ.ಎಸ್.ಹುಗ್ಗಿ, ಎಸ್.ಆರ್.ಕುರಿ, ಆರ್.ಎಂ.ಕುರಿ, ವಿ.ಎಸ್.ಹೊಸಗೌಡರ, ಎಸ್.ಎಂ.ಪಣೇದಕಟ್ಟಿ, ಜ್ಯೋತಿ ಹಿರೇಮಠ, ಸಿಬ್ಬಂದಿ ಆರ್.ಎಸ್.ವಾಲಿಕಾರ, ಐ.ಜಿ.ಮಾನಕರ ಇದ್ದರು.

5.47 ಲಕ್ಷ ರೂ.ಗಳ ಬಜೆಟ್ ಮಂಡನೆ

• **ಇಂಡಿ:** ಇಂಡಿ ನಗರಸಭೆಯಾದ ಮೇಲೆ ಇದೇ ಮೊದಲನೆಯ ಬಾರಿ 2026-27ನೇ ಸಾಲಿನ ಆಯ-ವ್ಯಯ ಬಜೆಟನ್ನು ಜಿಲ್ಲಾಧಿಕಾರಿ ಹಾಗೂ ನಗರಸಭೆಯ ಆಡಳಿತಾಧಿಕಾರಿ ಡಾ.ಕೆ.ಆನಂದ ಅವರ ಅಧ್ಯಕ್ಷತೆಯಲ್ಲಿ ವಿಜಯಪುರ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಭವನದಲ್ಲಿ 5.47 ಲಕ್ಷ ರೂ.ಗಳ ಬಜೆಟ್ ಮಂಡನೆ ಮಾಡಿದರು. ಬಜೆಟ್‌ನಲ್ಲಿ ಇಂಡಿ ನಗರದ ಸ್ವಚ್ಛತೆ, ಸೌಂದರ್ಯೀಕರಣ, ಕುಡಿಯುವ ನೀರು, ಬೀದಿ ದೀಪ ಅಳವಡಿಕೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಆನಂದ ತಿಳಿಸಿದ್ದಾರೆ. ನಗರಸಭೆಯ 2026-27ನೇ ಸಾಲಿನ ಆಯ-ವ್ಯಯ ಬಜೆಟನ್ನು ಪೌರಾಯುಕ್ತ ಶಿವಾನಂದ ಪೂಜಾರಿ ನಗರಸಭೆಯ ಸನ್2026-27ನೇ ಸಾಲಿನ ಆಯ-ವ್ಯಯ ಕರಡು ಪ್ರಸ್ತಾವನೆ ಮಂಡಿಸಿದರು. ನಂತರ ಅಂದಾಜು ಆರಂಭ ಶಿಲ್ಕು 92.10ಲಕ್ಷಗಳು, ಸ್ವೀಕೃತಿಗಳು ರಾಜಸ್ವ ಸ್ವೀಕೃತಿಗಳು 2595.40 ಲಕ್ಷಗಳು, ಬಂಡವಾಳ ಸ್ವೀಕೃತಿಗಳು 892.50ಲಕ್ಷಗಳು, ಅಸಾಧಾರಣ ಸ್ವೀಕೃತಿಗಳು 855.74ಲಕ್ಷಗಳು ಒಟ್ಟು 4343.63ಲಕ್ಷಗಳು, ವೆಚ್ಚಗಳು. ರಾಜಸ್ವಪಾವತಿಗಳು 2612.63ಲಕ್ಷಗಳು, 2)ಬಂಡವಾಳ ಪಾವತಿಗಳು 869.80ಲಕ್ಷಗಳು, ಅಸಾಧಾರಣ ಪಾವತಿಗಳು 855.74ಲಕ್ಷಗಳು ಒಟ್ಟು 4338.17ಲಕ್ಷಗಳು ಒಟ್ಟು ಉಳಿತಾಯ ಶಿಲ್ಕು 5.47ಲಕ್ಷಗಳು. ಅಂದಾಜು ಅಂತಿಮ ಶಿಲ್ಕು ಒಟ್ಟು 97.56ಲಕ್ಷಗಳು ಸಿದ್ಧಪಡಿಸಿ ಮಾನ್ಯ ಆಡಳಿತಾಧಿಕಾರಿಗಳ ಅನುಮೋದನೆಗಾಗಿ ನಗರಸಭೆಯ ಪೌರಾಯುಕ್ತರು ಸಭೆಯಲ್ಲಿ ಮಂಡಿಸಿದರು. ಅನುಮೋದನೆಗಾಗಿ ಸಲ್ಲಿಸಿದನ್ನು ಆಡಳಿತಾಧಿಕಾರಿಗಳು ಪರಿಶೀಲಿಸಿ ಸನ್ 2026-27ನೇ ಸಾಲಿನ ಇಂಡಿ ನಗರಸಭೆಯ ಆಯ-ವ್ಯಯ ಅನುಮೋದನೆ ನೀಡಿದರು.



ಇಂಡಿ: ಇಂಡಿ ನಗರಸಭೆಯಾದ ಮೇಲೆ ಇದೇ ಮೊದಲನೆಯ ಬಾರಿ 2026-27ನೇ ಸಾಲಿನ ಆಯ-ವ್ಯಯ ಬಜೆಟ್‌ನ್ನು ಜಿಲ್ಲಾಧಿಕಾರಿ ಡಾ.ಕೆ.ಆನಂದ ಅವರ ಅಧ್ಯಕ್ಷತೆಯಲ್ಲಿ ವಿಜಯಪುರ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಭವನದಲ್ಲಿ 5.47 ಲಕ್ಷ ರೂ.ಗಳ ಬಜೆಟ್ ಮಂಡನೆ ಮಾಡಿದರು. ಅಪರ್ ಜಿಲ್ಲಾಧಿಕಾರಿ ಔದ್ರಾಮ, ಯೋಜನಾ ನಿರ್ದೇಶಕ ಬಿ.ಎ.ಸೌದಾಗರ, ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ, ತಹಸಿಲ್ದಾರ ಬಿ.ಎಸ್.ಕಡಕಬಾವಿ, ಅಕೌಂಟಂಟ್ ಅಸ್ಲಂ ಖಾಧಿಮ ಇದ್ದರು.

ಜಿಐಎಸ್ ಆಧಾರಿತ ಮಹಾಯೋಜನೆ | ಜಿಪಂ ಸಿಇಒ ರಿಷಿ ಆನಂದ ಸೂಚನೆ

ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ

• **ವಿಜಯಪುರ:** ಅಮೃತ ಯೋಜನೆಯಡಿ ಜಿಐಎಸ್ ಆಧಾರಿತ ಮಹಾ ಯೋಜನೆಯ ಕುರಿತು ನಗರಕ್ಕೆ ಹತ್ತಿರವಿರುವ 9 ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಸಾರ್ವಜನಿಕರಿಗೆ ಜಾಗೃತಿ ಮೂಡಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಇದರಿಂದ ಗ್ರಾಮ ಪಂಚಾಯತಿಗಳು ಉನ್ನತೀಕರಣಗೊಳ್ಳಲು ಸಾಧ್ಯವಾಗುತ್ತದೆ ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ರಿಷಿ ಆನಂದ ಹೇಳಿದರು.



ನಗರದ ಜಿಲಾ ಪಂಚಾಯಿತಿ ಸಭಾಂಗಣದಲ್ಲಿ ಹಮ್ಮಿಕೊಂಡ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೇವಲ 10 ವರ್ಷಗಳ ಹಿಂದೆ ನೋಡುವುದಾದರೆ ವಿಜಯಪುರ ನಗರವು ಪ್ರಸ್ತುತ್ ಬೃಹತ್ ಮಟ್ಟದಲ್ಲಿ ಅಭಿವೃದ್ಧಿ ಹೊಂದಿದೆ. ಇದೇ ನಿಟ್ಟಿನಲ್ಲಿ ನಗರದೊಂದಿಗೆ ಗ್ರಾಮ ಪಂಚಾಯಿತಿಗಳೂ ಸಹ ಅಭಿವೃದ್ಧಿ ಹೊಂದಬೇಕು ಎನ್ನುವುದೇ ಈ ಯೋಜನೆಯ ಉದ್ದೇಶವಾಗಿದೆ. ಮೂಲಭೂತ ಸೌಕರ್ಯಗಳಾದ ನೀರು, ರಸ್ತೆ ನಿರ್ಮಾಣ, ವಿದ್ಯುತ್ ವ್ಯವಸ್ಥೆ, ಚರಡಿ ವ್ಯವಸ್ಥೆ, ಸಾರಿಗೆ ವ್ಯವಸ್ಥೆ, ಮಾರುಕಟ್ಟೆ ಬೆಳವಣಿಗೆಹಾಗೂ ಮುಖ್ಯವಾಗಿ ಹಿಂದುಳಿದ ವರ್ಗಗಳ ಜನಾಂಗಕ್ಕೆ ಈ ಯೋಜನೆ ಹೆಚ್ಚು ಅನುಕೂಲವಾಗಲಿದೆ.

ಆದ್ದರಿಂದ ಈ 9 ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿಗಳು ನಗರಾಭಿವೃದ್ಧಿ ಪ್ರಾಧಿಕಾರದೊಂದಿಗೆ ಸಮನ್ವಯ ಸಾಧಿಸಿ, ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಬೇಕು ಮತ್ತು ಅವಶ್ಯವಿರುವ ದಾಖಲೆಗಳನ್ನು ಸಲ್ಲಿಸಬೇಕು ಎಂದರು.

ವಿಜಯಪುರ ನಗರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಒಟ್ಟು 17 ಗ್ರಾಮಗಳನ್ನು ಒಳಗೊಂಡಿದ್ದು, ಸರ್ಕಾರದ ಅಧಿಸೂಚನೆ ಏ. 5, 2016 ರಂತೆ ಸ್ಥಳೀಯ ಯೋಜನಾ ಪ್ರದೇಶದ ಒಟ್ಟು ಕ್ಷೇತ್ರ: 525.00 ಚದರ ಕಿಲೋಮೀಟರ ಗಳಷ್ಟಿದೆ. ಭಾರತ ಸರ್ಕಾರದ ಅಮೃತ ಯೋಜನೆಯಲ್ಲಿ ಮೂಲಭೂತ ನಾಗರಿಕ ಸೌಕರ್ಯ, ವಿಶೇಷವಾಗಿ ಬಡವರಿಗೆ ಮತ್ತು ಹಿಂದುಳಿದ ವರ್ಗದವರ ಗುಣಮಟ್ಟ ಸುಧಾರಣೆ ಉದ್ದೇಶದಿಂದ ನಾಗರಿಕರಿಗೆ ಉತ್ತಮ ಸೇವೆ ಒದಗಿಸಲು ಯೋಜಿಸಿ ದೇಶದ 500 ನಗರಗಳನ್ನು ಗುರುತಿಸಿದ್ದು, ಕರ್ನಾಟಕ ರಾಜ್ಯದ 26 ನಗರಗಳಲ್ಲಿ ವಿಜಯಪುರ ನಗರವು ಆಯ್ಕೆಯಾಗಿರುತ್ತದೆ ಎಂದರು.

ನಗರದ ಹಾಲಿ ಬೆಳವಣಿಗೆ, ನಿರ್ಮಿತಿಗಳನ್ನು ಆಧರಿಸಿ ಜಿಐಎಸ್ ಆಧಾರಿತ ಮಾಸ್ಟರ್ ಪ್ಲಾನ್ ಸಿದ್ದಪಡಿಸುವ ಕೆಲಸವನ್ನು ಕೈಗೊಂಡಿದ್ದು, ಕೆಎಸ್ ಆರ್‌ಎಸ್‌ಎಸಿ ಸಂಸ್ಥೆಯಿಂದ ಸೆಟ್‌ಲೈಟ್ ಇಮೇಜ್ ಪಡೆದು ಕಂದಾಯ ಇಲಾಖೆಯ ರೆವಿನ್ಯೂ ಮ್ಯಾಪ್ ,ಬೇಸ್ ಮ್ಯಾಪ್ನು ಜಿಯೋಟಿಫ್ ಫಾರ್ಮೇಟ್ ಸ್ಯಾಪ್ಟ್ ಕಾಫಿ ಪಡೆದು 2017 ರ ಸೆಟ್ ಲೈಟ್ ಇಮೇಜಿನ್ 0.6 ಮೀಟರ್ ನಿಖರತೆಯನ್ನು ಅಳವಡಿಸಿ ಬೇಸ್ ಮ್ಯಾಪನ್ನು ತಯಾರಿಸಿಕೊಂಡು ಇಲಾಖೆಗಳಿಂದ ದತ್ತಾಂಶಗಳನ್ನು ಸಂಗ್ರಹಿಸಿ ಹಾಲಿ ನಿರ್ಮಿತಿ- ಕಟ್ಟಡಗಳನ್ನು ಮೊಬೈಲ್ ಅಪ್ಲಿಕೇಶನಗಳ ಮುಖಾಂತರ ಕೆಎಸ್‌ಆರ್‌ಎಸ್‌ಎಸಿ ಸಂಸ್ಥೆಯವರ ಉಪಗ್ರಹ ಚಿತ್ರದ ದತ್ತಾಂಶಗಳನ್ನು ಅಳವಡಿಸಿ ಹಾಲಿ ಬೆಳವಣಿಗೆಯ ಮೂಲ ನಕ್ಷೆ-ಬೇಸ್ ಮ್ಯಾಪನ್ನು ತಯಾರಿಸಲಾಗಿದೆ ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಾಜಶೇಖರ ಡಂಬಳ, ವಿವಿಧ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿಗಳು ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು, ಸಿಬ್ಬಂದಿ ಇದ್ದರು.

ಶ್ರೀಶೈಲಕ್ಕೆ ವಿಶೇಷ ಬಸ್ ಸೌಲಭ್ಯ

• **ವಿಜಯಪುರ:** ಯುಗಾದಿ ಹಿನ್ನೆಲೆಯಲ್ಲಿ ಆಂಧ್ರ ಪ್ರದೇಶದ ಶ್ರೀಶೈಲದಲ್ಲಿ ಜರಗುವ ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿಯ ರಥೋತ್ಸವ ನಿಮಿತ್ತ ಭ್ರಮರಾಂಬಾ ಹಾಗೂ ಮಲ್ಲಿಕಾರ್ಜುನ ಸ್ವಾಮಿಯ ದರ್ಶನಕ್ಕೆ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಿಂದ ವಿಶೇಷ ಬಸ್ ಸೌಲಭ್ಯ ಕಲ್ಪಿಸಲಾಗುವುದು ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಹೇಳಿದ್ದಾರೆ. ಕೇಂದ್ರ ಬಸ್ ನಿಲ್ದಾಣದಿಂದ, ಬಸವನಬಾಗೇವಾಡಿ, ಮುದ್ದೆಬಿಹಾಳ, ಇಂಡಿ, ಸಿಂದಗಿ, ತಾಳಿಕೋಟೆ ಘಟಕಗಳಿಂದ ನೇರವಾಗಿ ಶ್ರೀಶೈಲಕ್ಕೆ ವಾಹನಗಳ ಸೌಕರ್ಯ ಒದಗಿಸಲಾಗಿರುತ್ತದೆ. ವಿಜಯಪುರ ವಿಭಾಗದಿಂದ ಸುಮಾರು 250 ವಾಹನಗಳನ್ನು ಕಾರ್ಯಾಚರಣೆ ಮಾಡುತ್ತಿದ್ದು, ಶ್ರೀಶೈಲ ಮಲ್ಲಿಕಾರ್ಜುನ ಭಕ್ತಾದಿಗಳಿಗೆ ಯಾವುದೇ ತೊಂದರೆ ಆಗದಂತೆ ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ಇಂದು ವೀರರಾಣಿ ಕಿತ್ತೂರು ಚನ್ನಮ್ಮ ಕೇಂದ್ರ ಬಸ್ ನಿಲ್ದಾಣ ವಿಜಯಪುರದಲ್ಲಿ ವಿಭಾಗಿಯ ನಿಯಂತ್ರಣಾಧಿಕಾರಿ ನಾರಾಯಣಪ್ಪ ಕುರುಬರ ಹಾಗೂ ವಿಭಾಗದ ಅಧಿಕಾರಿಗಳು ಭಕ್ತಾದಿಗಳ ಸಮ್ಮುಖದಲ್ಲಿ ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ಪೂಜೆ ಸಲ್ಲಿಸುವ ಮೂಲಕ ಸಾರಿಗೆ ವ್ಯವಸ್ಥೆಗೆ ಚಾಲನೆ ನೀಡಿರುತ್ತಾರೆ. ಭಕ್ತಾದಿಗಳು ಸಾರಿಗೆಯ ಉಪಯೋಗ ಪಡೆದುಕೊಳ್ಳಬೇಕು ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

ಶಾಖಾಮಠದ ಭೂಮಿಪೂಜೆ ಇಂದು: ಜಡಿಮಠದ ಶ್ರೀಗಳಿಗೆ ಆಹ್ವಾನ

• **ದೇವರಹಿಪ್ಪರಗಿ:** ವಿಜಯಪುರ ನಗರದ ರಂಭಾಪುರಿ ಪೀಠ ಶಾಖಾ ಮಠದ ಭೂಮಿಪೂಜೆ ಕಾರ್ಯಕ್ರಮ ಮಾ.14ರಂದು ಜರುಗಲ್ಲಿರುವ ಹಿನ್ನಲ್ಲೆಯಲ್ಲಿ ಇಲ್ಲಿಯ ಜಡಿಮಠದ ಜಡಿ ಸಿದ್ದೇಶ್ವರ ಶಿವಾಚಾರ್ಯರಿಗೆ, ಮಠದ ಭಕ್ತರು ಹಾಗೂ ವೀರಶೈವ ಲಿಂಗಾಯತ ಸಮಾಜದ ಮುಖಂಡರಿಗೆ ಕಾರ್ಯಕ್ರಮಕ್ಕೆ ಆಹ್ವಾನಿಸಿದರು.

ಸಿ.ಎಸ್.ಹಿರೇಮಠ ಹಾಗೂ ಸೋಮಯ್ಯ ಗಣಾಚಾರಿ ಮಾತನಾಡಿ, ನಮ್ಮ ದೇಶದ ಮೂಲೆ ಮೂಲೆಯಲ್ಲಿ ಸುಮಾರು 12 ಸಾವಿರಕ್ಕೂ ಹೆಚ್ಚು ರಂಭಾಪುರಿ ಶಾಖಾ ಮಠಗಳನ್ನು ಹೊಂದಿದ್ದು, ವಿಜಯಪುರ ಐತಿಹಾಸಿಕ ನಗರಿ, ಪ್ರಾಚೀನಸ್ಮಾರಕಗಳ ಬೀಡು, ಗುಮ್ಮಟನಗರ ಪ್ರವಾಸಿ ತಾಣವಾಗಿದ್ದರಿಂದ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಇಲ್ಲಿ ಶಾಖಾ ಮಠ ಸ್ಥಾಪಿಸುವುದರಿಂದ ಪ್ರವಾಸಿಗರಿಗೂ ಅನುಕೂಲವಾಗಲಿದೆ ಎಂದರು. ವಿದ್ಯಾರ್ಥಿಗಳಿಗೆ ತರಬೇತಿ ಶಾಲೆ ಮತ್ತು ನಾಡಿನ ಮಠಾಧೀಶರಿಗೆ ವಸತಿ, ಪ್ರಸಾದ ಕಲ್ಪಿಸಬೇಕು ಎಂಬ ಸದುದ್ದೇಶದಿಂದ ನಗರದ ಅಲ್ ಅಮೀನ್ ಸಂಸ್ಥೆ ಎರಡನೇ ಗೇಟ್ ಎದುರಿನ ಸುರಭಿ-ಸಿದ್ದೇಶ್ವರ ಲೇಔಟ್, ನವರಸಪುರ, ಅಥಣಿ ರಸ್ತೆ ಇಲ್ಲಿ ಶಾಖಾ ಮಠ ಸ್ಥಾಪಿಸುವ ಉದ್ದೇಶ ಹೊಂದಿದೆ ಎಂದರು. ಬಾಳೆಹೊನ್ನೂರು ವೀರಸೋಮೇಶ್ವರ ಸಾನ್ನಿಧ್ಯದಲ್ಲಿ, ನಾಡಿನ ಎಲ್ಲ ಮಠಾಧೀಶರ ರಂಭಾಪುರಿ ಶ್ರೀಗಳ ಸಮ್ಮುಖದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಅವರು ನೆರವೇರಿಸಲಿದ್ದಾರೆ ಎಂದರು.

ಸಮಾರಂಭಕ್ಕೆ ನಾಡಿನ ಮಠಾಧೀಶರು ಮತ್ತು ಭಕ್ತ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ರೇಣುಕಾಚಾರ್ಯರ ಮತ್ತು ಕ್ಷೇತ್ರನಾಥ ವೀರಭದ್ರ ಸ್ವಾಮಿಯ ದರ್ಶನ ಪಡೆದುಕೊಳ್ಳುವಂತೆ ಶ್ರೀಮಠದ ಭಕ್ತರಿಗೆ ಮನವಿ ಮಾಡಿದರು.

ಸ್ಥಳೀಯ ಮಠದ ಜಡಿ ಸಿದ್ದೇಶ್ವರ ಶಿವಾಚಾರ್ಯರು ಮಾತನಾಡಿ, ರಂಭಾಪುರಿ ಶ್ರೀಗಳ ಆಶಯದಂತೆ ವಿಜಯಪುರದಲ್ಲಿ ರಂಭಾಪುರಿ ಪೀಠ ಶಾಖಾ ಮಠದ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ನಾವೆಲ್ಲರೂ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೆ ಶುಭ ಕೋರೋಣ ಎಂದರು. ದಾನಯ್ಯ ಹಿರೇಮಠ, ಅಶೋಕ್ ನಾಡಗೌಡ, ಬಸವರಾಜ ತಾಳಿಕೋಟೆ, ಜಂಗಮ ಸಮಾಜದ ತಾಲೂಕು ಘಟಕದ ಅಧ್ಯಕ್ಷರಾದ ಸೋಮು ಹಿರೇಮಠ, ಪ.ಪಂ ಸದಸ್ಯರಾದ ಶಾಂತಯ್ಯ ಜಡಿಮಠ ಸೇರಿದಂತೆ ಇತರರು ಇದ್ದರು.



ಏ.10ರಿಂದ ಮೊದಲ ಪುಸ್ತಕ ಮೇಳ: ಸೂಳಿಬಾವಿ

• **ವಿಜಯಪುರ:** ಮೊದಲ ಬಾರಿಗೆ ನಗರದಲ್ಲಿ ಏ.10ರಿಂದ 14ರ ವರೆಗೆ ಐದು ದಿನ ಬಿಜಾಪುರ ಬುದ್ಧ, ಬಸವ ಹಾಗೂ ಬಾಬಾಸಾಹೇಬ ಅಂಬೇಡ್ಕರ್ ಬೃಹತ್ ಪುಸ್ತಕ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಪ್ರಗತಿಪರ ಚಿಂತಕ, ಲಡಾಯಿ ಪ್ರಕಾಶನದ ಬಸವರಾಜ ಸೂಳಿಬಾವಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇವಲ ಬೆಂಗಳೂರು, ಮೈಸೂರು ಭಾಗದಲ್ಲಿ ಸೀಮಿತಗೊಂಡಿದ್ದ ಪುಸ್ತಕ ಮೇಳ ಈ ಭಾಗದಲ್ಲಿ ನಡೆಯುತ್ತಿರುವುದು ವಿಶೇಷ. ಮಹಾತ್ಮ ಜ್ಯೋತಿಬಾ ಫುಲೆ, ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನ ನಿಮಿತ್ತ ಹಮ್ಮಿಕೊಂಡ ಈ ಕಾರ್ಯಕ್ರಮ ಇಲ್ಲಿನ ದರಬಾರ ಹೈಸ್ಕೂಲ್ ಮೈದಾನದಲ್ಲಿ ನಡೆಯಲಿದೆ ಎಂದರು.

ಏ.10ಎಂದು ಪುಸ್ತಕ ಮೇಳೆ ಉದ್ಘಾಟನೆ, ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ಪುಸ್ತಕ ಮೇಳ ಸ್ಥಳದ ವರೆಗೆ ಪುಸ್ತಕಗಳ ಜೊತೆ ಲೇಖಕರ ಮೆರವಣಿಗೆ ನಡೆಯಲಿದೆ. ಏ.11ರಂದು ಮಹಾತ್ಮ ಜ್ಯೋತಿಬಾ ಫುಲೆ ಜನ್ಮದಿನ ನಿಮಿತ್ತ ಸಾವಿತ್ರಿ ಬಾಯಿ ಫುಲೆ ಮಾರ್ಗದಿಂದ ಪುಸ್ತಕ ಮೇಳದ ಸ್ಥಳದವರೆಗೆ ಶಿಕ್ಷಕ ದಂಪತಿಗಳ ಮೆರವಣಿಗೆ, ಏ.12ರಂದು ಬಸವಾದಿ ಶರಣರ ವಚನಗಳ ಕಟ್ಟುಗಳೊಂದಿಗೆ ಬಸವೇಶ್ವರ ವೃತ್ತದಿಂದ ಕಾರ್ಯಕ್ರಮ ಸ್ಥಳದ ವರೆಗೆ ಬಸವಾನುಯಾಯಿಗಳ ಮೆರವಣಿಗೆ, ಏ.13ರಂದು ಅಸ್ಪೃಶ್ಯರ ಶಿಕ್ಷಣಕ್ಕಾಗಿ ಶ್ರಮಿಸಿದ ಕಾಕಾ ಕಾರ್ಖಾನೀಸ್ ಸ್ಮರಣೆ ನಿಮಿತ್ತ ಅವರ ಬೋರ್ಡಿಂಗ್‌ನಲ್ಲಿದ್ದು, ಶಿಕ್ಷಣ ಪಡೆದವರು, ಅವರ ಕುಟುಂಬಸ್ಥರಿಂದ ಕಾಕಾ ಕಾರ್ಖಾನೀಸ್ ಅವರ ಮನೆಯಿಂದ ಕಾರ್ಯಕ್ರಮ ಸ್ಥಳದ ವರೆಗೆ ಮೆರವಣಿಗೆ ಹಾಗೂ ಏ.14ರಂದು ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನ ನಿಮಿತ್ತ ನಗರದ ಅಂಬೇಡ್ಕರ್ ವೃತ್ತದಿಂದ ಕಾರ್ಯಕ್ರಮದ ಸ್ಥಳದವರೆಗೆ ಸಂವಿಧಾನ ಪೀಠಿಕೆ ಕಂಠಪಾಠ ಮಾಡಿದ ವಿದ್ಯಾರ್ಥಿ ಮತ್ತು ಶಿಕ್ಷಕರ ಮೆರವಣಿಗೆ ನಡೆಯಲಿದೆ ಎಂದರು.

ಇನ್ನು ಪ್ರತಿದಿನ ಸಂಜೆ 4ರಿಂದ ರಾತ್ರಿ 9 ಗಂಟೆ ವರೆಗೆ ಕವಿಗೋಷ್ಠಿ, ವಿದ್ಯಾರ್ಥಿಗಳಿಂದ ಪುಸ್ತಕ ಕುರಿತು ಮಾತು, ಲೇಖಕರೊಂದಿಗೆ ಸಂವಾದ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಹಿರಿಯ ಮುಖಂಡ ಅನಿಲ ಹೊಸಮನಿ ಮಾತನಾಡಿ, ಈ ಪುಸ್ತಕ ಮೇಳ ವಿಶೇಷ ಕಾರ್ಯಕ್ರಮವಾಗಿದ್ದು, ಲಡಾಯಿ ಪ್ರಕಾಶನ, ಕವಿ ಪ್ರಕಾಶನ, ದಲಿತ ಕಲಾ ಮಂಡಳಿ, ಚಿತ್ತಾರ ಕಲಾಬಳಗ, ದಲಿತ ಮತ್ತು ಪ್ರಗತಿಪರ ಸಂಘಟನೆಗಳು ಸೇರಿದಂತೆ ಹತ್ತಾರು ಸಂಘ, ಸಂಸ್ಥೆಗಳ ಆಶ್ರಯದಲ್ಲಿ ನಡೆಯುತ್ತಿದ್ದು, 50 ಪುಸ್ತಕ ಮಳಿಗೆಗಳು ಸ್ಥಾಪಿಸಲಾಗುತ್ತಿದ್ದು, 1 ಲಕ್ಷಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದರು.

ಮುಖಂಡರಾದ ಚನ್ನು ಕಟ್ಟಿಮನಿ, ಸಂಜು ಕಂಬಾಗಿ, ಶಿವಪುತ್ರ ಅಜಮನಿ, ಫಯಾಜ್ ಕಲಾದಗಿ, ಬೋಗೇಸ ಸೊಲ್ಲಾಪುರ, ಪ್ರಭುಗೌಡ ಪಾಟೀಲ, ಸುಖದೇವ ಕಟ್ಟಿಮನಿ, ಸಂಗೀತಾ ಪೂಜಾರಿ ಸೇರಿದಂತೆ ಇತರರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.



ರೇಣುಕಾಚಾರ್ಯರ ತತ್ವಾದರ್ಶ ಅಳವಡಿಸಿಕೊಳ್ಳಿ: ಗುರುಶಾಂತವೀರ ಶ್ರೀಗಳು

• **ನಿಡಗುಂದಿ:** ಮನುಕುಲದ ಉದ್ದಾರಕ್ಕಾಗಿ ಶ್ರಮಿಸಿದ ರೇಣುಕಾಚಾರ್ಯರು ಉತ್ತಮ ಧಾರ್ಮಿಕ ಹೆಜ್ಜೆಗುರುತು ಇರಿಸಿ ಹೋಗಿದ್ದಾರೆ. ಅವರ ಹೆಜ್ಜೆಗಳನ್ನು ನಾವು ಅನುಸರಿಸುತ್ತಾ ಮುಂದೆ ಸಾಗಬೇಕಿದೆ ಎಂದು ಇಟಗಿಯ ಗುರುಶಾಂತವೀರ ಶ್ರೀಗಳು ಹೇಳಿದರು.

ಪಟ್ಟಣದ ಗರಡಿಮನೆ ಕಟ್ಟೆಯಲ್ಲಿ ನಿಡಗುಂದಿ ತಾಲೂಕು ಜಗದ್ಗುರು ರೇಣುಕಾಚಾರ್ಯರ ಜಂಗಮರ ಹಾಗೂ ಶೈಕ್ಷಣಿಕ ಕ್ಷೇಮಾಭಿವೃದ್ಧಿ ಸಂಘದಿಂದ ಹಮ್ಮಿಕೊಂಡ ಜಗದ್ಗುರು ರೇಣುಕಾಚಾರ್ಯ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಯುಗ ಯುಗಗಳಿಂದ ಅವತರಿಸಿ ಕಾಲಕಾಲಕ್ಕೆ ಭಕ್ತರ ಸಂಕಷ್ಟಗಳನ್ನು ದೂರು ಮಾಡಿದ ಭಕ್ತೋದ್ಧಾರಕ. ಸರ್ವರ ಹಿತ ಬಯಸಿದ, ಮಾನವ ಧರ್ಮಕ್ಕೆ ಜಯವಾಗಲಿ ಎಂದು ಸಾರಿದ್ದು ರೇಣುಕಾಚಾರ್ಯರಾಗಿದ್ದಾರೆ ಎಂದರು.



ಬಸವನಬಾಗೇವಾಡಿಯ ಶಿವಪ್ರಕಾಶ ಶ್ರೀಗಳು ಮಾತನಾಡಿ, ರೇಣುಕಾಚಾರ್ಯರು ಮನುಕುಲದ ಉದ್ಧಾರಕ್ಕೆ ಅವತಾರ ಎತ್ತಿದ ಮಹಾಮಹಿಮರು. ಒಂದೇ ಜಾತಿಗೆ ಸೀಮಿತರಾಗದೇ ಎಲ್ಲ ಸಮುದಾಯದವರನ್ನು ಒಗ್ಗೂಡಿಸಿ, ಜಾತಿ, ವರ್ಣ ಭೇದವಿಲ್ಲದೆ ಭಕ್ತಿಮಾರ್ಗ ಸಾರಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಯುಗಯುಗಗಳಿಂದ ಹುಟ್ಟಿ ಮಾನವ ಕುಲಕ್ಕೆ ಲಿಂಗ ಕೊಟ್ಟ ಕೀರ್ತಿ ರೇಣುಕಾಚಾರ್ಯರಿಗೆ ಸಲ್ಲುತ್ತದೆ ಎಂದರು.

ಕೊಣ್ಣೂರ ವಿರುಪಾಕ್ಷ ಶ್ರೀಗಳು ಮಾತನಾಡಿ, ಜಗದ್ಗುರು ಎಂದು ಹೆಸರಿಟ್ಟುಕೊಂಡವರೆಲ್ಲ ಜಗದ್ಗುರುಗಳಲ್ಲ, ಇಡೀ ಮನುಕುಲವನ್ನು ಉದ್ಧಾರ ಮಾಡಿದ ರೇಣುಕಾಚಾರ್ಯರು ಜಗದ್ಗುರುಗಳು ಎಲ್ಲರ ಮೆಚ್ಚುವ, ಸರ್ವರ ಹಿತ ಬಯಸುವ ಸಿದ್ಧಾಂತ, ಶಿವತತ್ವವನ್ನು ಬೋಸಲು ಅವತಾರವೆತ್ತಿ ಬಂದವರು ಎಂದರು.

ಪಟ್ಟಣದ ರುದ್ರೇಶ್ವರಮಠದ ರುದ್ರಮುನಿ ಶ್ರೀಗಳು, ಮುತ್ತಗಿಯ ವೀರರುದ್ರಮುನಿ ಶ್ರೀಗಳು, ಬಿಲ್‌ಕೆರೂರನ ಸಿದ್ದಲಿಂಗ ಶ್ರೀಗಳು, ಚಿಮ್ಮಲಗಿ ಸಿದ್ದರೇಣುಕ ಶ್ರೀಗಳು, ಆಲಮಟ್ಟಿಯ ರುದ್ರಮುನಿ ದೇವರು, ತಹಸೀಲ್ದಾರ್ ಎ.ಡಿ.ಅಮರಾವದಗಿ, ವಿಜಯಪುರ ಸಿದ್ದೇಶ್ವರ ಬ್ಯಾಂಕ್‌ನ ನಿರ್ದೇಶಕ ಗುರು ಗಚ್ಚಿನಮಠ, ತಾಲೂಕು ರೇಣುಕಾಚಾರ್ಯರ ಜಂಗಮರ ಹಾಗೂ ಶೈಕ್ಷಣಿಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಸಲಿಂಗಯ್ಯ ಗಣಾಚಾರಿ, ಶಂಕ್ರಯ್ಯ ಹಿರೇಮಠ, ಶಶಿಧರ ಹಿರೇಮಠ, ಬಸಲಿಂಗಯ್ಯ ಗಣಾಚಾರಿ, ರುದ್ರಯ್ಯ ನಾಗೂರಮಠ, ಸಿದ್ದಯ್ಯ ಚಿಕ್ಕಮಠ, ಶ್ರೀಕಾಂತ ಚಿಕ್ಕಮಠ, ಜಂಗಮ ಸಮಾಜ ಸೇರಿದಂತೆ ನಾನಾ ಸಮಾಜದ ಮುಖಂಡರು ಇದ್ದರು.

ಆರೋಗ್ಯ ತಪಾಸಣಾ ಶಿಬಿರದ ಸದುಪಯೋಗ ಪಡೆದುಕೊಳ್ಳಿ

• **ಝುಳಕಿ:** ಆರೋಗ್ಯ ಉಚಿತ ತಪಾಸಣೆ ಶಿರಬಿಗಳಲ್ಲಿ ಗ್ರಾಮ ಪ್ರತಿಯೊಬ್ಬರೂ ಭಾಗವಹಿಸಿ ತಜ್ಞ ವೈದ್ಯರಿಂದ ಸಲಹೆ ಪಡೆದುಕೊಳ್ಳಿ ಎಂದು ಮಾಜಿ ಸಚಿವ ಅಪ್ಪಸಾಹೇಬ ಪಟ್ಟಶೆಟ್ಟಿ ಹೇಳಿದರು.

ಸಮೀಪದ ಬಳ್ಳೊಳ್ಳಿ ಗ್ರಾಮದಲ್ಲಿ ನಡೆದ ವೀರಭದ್ರೇಶ್ವರ ದೇವಸ್ಥಾನ ಸೇವಾ ಸಮಿತಿ ಹಾಗೂ ಸಕಲ ಭಕ್ತ ಮಂಡಳಿವತಿಯಿಂದ ಆಯೋಜಿಸಿದ್ದ ವಿಜಯಪುರ ಬಿಎಲ್‌ಡಿ ಈ ಸಂಸ್ಥೆ ವತಿಯಿಂದ ಆರೋಗ್ಯ ಉಚಿತ ತಪಾಸಣಾ ಶಿಬಿರದ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ತಜ್ಞ ವೈದ್ಯರಿಂದ ಸಲಹೆಗಳು, ರಕ್ತದೊತ್ತಡ, ಮಧುಮೇಹ ಮತ್ತು ಕಣ್ಣಿನ ತಪಾಸಣೆ ಸೌಲಭ್ಯ ಪಡೆದುಕೊಳ್ಳಿರಿ. ಈ ಶಿಬಿರ ಗ್ರಾಮೀಣ ಪ್ರದೇಶದ ಜನರಿಗೆ ಉಚಿತ ಚಿಕಿತ್ಸೆ ಮತ್ತು ಉಚಿತ ಆರೋಗ್ಯ ತಪಾಸಣೆಯ ಸದುಪಯೋಗ ಪಡೆಯಲು ಉತ್ತಮ ಎಂದು ಹೇಳಿದರು.

ಸಂಶೋಧನಾ ಕೇಂದ್ರ, ಮೆಗಾ ಆರೋಗ್ಯ ತಪಾಸಣೆ ಶಿಬಿರ ಮುಖ್ಯಸ್ಥ ಡಾ.ವಿ.ಜಿ.ವಾರದ ಮಾತನಾಡಿ, ಉಚಿತ ಆರೋಗ್ಯ ತಪಾಸಣಾ ಶಿಬಿರದ



ಉದ್ದೇಶ ಬಡವರಿಗೆ, ಅನಾಥರಿಗೆ ಆರೋಗ್ಯ ಸಮಸ್ಯೆಯಿಂದ ಬಳಲುವವರನ್ನು ಉಚಿತ ತಪಾಸಣೆ, ಚಿಕಿತ್ಸೆ ಸಲಹೆ ಕೊಡುವದೇ ಮುಖ್ಯ ಉದ್ದೇಶ ಎಂದರು.

ಎಂ.ಆರ್.ಪಾಟೀಲ, ಸಿದ್ದರಾಮ ವಾಲಿ, ಅಶೋಕ ಪಾಟೀಲ, ಈರಣ್ಣ ವಾಲಿ, ಕಾಮಣ್ಣಗೌಡ ಬಿರಾದಾರ, ಕುಮಾರ ಜಾಧವ, ಸದಾಶಿವ ರೇವತಗಾಂವ, ಶರಣಯ್ಯ ಮಠಪತಿ, ಸಿದ್ದು ಶಿರಶ್ಯಾಡ, ವಿಠ್ಠಲ ಶಿರಶ್ಯಾಡ ಇದ್ದರು.

ಸಿಆರ್‌ಪಿಗಳಿಗೆ ಹೆಚ್ಚುವರಿ ಕೆಲಸ: ಬಿಡುವಿಗೆ ಮನವಿ

• **ಮುದ್ದೇಬಿಹಾಳ:** ಶಿಕ್ಷಣ ಇಲಾಖೆಯ ಗ್ರೇಡ್-2 ಹುದ್ದೆಯಲ್ಲಿರುವವರು ನಿಭಾಯಿಸಬೇಕಾದ ಮತಗಟ್ಟೆ ಅಧಿಕಾರಿಗಳ ಕೆಲಸವನ್ನು ಬಿಎಲ್‌ಪಿ ಮೇಲ್ವಿಚಾರಕರ ಹಾಗೂ ಪ್ರಾಥಮಿಕ ಶಾಲೆ ಶಿಕ್ಷಕರ ಗ್ರೇಡ್‌ನ ಸಿಆರ್‌ಪಿಗಳಿಗೆ ವಹಿಸಿರುವ ಜವಾಬ್ದಾರಿ ಕಡಿಮೆ ಮಾಡಬೇಕು ಎಂದು ಮುದ್ದೇಬಿಹಾಳ ಹಾಗೂ ತಾಳಿಕೋಟೆ ಎಂದು ವಿನಂತಿಸಿ ಶಿಕ್ಷಕ ಪ್ರತಿನಿಧಿಗಳು ತಹಶೀಲ್ದಾರ್ ಹಾಗೂ ಶಿಕ್ಷಣಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.

ಮತಗಟ್ಟೆ ಅಧಿಕಾರಿಗಳ ವಿಭಾಗಿಯ ಸಂಪನ್ಮೂಲ ವ್ಯಕ್ತಿಗಳು ಎಂದು ಕೆಲಸ ಮಾಡುವವರು ಸಹ ಶಿಕ್ಷಕರ ಹುದ್ದೆಯವರಾಗಿದ್ದು, ಈ ಮೇಲ್ವಿಚಾರಕ ಹುದ್ದೆಯು ಜವಾಬ್ದಾರಿಯಿಂದ ಕೂಡಿದ್ದಾಗಿದೆ. ಶಾಲೆಯ ಕೆಲಸದ ಜೊತೆ ಇಲಾಖೆಯ ಕೆಲಸಗಳಾದ ಎಸ್ ಎಟಿಎಸ್, ಯು ಡೈಸ್ ಪ್ಲಸ್, ಕ್ರೀಡಾಕೂಟ, ಪ್ರತಿಭಾ ಕಾರಂಜಿ, ಕಲೋತ್ಸವ, ಬಿಸಿಯೂಟ, ಸರ್ಕಾರದ ಪ್ರೋತ್ಸಾಹದಾಯಕ ಯೋಜನೆಗಳ ಅನುಷ್ಠಾನ, ಕಲಿಕಾ ಗುಣಮಟ್ಟ, ಗಣತಿ ಕಾರ್ಯ, ಹೀಗೆ ಹತ್ತು ಹಲವಾರು ಜವಾಬ್ದಾರಿ ನಿಭಾಯಿಸ ಬೇಕಾಗಿರುತ್ತದೆ. ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲ. ಹಾಗೂ ಗ್ರೇಡ್- 2 ಹುದ್ದೆಯಲ್ಲಿರುವ ಮೇಲ್ವಿಚಾರಕರನ್ನಾಗಿ ನೇಮಿಸಬೇಕೆಂದು ಚುನಾವಣಾ ಆಯೋಗದ ಸ್ಪಷ್ಟ ನಿರ್ದೇಶನವಿದೆ. ಆದರೂ ಸಹಿತ




ಗ್ರೇಡ್-2 ಅಲ್ಲದ ನಮ್ಮನ್ನು ಬಿ.ಎಲ್‌ಓ ಮೇಲ್ವಿಚಾರಕರು ಎಂದೂ ನೇಮಕ ಮಾಡಿದ್ದಿರಿ. ಆದ್ದರಿಂದ ನಮ್ಮನ್ನು ಹೆಚ್ಚುವರಿ ಕೆಲಸದಿಂದ ಬಿಡುಗಡೆಗೊಳಿಸಿ ಇಲಾಖೆಯ ಕಾರ್ಯವನ್ನು ನೆಮ್ಮದಿಯಿಂದ ಮಾಡಲು ಅನುವು ಮಾಡಿಕೊಡಬೇಕೆಂದು ಮನವಿಯಲ್ಲಿ ಕೋರಲಾಗಿದೆ.

ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸನಗೌಡ ಮುದ್ನೂರ, ಪ್ರಧಾನ ಕಾರ್ಯದರ್ಶಿ ಎನ್. ಎಸ್.ತುರುಡಗಿ, ಶಿಕ್ಷಕರ ಪತ್ತಿನ ಸಹಕಾರಿ ಬ್ಯಾಂಕ್ ನ ಅಧ್ಯಕ್ಷ ಪಿ.ಎ.ಭೋವಿ, ಗಣೇಶ ಬಶೆಟ್ಟಿರಾಜು ವಿಜಾಪುರ, ಸಂಗಪ್ಪ ಪಾಲ್ಕೆ,ಅಮರೇಶ ಕಸಬೇಗೌಡರ, ಬಿ.ಡಿ.ಕಪನೂರ, ಗುಂಡು ಚೌವ್ಹಾಣ, ಎಂ.ಎಸ್. ಮಾಕೊಂಡ, ಎಲ್.ಎಚ್.ರಾಠೋಡ,ಎಸ್.ಎಸ್ .ಬಾವಿಕಟ್ಟಿ, ಎನ್.ಬಿ.ಬಿರಾದಾರ, ಬಿ.ವೈ.ಮಾದರ, ಎಂ.ವಿ.ನೂಲಿನವರ, ಬಿ.ಎ.ಬಿಜಾಪೂರ ಸೇರಿದಂತೆ ಹಲವು ಕ್ಲಸ್ಟರ್ ನ ಸಮೂಹ ಸಂಪನ್ಮೂಲ ವ್ಯಕ್ತಿಗಳು ಉಪಸ್ಥಿತರಿದ್ದರು.

ಬಸವಣ್ಣನ ವಿರುದ್ಧ ಅಶ್ಲೀಲ ಪೋಸ್ಟ್: ಆಕ್ರೋಶ

• **ಬಸವನಬಾಗೇವಾಡಿ:** ಪಟ್ಟಣದ ಮಿನಿ ವಿಧಾನ ಸೌಧದ ಆವರಣದಲ್ಲಿ ಬಸವಣ್ಣನವರ ವಿರುದ್ಧ ಅವಹೇಳನಕಾರಿ ಪೋಸ್ಟ್ ಹಾಕಿರುವ ರಮಾಕಾಂತ್ ಎಂ ವಿರುದ್ಧ ಘೋಷಣೆಗಳನ್ನು ಕೂಗಿ ತೀವ್ರ ಆಕ್ರೋಶ ವ್ಯಕ್ತಪಡಿಸಿ ಕೂಡಲೇ ಈ ವ್ಯಕ್ತಿಯನ್ನು ಬಂಧಿಸಿ ಗಡಿಪಾರು ಮಾಡಬೇಕೆಂದು ಆಗ್ರಹಿಸಿ ರಾಷ್ಟ್ರೀಯ ಬಸವಸೈನ್ಯದ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಿ ತಹಶೀಲ್ದಾರ ವೈ. ಎಸ್. ಸೋಮನಕಟ್ಟಿ ಅವರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ರಾಷ್ಟ್ರೀಯ ಬಸವಸೈನ್ಯದ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಬಿರಾದಾರ ಮಾತನಾಡಿದ ಬಸವಣ್ಣನವರು ಸಮಾನತೆಯ ಸಂದೇಶ ನೀಡಿದ ಜಗದ ಬೆಳಕು.ಅಂತಹ ದಾರ್ಶನಿಕರ ಬಗ್ಗೆ ಕೀಳುಮಟ್ಟದ ಶಬ್ದಗಳನ್ನು ಬಳಸಿರುವ ಈ ವ್ಯಕ್ತಿಯು ಸಮಾಜದಲ್ಲಿ ಅಶಾಂತಿ ಹಬ್ಬಿಸಲು ಯತ್ನಿಸುತ್ತಿದ್ದಾನೆ. ಇವನನ್ನು ಸೈಬರ್ ಕ್ರೈಂ ಅಡಿಯಲ್ಲಿ ಕೂಡಲೇ ಬಂಧಿಸಬೇಕೆಂದು ಒತ್ತಾಯಿಸಿದರು. ರಾಷ್ಟ್ರೀಯ ಬಸವಸೈನ್ಯದ ತಾಲೂಕಾ ಅಧ್ಯಕ್ಷ ಸಂಜು ಬಿರಾದಾರ ಅವರು ಮನವಿ ಪತ್ರವನ್ನು ಅರ್ಪಿಸಿದರು. ಮುಖಂಡರಾದ ಪ್ರಶಾಂತ ಮುಂಜಾನೆ, ಸಂಗಮೇಶ ಪಟ್ಟಣಶೆಟ್ಟಿ, ಜಟ್ಟಿಂಗರಾಯ ಮಾಲಗಾರ, ಶಂಕರಗುರು ರಜಪೂತ, ಆನಂದ ವನರೊಟ್ಟಿ, ದಯಾನಂದ ಜಾಲಗೇರಿ, ಪುರಸಭೆ ಮಾಜಿ ಉಪಾಧ್ಯಕ್ಷ ಸಂಗನಬಸು ಪೂಜಾರಿ, ಆನಂದ ಕ್ವಾಟಿ, ಮಾಂತೇಶ ಹಾರಿವಾಳ, ಮಹೇಶ ಹಿರೇಕುರಬರ, ಬಾಬು ಮುಸಬಿನಾಳ, ವೀರೇಶ ಗಬ್ಬೂರ, ವಿಠ್ಠಲ ಲಮಾಣಿ,ಮನ್ನಾನ ಶಾಬಾದಿ ಸೇರಿ ಪದಾಧಿಕಾರಿಗಳು ಬಸವ ಭಕ್ತರು ಇದ್ದರು.



ದಲಿತ ವ್ಯಕ್ತಿಗೆ ಜಾತಿ ನಿಂದನೆ: ಕ್ರಮಕ್ಕೆ ಒತ್ತಾಯ

• **ಚಡಚಣ:** ಸಮೀಪದ ದೇವರ ನಿಂಬರಗಿ ಗ್ರಾಮದ ದಲಿತ ವ್ಯಕ್ತಿಯ ಮೇಲೆ ಮಾ.11ರಂದು ಸಾರ್ವಜನಿಕವಾಗಿ ಹಲ್ಲೆ ನಡೆಸಿ ಜಾತಿ ನಿಂದನೆ ಮಾಡಿರುವ ಚಡಚಣ ಪೊಲೀಸ್ ಠಾಣೆಯ ಎಲ್. ಎಸ್.ರಾಠೋಡ (ಎಎಸ್ಐ) ಅವರನ್ನು ಅಮಾನತುಗೊಳಿಸಿ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ದಲಿತ ಮುಖಂಡರು ಚಡಚಣ ಉಪ ತಹಶೀಲದಾರ ಹುಸನಪ್ಪ ಹೊಸಮನಿ ಹಾಗೂ ಪಿಎಸ್ಐ ಸೋಮೇಶ ಗೆಜ್ಜಿ ಅವರಿಗೆ ಗುರುವಾರ ಮನವಿ ಸಲ್ಲಿಸಿದರು.

ದಲಿತ ಮುಖಂಡ ದಶರಥ ಬನಸೋಡೆ ಮಾತನಾಡಿ, ಆರೋಪಿತ ಅಧಿಕಾರಿ ಕಾನೂನಿನ ಅರಿವು ಇರುವವರು ಹಾಗೂ ಕಾನೂನು ಪಾಲಿಸುವವರಾಗಿದ್ದಾರೆ. ಅವರೇ ಕಾನೂನುಗಳನ್ನು ಗಾಳಿಗೆ ತೂರಿ ಅಮಾಯಕ ದಲಿತ ವ್ಯಕ್ತಿಯ ಮೇಲೆ



ಹಲ್ಲೆ ಮಾಡಿದ್ದಾರೆ. ಇವರ ಮೇಲೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮುಖಂಡ ಪರಮೇಶ್ವರ ಸಿಂಗೆ ಮಾತನಾಡಿ, ಇಂತಹ ಘಟನೆಗಳು ಸಮಾಜದಲ್ಲಿ ಅಸಮಾಧಾನ ಮತ್ತು ಭಯದ ವಾತಾವರಣವನ್ನು ಸೃಷ್ಟಿಸುತ್ತವೆ ಎಂದು ಅಭಿಪ್ರಾಯಪಟ್ಟ ಅವರು, ಪ್ರಕರಣದ ಕುರಿತು ಸೂಕ್ತ ತನಿಖೆ ನಡೆಸಿ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

ದಲಿತ ಮುಖಂಡರಾದ ದಶರಥ ಬನಸೋಡೆ, ಧರ್ಮಣ್ಣ ಬನಸೋಡೆ ಹಾಗೂ ನಾರಾಯಣ ವಾಘಮೋರೆ, ಪರಮೇಶ್ವರ ಸಿಂಗೆ, ಪ್ರಕಾಶ ಬನಸೋಡೆ, ಶಶಿಕುಮಾರ ಸಿಂಗೆ ದಾವಲ ಬನಸೋಡೆ, ಸಿದರಾಯ ಬನಸೋಡೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಉಪ ತಹಶೀಲ್ದಾರ್ ಹುಸನಪ್ಪ ಹೊಸಮನಿ ಅವರು ಮನವಿ ಸ್ವೀಕರಿಸಿದರು. ಪಿಎಸ್ಐ ಸೋಮೇಶ ಗೆಜ್ಜಿ ಅವರು ಮನವಿ ಸ್ವೀಕರಿಸಿದ್ದು, ಪ್ರಕರಣ ಪರಿಶೀಲಿಸಿ ಮುಂದಿನ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ಕಿರುಸುದ್ದಿ

ಸ್ವಚ್ಛತೆಯಲ್ಲಿ ಪೌರಕಾರ್ಮಿಕರ ಸೇವೆ ಅನನ್ಯ: ಅಂಗಡಿ

ಮಸ್ಕಿ: ಸ್ವಚ್ಛತೆಯಲ್ಲಿ ಪೌರಕಾರ್ಮಿಕರ ಪಾಲು ಹೆಚ್ಚಿದ್ದು, ಅವರನ್ನು ಗೌರವಯುತವಾಗಿ ಕಾಣುವ ಮನೋಭಾವ ಜನರಲ್ಲಿರಬೇಕು ಎಂದು ಪುರಸಭೆ ಕಿರಿಯ ಆರೋಗ್ಯ ನಿರೀಕ್ಷಕ ಅಧಿಕಾರಿಗಳಾದ ಸುಜಾತ ಅಂಗಡಿ ಅವರು ಹೇಳಿದರು.

ಪಟ್ಟಣದ ಪುರಸಭೆ ಆವರಣದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳಾ ಪೌರ ಕಾರ್ಮಿಕರಿಗೆ, ಹಾಗೂ ಪುರಸಭೆ ವಿವಿಧ ಮಹಿಳಾ ಸ್ವ ಸಹಾಯ ಗುಂಪುನ ಮಹಿಳೆಯರಿಗೆ ನಗರ ಪ್ರಾಧಿಕಾರ ಅಭಿವೃದ್ಧಿ ಇಲಾಖೆಯ ಆದೇಶ ಹಿನ್ನೆಲೆಯಲ್ಲಿ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಹಿಳಾ ದಿನಾಚರಣೆ ಕುರಿತು ಪುರಸಭೆ ಉಪಾಧ್ಯಕ್ಷೆ ಗೀತಾ ಶಿವರಾಜ ಬುಕ್ಕಣ್ಣ, ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಮುಖ್ಯ ಅಧಿಕಾರಿಗಳಾದ ನರಸರಡ್ಡಿ, ಚೇತನ ಪಾಟೀಲ್ ರವರು ಮಾತನಾಡಿದರು. ಈ ಸಂದರ್ಭದಲ್ಲಿ ಸ್ವ ಸಹಾಯ ಗುಂಪುನ ಮಹಿಳೆಯರು, ಹಾಗೂ ಪುರಸಭೆ ಕಛೇರಿಯ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

ಅಡ್ಡಪಲ್ಲಕ್ಕಿ ಮಹೋತ್ಸವ



ಕುಷ್ಟಗಿ: ಪಟ್ಟಣದ ಗುರು ಮದ್ದಾನೇಶ್ವರ ಮಠದ ಜಾತ್ರಾ ಮಹೋತ್ಸವ ನಿಮಿತ್ತ ಲಿಂಗೈಕ್ಯ ಕರಿಬಸವ ಶಿವಾಚಾರ್ಯರ 52ನೇ ಪುಣ್ಯಸ್ಮರಣೋತ್ಸವ ಇತರೆ ಶ್ರೀಗಳ ಪುಣ್ಯಾರಾಧನೆ ಹಾಗೂ ಕರಿಬಸವ ಸ್ವಾಮೀಜಿ ಅವರ 39ನೇ ಪಟ್ಟಾಧಿಕಾರ ಮಹೋತ್ಸವ ಶ್ರದ್ಧೆ, ಮದ್ದಾನೇಶ್ವರ ಮಠದ ಕರಿಬಸವ ಶಿವಾಚಾರ್ಯ ಸಾನ್ನಿಧ್ಯದಲ್ಲಿ ಭಕ್ತಿಯೊಂದಿಗೆ ನಡೆಯಿತು.

ಬೆಳಿಗ್ಗೆಯಿಂದ ಮಠದಲ್ಲಿ ಕರಿಬಸವ ಸ್ವಾಮೀಜಿ ಅವರ ನೇತೃತ್ವದಲ್ಲಿ ಕತೃಗದ್ದುಗೆಗೆ ಮಹಾರುದ್ರಾಭಿಷೇಕ, ವಿಶೇಷ ಪೂಜೆ, ಅಭಿಷೇಕ, ವಟುಗಳಿಗೆ ಅಯಾಚಾರ, ಲಿಂಗದೀಕ್ಷೆ, ಪಂಚಾಚಾರ್ಯ ಧ್ವಜಾರೋಹಣ, ಉಡಿ ತುಂಬು ಸಂಪ್ರದಾಯ,ಬೃಹನ್ಮಠದ ಅಭಿನವ ಪಂಚಾಕ್ಷರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಿತು.

ಅಕ್ಕನ ಬಳಗದವರಿಂದ ಕುಂಭಮೇಳ, ಡೊಳ್ಳು, ಭಜನೆ,ಕೋಲಾಟ,ಕಳಸ ಸೇರಿದಂತೆ ವಿವಿಧ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳು ನಡೆದವು.

ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮೀಜಿ ಅವರನ್ನು ಹೊತ್ತ ಅಡ್ಡಪಲ್ಲಕ್ಕಿ ಉತ್ಸವ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಭ್ರಮದೊಂದಿಗೆ ನೆರವೇರಿತು. ಈ ಸಂದರ್ಭದಲ್ಲಿ ಕುಂಭ ಕಲಶ ಹೊತ್ತ ಅಕ್ಕನ ಬಳಗದ ನೂರಾರು ಮಹಿಳೆಯರು, ಮಹಿಳಾ ತಂಡದ ಡೊಳ್ಳು ಕುಣಿತ, ಕುದುರೆ ಕುಣಿತ ಇತರೆ ಜನಪದ ಸಾಂಪ್ರದಾಯಿಕ ಕಲಾ ತಂಡಗಳು ಅಡ್ಡಪಲ್ಲಕ್ಕಿ ಉತ್ಸವದ ಮೆರಗು ಹೆಚ್ಚಿಸಿದವು. ನಂತರ ಮಹಾರಥೋತ್ಸವ, ಧರ್ಮಸಭೆ ಕಾರ್ಯಕ್ರಮ ನಡೆಸಲಾಯಿತು. ಈ ಸಂದರ್ಭದಲ್ಲಿ ನಿಡಶೇಸಿ ಮಠದ ಅಭಿನವ ಕರಿಬಸವ ಶಿವಾಚಾರ್ಯ, ವೀರಸಂಗಮೇಶ್ವರ ಶಿವಾಚಾರ್ಯ,ದೋಟಿಹಾಳ ಗ್ರಾಮದ ಚಂದ್ರಶೇಖರ ದೇವರು ವಿವಿಧ ಮಠಾಧೀಶರು, ಅನೇಕ ಪ್ರಮುಖರು ಭಾಗವಹಿಸಿದ್ದರು.

ಗ್ಯಾಸ್ ಕೊರತೆ ಆಟೋ ಚಾಲಕರ ನಡುವೆ ಕಿತ್ತಾಟ !

ಕಲಬುರಗಿ: ನಗರದಲ್ಲಿ ಎಲ್‌ಪಿಜಿ ಗ್ಯಾಸ್ ಕೊರತೆ ಉಂಟಾದ ಹಿನ್ನೆಲೆ ಆಟೋ ಚಾಲಕರು ಗ್ಯಾಸ್ ತುಂಬಿಸಿಕೊಳ್ಳಲು ಪರದಾಡಿದರು.

ನಗರದ ಗೋ ಗ್ಯಾಸ್ ಎಲ್‌ಪಿಜಿ ಪಂಪ್ ಬಳಿ ಗ್ಯಾಸ್ ತುಂಬಿಸಿಕೊಳ್ಳಲು ಬಂದ ಆಟೋ ಚಾಲಕರ ನಡುವೆ ಮಾತಿನ ಚಕಮಕಿ ಹಾಗೂ ಕಿತ್ತಾಟ ನಡೆದಿದೆ.

ರೋಗಿಗಳನ್ನು ಆಸ್ಪತ್ರೆಗೆ ಕರೆದೊಯ್ಯುವ ಕೆಲಸದಲ್ಲಿರುವ ಆಟೋ ಚಾಲಕರು ಕೂಡ ಗ್ಯಾಸ್ ತುಂಬಿಸಿಕೊಳ್ಳಲು ಸಾಲಿನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಎದುರಾಗಿದೆ. ರೋಗಿಗಳನ್ನು ಆಸ್ಪತ್ರೆಗೆ ಕರೆದೊಯ್ಯಬೇಕಿದೆ. ಆದರೆ, ಗ್ಯಾಸ್ ಸಿಗದಿದ್ದರೆ ಕೆಲಸ ಹೇಗೆ ಮಾಡಬೇಕು? ಎಂದು ಚಾಲಕರು ಆತಂಕ ವ್ಯಕ್ತಪಡಿಸಿದರು.ಪಂಪ್‌ನಲ್ಲಿ ಗ್ಯಾಸ್ ಪ್ರಮಾಣ ಕಡಿಮೆ ಇರುವ ಕಾರಣ 'ನಾನು ಮೊದಲು ?ನೀನು ಮೊದಲು' ಎಂಬ ರೀತಿಯಲ್ಲಿ ಚಾಲಕರ ನಡುವೆ ಪೈಪೋಟಿ ಉಂಟಾಯಿತು.ಇದೇ ವೇಳೆ, ಗ್ಯಾಸ್ ದರವನ್ನು 55.75 ರೂಪಾಯಿಗೆ ಹೆಚ್ಚಿಸಿದ್ದರೂ ಸರಿಯಾದ ಪ್ರಮಾಣದಲ್ಲಿ ಗ್ಯಾಸ್ ಲಭ್ಯವಾಗುತ್ತಿಲ್ಲ ಎಂದು ಆಟೋ ಚಾಲಕರು ಆಕ್ರೋಶ ವ್ಯಕ್ತಪಡಿಸಿದರು.



ಮಸ್ಕಿ: ಪಟ್ಟಣದ ಪುರಸಭೆ ಆವರಣದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ನಗರ ಪ್ರಾಧಿಕಾರ ಅಭಿವೃದ್ಧಿ ಇಲಾಖೆಯ ಆದೇಶ ಹಿನ್ನೆಲೆಯಲ್ಲಿ ಮಹಿಳಾ ಪೌರ ಕಾರ್ಮಿಕರಿಗೆ, ಹಾಗೂ ಪುರಸಭೆ ವಿವಿಧ ಮಹಿಳಾ ಸ್ವಸಹಾಯ ಗುಂಪುನ ಮಹಿಳೆಯರಿಗೆ ಸನ್ಮಾನ ಮಾಡಲಾಯಿತು.

ನೂತನ ಸಂಜೀವಿನಿ ಮಾರ್ಟ್ ಮಳಿಗೆ ಉದ್ಘಾಟನೆ

ಮಾನ್ವಿ: ಪಟ್ಟಣದಲ್ಲಿ ನೂತನ ಸಂಜೀವಿನಿ ಮಾರ್ಟ್ ಮಳಿಗೆಯನ್ನು ತಾಪಂ ಇ.ಓ. ಖಾಲಿದ್ ಅಹ್ಮದ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ತಾಲೂಕಿನ ಗ್ರಾಮೀಣ ಭಾಗದ ಮಹಿಳೆಯರ ಸಬಲೀಕರಣಕ್ಕಾಗಿ ಕರ್ನಾಟಕ ರಾಜ್ಯ ಜೀವನೋಪಾಯ ಸಂವರ್ಧನ ಸಂಸ್ಥೆ ಸಹಯೋಗದಲ್ಲಿ ಶ್ರೀ ರಾಮಲಿಂಗೇಶ್ವರ ಒಕ್ಕೂಟ ಭೋಗಾವತಿ ವ್ಯಾಪ್ತಿಯ ನಂದಿಹಾಳ ಗ್ರಾಮದ ಶ್ರೀ ನಿಧಿ ಸಂಘದ ಒಕ್ಕೂಟದ ಸದಸ್ಯರು ಉತ್ಪಾದಿಸುವ ಪದಾರ್ಥಗಳಿಗೆ ಉತ್ತಮ ಮಾರುಕಟ್ಟೆ ಕಲ್ಪಿಸುವುದಕ್ಕಾಗಿ ತಾಪಂ ಹಳೆ ಕಟ್ಟಡದಲ್ಲಿ ವ್ಯಾಪಾರಕ್ಕಾಗಿ ಅವಕಾಶ ಮಾಡಿಕೊಡಲಾಗಿದೆ. ಗ್ರಾಹಕರು ಹಾಗೂ ಅಧಿಕಾರಿಗಳು, ಸಿಬ್ಬಂದಿಗಳು, ಗ್ರಾಪಂನವರು ತಮ್ಮಗೆ ಅಗತ್ಯವಿರುವ ನಿತ್ಯ ಬಳಕೆಯ ಎಲ್ಲಾ ವಸ್ತುಗಳನ್ನು ಸಂಜೀವಿನಿ ಮಾರ್ಟ್ ಮಳಿಗೆಯಲ್ಲಿ ಖರೀದಿಸುವುದರಿಂದ ಮಹಿಳಾ ಸಂಘಗಳಿಗೆ ಆರ್ಥಿಕ ಬಲವರ್ಧನೆ ಜೊತೆಗೆ ಪ್ರೋತ್ಸಾಹ ದೊರೆಯುತ್ತದೆ. ಈ ಕುರಿತು ಆದೇಶ ಮಾಡಲಾಗುವುದು ಎಂದು ತಿಳಿಸಿದರು.

ಈರಮ್ಮ ತಾಲೂಕು ಸಂಜೀವಿನಿ ಒಕ್ಕೂಟದ ಕಾರ್ಯದರ್ಶಿ ಮಾತನಾಡಿ, ಸಂಜೀವಿನಿ ಮಾರ್ಟ್ ಅನ್ನು ಸಮುದಾಯ ಬಂಡವಾಳ ನಿಧಿಯಡಿಯಲ್ಲಿ 3ಲಕ್ಷ ರೂ. ಆರ್ಥಿಕ ನೆರವನ್ನು ಪಡೆದು ದಿನ ಬಳಕೆಯ ವಸ್ತುಗಳನ್ನು ಖರೀದಿಮಾಡಿ ಪ್ರಾರಂಭ ಮಾಡಲಾಗಿದೆ ಎಂದರು. ತಾಪಂ ವ್ಯವಸ್ಥಾಪಕರಾದ ಬಸವರಾಜ ನೇಗಿನಾಳ , ತಾ.ಪಂ. ಸಹಾಯಕ ನಿರ್ದೇಶಕರಾದ ದೀಪಾ ಅರಳಿಕಟ್ಟಿ, ರಾಜ್ಯ ಜೀವನೋಪಾಯ ಸಂವರ್ಧನ ಸಂಸ್ಥೆ ಅಧಿಕಾರಿಗಳು, ಶ್ರೀ ನಿಧಿ ಸಂಘದ ಒಕ್ಕೂಟದ ಸ್ವ-ಸಹಾಯ ಗುಂಪಿನ ಸದಸ್ಯರು, ತಾ.ಪಂ.ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.



ಮಾನ್ವಿ: ಪಟ್ಟಣದಲ್ಲಿ ನೂತನ ಸಂಜೀವಿನಿ ಮಾರ್ಟ್ ಮಳಿಗೆಯನ್ನು ತಾಪಂ ಇ.ಓ. ಖಾಲಿದ್ ಅಹ್ಮದ್ ಉದ್ಘಾಟಿಸಿದರು. ಈರಮ್ಮ ತಾಲೂಕು ಸಂಜೀವಿನಿ ಒಕ್ಕೂಟದ ಕಾರ್ಯದರ್ಶಿ,ತಾಪಂ ವ್ಯವಸ್ಥಾಪಕರಾದ ಬಸವರಾಜ ನೇಗಿನಾಳ , ತಾ.ಪಂ. ಸಹಾಯಕ ನಿರ್ದೇಶಕರಾದ ದೀಪಾ ಅರಳಿಕಟ್ಟಿ, ರಾಜ್ಯ ಜೀವನೋಪಾಯ ಸಂವರ್ಧನ ಸಂಸ್ಥೆ ಅಧಿಕಾರಿಗಳು, ಶ್ರೀ ನಿಧಿ ಸಂಘದ ಒಕ್ಕೂಟದ ಸ್ವ-ಸಹಾಯ ಗುಂಪಿನ ಸದಸ್ಯರು, ತಾ.ಪಂ.ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

ವರದಿ ಆಧರಿಸಿ ಕ್ರಮ: ನರೇಂದ್ರಸ್ವಾಮಿ

ಕೊಪ್ಪಳ: ಕಾನೂನು ಅಡಿಯಲ್ಲಿ ಸ್ಥಾಪಿತವಾದ ಉದ್ಯಮವನ್ನು ಶಾಶ್ವತವಾಗಿ ನಿಲ್ಲಿಸಲು ಕಾನೂನಿನಲ್ಲಿ ಅಡ್ಡಿ ಬರುತ್ತದೆ. ಆದರೆ, ಮಾಲಿನ್ಯ ಕಾರ್ಯವನ್ನು ಮುಂದುವರೆಸುವ ಕಾರ್ಖಾನೆಗಳನ್ನು ಶಾಶ್ವತವಾಗಿ ನಿಲ್ಲಿಸಲು ಅವಕಾಶವಿದೆ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾದ ಪಿ.ಎಂ.ನರೇಂದ್ರಸ್ವಾಮಿ ಹೇಳಿದರು.

ಅವರು ಶುಕ್ರವಾರ ಕೊಪ್ಪಳ ತಾಲ್ಲೂಕಿನ ಹಿರೇಬಗನಾಳ್ ಗ್ರಾಮಕ್ಕೆ ಭೇಟಿ ನೀಡಿ, ಅಲ್ಲಿನ ವಾಯು ಮಾಲಿನ್ಯ ಸಮಸ್ಯೆಗಳ ಬಗ್ಗೆ ಪರಿಶೀಲಿಸಿ ಗ್ರಾಮದ ಕರಿಯಮ್ಮದೇವಿ ದೇವಸ್ಥಾನದ ಆವರಣದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೇಂದ್ರದ ನಿಯಮದಡಿ ಕೆಲಸ ಮಾಡುವ ಸಂಸ್ಥೆಯಾಗಿದ್ದು, ನೆಲ, ಜಲ, ವಾಯು ಮಾಲಿನ್ಯವನ್ನು ನಿಯಂತ್ರಣ ಮಾಡುವುದಕ್ಕಾಗಿ ನಮ್ಮ ಮಂಡಳಿ ಸ್ಥಾಪನೆಯಾಗಿದೆ. ಬಾಧಿತ ಜನರ ಸಮಸ್ಯೆಯನ್ನು ಬಗೆಹರಿಸಲು ಹಿರೇಬಗನಾಳ್‌ಗೆ ಭೇಟಿ ನೀಡಿರುವೆ. ಈ ಗ್ರಾಮಕ್ಕೆ ಬರುವುದಕ್ಕೆ ಮುಂಚೆ ಇಲ್ಲಿನ ಸಮಸ್ಯೆಗಳ ಕುರಿತು ಮಾಧ್ಯಮಗಳ ವರದಿ, ಗ್ರಾಮಸ್ಥರ ದೂರುಗಳನ್ನು ಗಮನಿಸಿದೇನೆ. ಈ ವಿಚಾರವಾಗಿ ಕೇಂದ್ರ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯ ನೀಡಿರುವ ವರದಿಯನ್ನು ಸಹ ನೋಡಿದ್ದೇನೆ. ಈಗಾಗಲೇ ಹಲವಾರು ಸೂಚನೆಗಳನ್ನು ಕಾರ್ಖಾನೆಗಳಿಗೆ ನೀಡಲಾಗಿದ್ದು, ಪರಿಣಾಮಕಾರಿಯಾದ ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕಿರುವುದು ಅವರ ಜವಾಬ್ದಾರಿಯಾಗಿದೆ. ಈಗ ಅನಿವಾರ್ಯವಾದ ಪರಿಸ್ಥಿತಿಗೆ ಕಾರ್ಖಾನೆಗಳೆ ಸಮಸ್ಯೆಯನ್ನು ತಂದು ಕೊಂಡಿವೆ. ಇಂದಿನ ಈ ಭೇಟಿ ಕಾರ್ಯಕ್ರಮಕ್ಕೂ ಪೂರ್ವದಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಉನ್ನತ ಅಧಿಕಾರಿಗಳ ತಂಡವು ಅನಿರೀಕ್ಷಿತವಾಗಿ ಭೇಟಿ ನೀಡಿ, ಪರಿಶೀಲನೆ ಕೈಗೊಂಡು ವರದಿ ಸಿದ್ಧಪಡಿಸಲು ಇಲ್ಲಿಗೆ ಕಳುಹಿಸಲಾಗಿತ್ತು. ಈ ತಂಡವು ನನಗೆ ವರದಿ ತಲುಪಿಸಲು ಸಿದ್ಧತೆಯನ್ನು ಕೈಗೊಂಡಿದೆ. ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾನೂನು ಅಡಿಯಲ್ಲಿ ಸ್ಥಾಪಿತವಾದ ಉದ್ಯಮವನ್ನು ಶಾಶ್ವತವಾಗಿ ನಿಲ್ಲಿಸಲು ಕಾನೂನಿನಲ್ಲಿ ಅಡ್ಡಿ ಬರುತ್ತದೆ. ಆದರೆ, ಮಾಲಿನ್ಯ ಕಾರ್ಯ ಮುಂದುವರೆಸಿದರೆ, ಅವುಗಳನ್ನು ಶಾಶ್ವತವಾಗಿ ನಿಲ್ಲಿಸಲು ಅವಕಾಶವಿದೆ.



> ಬಾಧಿತ ಗ್ರಾಮಗಳನ್ನು ಸ್ಥಳಾಂತರ ಮಾಡಲು ಅಥವಾ ಕಂಪನಿಗಳನ್ನು ಸ್ಥಳಾಂತರ ಮಾಡಲು ಈ ಹಿಂದೆ ಮನವಿ ಮಾಡಲಾಗಿತ್ತು. ನಮ್ಮ ಭಾಗದಲ್ಲಿ 1996ರಿಂದ ಕಂಪನಿಗಳು ಬರತ್ತಾ ಇದ್ದು, 2008 ರಿಂದಲೇ ಇವುಗಳ ವಿರೋಧ ಆಗುತ್ತಿದೆ. ಕೆಲ ಕಾರ್ಖಾನೆಗಳು ದೂಳನ್ನು ಹೋಗಲಾಡಿಸಲು ಯಾವುದೇ ಕ್ರಮ ವಹಿಸುತ್ತಿಲ್ಲ. ಹಾಗಾಗಿ ಜನ ಜಾನುವಾರುಗಳ ಆರೋಗ್ಯದ ಮೇಲೆ ಮತ್ತು ಕೃಷಿ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ.
> ■ ಕೆ.ರಾಘವೇಂದ್ರ ಹಿಟ್ನಾಳ್, ಶಾಸಕ.

» ಹಿರೇಬಗನಾಳ್ ಗ್ರಾಮಕ್ಕೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರ ಭೇಟಿ

» ಪಿ.ಎಂ.ನರೇಂದ್ರಸ್ವಾಮಿ ಹೇಳಿಕೆ

> ಕಾರ್ಖಾನೆಗಳು ಹೊರಸೂಸುವ ಹೊಗೆಯಿಂದ ಹಿರೇಬಗನಾಳ ಮತ್ತು ಇತರೆ ಗ್ರಾಮಗಳ ಸಾರ್ವಜನಿಕರು ಸುಮಾರು ದಿನಗಳಿಂದ ಸಮಸ್ಯೆಯನ್ನು ಎದುರಿಸಿಕೊಂಡು ಬಂದಿದ್ದಾರೆ. ಇದು ಒಂದು ನಿರಂತ ಸಮಸ್ಯೆ ಆಗಿದೆ. ಕಾರ್ಖಾನೆಗಳು ತಮ್ಮ ಲಾಭಕೋಸ್ಕರ ಜನರ ಬದುಕಿಗೆ ಮತ್ತು ಮಕ್ಕಳ ಭವಿಷ್ಯಕ್ಕೆ ಸಮಸ್ಯೆಯಾಗಬಾರದು. ಕಾರ್ಖಾನೆಯ ಧೂಳಿನಿಂದ ಪ್ರಾಣಿಗಳ ಮೇಲೆಯೂ ಪರಿಣಾಮ ಬೀರುತ್ತಿದೆ. ಗಾಳಿಯಲ್ಲಿ ತೊಂದರೆ ಆಗುತ್ತಿದೆ. ನೀರಿನಲ್ಲಿ ತೊಂದರೆ ಆಗುತ್ತಿದೆ.
> ■ ಕರಡಿ ಸಂಗಣ್ಣ, ಮಾಜಿ ಸಂಸದ.

ಹಾಗಾಗಿ ಮಾಲಿನ್ಯ ಕಾರ್ಯವನ್ನು ಸರಿಪಡಿಸಲು ಅವರಿಗೆ ಅವಕಾಶ ಕೊಡಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ಈಗಾಗಲೇ ಸಂಬಂಧಿಸಿದ ಕಾರ್ಖಾನೆಗಳಿಗೆ ನೋಟಿಸ್ ನೀಡಲಾಗಿದೆ. ಇದು ಕೊನೆಯ ಅವಕಾಶವಿದ್ದು, ಸಮಸ್ಯೆಗಳನ್ನು ಸರಿಪಡಿಸಲು ಯಾವ ತಾಂತ್ರಿಕ ವಿಚಾರಗಳಿವೆ, ಅವುಗಳ ಬಗ್ಗೆ ಸಂಬಂಧಿಸಿದ ಕಾರ್ಖಾನೆಗಳು ತಾಂತ್ರಿಕ ವರದಿಯೊಂದಿಗೆ ಮುಚ್ಚಳಿಕೆ ಪತ್ರವನ್ನು ನೀಡಬೇಕು. ತಪ್ಪಿದ್ದಲ್ಲಿ ನಿಯಮಗಳಡಿ ಕಾನೂನು ಕ್ರಮ ಕೈಗೊಳ್ಳಲು ಶತಸಿದ್ಧ. ಜನರ ಜೀವನದ ಜೊತೆ ಚೆಲ್ಲಾಟವಾಡಲು ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯು ಯಾರಿಗೂ ಅವಕಾಶವನ್ನು ನೀಡುವುದಿಲ್ಲ ಎಂಬ ಬದ್ಧತೆಯ ಮಾತನ್ನು ನಾನು ನಿಮ್ಮ ಮುಂದೆ ಹೇಳುತ್ತೇನೆ. ಬಾಧಿತ ಜನರ ನೋವು, ಸಂಕಷ್ಟ, ಆರೋಗ್ಯ ಮತ್ತು ಎಲ್ಲಾ ವಿಚಾರಗಳು ನಮ್ಮ ಅರಿವಿನಲ್ಲಿದ್ದು, ಮಂಡಳಿಯು ಜನಸಾಮಾನ್ಯರ ಪರವಾಗಿದೆ ಎಂದು ಹೇಳಿದರು.

ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಮಾತನಾಡಿ, ಹಿರೇಬಗನಾಳ ಮತ್ತು ಕಾಸರಕಂಡಿ ಕುಣಿಕೇರಿ ಲಾಚನಕೇರಿ, ಕರ್ಕಿಹಳ್ಳಿ, ಚಿಕ್ಕಬಗನಾಳು ಕುಣಿಕೇರಿ ತಾಂಡ ಹಾಗೂ ಹಾಲವರ್ತಿ ಸೇರಿದಂತೆ ಮತ್ತಿತರೆ ಗ್ರಾಮಗಳಲ್ಲಿ ವಿವಿಧ ಕಂಪನಿಗಳಿಂದ ಆಗುವಂತಹ ಧೂಳಿನಿಂದ ಆಯಾ ಗ್ರಾಮದ ಜನರಿಗೆ ಮತ್ತು ಜಾನುವಾರುಗಳಿಗೆ ಜೀವನ ನಡೆಸಲು ಕಷ್ಟವಾಗುತ್ತಿದೆ. ಈ ಬಗ್ಗೆ ಗ್ರಾಮಸ್ಥರು ಅರ್ಜಿಯನ್ನು ಕೊಟ್ಟಿದ್ದಾರೆ ಮತ್ತು ಹೋರಾಟಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಇಲ್ಲಿನ ವಾಸ್ತವಿಕತೆಯನ್ನು ಅಧ್ಯಕ್ಷರ ಗಮನಕ್ಕೆ ತಂದು, ಅದಕ್ಕೆ ಕ್ರಮ ಕೈಗೊಳ್ಳಲು ಅವಕಾಶ ಮಾಡಿ ಕೊಡೋಣ ಎಂದರು.

ಗರ್ಭಕಂಠದ ಕ್ಯಾನ್ಸರ್ ತಡೆಗೆ ಲಸಿಕಾ ಅಭಿಯಾನ

ಯಲಬುರ್ಗಾ: ಹೆಣ್ಣು ಮಕ್ಕಳಲ್ಲಿ ಕಂಡು ಬರುವ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು 14 ವರ್ಷದ ಎಲ್ಲಾ ಅರ್ಹ ಹೆಣ್ಣು ಮಕ್ಕಳು ಎಚ್‌ಪಿವಿ ಲಸಿಕೆಯನ್ನು ಕಡ್ಡಾಯ ಹಾಕಿಸಿಕೊಂಡಾಗ ಇದನ್ನು ತಡೆಗಟ್ಟಲು ಸಾಧ್ಯವಿದೆ ಎಂದು ಆರೋಗ್ಯ ರಕ್ಷ ಸಮಿತಿ ಉಪಾಧ್ಯಕ್ಷ ಡಾ.ಶಿವನಗೌಡ ದಾನರಡ್ಡಿ ಹೇಳಿದರು.

ಪಟ್ಟಣದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ತಾಲೂಕಾ ಸಾರ್ವಜನಿಕ ಆಸ್ಪತ್ರೆ ಸಹಯೋಗದಲ್ಲಿ ನಡೆದ ಎಚ್‌ಪಿವಿ ಲಸಿಕಾ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು,ಗರ್ಭಕಂಠದ ಕ್ಯಾನ್ಸರ್ ರೋಗವನ್ನು ತಡೆಯಲು ಹ್ಯೂಮನ್ ಪ್ಯಾಪಿಲೋಮವೈರಸ್ ಎಚ್‌ಪಿವಿ ಲಸಿಕೆ ಅಭಿಯಾನ ಅತ್ಯಂತ ಮಹತ್ವದ್ದಾಗಿದೆ ಎಂದರು.

ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ಕೃಷ್ಣ ಹೊಟ್ಟಿ ಮಾತನಾಡಿ.14 ರಿಂದ 15 ವರ್ಷದೊಳಗಿನ ಅರ್ಹ ಎಲ್ಲಾ ಹೆಣ್ಣು ಮಕ್ಕಳಿಗೆ ಗರ್ಭಕಂಠ ಕ್ಯಾನ್ಸರ್ ಬಾರದಂತೆ ಎಚ್‌ಪಿವಿ ಲಸಿಕೆಯನ್ನು ಹಾಕಿಸಿಕೊಳ್ಳಬೇಕು ಸುಳ್ಳು ವದಂತಿಗಳಿಗೆ ಕಿವಿಗೊಡಬಾರದು ಲಸಿಕೆಯ ಬಗ್ಗೆ ಇರುವ ಕಲ್ಪನೆಗಳನ್ನು ದೂರ ಮಾಡಿ ವೈಜ್ಞಾನಿಕವಾಗಿ ಪುರಾವೆಗಳನ್ನು ಜನರಿಗೆ ತಲುಪಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಎಚ್‌ಪಿವಿ ಲಸಿಕೆ ನೀಡಿದಾಗ ನಾವು ಕೇವಲ ಒಂದು ವೈರಸ್‌ನಿಂದ ಆಕೆಯನ್ನು ರಕ್ಷಿಸುತ್ತಿಲ್ಲ. ಬದಲಿಗೆ ಅವಳ ಕನಸುಗಳು,ಘನತೆ ಮತ್ತು ಅವಳು ಆರೋಗ್ಯವಾಗಿ ಬದುಕುವ ಹಕ್ಕನ್ನು ಕಾಪಾಡುತ್ತಿದ್ದೇವೆ ಇದುವೇ ಲಸಿಕೆಯ ಮೂಲ ಉದ್ದೇಶವಾಗಿದೆ ಎಂದರು.

ಪ್ರಪ್ರಥಮವಾಗಿ ಪಟ್ಟಣದ ನಿವೇದಿತಾ ಬಸವರಾಜ ಗುಳಗುಳಿ ಅವರಿಗೆ ಹೆಚ್‌ಪಿವಿ ಲಸಿಕೆಯನ್ನು ಹಾಕುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಆಸ್ಪತ್ರೆಯ ಚಿಕ್ಕ ಮಕ್ಕಳ ತಜ್ಞೆ ಡಾ.ಮಿನು, ಹಿರಿಯ ದಂತ ವೈದ್ಯ ಡಾ.ಮಾರುತಿ, ಡಾ.ಶೇಖರ ಭಜಂತ್ರಿ,ಆಸ್ಪತ್ರೆಯ ಆಡಳಿತಾಧಿಕಾರಿ ಚಂದ್ರಶೇಖರ ಅಣ್ಣಿಗೇರಿ, ಶಿವಕುಮಾರ ಐನಕ್ಕಿ, ಎಚ್.ಯಮನಪ್ಪ, ಮುಖಂಡ ಬಸವರಾಜ ಗುಳಗುಳಿ,ಆರೋಗ್ಯ ರಕ್ಷ ಸಮಿತಿಯ ಸದಸ್ಯರಾದ ಡಾ.ಹೊನ್ನಪ್ಪ ಕೊಪ್ಪಳ, ಶಶಿಧರ ಉಳ್ಳಾಗಡ್ಡಿ, ಅಬ್ದುಲ್ ಮುನಾಫ್ ಮಕಾಂದಾರ, ಪ್ರಕಾಶ ಛಲವಾದಿ. ವಿ.ಎಸ್.ಶಿವಪ್ಪಯ್ಯನಮಠ ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿ ವರ್ಗದವರು, ಆಶಾ ಕಾರ್ಯಕರ್ತರು ಮತ್ತಿತರರು ಇದ್ದರು.



ಜೀವನ ಅಂಕಪಟ್ಟಿಗೆ ಸೀಮಿತವಾಗದಿರಲಿ: ಶ್ರೀಗಳು

ಶ್ರೀರಾಮನಗರ: ಶುಕ್ರವಾರದಂದು ಶ್ರೀರಾಮನಗರ ಸಮೀಪದ ಅಂಜೂರಿ ಕ್ಯಾಂಪಿನ ಶಾಂತಿನಿಕೇತನ ಪಬ್ಲಿಕ್ ಶಾಲೆಯಲ್ಲಿ ಅತ್ಯಂತ ಸಂಭ್ರಮ, ಸಡಗರದಿಂದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆಬೀಳ್ಕೊಡುಗೆಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಹೆಬ್ಬಾಳ ಬೃಹನ್ಮಠದ ಶ್ರೀ ನಾಗಭೂಷಣ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳಿಗೆ ಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಪಾದಪೂಜೆ ನೆರವೇರಿಸಿ ಆಶೀರ್ವಾದ ಪಡೆದರು.

ನಂತರ ಮಾತನಾಡಿದ ಹೆಬ್ಬಾಳ ಶ್ರೀಗಳು, ವಿದ್ಯಾರ್ಥಿಗಳು ಉತ್ತಮವಾಗಿ ಪರೀಕ್ಷೆ ಎದುರಿಸಿ. ಮುಂದಿನ ದಿನಗಳಲ್ಲಿ ಉನ್ನತ ಸ್ಥಾನಕ್ಕೆ ತಲುಪಬೇಕು. ನಿಮ್ಮ ಜೀವನವನ್ನು ಉಜ್ವಲವಾಗಿ ರೂಪಿಸಿಕೊಂಡು, ಬಾಳು ಬೆಳಕಾಗಲಿ ಎಂದು ಆಶೀರ್ವಾದ ನೀಡಿದರು. ನಿಮ್ಮ ಸುಂದರವಾದ ಬದುಕಿಗೆ ಅಡಿಗಲ್ಲು ಹಾಕಿದ ಶಾಂತಿನಿಕೇತನ ಶಾಲೆಯನ್ನು ಸದಾ ನೆನೆಯುತ್ತ ಯಶಸ್ಸು ಕಾಣಬೇಕು. ಮುಂದಿನ ದಿನಗಳಲ್ಲಿ ಶಾಲೆಯ ಋಣ ತೀರಿಸಬೇಕು. ನಿಮ್ಮ ಜೀವನ ಅಂಕಪಟ್ಟಿಗೆ ಸೀಮಿತವಾಗದೆ ಮೌಲ್ಯಗಳನ್ನು ಅಳವಡಿಸಿಕೊಂಡು ಜೀವನದಲ್ಲಿ ಯಶಸ್ಸು ಕಾಣಬೇಕೆಂದು ಸಲಹೆ ನೀಡಿದರು.

ಅಥಿತಿಗಳಾದ ಶಿಕ್ಷಕ ಜಡೇಶ್ ವದ್ದಟ್ಟಿ ಮಾತನಾಡಿ, ಈ ಸಾಲಿನ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಶಾಲೆಗೆ ನೂರಕ್ಕೆ-ನೂರರಷ್ಟು ಫಲಿತಾಂಶ ನೀಡುವ ಬಲವಾದ ನಂಬಿಕೆ ಇದೆ. ಭಯದಿಂದ ಪರೀಕ್ಷೆಯನ್ನು ಎದುರಿಸಬೇಡಿ, ಖುಷಿಯಿಂದ ಪರೀಕ್ಷೆ ಎದುರಿಸಬೇಕೆಂದು ಮಕ್ಕಳಿಗೆ ಧೈರ್ಯ ತುಂಬಿದರು.

ಪೂಜಾರಿಗಳಾದ ಸಿದ್ದಲಿಂಗ ಸ್ವಾಮಿಗಳು, ಶಿಕ್ಷಕ ನರೇಂದ್ರ ಕುಮಾರ್ ಮಾತನಾಡಿದರು.

ಈ ವೇಳೆ ಪಾಲಕರಾದ ರಾಘವೇಂದ್ರ, ವಿದ್ಯಾರ್ಥಿನಿ ರೇಖಾ ಮಾತನಾಡಿದರು. ಪಾಲಕರಿಗೆ ವಿವಿಧ ಕ್ರೀಡಾ ಚಟುವಟಿಕೆಗಳು, ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ರುದ್ರಪ್ಪ ವದ್ದಟ್ಟಿ, ಮುಖ್ಯ ಶಿಕ್ಷಕರಾದ ಶೋಭಾ ವದ್ದಟ್ಟಿ, ಮುಸ್ಟೂರು ಗ್ರಾಪಂ ಮಾಜಿ ಸದಸ್ಯ ಬಾಬಿ, ಶಿಕ್ಷಣ ಪ್ರೇಮಿ ಲಕ್ಷ್ಮೀ ಗಣೇಶ್, ಶಾಲೆಯ ಶಿಕ್ಷಕ, ಶಿಕ್ಷಕೇತರ ವರ್ಗ, ವಿದ್ಯಾರ್ಥಿಗಳು ಹಾಗೂ ಪಾಲಕರು ಹಾಜರಿದ್ದರು.



ಪರೀಕ್ಷಾರ್ಥಿಗಳಿಗೆ ಚಹಾ, ಬಿಸ್ಕೆಟ್ ವ್ಯವಸ್ಥೆ ಮಾಡಿ: ಜಿಪಂ ಸಿಇಒ

ರಾಯಚೂರು: ಎಸ್‌ಎಸ್‌ಎಲ್‌ಸಿ ಸೇರಿದಂತೆ ಬೇರೆ ಬೇರೆ ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳುವ ಜಿಲ್ಲೆಯ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಗ್ರಂಥಾಲಯಗಳಲ್ಲಿ ಸಂಜೆ ವೇಳೆ ಪ್ರತಿದಿನ ಚಹಾ ಮತ್ತು ಬಿಸ್ಕೆಟ್ ವ್ಯವಸ್ಥೆ ಮಾಡಬೇಕು ಎಂದು ಜಿಪಂ ಸಿಇಒ ಈಶ್ವರ ಕಾಂದೂ ಸುತ್ತೋಲೆ ಹೊರಡಿಸಿ ಜಿಲ್ಲೆಯ ಎಲ್ಲಾ ಗ್ರಾಪಂ ಗ್ರಂಥಪಾಲಕರಿಗೆ ನಿರ್ದೇಶನ ನೀಡಿದ್ದಾರೆ.



ಇದೇ ತಿಂಗಳು 18 ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಆರಂಭವಾಗಲಿದ್ದು, ಗ್ರಾ.ಪಂ ವ್ಯಾಪ್ತಿಯ ವಿದ್ಯಾರ್ಥಿಗಳು ಪರೀಕ್ಷೆಗೆ ತಯಾರಿ ಮಾಡಿಕೊಳ್ಳಲು ಉತ್ತಮ ಓದುವ ವಾತಾವರಣದ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಗ್ರಾ.ಪಂ ಗ್ರಂಥಾಲಯಗಳು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವಂತೆ ಕಾರ್ಯ ನಿರ್ವಹಿಸಬೇಕು. ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಗ್ರಾಮ ಪಂಚಾಯತಿ ಗ್ರಂಥಾಲಯಗಳ ಸಮಯ ಬದಲಾವಣೆ ಹಾಗೂ ಅಭ್ಯಾಸ ಮಾಡಲು ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು. ಗ್ರಾ.ಪಂ ಗ್ರಂಥಾಲಯಗಳ ಕಾರ್ಯ ಸಮಯವನ್ನು ಪ್ರಸ್ತುತ ಇರುವ ಬೆಳಿಗ್ಗೆ 9 ರಿಂದ ಸಂಜೆ 6.30 ಗಂಟೆವರೆಗೆ ಇರುವ ಸಮಯದ ಹೊರತಾಗಿ, ವಿದ್ಯಾರ್ಥಿಗಳ ಓದುವ ಅವಧಿಯನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳಿಗೆ ಶಾಂತವಾದ ಮತ್ತು ಅನುಕೂಲಕರ ವಾತಾವರಣದಲ್ಲಿ ಓದಲು ಅವಕಾಶ ಕಲ್ಪಿಸುವುದು. ಗ್ರಾಮ ಪಂಚಾಯತಿಗಳು ವಿಶೇಷ ಕಾಳಜಿ ವಹಿಸಿ ಗ್ರಂಥಾಲಯಗಳಲ್ಲಿ ಸ್ವಚ್ಛತೆ, ಸಮರ್ಪಕ ಬೆಳಕು ಹಾಗೂ ಕುಳಿತುಕೊಳ್ಳುವ ವ್ಯವಸ್ಥೆಗಳನ್ನು ಕಲ್ಪಿಸಿ ವಿದ್ಯಾರ್ಥಿಗಳಿಗೆ ಓದಲು ಅನುಕೂಲವಾಗುವಂತೆ ನೋಡಿಕೊಳ್ಳಬೇಕು.

ಈ ನಿಟ್ಟಿನಲ್ಲಿ ಜಿಲ್ಲೆಯ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಲ್ಲಿ ಮೇಲ್ಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಹಕಾರಿಯಾಗುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸುತ್ತೋಲೆಯಲ್ಲಿ ಜಿ.ಪಂ ಸಿಇಓ ಅವರು ಸೂಚಿಸಿದ್ದಾರೆ.

ಶಾಲೆಯ ಅಭಿವೃದ್ಧಿಗೆ ಶ್ರಮ: ಕೆಂಚರೆಡ್ಡಿ

ಕುಕನೂರು: ಶಾಲೆಯ ಸಂಪೂರ್ಣ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಎಸ್‌ಡಿಎಂಸಿ ಅಧ್ಯಕ್ಷ ಶಿವಣ್ಣ ಕೆಂಚರೆಡ್ಡಿ ಹೇಳಿದರು.

ತಾಲೂಕಿನ ತಳಕಲ್ಲ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನವಾಗಿ ಶಾಲಾ ಎಸ್‌ಡಿಎಂಸಿ ರಚನೆ ಮಾಡಲಾಯಿತು. ನೂತನವಾಗಿ ಆಯ್ಕೆಗೊಂಡ ಅಧ್ಯಕ್ಷರು ಮಾತನಾಡಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ್ ಗೌಡ್ರು, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೀರನಗೌಡ್ರು, ಬಿಆರ್‌ಸಿ ನೋಡಲ್ ಅಧಿಕಾರಿ ಶಿವಪ್ಪ ಉಪ್ಪಾರ್, ಶಾಲಾ ಮುಖ್ಯೋಪಾಧ್ಯಯ ಗೋಣೆಪ್ಪ ಹಂದ್ರಾಳ, ಸದಸ್ಯರಾದ ಶ್ರೀದೇವಿ ಮೂಲಿಮನಿ, ಮುದಿಯಪ್ಪ ಚಲವಾದಿ, ಜಯಶ್ರೀ ಭೀಮರಡ್ಡಿ, ಭೀಮಪ್ಪ ಮಡಿವಾಳ,ನಿಂಗಪ್ಪ ಬಡಿಗೇರ, ಸೋಮಲಿಂಗಪ್ಪ ವಾಲಿಕಾರ್, ಹನುಮಂತ ಕಾತರಕಿ, ಸೀಮಪ್ಪ ತಂಗೋಡಿ, ಶಿಲ್ಪಾ ಕಮ್ಮಾರ, ಅನ್ನಪೂರ್ಣ ಹಳ್ಳಿಕೇರಿ, ಯಶೋಧಾ ತೋಟನಗೌಡ್ರ ವೀಣಾ ಕರಗಲ್ಮಠ, ಶಾರದಾ ಚಲವಾದಿ, ವಿಜಯಲಕ್ಷ್ಮಿ ಅಳವಂಡಿ, ಮುಸ್ತಿಸಾಬ್ ಖಾಸಿಂ ಸಾಬ್ ನೂರಭಾಷ, ವಿಜಯಲಕ್ಷ್ಮೀ ಮಳೆಮಠ, ಮಲ್ಲಮ್ಮ ಕೊಟಗಿ, ಸವಿತಾ ಪಾಟೀಲ, ತಿಮ್ಮಣ್ಣ ಚೌಡಿ, ಅಶೋಕ ದ್ಯಾಂಪೂರ ಹಾಗೂ ಇತರರಿದ್ದರು.



ರಸ್ತೆ ಕಾಮಗಾರಿ ಹೆಸರಿನಲ್ಲಿ ಹಣ ಲೂಟಿ: ಗುತ್ತೇದಾರ್ ಆರೋಪ

ಕಲಬುರಗಿ: ಆಳಂದ ತಾಲೂಕಿನಲ್ಲಿ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅನುದಾನದ ಅಡಿಯಲ್ಲಿ ಮಂಜೂರಾಗಿರುವ ಕಾಮಗಾರಿಗಳನ್ನು ತಮ್ಮ ಸಂಸ್ಥೆಯಿಂದ ಹಣ ಖರ್ಚು ಮಾಡಿ ಮಾಡುತ್ತಿದ್ದೇವೆ ಎಂದು ಶಾಸಕ ಬಿ.ಆರ್. ಪಾಟೀಲ ಹಾಗೂ ಗುಮುಲ್ ಅಧ್ಯಕ್ಷ ಆರ್.ಕೆ. ಪಾಟೀಲ ಜನರಿಗೆ ಹಾಗೂ ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ ಎಂದು ಆಳಂದ ಮಾಜಿ ಶಾಸಕ ಸುಭಾಷ ಗುತ್ತೇದಾರ್ ಗಂಭೀರ ಆರೋಪ ಮಾಡಿದ್ದಾರೆ.

ಶುಕ್ರವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 866 ಲಕ್ಷಗಳ ಕಾಮಗಾರಿ ಲ್ಯಾಂಡ್ ಆರ್ಮಿಯವರಿಗೆ ಕೊಟ್ಟು ದುಡ್ಡು ಕೊಳ್ಳೆ ಹೊಡೆಯುವ ಕೆಲಸ ಮಾಡುತ್ತಿದ್ದಾರೆ. ಒಂದೊಂದು ಕಾಮಗಾರಿಗೆ 50 ಲಕ್ಷದಿಂದ 1.30 ಕೋಟಿಯವರೆಗೆ ದುಡ್ಡು ಇಟ್ಟು ಅದರಲ್ಲಿ ಕೇವಲ 5 ರಿಂದ 10 ಲಕ್ಷ ಮಾತ್ರ ಕಾಮಗಾರಿ ಮಾಡಿ ಹಣ ಲೂಟಿ ಮಾಡಿದ್ದಾರೆ ಎಂದು ಆರೋಪಿಸಿದರು.



ಆಳಂದ ಶಾಸಕ ಬಿ.ಆರ್. ಪಾಟೀಲರು, ಗುಮುಲ್ ಅಧ್ಯಕ್ಷ ಆರ್. ಕೆ. ಪಾಟೀಲ ತಾಲೂಕಿನ ಜನರಿಗೆ, ರೈತರಿಗೆ ತಾಲೂಕಿನಲ್ಲಿ ಹಳ್ಳಿ ರಸ್ತೆ,ಕಾಲು ದಾರಿ, ಬಂಡಿ ದಾರಿ, ನಡು ಹಾದಿ, ಹಾಣಾದಿಗಳು ನಮ್ಮ ಸ್ವಂತ ಸಂಸ್ಥೆಯಿಂದ ಹಣ ಖರ್ಚು ಮಾಡಿ ರಸ್ತೆ ನಿರ್ಮಿಸಿ ಕೊಡುತ್ತಿದ್ದೇವೆಂದು ಸುಳ್ಳು ಹೇಳಿ ವಂಚಿಸುತ್ತಿರುವುದು ಘನಘೋರವಾದ ಅಪರಾಧ ಎಂದು ದೂರಿದರು.

ಆಳಂದ ತಾಲೂಕಿನ ಅನೇಕ ಗ್ರಾಮಗಳಲ್ಲಿ ರಸ್ತೆ ನಿರ್ಮಾಣ, ರಸ್ತೆ ಸುಧಾರಣೆ ಹೆಸರಿನಲ್ಲಿ ಸರ್ಕಾರದ ಅನುದಾನ ಲಪಟಾಯಿಸಿ ತಮ್ಮ ಸಂಸ್ಥೆಯಿಂದ ಕಾಮಗಾರಿ ಮಾಡುತ್ತಿದ್ದೇವೆ ಎಂದು ಜನರಿಗೆ ಮೋಸ ಮಾಡುತ್ತಿದ್ದಾರೆ. ಆದ್ದರಿಂದ ಸದರಿ ಕಾಮಗಾರಿಗಳ ಕುರಿತು ಜವಾಬ್ದಾರಿಯುತಸ್ಥಾನದಲ್ಲಿದ್ದುಕೊಂಡು ತಪ್ಪು ಮಾಹಿತಿ ನೀಡಿ ಸಾರ್ವಜನಿಕರಿಗೆ ವಂಚಿಸುತ್ತಿರುವ ಶಾಸಕ ಬಿ.ಆರ್. ಪಾಟೀಲ ಮತ್ತು ಗುಮುಲ್ ಅಧ್ಯಕ್ಷ ಆರ್.ಕೆ. ಪಾಟೀಲ ಮೇಲೆಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ಕಾನೂನಿನ ಪ್ರಕಾರ ಕಠಿಣ ಶಿಕ್ಷೆಗೆ ಗುರಿ ಪಡಿಸಬೇಕು ಎಂದು ಆಗ್ರಹಿಸಿದರು.

ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಗೌರಿ ಚಿಚಕೋಟಿ, ಕೆಎಂಎಫ್ ಮಾಜಿ ನಿರ್ದೇಶಕ ಚಂದ್ರಕಾಂತ ಭೂಸನೂರ, ಬಿಜೆಪಿ ಕಾರ್ಯದರ್ಶಿ ಸಂತೋಷ ಹಾದಿಮನಿ, ರಮೇಶ ಬಿರಾದಾರ, ಅಶೋಕ ಹತ್ತರಕಿ, ಪ್ರಶಾಂತ ಕಡಗಂಚಿ, ಅಪ್ಪಾರಾವ ಮ್ಯೆನಾಳ ಇದ್ದರು.

> ರಸ್ತೆ ನಿರ್ಮಾಣದ ಹೆಸರಿನಲ್ಲಿ ಅಧಿಕಾರ ದುರುಪಯೋಗ ಪಡಿಸಿಕೊಂಡು,ಜನರ ತೆರಿಗೆ ಹಣದಲ್ಲಿ ಎಸ್ಕಾರ್ಟ್ ಬಳಸುತ್ತಿರುವ ಶಾಸಕರೇ ಈ ರೀತಿ ಮೋಸ ಮಾಡುತ್ತಿರುವುದು ತಾಲೂಕಿನ ಜನರ ದುರ್ದೈವವೇ. ಸಿಎಂ ಅವರು ಕ್ಷೇತ್ರದ ಅಭಿವೃದ್ಧಿಗಾಗಿ ಕೊಟ್ಟಂತ ಅನುದಾನ ಕರ್ನಾಟಕ ಗ್ರಾಮೀಣ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ನಿಗಮದಿಂದ (ಲ್ಯಾಂಡ್ ಆರ್ಮಿ) ಕೇವಲ ಮುರುಮ್ ಕಾಮಗಾರಿ ಮಾಡಿ ಕೋಟಿಗಟ್ಟಲೇ ಹಣವನ್ನು ಲೂಟಿ ಮಾಡುತ್ತಿರುವುದು ವಂಚನೆಗೈಯ್ಯುತ್ತಿರುವುದು ಯಾವ ನ್ಯಾಯ?
> ■ ಸುಭಾಷ ಗುತ್ತೇದಾರ್. ಮಾಜಿ ಶಾಸಕ,ಆಳಂದ

ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ಕ್ರಮ: ಸಚಿವ ಭೈರತಿ ಸುರೇಶ

ಕಲಬುರಗಿ: ಕಲಬುರಗಿ ನಗರದಲ್ಲಿ ಕುಡಿಯುವ ನೀರು ಸಮಸ್ಯೆ ನೀಗಿಸಲು ಅಗತ್ಯವಿರುವ ಕಡೆಗಳಲ್ಲಿ ಬೋರ್ ವೆಲ್ ಮತ್ತು ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಭೈರತಿ ಸುರೇಶ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಶುಕ್ರವಾರ ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ನಂದಿಕೂರು ಗ್ರಾಮದ ಬಳಿ ರೊಚ್ಚು ನೀರಿನ ಸಂಸ್ಕರಣ ಘಟಕದ ಕೆಲವು ಕಡೆ ದುರಸ್ತಿ ಕಾರ್ಯ ನಡೆಯುತ್ತಿರುವುದು, ಭೀಮಾ ನದಿಯ ಮೂಲಸ್ಥಾವರದ ಮೇಲ್ಭಾಗದಲ್ಲಿ ಗ್ರಾಮಗಳಿಂದ ನೈಸರ್ಗಿಕನಾಲಾದಿಂದ ಹರಿದು ಬರುತ್ತಿರುವ ತ್ಯಾಜ್ಯ ನೀರಿನಿಂದಾಗಿ ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿ ಕಲುಷಿತ ನೀರು ಮಿಶ್ರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ತಿಳಿಸಿದರು.

ಕೂಡಲೇ ಇದನ್ನು ತಪ್ಪಿಸಿ ಶುದ್ಧ ಕುಡಿಯುವ ನೀರು ಪೂರೈಕೆಗೆ ಕ್ರಮ ಕೈಗೊಳ್ಳಲಾಗಿದೆ. ಕಲುಷಿತ ನೀರಿಗೆ ಕಾರಣವಾಗಿದ್ದ ಎಸ್ ಟಿಪಿ ಘಟಕವನ್ನು 3 ಕೋಟಿ ರೂಪಾಯಿ ವೆಚ್ಚದಲ್ಲಿ ದುರಸ್ತಿ, ನೈಸರ್ಗಿಕ ನಾಲದಲ್ಲಿ ಹರಿದು ಬರುತ್ತಿರುವ ತ್ಯಾಜ್ಯ ನೀರನ್ನು ಬ್ಯಾರೇಜಿನ ತಳ ಭಾಗಕ್ಕೆ ಹರಿದುಹೋಗುವಂತೆ ಮಾಡುವುದಕ್ಕಾಗಿ 10 ಕೋಟಿ ರೂಪಾಯಿ ವೆಚ್ಚದಲ್ಲಿ ಯೋಜನೆ ರೂಪಿಸಲಾಗಿದೆ. ಬೋರ್ ವೆಲ್, ಟ್ಯಾಂಕರ್ ನಿಂದ ನೀರು ಈ ಪ್ರದೇಶಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡಲು ಸರ್ಕಾರ ಬದ್ಧವಾಗಿದ್ದು, ಬೋರ್ ವೆಲ್ ಗಳು ಮತ್ತು ಟ್ಯಾಂಕರ್ ಗಳ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ ಎಂದು ತಿಳಿಸಿದರು.



> ಕಲಬುರಗಿ ನಗರಕ್ಕೆ ಶಾಶ್ವತ ಕುಡಿಯುವ ನೀರು ಪೂರೈಕೆಗೆ ನಾರಾಯಣಪುರ ಬ್ಯಾರೇಜ್ ನಿಂದ ನೀರು ತರುವ 1800 ಕೋಟಿ ರೂಪಾಯಿಗಳ ಯೋಜನೆಯನ್ನು ಈ ಬಜೆಟ್ ನಲ್ಲಿ ಘೋಷಣೆ ಮಾಡಲಾಗಿದೆ.
> ■ ಭೈರತಿ ಸುರೇಶ್, ನಗರಾಭಿವೃದ್ಧಿ ಸಚಿವ

ನಿರಂತರ ನೀರು

ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ವಾರ್ಡ್ ಗಳಿಗೆ ನಿರಂತರ ಕುಡಿಯುವ ನೀರು ಪೂರೈಸಲು ವಿಶ್ವಬ್ಯಾಂಕ್ ನೆರವಿನ ಯೋಜನೆಯನ್ನು ಜಾರಿಗೊಳಿಸಲಾಗಿದೆ.ಭೌಗೋಳಿಕವಾಗಿ 47 ವಲಯಗಳನ್ನಾಗಿ ವಿಂಗಡಿಸಲಾಗಿದ್ದು, ಪ್ರಸ್ತುತ ಹಣಕಾಸಿನ ಲಭ್ಯತೆ ಅನುಸಾರವಾಗಿ 32 ವಲಯಗಳಿಗೆ ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿ ಹಾಲಿ ಇರುವ ಎಲ್ಲಾ ವಿತರಣಾ ಜಾಲವನ್ನು ವಿನ್ಯಾಸಕ್ಕೆ ಅನುಗುಣವಾಗಿ ಬದಲಾವಣೆ ಮಾಡಲಾಗುತ್ತದೆ ಎಂದು ಸಚಿವ ಭೈರತಿ ಸುರೇಶ್ ತಿಳಿಸಿದರು.

60 ಕೋಟಿ ರೂ.ದಂಡ

ನಗರದ ಮನೆಗಳಿಗೆ ಕುಡಿಯುವ ನೀರು ಪೂರೈಕೆಗಾಗಿ 800 ಕೋಟಿ ರೂಪಾಯಿಗಳ ಯೋಜನೆ ಕಾಮಗಾರಿ ಪ್ರಗತಿಯಲ್ಲಿದು,ನಾನಾ ಕಾರಣಗಳಿಂದ ಕಾಮಗಾರಿ ವಿಳಂಬ ಮಾಡಿದ ಗುತ್ತಿಗೆದಾರ ಸಂಸ್ಥೆಯಾದ ಎಲ್ ಆ್ಯಂಡ್ ಟಿ ಗೆ 60 ಕೋಟಿ ರೂಪಾಯಿ ದಂಡ ವಿಧಿಸಲಾಗಿದೆ.

ಕಿರುಸುದ್ದಿ

ಬೇಡಿಕೆ ಈಡೇರಿಕೆಗೆ ಆಗ್ರಹ



• **ಬಳ್ಳಾರಿ:** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕು ಹುಡೆಂ ಗ್ರಾಮದಲ್ಲಿ ಏಕಲವ್ಯ ಮಾದರಿ ವಸತಿ ಶಾಲೆ ಸ್ಥಾಪನೆಗೆ ಅನುಮೋದನೆ ನೀಡಬೇಕು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಒತ್ತಾಯಿಸಿ ಸಂಸದ ಈ. ತುಕಾರಾಂ ಅವರು, ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ಜುವಾಲ್ ಓರಾಂ ಅವರಿಗೆ ಮನವಿ ಸಲ್ಲಿಸಿದರು.

ಈ ಕುರಿತು ಸಚಿವರು ಕೂಡಲೇ ಅನುಮೋದನೆ ನೀಡಲು ಅಗತ್ಯ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ಆದಿವಾಸಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಸಿಗುವತ್ತ ಮಹತ್ವದ ಹೆಜ್ಜೆಯಾಗಿದೆ. ಕೂಡ್ಲಿಗಿ ಸೇರಿದಂತೆ ಅಖಂಡ ಜಿಲ್ಲೆಯ ಹಿಂದುಳಿದ ಪ್ರದೇಶಗಳ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಬಳ್ಳಾರಿ ಲೋಕಸಭಾ ಕ್ಷೇತ್ರದ ಪ್ರತಿಯೊಬ್ಬ ವಿದ್ಯಾರ್ಥಿಯ ಭವಿಷ್ಯವೇ ನಮ್ಮ ಆದ್ಯತೆ ಎಂದು ತಿಳಿಸಿದ್ದಾರೆ.

ವಿದ್ಯಾರ್ಥಿನಿಯರಿಗೆ ಧನಸಹಾಯ



• **ಸಿರುಗುಪ್ಪ:** ನಗರದ ದೇಶನೂರು ರಸ್ತೆಯ ಸೌಧಗರ ಸುನ್ನಿ ಮಸಿದಿ ಕಮಿಟಿ ವತಿಯಿಂದ ಮಸೀದಿಯ ವಾರ್ಷಿಕ ಆದಾಯದಲ್ಲಿ ಶೇ.30ರಷ್ಟು ವಿವಿಧ ಸಾಮಾಜಿಕ ಕಾರ್ಯಗಳಿಗೆ ಬಳಸಲು ಮೀಸಲಿಟ್ಟ ಅನುದಾನದಲ್ಲಿ ಇಲ್ಲಿನ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುವ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿನಿಯರ ಶೈಕ್ಷಣಿಕ ಪ್ರೋತ್ಸಾಹಿಸಲು 35 ಸಾವಿರ ಧನಸಹಾಯವನ್ನು ಶುಕ್ರವಾರ ನೀಡಲಾಯಿತು ಎಂದು ಕಮಿಟಿ ಅಧ್ಯಕ್ಷ ಎಂ.ಮೆಹಬೂಬ್ ಭಾಷಾ ಅವರು ತಿಳಿಸಿದ್ದಾರೆ.

ಉಪಾಧ್ಯಕ್ಷ ಹಂಡಿ ಖಲಾಂದರ್, ಕಾರ್ಯದರ್ಶಿ ಗೌಸ್ ರಬ್ಬನಿ, ಖಜಾಂಚಿ ವೈ.ಗೌಸ್ ಭಾಷ, ಸದಸ್ಯರಾದ ಕೋಲ್ಕೆ ಅಬ್ಬರಾರ್, ಎ.ಟಿ.ಇಬ್ರಾಹಿಮ್, ಎ.ಎಸ್.ನೂರ್, ಜಿ.ಮುನವರ್, ಶೋಯೆಬ್ ಖಲಾಂದರ್, ಶಾಲಾ ಮುಖ್ಯಗುರು ಎಂ.ಸುಮಂಗಳ ಭಾಗವಹಿಸಿದ್ದರು.

ವಿದ್ಯುತ್ ವ್ಯತ್ಯಯ ನಾಳೆ

• **ಹೂವಿನ ಹಡಗಲಿ:** ಪಟ್ಟಣದ ವಿದ್ಯುತ್ ಕೇಂದ್ರ, ಹೊಳಗುಂದಿ ವಿದ್ಯುತ್ ಕೇಂದ್ರ, ಹಿರೇಹಡಗಲಿ, ಮಾಗಳ, ಗಿರಿಯಾಪುರಮಠ, ವಿದ್ಯುತ್ ಉಪಕೇಂದ್ರಗಳಿಂದ ಸರಬರಾಜು ಆಗುವ 11ಕೆ.ವಿ.ಪೀಡರ್ ಗಳಿಗೆ ಮಾ.15ರಂದು ನಾಲ್ಕನೇ ತ್ರೈಮಾಸಿಕ ತುರ್ತು ನಿರ್ವಯ ಕೆಲಸ ಕೈಗೆತ್ತಿಕೊಂಡಿರುವುದರಿಂದ ವಿದ್ಯುತ್ ವ್ಯತ್ಯಯ ವಾಗುತ್ತದೆ, ಎಂದು ಹೂವಿನ ಹಡಗಲಿಯ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ಕೇದಾರನಾಥ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾ.15ರಂದು ಭಾನುವಾರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ. ಆದ್ದರಿಂದ ಸದರಿ ಉಪಕೇಂದ್ರಗಳಿಂದ ಹೊರಡುವ ಎಲ್ಲಾ ನಿರಂತರ ಜ್ಯೋತಿ,ಕುಡಿಯುವ ನೀರು,ರೈತರ ಪಂಪ್ ಸೆಟ್ ಪೀಡರ್ ಗಳ 11ಕೆ.ವಿ.ಮಾರ್ಗಗಳಿಗೆ ವಿದ್ಯುತ್ ವ್ಯತ್ಯಯವಾಗುವುದರಿಂದ. ಹೂವಿನಹಡಗಲಿ ಟೌನ್, ಹೊಳಗುಂದಿ, ಹಿರೇಹಡಗಲಿ,ಗಿರಿಯಾಪುರ,ಮಾಗಳ ಕೇಂದ್ರ ವ್ಯಾಪ್ತಿಯಲ್ಲಿ ಬರುವ ರೈತರು ಸಹಕಾರ ನೀಡಬೇಕೆಂದು ಕೋರಿದ್ದಾರೆ.

ಮೆಕ್ಕೆಜೋಳ ರಾಶಿಗೆ ಬೆಂಕಿ: ಅಪಾರ ಹಾನಿ

• **ಹೂವಿನಹಡಗಲಿ:** ತಾಲೂಕಿನ ಕತ್ತೆಬೆನ್ನೂರು ಗ್ರಾಮದಲ್ಲಿ ಮೆಕ್ಕೆಜೋಳ ರಾಶಿಗೆ ಬೆಂಕಿ ತಗುಲಿ ಅಪಾರ ಪ್ರಮಾಣದ ಘಟನೆ ತಾಲೂಕಿನ ಕತ್ತೆಬೆನ್ನೂರು ಗ್ರಾಮದಲ್ಲಿ ನಡೆದಿದೆ.ಗ್ರಾಮದ ರೈತ ನೀಲಗುಂದ ಗುರುವಣ್ಣ ಎಂಬುವರಿಗೆ ಸೇರಿದ ಮೆಕ್ಕೆಜೋಳ ರಾಶಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಉಂಟಾದ ಕಿಡಿ ತಗಲಿ ಸಂಪೂರ್ಣವಾಗಿ ಸುಟ್ಟು ಹೋಗಿದೆ. ಬೆಂಕಿ ಹೊತ್ತಿಕೊಂಡಿರುವುದನ್ನು ಸ್ಥಳೀಯರು ಗಮನಿಸಿ ಬೆಂಕಿ ನಂದಿಸಲು ಧಾವಿಸಿ ಬಂದಿದ್ದಾರೆ. ಒಣಗಿದ ತೆನೆಯ ರಾಶಿಗೆ ಬೆಂಕಿಯ ಜ್ವಾಲೆ ವ್ಯಾಪಿಸಿದ್ದರಿಂದ ನೂರಾರು ಕ್ವಿಂಟಲ್ ನಷ್ಟು ಮೆಕ್ಕೆಜೋಳ ಸುಟ್ಟು ಹಾನಿಗೀಡಾಗಿದೆ. ಹೂವಿನಹಡಗಲಿ ಅಗ್ನಿಶಾಮಕ ದಳ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿದ್ದಾರೆ.



ಬಳ್ಳಾರಿ: ಬಿಸಿಲಿನ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಬಳ್ಳಾರಿ ನಗರದ 4ನೇ ವಾರ್ಡ್ ವ್ಯಾಪ್ತಿಯ ಗುಗ್ಗರಟ್ಟಿ ಪ್ರದೇಶದ ಪಾಂಡುರಂಗ ದೇವಸ್ಥಾನ ಮುಂಭಾಗದಲ್ಲಿ ಮಡಿಕೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಬಿಜೆಪಿ ಯುವ ಮುಖಂಡ ರಾಮಾಂಜಿನಿ ಅವರು ಹೇಳಿದರು. ಈ ಸೇವಾ ಕಾರ್ಯಕ್ರಮದಲ್ಲಿ ಶ್ರೀ ದತ್ತ ಸ್ವಾಮಿ, ರಘು ಇತರರಿದ್ದರು.

ರಾಗಿ ಖರೀದಿ ಕೇಂದ್ರದ ಎದುರು ರೈತರ ಪ್ರತಿಭಟನೆ

• **ವಿಜಯನಗರ:** ರೈತರ ಅನುಕೂಲಕ್ಕಾಗಿ ತೆರೆದ ರಾಗಿ ಕೇಂದ್ರದಲ್ಲಿ ಕಮಿಷನ್ ಕೇಳಲಾಗುತ್ತಿದೆ ಎಂದು ಆರೋಪಿಸಿ, ನಗರದ ಎಪಿಎಂಸಿ ಆವರಣದಲ್ಲಿರುವ ರಾಗಿ ಖರೀದಿ ಕೇಂದ್ರದ ಎದುರು ರೈತರು ಶುಕ್ರವಾರ ಪ್ರತಿಭಟನೆ ನಡೆಸಿದ ಘಟನೆ ನಡೆಯಿತು.

ಸರ್ಕಾರ ರೈತರ ಅನುಕೂಲಕ್ಕಾಗಿ ರಾಗಿಗೆ ಕ್ವಿಂಟಾಲ್ ಗೆ 4,886 ರೂ ಬೆಂಬಲ ಬೆಲೆ ನಿಗದಿ ಮಾಡಿದೆ. 600 ಗ್ರಾಮ ಬಾಜು ತೆಗೆಯಬೇಕಾದ ನಿಯಮವಿದೆ. ಆದರೆ, 3 ಕೆಜಿ ಬಾಜು ತೆಗೆಯಲಾಗುತ್ತದೆ.

ಹೊಸಪೇಟೆ ತಾಲೂಕಿನ ನಾಗಲಾಪುರ ಗ್ರಾ.ಪಂ ವ್ಯಾಪ್ತಿಯ ಗುಂಡಾ ಗ್ರಾಮ, ನಾಗಾಲಪುರ, ಗೊಲ್ಲರಹಳ್ಳಿ, ಬ್ಯಾಲಕುಂದಿ, ಗರಗ ಸೇರಿದಂತೆ ನಾಲ್ಕೈದು ಹಳ್ಳಿಯ ರೈತರು ರಾಗಿ ಬೆಳೆ ಮಾರಾಟಕ್ಕೆ ಬಂದರೆ, ಗ್ರೇಡರ್ ಗೆ ಲಂಚ ಕೊಡದೆ ನಿಮ್ಮ ರಾಗಿ ಖರೀದಿ ಮಾಡಲ್ಲ ಎಂದು ಹೇಳಲಾಗುತ್ತಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು. ವಿವಿಧ ಗ್ರಾಮಗಳಿಂದ 10 ಟ್ರಾಕ್ಟರ್ ಗಳ 500 ರಿಂದ 600 ಕ್ವಿಂಟಲ್ ಗಳನ್ನು ರಾಗಿಯನ್ನು ರೈತರು ತಂದಿದ್ದರು.

ಈ ವೇಳೆ ಸ್ಥಳಕ್ಕೆ ಭೇಟಿ ನೀಡಿದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕ ರಿಯಾಜ್ ಯಾವುದೇ ರೀತಿಯಲ್ಲಿ ರೈತರಿಂದ ಹೆಚ್ಚಿನ ಬಾಜು ವಸೂಲಿ ಮಾಡಬಾರದು ಎಂದು ತಾಕೀತು ಮಾಡಿದರು. ರಾಗಿ ಕೇಂದ್ರ ಸಿಬ್ಬಂದಿ (ಗ್ರೇಡರ್) ಸ್ಥಳಾಂತರ ಮಾಡಲಾಗುವುದು ಎಂದು ಭರವಸೆ ನೀಡಿದ ಮೇಲೆ ರೈತರು ಪ್ರತಿಭಟನೆಯಿಂದ ಹಿಂದೆ ಸರಿದರು.



ವಿಜಯನಗರ: ರೈತರ ಅನುಕೂಲಕ್ಕಾಗಿ ತೆರೆದ ರಾಗಿ ಕೇಂದ್ರದಲ್ಲಿ ಕಮಿಷನ್ ಕೇಳಲಾಗುತ್ತಿದೆ ಎಂದು ಆರೋಪಿಸಿ, ನಗರದ ಎಪಿಎಂಸಿ ಆವರಣದಲ್ಲಿರುವ ರಾಗಿ ಖರೀದಿ ಕೇಂದ್ರದ ಎದುರು ರೈತರು ಶುಕ್ರವಾರ ಪ್ರತಿಭಟನೆ ನಡೆಸಿದ ಘಟನೆ ನಡೆಯಿತು.

ಜಿಲ್ಲಾಡಳಿತದಿಂದ ಅಗತ್ಯ ಸಿದ್ಧತೆ | ಡಿಸಿ ಹರ್ಷಲ್ ಭೋಯರ್ ಮಾಹಿತಿ

ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಆದ್ಯತೆ

• **ಯಾದಗಿರಿ:** ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿಭಾಯಿಸಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕುಡಿಯುವ ನೀರಿನ ಕುರಿತು ಕೈಗೊಳ್ಳಬೇಕಾದ ಮುಂಜಾಗ್ರತೆ ಕ್ರಮಗಳ ಕುರಿತು ವಿವರ ನೀಡಲು ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಳೆದ ಸಾಲಿನಲ್ಲಿ ಶೇ.33 ರಷ್ಟು ಹೆಚ್ಚು ಮಳೆಯಾಗಿದೆ. ಜಿಲ್ಲೆಯಲ್ಲಿರುವ ಜಲಾಶಯಗಳಾದ ನಾರಾಯಣಪುರ ಜಲಾಶಯದಲ್ಲಿ 491.15 ಮೀ,ಸನ್ನತಿ ಬ್ಯಾರೇಜ್ ನಲ್ಲಿ 373.90 ಮೀ. ಹಾಗೂ ಗುರಸುಣಗಿ ಜಲಾಶಯದಲ್ಲಿ ಜಲಾಶಯದಲ್ಲಿ 357.80 ಮೀ ರಷ್ಟು ನೀರು ಸಂಗ್ರಹವಿದೆ ಎಂದು ಅವರು ವಿವರಿಸಿದರು.

ಈ ವರ್ಷದ ಮಾರ್ಚ್ ತಿಂಗಳಿನಲ್ಲಿ ಇಲ್ಲಿಯವರೆಗೆ ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗಿರುವುದಿಲ್ಲ. ಈ ತಿಂಗಳಲ್ಲಿ 16, ಏಪ್ರಿಲ್ನಲ್ಲಿ 25 ಹಾಗೂ ಮೇ ತಿಂಗಳಲ್ಲಿ 24 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗುವ ಸಾಧ್ಯತೆ ಇರುತ್ತದೆ ಎಂದು ಅವರು ಹೇಳಿದರು.

> ಜಿಲ್ಲೆಯ ಜನರಿಗೆ ಶುದ್ಧ ನೀರು ಪೂರೈಸುವ ಉದ್ದೇಶಕ್ಕಾಗಿ ಪ್ರತಿ 15 ದಿನಗಳಿಗೊಮ್ಮೆ ಕುಡಿಯುವ ನೀರಿನ ಪರೀಕ್ಷೆ ನಡೆಸುವಂತೆ ಹಾಗೂ ಯೋಗ್ಯವೆಂದು ವರದಿ ಬರುವ ನೀರನ್ನು ಮಾತ್ರ ಪೂರೈಸುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಸೂಚನೆ ನೀಡಲಾಗಿದೆ.
> ■ ಹರ್ಷಲ್ ಭೋಯರ್.ಜಿಲ್ಲಾಧಿಕಾರಿ

ಭೀಮರಾಯನಗುಡಿ, ಕಕ್ಕೇರಾ, ಸುರಪುರದ ಎಲ್ಲಾ ವಾರ್ಡ್‌ಗಳಲ್ಲಿ ಹಾಗೂ ಕೆಂಭಾವಿಯ 08 ವಾರ್ಡ್‌ಗಳಲ್ಲಿ ಪ್ರತಿ ದಿನ ಕುಡಿಯುವ ನೀರು ಪೂರೈಸಲಾಗುತ್ತಿದೆ. ಶಹಾಪುರ, ಯಾದಗಿರಿ, ಹುಣಸಗಿ, ಗುರುಮಿಠಕಲ್‌ನ ಎಲ್ಲಾ ವಾಡ್‌ಗಳಲ್ಲಿ ಹಾಗೂ ಕೆಂಭಾವಿಯ 15 ವಾಡ್‌ಗಳಲ್ಲಿ ಎರಡು ದಿನಗಳಿಗೊಮ್ಮೆ ಕುಡಿಯುವ ನೀರು ಪೂರೈಸಲಾಗುತ್ತಿದೆ. ಈ ವರ್ಷ ಯಾವುದೇ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗುವ ಸಾಧ್ಯತೆ ಇರುವುದಿಲ್ಲ ಎಂದರು.

ಜಲಮೂಲಗಳಾದ ಬಾವಿ, ಕೊಳವೆ ಬಾವಿ, ಓವರ್ ಹೆಡ್ ಟ್ಯಾಂಕ್, ಮುಂತಾದವುಗಳನ್ನು ಸ್ವಚ್ಛವಾಗಿಟ್ಟುಕೊಳ್ಳಲು ಅಗತ್ಯ ಸಲಹೆ ಸೂಚನೆಗಳನ್ನು ಸಹ ನೀಡಲಾಗಿದೆ. ಜಿಲ್ಲೆಯಲ್ಲಿ 58 ವಾರಗಳಿಗಾಗುವಷ್ಟು ಮೇವಿನ ಸಂಗ್ರಹಣೆ ಇದ್ದು, ಜಾನುವಾರುಗಳಿಗೆ ಮೇವಿನ ಕೊರತೆಯಾಗುವ ಸಾಧ್ಯತೆ ಇರುವುದಿಲ್ಲ ಎಂದು ತಿಳಿಸಿದರು.

ಜಿಪಂ ಸಿಇಒ ಲವೀಶ ಒರಡಿಯಾ, ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಬೋರ್ ವೆಲ್ ಮೇಲೆ ಅವಲಂಬನೆಯಾಗಿರುವದರಿಂದ, ಈಗಾಗಲೇ ಸರ್ವೆ ಮಾಡಿಸಿದ 65 ಗ್ರಾಮಗಳ ಬೋರ್ ವೆಲ್ ಫ್ಲಶಿಂಗ್,ಖಾಸಗಿ ಬಾಡಿಗೆ ಬೋರ್ವೆಲ್ ಪಡೆಯಲು ಅವಶ್ಯಕ ಕ್ರಮ ಕೈಗೊಳ್ಳಲಾಗಿದೆ. ಕಳೆದ ವರ್ಷ ಸಮಸ್ಯೆ ಅನುಭವಿಸಿದ್ದ ಎಂಪಾಡ್,ರಸ್ತಾಪುರ,ಬೆನಕನಹಳ್ಳಿ, ಹೊಸಕೇರಾಗಳ ನೀರಿನ ಸಮಸ್ಯೆ ನಿಭಾಯಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕೃಷಿ ಜಂಟಿ ನಿರ್ದೇಶಕ ರತೇಂದ್ರನಾಥ್ ಸುಗೂರ್,ಡಿಯುಡಿಸಿ ಯೋಜನಾ ನಿರ್ದೇಶಕ ಲಕ್ಷ್ಮಿಕಾಂತ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

• **ಹಗರಿಬೊಮ್ಮನಹಳ್ಳಿ:** ತಾಲೂಕಿನ ಬ್ಯಾಲಾಳು 66/11 ಕೆವಿ ಮತ್ತು ಬಾಚಿಗೊಂಡನಹಳ್ಳಿ 66/11 ಕೆವಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ 4 ನೇ ತ್ರೈಮಾಸಿಕ ನಿರ್ವಹಣಾ ಕೆಲಸ ಇರುವುದರಿಂದ ಮಾ.15ರಂದು ಬೆಳಿಗ್ಗೆ 7 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೂ ವಿದ್ಯುತ್ ಸರಬರಾಜು ಇರುವುದಿಲ್ಲ.ಆದ್ದರಿಂದ ಹಗರಿಬೊಮ್ಮನಹಳ್ಳಿ ಪಟ್ಟಣ ಹಳೇ ಹಗರಿಬೊಮ್ಮನಹಳ್ಳಿ,ಚಿಂತ್ರಪಳ್ಳಿ,ಮಾಲವಿ, ಹರೇಗೊಂಡನಹಳ್ಳಿ, ವರಲಹಳ್ಳಿ, ವಟ್ಟಮ್ಮನಹಳ್ಳಿ, ಹಿರೇ ಸೊಬಟಿ,ಚಿಕ್ಕ ಸೊಬಟಿ, ಬಂಡಿ ಸೊಬಟಿ,ಎಂ ಬಿ ಕಾಲೋನಿ , ಬ್ಯಾಸಿಗಿದೇರಿ, ಮುಟುಗನಹಳ್ಳಿ, ಶಿವಾನಂದನಗರ, ಬಾಚಿಗೊಂಡನಹಳ್ಳಿ 1 ಮತ್ತು 2 ರಲ್ಲಿ ,ಹಗರಿ ಕ್ಯಾದಿಗಿ ಹಳ್ಳಿ ,ಅಡವಿ ಆನಂದ ದೇವನಹಳ್ಳಿ, ಕೆಚ್ಚಿನ ಬಂಡಿ, ಬಲ್ಲಾಹುಣಸಿ, ಬಂಡಿಹಳ್ಳಿ, ಮೂತ್ಕೂರು, ಸೊಬಟಿ,ಕಾತ್ಯಾಯನಮರಡಿ,ಕೆ. ಓಬಳಾಪುರ, ಬ್ಯಾಲಾಳು,ಕಡಲಬಾಳು, ಗ್ರಾಮಗಳಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ. ಈ ಭಾಗದ ಸಾರ್ವಜನಿಕರು ಸಹಕರಿಸಬೇಕೆಂದು ಜೆಸ್ಕಾಂ ಇಲಾಖೆಯ ಎಇಇ ನಾಗರಾಜ .ಕೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಳ್ಳು ಪ್ರಚಾರಕ್ಕೆ ಕಿವಿಗೊಡದಿರಿ: ಠಾಕೂರ್

• **ಬೀದರ್:** ಯುಪಿಎ ಆಡಳಿತದ 2004ರಿಂದ 2014ರ ಅವಧಿಯಲ್ಲಿ ಜಾಗತಿಕ ಮಟ್ಟದಲ್ಲಿ ಸ್ಥಿರತೆ ಇದ್ದಾಗಲೂ ಕಾಂಗ್ರೆಸ್ ಸರ್ಕಾರ ತೈಲ ಹಾಗೂ ಅಡುಗೆ ಅನಿಲದಲ್ಲಿ ಭಾರಿ ಪ್ರಮಾಣದಲ್ಲಿ ಏರಿಕೆ ಕಾಣುತ್ತಿದ್ದೇವು. ಜನರ ಖಾತೆಗೆ ನೇರವಾಗಿ ಸೇರಬೇಕಿದ್ದ ಸಬ್ಸಿಡಿ ಹಣ ಕೂಡ ಗೋಲ್ಮಾಲ್ ಮಾಡಿದ್ದ ಕೀರ್ತಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಸಲ್ಲುತ್ತದೆ. ಇಂದು ಅದೇ ಕಾಂಗ್ರೆಸ್ ನಾಯಕರು ಎನ್‌ಡಿಎ ಸರ್ಕಾರಕ್ಕೆ ಗುರಿಯಾಗಿಸಿ ಹೇಳಿಕೆ ನೀಡುವ ಮೊದಲು ತಮ್ಮ ಭ್ರಷ್ಟಾಚಾರಗಳ ಬಗ್ಗೆ ಮೊದಲು ನೋಡಿಕೊಳ್ಳಲಿ ಎಂದು ಬಿಜೆಪಿ ವಿಭಾಗ ಪ್ರಮುಖ ಈಶ್ವರ ಸಿಂಗ್ ಠಾಕೂರ್ ಹೇಳಿದ್ದಾರೆ.

ಹೊಸ ದಿಗಂತಕ್ಕೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ಆಡಳಿತದ ರಾಜ್ಯಗಳಲ್ಲಿ ಜನರನ್ನು ಮರಳು ಮಾಡುವ ಉದ್ದೇಶದಿಂದ ಎಲ್‌ಪಿಜಿ ಅಭಾವದ ಬಗ್ಗೆ ಸುಳ್ಳು ಸುದ್ದಿ ಹರಡಿಸುತ್ತಿರುವ ಕಾಂಗ್ರೆಸ್ ನಾಯಕರು ಸತ್ಯಾಸತ್ಯತೆ ತಿಳಿದು ಮಾತನಾಡಿದರೆ ಒಳಿತು. ವಿದೇಶ ಸಚಿವ ಜಯಶಂಕರ್ ಈ ಕುರಿತು ಹೇಳಿಕೆ ನೀಡಿದ್ದು ಭಾರತಕ್ಕೆ ಆಮದಾಗುವ ತೈಲದ ಹಡಗುಗಳಿಗೆ ಯಾವುದೇ ರೀತಿಯ ಅಡೆತಡೆ ಇಲ್ಲ ಮತ್ತು ದೇಶದಲ್ಲಿ 3-4 ತಿಂಗಳುಗಳ ಎಲ್.ಪಿ.ಜಿ ದಾಸ್ತಾನು ಇದೆ. ಹೀಗಿರುವಾಗ ವಿರೋಧ ಪಕ್ಷಗಳ ನಾಯಕರು ಜನರಿಗೆ ವಾಸ್ತವಾಂಶಗಳ ಬಗ್ಗೆ ಜವಾಬ್ದಾರಿಯುತವಾಗಿ ಹೇಳಿಕೆ ನೀಡಬೇಕು ಇಲ್ಲಸಲ್ಲದ ಹೇಳಿಕೆಗಳನ್ನು ಕೊಡುವುದು ಮೊದಲು ನಿಲ್ಲಿಸಲಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೋರೊನಾ ಮಹಾಮಾರಿಯಂತಹ ಕಂಟಕದಲ್ಲಿಯೂ ಸುಲಭವಾಗಿ ದೇಶವನ್ನು ವಿಪತ್ತಿನಿಂದ ಹೊರ ತಂದಿದ್ದ ಪ್ರಧಾನಿ ಮೋದಿ ಅವರ ವರ್ಚಸ್ಸು ಜಾಗತಿಕ ಮಟ್ಟದಲ್ಲಿ ವಿಶ್ವದ ಅಗ್ರಗಣ್ಯ ನಾಯಕರ ಸಾಲಿನಲ್ಲಿದೆ. ಅವರ ಮಾತಿಗೆ ಮನ್ನಣೆ ಕೊಟ್ಟು ಇರಾನ್ ಹಾರ್ಮೂಜ್ ಜಲಸಂಧಿ ಮೂಲಕ ಹಾದು ಹೋಗುವ ಸರಕು ಸಾಗಾಣಿಕೆ ಹಡಗುಗಳನ್ನು ಸಂಚರಿಸಲು ಅನುವು ಮಾಡಿಕೊಟ್ಟಿದೆ ಅಲ್ಲದೇ, ರಷ್ಯಾ ಕೂಡ ತೈಲವನ್ನು ಭಾರತಕ್ಕೆಂದೇ ಉಳಿದ ದೇಶಗಳನ್ನು ಬದಿಗಿಟ್ಟು ಸರಬರಾಜು ಮಾಡಲು ಮುಂದಾಗಿರುವುದು ನಮ್ಮ ದೇಶದ ಪ್ರಧಾನಿ ಮೋದಿ ಅವರ ನೇತೃತ್ವದ ಕಾರಣದಿಂದ. ದೇಶದ ಹಿತ ಕಾಪಾಡುವ ದೃಷ್ಟಿಯಿಂದ ಬೇಕಾದ ಎಲ್ಲಾ ಕ್ರಮಗಳನ್ನು ಕೇಂದ್ರ ಸರ್ಕಾರತೆಗೆದುಕೊಳ್ಳುವ ಭರವಸೆ ಇದೆ ಎಲ್ಲರೂ ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ನಂಬಿಕೆ ಇಟ್ಟಿರುವ ಕಾರಣ ಕಾಂಗ್ರೆಸ್‌ನ ಊಹಾಪೋಹದ ಸುಳ್ಳಿನ ಪ್ರಚಾರಕ್ಕೆ ಕಿವಿಗೊಡಬಾರದು ಎಂದು ಹೇಳಿದರು.

ಮಾ. 14. 15ರಂದು ವಿದ್ಯುತ್ ವ್ಯತ್ಯಯ

• **ಬಳ್ಳಾರಿ:** ಎಮ್ಮಿಗನೂರು 110/11 ಕೆವಿ ವಿದ್ಯುತ್ ಕೇಂದ್ರದಲ್ಲಿ ಸ್ಪನ್ ಪೋಲ್ ಕಾರ್ಯ ಕೈಗೆತ್ತಿಕೊಂಡ ಹಿನ್ನೆಲೆ ಮಾ. 14 ಮತ್ತು 15 ರಂದು ಬೆಳಗ್ಗೆ 9 ರಿಂದ 5ರ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಐ.ಪಿ ಫೀಡರ್ ಮಾರ್ಗಗಳಲ್ಲಿ ಬೆಳಗ್ಗೆ 4 ರಿಂದ 9ರ ವರೆಗೆ ವಿದ್ಯುತ್ ಸರಬರಾಜು ಆಗಲಿದೆ. ಇನ್ನುಳಿದಂತೆ ಸ್ಪನ್ ಪೋಲ್ ಕಾರ್ಯ ಮುಗಿದ ನಂತರ ಸಂಜೆ 5ರಿಂದ 7ರ ವರೆಗೆ ವಿದ್ಯುತ್ ಸರಬರಾಜು ಆಗಲಿದೆ ಎಂದು ತಿಳಿಸಿದ್ದಾರೆ.

ಸರ್ಕಾರಿ ಶಾಲೆಗಳು ಖಾಸಗಿಗಿಂತ ಕಡಿಮೆ ಇಲ್ಲ

• **ಹೂವಿನ ಹಡಗಲಿ:** ತಾಲೂಕಿನ ಅಡವಿಮಲ್ಲನಕೇರಿ ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರದಂದು ಶಾರದಾ ಪೂಜೆ ಬಹಳ ವಿಜೃಂಭಣೆಯಿಂದ ನೆರವೇರಿತು.

ಕಾರ್ಯಕ್ರಮದ ವೇದಿಕೆ ಅಧ್ಯಕ್ಷತೆ ವಹಿಸಿದ್ದ ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಪಿ.ಎಂ. ಸಿದ್ದಯ್ಯ ಹಾಗೂ ವೇದಿಕೆಯಲ್ಲಿದ್ದ ಗಣ್ಯರು ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಚಾಲನೆ ನೀಡಿದರು.

ಶಿಕ್ಷಕ ನಾನ್ಯನಾಯ್ಕ ಮಾತನಾಡಿ, ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಿಗಿಂತ ಅತ್ಯುತ್ತಮ ಸ್ಥಾನದಲ್ಲಿವೆ, ಮಕ್ಕಳ ನೈಜ ಶಿಕ್ಷಣ, ಉನ್ನತ ಬದುಕಿಗಾಗಿ ಹಗಲಿರಳು ಶ್ರಮಿಸುತ್ತಿರುವ ಸರ್ಕಾರಿ ಶಾಲೆಗಳೇ ಮೇಲುಗೈ ಇಂತಹ ಶಾಲೆಗಳಲ್ಲಿ ಶಿಕ್ಷಣ ಪಡೆದ ಮಕ್ಕಳೇ ಧನ್ಯರು ಎಂದರು.

ಇದೆ ಸಂದರ್ಭದಲ್ಲಿ 7ನೇ ತರಗತಿ ಮಕ್ಕಳಿಗೆ ಬೀಳ್ಕೊಡುಗೆ ಸಮಾರಂಭವಿದ್ದು ಮಕ್ಕಳ ಮುಂದಿನ ಶೈಕ್ಷಣಿಕ ಬದುಕಿಗೆ ಹಾರೈಸಿದ್ದು, ಈ ವೇಳೆ 7ನೇ ತರಗತಿಯ ಮಕ್ಕಳ ಭಾವುಕರಾಗಿ ಮಾತನಾಡಿ ತಮ್ಮ ಅನಿಸಿಕೆ ಅಭಿಪ್ರಾಯ ಹಂಚಿಕೊಂಡರು.

ಅತಿಥಿ ಶಿಕ್ಷಕರುಗಳಾದ ಇಟ್ಟಗಿ ಆನಂದ, ಸಿ. ಕಾವೇರಿ ಇವರ ಸಾರ್ಥಕ ಸೇವೆಗಾಗಿ ಶಾಲಾ ಆಡಳಿತ ವತಿಯಿಂದ ಸನ್ಮಾನಿಸಿ ಗೌರವಿಸಿದರು.

ಆಟಗಳಲ್ಲಿ, ಭಾಷಣ ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ, ಹಾಗೂ ತೃತೀಯ ಸ್ಥಾನ ಪಡೆದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಶಿಕ್ಷಕ ವೀರೇಶ್ ಕೋಡಿಹಳ್ಳಿ ಮಾತನಾಡಿ, ಶಾಲಾ ದಿನಗಳೇ ಮಾನವನ ಜೀವನದ ಅಮೂಲ್ಯ ಕ್ಷಣಗಳು. ಇಂತಹ ದಿನಗಳನ್ನು ಮಕ್ಕಳು ಅನುಭವಿಸಿ ಉನ್ನತ ಶಿಕ್ಷಣದತ್ತ ಮುಖ ಮಾಡುತ್ತಿದ್ದೀರಿ. ಆದಕಾರಣ ಮುಂದಿನ ದಿನಗಳಲ್ಲಿಯೂ ಶ್ರದ್ಧೆಯಿಂದ ಶಿಕ್ಷಣ ಮುಂದುವರಿಸಿ ಶಾಲೆಗೂ ಹಾಗೂ ಪೋಷಕರಿಗೂ ಒಳ್ಳೆಯ ಹೆಸರು ತರಬೇಕು ಎಂದರು.

ವೇದಿಕೆ ಕಾರ್ಯಕ್ರಮದ ನಂತರ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಇದೇ ಸಂದರ್ಭದಲ್ಲಿ ಶಿಕ್ಷಕರು ಹಿರಿಯ ವಿದ್ಯಾರ್ಥಿಗಳ ಸಹಕಾರವನ್ನು ನೆನಪಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಹಿರಿಯ ನಿವೃತ್ತ ಶಿಕ್ಷಕರಾದ ಮಹಾಜನದಹಳ್ಳಿ ಕೊಟ್ರಯ್ಯಸ್ವಾಮಿ, ಮುಖ್ಯ ಶಿಕ್ಷಕ ಹುಗಲೂರು ವೀರಣ್ಣ, ಗ್ರಾಮಸ್ಥರಾದ ಎ.ಕೆ. ಮೈಲಪ್ಪ, ಜಿ. ಮಲ್ಲನಗೌಡ, ವಸತಿ ನಿಲಯ ಅಡುಗೆ ಸಹಾಯಕ ಎಚ್.ಎಂ. ವೀರೇಶ್, ಶಾಲಾ ಅಡುಗೆ ಸಿಬ್ಬಂದಿ ಇದ್ದರು.



ರೈತರಿಗೆ ಅನ್ಯಾಯ ತಡೆಗೆ ಮನವಿ



• **ಕೂಡ್ಲಿಗಿ:** ತಾಲೂಕಿನಲ್ಲಿ ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಖರೀದಿಸುವ ದಲ್ಲಾಳಿಗಳು ಪ್ರತಿ ಕ್ವಿಂಟಲ್‌ಗೆ 4 ಕೆಜಿ ಬಾಜು ಹಾಗೂ ಕಮೀಷನ್ ಸೇರಿ ವಿವಿಧ ರೀತಿಯಲ್ಲಿ ಅನ್ನದಾತರಿಗೆ ಅನ್ಯಾಯ ಮಾಡುತ್ತಿರುವುದನ್ನು ತಡೆಯಬೇಕು ಎಂದು ಒತ್ತಾಯಿಸಿ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಕಾರ್ಯದರ್ಶಿ ಎಸ್.ಸಿ.ಬಸವರಾಜ್ ಹಾಗೂ ಶಾಸಕರ ಕಚೇರಿಗೆ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಬಣ) ಪದಾಧಿಕಾರಿಗಳು ಶುಕ್ರವಾರ ಮನವಿ ಸಲ್ಲಿಸಿದರು.

ದಸಂಸ ವಿಜಯನಗರ ಜಿಲ್ಲಾ ಸಂಚಾಲಕ ಕೂಡ್ಲಿಗಿ ಎಸ್ .ದುರುಗೇಶ್ ಮಾತನಾಡಿ, ರೈತರು ಜಮೀನಿನಲ್ಲಿ ಕಷ್ಟಪಟ್ಟು ಬೆಳೆದ ಕೃಷಿ ಉತ್ಪನ್ನಗಳಿಗೆ ಸರಿಯಾದ ಬೆಲೆ ಸಿಗದೆ ನಷ್ಟ ಅನುಭವಿಸುತ್ತಿದ್ದಾರೆ. ಆದರಲ್ಲೂ ಕೃಷಿ ಉತ್ಪನ್ನಗಳನ್ನು ಖರೀದಿಸುವ ದಲ್ಲಾಳಿಗಳು ಪ್ರತಿ ಕ್ವಿಂಟಲ್‌ಗೆ 4 ಕೆಜಿ ಬಾಜು ತೆಗೆಯುವುದಲ್ಲದೆ, ಶೇ.2ರಷ್ಟು ಕಮೀಷನ್ ಪಡೆಯಲಾಗುತ್ತಿದೆ. ಹಮಾಲಿ ವೆಚ್ಚ ಸೇರಿ ನಾನಾ ರೀತಿಯಲ್ಲಿ ರೈತರಿಗೆ ತೀವ್ರ ಅನ್ಯಾಯ ಮಾಡಲಾಗುತ್ತಿದೆ. ಹೀಗಾಗಿ, ತಾಲೂಕಿನಲ್ಲಿ ಪರವಾನಗಿ ಪಡೆದವರು ಹಾಗು ಪರವಾನಗಿ ಪಡೆಯದೇ ವ್ಯಾಪಾರ ಮಾಡುವವರಿಗೆ ಈ ಕುರಿತು 15 ದಿನದೊಳಗೆ ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ದಸಂಸ ತಾಲೂಕು ಸಂಚಾಲಕ ಬಡೇಲಡುಕು ದುರುಗೇಶ್, ಜಿಲ್ಲಾ ಮುಖಂಡರಾದ ಗೆದ್ದಲಗಟ್ಟೆ ಬಿ.ಹನುಮೇಶ್, ಚೌಡಾಪುರ ಯು.ಬಸವರಾಜ, ಬಿ.ಮಹೇಶ್, ಮೂಗಪ್ಪ, ಎಚ್.ನಾಗರಾಜ, ಅಜಯ್ ಸೇರಿ ಇತರರಿದ್ದರು.

ವದಂತಿಗಳಿಗೆ ಕಿವಿಗೊಡಬೇಡಿ: ಜಿಲ್ಲಾಧಿಕಾರಿ

• **ಬೀದರ್:** ಜಿಲ್ಲೆಯಲ್ಲಿ ಗೃಹ ಬಳಕೆಯ ಎಲ್‌ಪಿಜಿ ಅಡುಗೆ ಅನಿಲ ಸಿಲಿಂಡರ್‌ಗಳು ಸಾಕಷ್ಟು ಪ್ರಮಾಣದಲ್ಲಿಲಭ್ಯವಿರುವುದರಿಂದ ಗ್ರಾಹಕರು ಗಾಬರಿಗೊಳ್ಳಬಾರದು ಹಾಗೂ ಹೆಚ್ಚುವರಿಯಾಗಿ ಸಿಲಿಂಡರ್ ಸಂಗ್ರಹಿಸಿ ಕೊಳ್ಳಬಾರದು ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ತಿಳಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಅವರು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವದಂತಿಗಳಿಗೆ ಸಾರ್ವಜನಿಕರು ಕಿವಿಗೂಡಬಾರದು ಎಂದು ಮನವಿ ಮಾಡಿದ್ದಾರೆ. ಹೆಚ್ಚಿನ ಗ್ರಾಹಕರು ಮುಂಚಿತವಾಗಿ ಬುಕ್ಕಿಂಗ್ ಮಾಡುತ್ತಿರುವ ಹಿನ್ನೆಲೆಯಲ್ಲಿ ಐವಿಆರ್‌ಎಸ್ ಹಾಗೂ ಮಿಸ್ಡ್ ಕಾಲ್ ವ್ಯವಸ್ಥೆಯಲ್ಲಿ ಹೆಚ್ಚಿನ ಸಂಚಾರ ದಟ್ಟಣೆ ಉಂಟಾಗಿ ಸಿಸ್ಟಮ್‌ಗಳುಕಾರ್ಯನಿರ್ವಹಿಸಲು ತೊಂದರೆ ಉಂಟಾಗಿದೆ ಎಂದು ತಿಳಿಸಿದ್ದಾರೆ.

ಆದ್ದರಿಂದ ಪರ್ಯಾಯವಾಗಿ Indian Oil Corporation (IOCL), Hindustan Petroleum (HPCL) ಹಾಗೂ Bharat Petroleum (BPCL) ಕಂಪನಿಗಳ ವಾಟ್ಸಾಪ್ ಸಂಖ್ಯೆಗಳ ಮೂಲಕವೂ ಗ್ರಾಹಕರು ಗ್ಯಾಸ್ ಬುಕ್ಕಿಂಗ್ ಮಾಡಬಹುದು ಎಂದು ತಿಳಿಸಿದ್ದಾರೆ.

ಮಾರ್ಚ್ 11ರಂದು ಜಿಲ್ಲೆಯ ಗ್ಯಾಸ್ ಏಜೆನ್ಸಿದಾರರು ಹಾಗೂ ಹೋಟೆಲ್ ಉದ್ಯಮಿದಾರರ ಸಭೆ ನಡೆಸಲಾಗಿದ್ದು, ವಾಣಿಜ್ಯ ಸಿಲಿಂಡರ್‌ಗಳ ಲಭ್ಯತೆ ಕುರಿತು ಚರ್ಚೆ ಮಾಡಲಾಗಿದೆ. ಹೋಟೆಲ್‌ಗಳಲ್ಲಿ ಲಭ್ಯವಿರುವ ಸಿಲಿಂಡರ್ ಗಳನ್ನು ಅಗತ್ಯಕ್ಕೆ ತಕ್ಕಂತೆ ಮಾತ್ರ ಬಳಸಬೇಕು ಹಾಗೂ ಗ್ಯಾಸ್ ಏಜೆನ್ಸಿಗಳಲ್ಲಿ ಇರುವ ಸ್ಟಾಕ್ ಅನ್ನು ಅಗತ್ಯವಿರುವ ಹೋಟೆಲ್‌ಗಳಿಗೆ ಸರಬರಾಜು ಮಾಡಲು ಸೂಚಿಸಲಾಗಿದೆ.

ಯಾರೂ ಅನಗತ್ಯವಾಗಿ ಹೆಚ್ಚಿನ ಸಿಲಿಂಡರ್‌ಗಳನ್ನು ಸಂಗ್ರಹಣೆ ಮಾಡುವುದು ಅಥವಾ ಮಾರ್ಗಾಂತರ ಮಾಡುವುದನ್ನು ತಪ್ಪಿಸಬೇಕು. ಇಂತಹ ಪ್ರಕರಣಗಳು ಕಂಡುಬಂದರೆ ಅಗತ್ಯ ವಸ್ತುಗಳ ಕಾಯ್ದೆ 1955 ಅಡಿಯಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಜಿಲ್ಲೆಯಲ್ಲಿ ಎಲ್‌ಪಿಜಿ ಸಿಲಿಂಡರ್ ಗಳ ಕೊರತೆ ಇಲ್ಲದಿರುವುದರಿಂದ ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ವದಂತಿಗೆ ಕಿವಿಗೊಡಬೇಡಿ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

ಗೃಹಬಳಕೆ ಸಿಲಿಂಡರ್ ಸಮರ್ಪಕ ಪೂರೈಕೆ: ಆತಂಕ ಬೇಡ

• **ಕೊಟ್ಟೂರು:** ಗೃಹಬಳಕೆ ಸಿಲಿಂಡರ್‌ಗಳು ಸಮರ್ಪಕವಾಗಿ ಪೂರೈಕೆಯಾಗುತ್ತಿದ್ದು ಪಟ್ಟಣ ಹಾಗೂ ಸುತ್ತಮುತ್ತಲ ಗ್ರಾಮಗಳ ಜನತೆಯು ಆತಂಕ ಪಡುವ ಅವಶ್ಯಕತೆ ಇಲ್ಲ ಎಂದು ಶ್ರೀ ವೆಂಕಟಸಾಯಿ ಗ್ಯಾಸ್ ಏಜೆನ್ಸಿಯ ವ್ಯವಸ್ಥಾಪಕ ವಂಶಿ ಅವರು ತಿಳಿಸಿದರು.

ಮಧ್ಯ ಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ದೇಶಾದ್ಯಂತ ಗೃಹಬಳಕೆ ಸಿಲೆಂಡರ್ ಹಾಗೂ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು ಸಿಲಿಂಡರ್‌ಗಳು ದೊರಕುವುದೋ ಇಲ್ಲವೋ ಎಂಬ ಆತಂಕದಿಂದ ಕೊಟ್ಟೂರು ಹಾಗೂ ಸುತ್ತಮುತ್ತಲ ಗ್ರಾಮಗಳ ಜನತೆಯು ಬೆಳಗ್ಗೆಯಿಂದಲೇ ವಿತರಕರ ಮಳಿಗೆಯ ಮುಂದೆ ಸಾಲುಗಟ್ಟಿ ಕಾಯುವಂತಹ ಪರಿಸ್ಥಿತಿ ಉಂಟಾಗಿದ್ದು, ಸಿಲಿಂಡರ್‌ಗಳು ಸಿಗುತ್ತವೋ ಇಲ್ಲವೋ ಎಂಬ ಆತಂಕವನ್ನು ಜನತೆಯು ವ್ಯಕ್ತಪಡಿಸಿದ್ದಾರೆ.

ವಿತರಕರ ಕಂಪನಿಯ ವ್ಯವಸ್ಥಾಪಕರು ಮಾತನಾಡಿ, ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆಯು ಸಂಪೂರ್ಣವಾಗಿ ಸ್ಥಗಿತವಾಗಿದ್ದು ಅವುಗಳನ್ನು ಪೂರೈಕೆ ಮಾಡಲಾಗುತ್ತಿಲ್ಲ, ಇದರಿಂದ ಶಾಲೆಗಳಿಗೆ, ಹಾಸ್ಟೆಲ್‌ಗಳಿಗೆ, ಹೋಟೆಲ್‌ಗಳ ಮಾಲೀಕರಿಗೆ ತೊಂದರೆಯಾಗಿದ್ದು, ಆದರೆ, ಗೃಹಬಳಕೆಯ ಸಿಲಿಂಡರ್‌ಗಳ ಪೂರೈಕೆಯಲ್ಲಿ ಯಾವುದೇ ವ್ಯತ್ಯಾಸ ಆಗಿರುವುದಿಲ್ಲ, ಪ್ರತಿನಿತ್ಯ ಎರಡು ಲೋಡ್ ಗಳ ಸಿಲಿಂಡರ್‌ಗಳು ಆಗಮಿಸುತ್ತಿದ್ದು, ಬುಕ್ ಮಾಡಿದ ಪ್ರತಿಯೊಬ್ಬರಿಗೂ ಆದ್ಯತೆಯ ಆಧಾರದ ಮೇಲೆ ಗೃಹಬಳಕೆ ಸಿಲಿಂಡರ್‌ಗಳನ್ನು ವಿತರಿಸುತಿದ್ದೇವೆ ಎಂದು ತಿಳಿಸಿದರು. ಪಟ್ಟಣದ ಹಾಗೂ ಸುತ್ತಮುತ್ತಲ ಜನತೆಯು ಗಾಳಿ ಸುದ್ದಿಗೆ ಕಿವಿ ಕೊಡದೆ ಸಿಲಿಂಡರ್‌ಗಳನ್ನು ಪಡೆಯಬಹುದು ಎಂದು ತಿಳಿಸಿದರು.



ದೇವಸ್ಥಾನದಲ್ಲಿ ಪ್ರಸಾದ ಪುನರಾರಂಭ:: ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ಕೊಟ್ಟೂರಿನ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ದೇವಸ್ಥಾನದಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಾಸವಾದ್ದರಿಂದ ಗುರುವಾರ ಪ್ರಸಾದವನ್ನು ಬಂದ್ ಮಾಡಲಾಗಿದ್ದಿತು. ಶುಕ್ರವಾರವು ಸಹ ವಾಣಿಜ್ಯ ಬಳಕೆ ಸಿಲೆಂಡರ್ ಪೂರೈಕೆ ಆಗದ್ದರಿಂದ ದೇವಸ್ಥಾನದ ಸಿಬ್ಬಂದಿಯವರು ಸೌದೆ ಒಲೆಗಳ ಮೇಲೆ ಪ್ರಸಾದವನ್ನು ತಯಾರಿಸುವ ಮೂಲಕ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆಯನ್ನು ಪುನಃ ಪ್ರಾರಂಭಿಸಿದರು. ಸೌದೆ ಒಲೆಗಳ ಮೇಲೆ ಪ್ರಸಾದವನ್ನು ತಯಾರಿಸಿ ಭಕ್ತಾದಿಗಳಿಗೂ ಮತ್ತು ವಿದ್ಯಾರ್ಥಿಗಳಿಗೂ ಅನುಕೂಲ ಮಾಡಿಕೊಟ್ಟ ದೇವಸ್ಥಾನದ ಸಿಬ್ಬಂದಿಯ ಬಗ್ಗೆ ಭಕ್ತಾದಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಗಣತಿ ಮೇಲ್ವಿಚಾರಕರನ್ನಾಗಿ ಪ್ರೌಢ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಮನವಿ

• **ಹುಣಸಗಿ:** ಪ್ರೌಢ ಶಾಲಾ ಶಿಕ್ಷಕರನ್ನು ಜನಗಣತಿ ಕಾರ್ಯದಲ್ಲಿ ಮೇಲ್ವಿಚಾರಕರನ್ನಾಗಿ ನೇಮಕ ಮಾಡಿಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘ ಹುಣಸಗಿ ತಾಲೂಕು ಘಟಕದ ವತಿಯಿಂದ ತಹಶೀಲ್ದಾರರಿಗೆ ಬರೆದ ಮನವಿ ಪತ್ರವನ್ನು ಶೀರಸ್ತೆದಾರ ಶ್ರೀಶೈಲ್ ಅವರಿಗೆ ಸಲ್ಲಿಸಲಾಯಿತು.

ನಂತರ ಸಂಘದ ತಾಲೂಕ ಅಧ್ಯಕ್ಷ ಯಂಕಪ್ಪಗೌಡ ಆರಕೇರಿ ಮಾತನಾಡಿ, ಏ.11ರ ನಂತರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೌಲ್ಯಮಾಪನ ಕಾರ್ಯ ಪ್ರಾರಂಭವಾಗುವ ನಿರೀಕ್ಷೆಯಲ್ಲಿ ಪೌಢ ಶಾಲೆಯ ಸಹ ಶಿಕ್ಷಕರು ಇದ್ದೇವೆ. ಇದರಿಂದ ಗಣತಿ ಕಾರ್ಯಕ್ಕೆ ನಮ್ಮಿಂದ ಅಡಚಣೆ ಉಂಟಾಗಬಾರದು ಎನ್ನುವ ದೃಷ್ಟಿಕೋನದಿಂದ ನಮ್ಮ ಎಲ್ಲ ಸಹ ಶಿಕ್ಷಕ ಬಳಗವನ್ನು ಗಣತಿ ಕಾರ್ಯದಲ್ಲಿ ಮೇಲ್ವಿಚಾರಕರನ್ನಾಗಿ ನೇಮಕ ಮಾಡಿಕೊಳ್ಳಬೇಕು ಎಂದು ಮನವಿ ಸಲ್ಲಿಸಿದ್ದೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಆನಂದ ಕಟ್ಟಿಮನಿ, ಶಿವಕುಮಾರ ಹಿರೇಮಠ, ಮಶಾಕ ಯಾಳಗಿ, ನಾಗನಗೌಡ ಪಾಟೀಲ, ಭೀಮಣ್ಣ ವಾಲ್ಮೀಕಿ, ಗುರುನಾಥ ಹುಲಕಲ್, ತಮ್ಮಣ್ಣ ಗುಡಿಹಾಳ, ವಿಠ್ಠಲ ಚವ್ಹಾಣ, ಮಲ್ಲಣ್ಣ ಕಮತಗಿ, ಹುಲಗಪ್ಪ ಹಡಗಿನಾಳ, ವಿಶ್ವನಾಥ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಸೊಳ್ಳೆಗಳ ನಿಯಂತ್ರಣಕ್ಕಾಗಿ ವರದಿ ನೀಡಲು ಮನವಿ

• **ಕುರುಗೋಡು:** ಎಐಕೆಕೆಎಂಎಸ್ ರೈತ ಸಂಘಟನೆ ವತಿಯಿಂದ ಮುಷ್ಟಗಟ್ಟೆ ಗ್ರಾಮದಲ್ಲಿ ಸೊಳ್ಳೆಗಳ ನಿಯಂತ್ರಣ ಮತ್ತು ಇತರೆ ಸಮಸ್ಯೆಗಳ ಕುರಿತು ಪಿಎಚ್‌ಸಿ ವತಿಯಿಂದ ಗ್ರಾಮ ಪಂಚಾಯಿತಿಗೆ ವರದಿ ನೀಡಲು ಕೋರಿ ಮುಷ್ಟಗಟ್ಟೆ ಪಿಎಚ್‌ಸಿ ವೈದ್ಯಾಧಿಕಾರಿ ಗಳಿಗೆ ಮನವಿ ಸಲ್ಲಿಸಲಾಯಿತು.

ನಂತರ ಸಂಘದ ಜಿಲ್ಲಾ ಕಾರ್ಯದರ್ಶಿ ಗುರಳ್ಳಿರಾಜ ಅವರು ಮಾತನಾಡಿ, ಮುಷ್ಟಗಟ್ಟೆ ಗ್ರಾಮದಲ್ಲಿ ಇತ್ತೀಚೆಗೆ ಸೊಳ್ಳೆಗಳ ಹಾವಳಿ ಹೆಚ್ಚಾಗುತ್ತಿದ್ದು, ಇದರಿಂದ ಗ್ರಾಮಸ್ಥರಿಗೆ ಹಲವಾರು ಕಾಯಿಲೆ ಹರಡುವ ಭೀತಿ ಉಂಟಾಗುತ್ತಿದೆ, ಗ್ರಾಮನೈರ್ಮಲ್ಯ ಪಂಚಾಯಿತಿಯ ಆದ್ಯ ಕರ್ತವ್ಯವಾಗಬೇಕಾದ ಇಂದಿನ ಪರಿಸ್ಥಿತಿಯಲ್ಲಿ, ಅದು ಬರೀ ಹೆಸರಿಗಷ್ಟೇ ಸೀಮಿತವಾಗಿ, ಅಧಿಕಾರಿಗಳು ಗ್ರಾಮದ ಕಡೆ ಸುಳಿಯುತ್ತಿಲ್ಲ, ಜನರ ಸಮಸ್ಯೆಗಳ ಕಡೆ ಗಮನ ಕೊಡುತ್ತಿಲ್ಲ ಎಂಬ ಅಸಮಾಧಾನ ಮನೆಮಾಡುತ್ತಿದೆ. ನಿಯಮಿತವಾಗಿ ಚರಂಡಿ ಸ್ವಚ್ಛವಾಗುತ್ತಿಲ್ಲ, ಕಸ ವಿಲೇವಾರಿ ಸರಿಯಾಗಿ ನಡೆಯುತ್ತಿಲ್ಲ ಎಂಬುದು ಸೇರಿದಂತೆ ಇತರೆ ಹಲವಾರು ಸಮಸ್ಯೆಗಳನ್ನು ಈ ಗ್ರಾಮದ ಜನರು ಎದುರಿಸುತ್ತಿದ್ದಾರೆ, ಕೂಡಲೇ ತಾವುಗಳು ಜನರ ಆರೋಗ್ಯದ ಹಿತದೃಷ್ಟಿಯಿಂದ ಮುಷ್ಟಗಟ್ಟೆ ಗ್ರಾಮದಲ್ಲಿ ಸಮೀಕ್ಷೆ ಮಾಡಿ ಸೊಳ್ಳೆಗಳಿಗೆ ಫಾಗಿಂಗ್ ಸೇರಿದಂತೆ ಇತರೆ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕೆಂದು ಗ್ರಾಮಸ್ಥರ ಪರವಾಗಿ ಗ್ರಾಮ ಪಂಚಾಯಿತಿಗೆ ವರದಿ ನೀಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರಾದ ಬುದ್ದಣ್ಣ, ಬಸವನಗೌಡ, ಪಂಪನಗೌಡ, ಟಿ.ಬಸವನಗೌಡ, ವೀರನಗೌಡ, ಹನುಮಂತ, ಮಾರೆಪ್ಪ.ಎಂ ಸೇರಿದಂತೆ ಇತರರು ಉಪಸ್ಥಿತರಿದ್ದರು.

